ಗುರುವಾರ, ಜನವರಿ 13, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಮಟೆ ಶಬ್ದ... ಮೇಕೆದಾಟು ಕಾಂಗ್ರೆಸ್ ಪಾದಯಾತ್ರೆಯಲ್ಲಿ ಮಾಜಿ ಸಚಿವ ಆಂಜನೇಯ ತಮಟೆ ಬಾರಿಸಿ ಗಮನ ಸೆಳೆದರು. ಧ್ರುವನಾರಾಯಣ, ಸಲೀಂ ಅಹಮ್ಮದ್ ಇದ್ದರು

ಯೋಜನೆ ವಿವಾದವಾಗದಿರಲಿ, ಸಮನ್ವಯದಿಂದ, ಸಹಭಾಗಿತ್ವದಿಂದ ಸಾಕಾರವಾಗಲಿ...

ಕಾವೇರಿ ಕರ್ನಾಟಕದ ಪಾಲಿಗೆ ಜೀವದಾಯಿನಿ, ಜೀವವಾಹಿನಿ, ಜಲಧಾರಿಣಿಯಾಗಿದ್ದಾಳೆ. ರಾಜ್ಯದ ಜನತೆ ಕಾವೇರಿಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಆದರೆ ಈ ಕಾವೇರಿ ಜಲ ವಿವಾದದಲ್ಲಿ ಕರ್ನಾಟಕಕ್ಕೆ ಯಾವಾಗಲೂ ಸಂಕಷ್ಟವೇ ಎದುರಾಗುತ್ತದೆ. ಕಾವೇರಿ ಜಲ ವಿವಾದದಲ್ಲಿ ನ್ಯಾಯಾಧೀಕರಣದ ರಚನೆ ಮೊದಲು, ನಂತರ, ನ್ಯಾಯಾಧೀಕರಣದ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಹಾಗೂ ನ್ಯಾಯಾಧೀಕರಣದ ಅಂತಿಮ ತೀರ್ಪು ಪ್ರಕಟವಾದ ಮೇಲೆ ಹಾಗೂ ಪ್ರಕಟಿತ ತೀರ್ಪು ಗೆಜೆಟ್‌ನಲ್ಲಿ ಪ್ರಕಟವಾದ ಮೇಲೆ ಎಲ್ಲಾ ಹಂತಗಳಲ್ಲೂ ಒಂದಿಲ್ಲೊಂದು ಸಂಕಷ್ಟದ ಪರಿಸ್ಥಿತಿಯನ್ನು ಕರ್ನಾಟಕ ಕಾಲಕಾಲಕ್ಕೆ ಎದುರಿಸುತ್ತಲೇ ಬಂದಿದೆ.

ಮೇಕೆದಾಟು ಯೋಜನೆ

ಮೇಕೆದಾಟು ಯೋಜನೆಯು ವಿಳಂಬವಾಗುತ್ತಿದೆ ಎಂದು ಕಾಂಗ್ರೆಸ್ ಪಾದಯಾತ್ರೆ ಮಾಡುತ್ತಿದೆ. ಆದರೆ ಈ ವಿಳಂಬಕ್ಕೆ ತಾನೇ ಹೊಣೆ ಎಂಬುದನ್ನು ಮರೆ ಮಾಚುತ್ತಿದೆ. ಅಧಿಕಾರದಲ್ಲಿರುವ ಬಿಜೆಪಿಯ ಮೇಲೆ ಗೂಬೆ ಕೂರಿಸುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ. ಯೋಜನೆ ವಿಳಂಬವಾಗುತ್ತಿದೆ ಎಂದು ಪ್ರಲಾಪಿಸುತ್ತಾ ಪಾದಯಾತ್ರೆ ಮಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಒಂದಿಷ್ಟು ಪ್ರಶ್ನೆಗಳು...?

- ದಿನಾಂಕ: 10.9.2013ರಂದು ಅಂದಿನ ಜಲಸಂಪನ್ಮೂಲ ಸಚಿವರು ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿ ಸಲ್ಲಿಸಲು, ಸಮಾಲೋಚಕರ ಸೇವೆ ಪಡೆಯಲು (consultency services) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಅನ್ವಯ 4(ಜಿ) ವಿನಾಯ್ತಿ ಕೋರಬೇಕೆಂಬ ಪ್ರಸ್ತಾವನೆಯನ್ನು ಜಲಸಂಪನ್ಮೂಲ ಇಲಾಖೆಯು 7.4.2013ರಂದು ತಿರಸ್ಕರಿದ್ದರೂ 19.06.2015ರಂದು ಅಂದಿನ ಜಲಸಂಪನ್ಮೂಲ ಸಚಿವರಾಗಿದ್ದ ಶ್ರೀ ಎಂ.ಬಿ. ಪಾಟೀಲರವರು, ಮುಖ್ಯ ಕಾರ್ಯದರ್ಶಿಗಳಿಗೆ ಟಿಪ್ಪಣಿ, ಕಳುಹಿಸಿ "ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ, ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವ ಸಲಹೆಗಾರರಿಗೆ ನೇರವಾಗಿ (Direct Entrustment to consultants) ವಹಿಸುವ" ಎಂದು ಸೂಚಿಸಿದ್ದಾದರೂ ಏಕೆ?
- 25.02.2016ರಂದು 4(ಜಿ) ವಿನಾಯ್ತಿಯನ್ನು ಸರ್ಕಾರ ಮಂಜೂರು ಮಾಡುತ್ತದೆ. ಮರುದಿನವೇ 26.02.2016 ಕನ್ಸಲ್ಟೆನ್ಸಿ ಸೇವೆ ಪಡೆಯಲು EI ಟೆಕ್ನಾಲಜೀಸ್ ಸಂಸ್ಥೆಗೆ ಟೆಂಡರ್‌ನಲ್ಲಿ ನಮೂದಿಸಿದ ಗುತ್ತಿಗೆ ದರಕ್ಕೆ ಮೊದಲು ಅಂತಿಮಗೊಂಡಿದ್ದ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಿ, ಅದೇ ದರಕ್ಕೆ ಮತ್ತು ಅದೇ ಸಂಸ್ಥೆಗೆ ಅದೇ ಸೇವೆ ಪಡೆಯಲು ಗುತ್ತಿಗೆ ನೀಡಲು 4(ಜಿ) ವಿನಾಯ್ತಿ ಮಂಜೂರು ಮಾಡಿದ್ದು ಕಾಂಗ್ರೆಸ್ ಮಾಡಿದ ಮೂರ್ಖತನದ ನಿರ್ಣಯವಲ್ಲವೇ? ಇದರಿಂದ ವೃಥಾ ಕಾಲಹರಣವಾಗಲಿಲ್ಲವೇ?
- 4.06.2016ರಂದು EI ಟೆಕ್ನಾಲಜಿಸ್ ಸಂಸ್ಥೆಯು 5912 ಕೋಟಿ ರೂಪಾಯಿಗೆ ಸಲ್ಲಿಸಿದ ವಿಸ್ತೃತ ಯೋಜನಾ ವರದಿಗೆ ಕರ್ನಾಟಕದಲ್ಲಿದ್ದ ಕಾಂಗ್ರೆಸ್ ಸರ್ಕಾರದ ತಾತ್ವಿಕ ಒಪ್ಪಿಗೆ ನೀಡಿದ್ದು 13.3.2017ರಂದು. ಅಂದರೆ 9 ತಿಂಗಳ ನಂತರ. ಹೀಗೆ ಕಾಲಹರಣ ಮಾಡಿದ್ದು ಸರಿಯೇ?
- ತಾತ್ವಿಕ ಒಪ್ಪಿಗೆ ನೀಡಿದ ನಂತರವೂ 3 ತಿಂಗಳು ವಿಳಂಬ ಮಾಡಿ, ಅಂದರೆ 7.06.2017ರಂದು ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗದ ಬೆಂಗಳೂರು ಕಚೇರಿಗೆ ಸಲ್ಲಿಸಿದ ಕಾಂಗ್ರೆಸ್ ಸರ್ಕಾರ ವಿಳಂಬ ನೀತಿಗೆ ಸ್ಪಷ್ಟ ಉದಾಹರಣೆಯಲ್ಲವೇ?
- 5 ವರ್ಷಗಳ ಪೂರ್ಣ ವಿಳಂಬದ ನಂತರ, ಪೂರ್ವ ಸಿದ್ಧತಾ ವರದಿಯನ್ನು 4.8.2018ರಂದು ಸಲ್ಲಿಸಲಾಗುತ್ತದೆ. ಅಂದರೆ 2013ರಲ್ಲಿ ಪ್ರಾರಂಭವಾದ ಪ್ರಕ್ರಿಯೆ ಈ ಹಂತ ತಲುಪುವಲ್ಲಿ ಆದ ವಿಳಂಬಕ್ಕೆ ಕಾಂಗ್ರೆಸ್ಸೇ ಕಾರಣವಲ್ಲವೇ?
- ವಿಶೇಷವೆಂದರೆ ಈ ಹಂತದಲ್ಲಿ ಯಾವುದೇ ನ್ಯಾಯಧೀಕರಣದ ಅಡಚಣೆಯಿರಲಿಲ್ಲ. ಆದ್ದರಿಂದ ಈ ಅವಧಿಯಲ್ಲಿಯೇ (2013–2018) ಡಿಪಿಆರ್ ಸಿದ್ಧಪಡಿಸಿ, ಸಲ್ಲಿಸಿದ್ದರೆ, ಯಾವುದೇ ಅಡೆ–ತಡೆಯಿಲ್ಲದೇ ಯೋಜನೆ ಜಾರಿ ಮಾಡಬಹುದಾಗಿತ್ತು, ಆದರೆ ವಿಳಂಬಕ್ಕೆ ಕಾರಣವಾದ ಹೊಣೆಗಾರಿಕೆಯನ್ನು ಕಾಂಗ್ರೆಸ್ ಹೊರಬೇಕಲ್ಲವೇ?
- ಅಧಿಕಾರದಲ್ಲಿದ್ದಾಗ ವೃಥಾ ವಿಳಂಬ ನೀತಿಯನ್ನು ಅನುಸರಿಸಿದ ಕಾಂಗ್ರೆಸ್ ಈಗ ಪಾದಯಾತ್ರೆ ಮಾಡುತ್ತಿರುವುದಾದರೂ ಏಕೆ? ತನ್ನದೇ ಅಧಿಕಾರವಿದ್ದಾಗ ವಿನಾಕಾರಣ ಸಮಯ ಕಳೆದ ಕಾಂಗ್ರೆಸ್ ಈಗ ಪಾದಯಾತ್ರೆಯನ್ನು ಹಮ್ಮಿಕೊಂಡಿರುವುದು ಸರಿಯೇ?
- ಇನ್ನು ಈ ಪಾದಯಾತ್ರೆ ಯಾರ ವಿರುದ್ಧ ಎಂಬುದನ್ನೂ ಕಾಂಗ್ರೆಸ್ ಸ್ಪಷ್ಟ ಪಡಿಸಬೇಕಲ್ಲವೇ?. ಯೋಜನೆ ಜಾರಿ ವಿಳಂಬವಾಗಿರುವುದು ಕಾಂಗ್ರೆಸ್ ಅವಧಿಯಲ್ಲಿಯೇ. 2013ರಿಂದ ಪ್ರಾರಂಭವಾದ ಯೋಜನೆಯ ಮೊದಲ ಹಂತ ದಾಟಲು ವೃಥಾ 5 ವರ್ಷ ಕಾಲಹರಣ ಮಾಡಿದ್ದು ಕಾಂಗ್ರೆಸ್ ಪಕ್ಷವೇ. ಈಗ ಪಾದಯಾತ್ರೆ ಮಾಡುತ್ತಿರುವುದು ಕಾಂಗ್ರೆಸ್ ಪಕ್ಷವೇ. ಈ ಪ್ರತಿಭಟನೆ ಯಾರ ವಿರುದ್ಧ ಎಂಬುದನ್ನು ಕಾಂಗ್ರೆಸ್ ನಾಯಕರು ಸ್ಪಷ್ಟಪಡಿಸಬೇಕಲ್ಲವೇ?
- ಮೇಕೆದಾಟು ಪ್ರಕರಣ ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ (ಅರ್ಜಿ ಸಂಖ್ಯೆ 3127/2018) ವಿಚಾರಣೆಯ ಹಂತದಲ್ಲಿದೆ. ಈ ಹಂತದಲ್ಲಿ ನ್ಯಾಯಾಲಯದ ಮೇಲೆ ಒತ್ತಡ ಹೇರುವುದಾದರೂ ಹೇಗೆ? ಒತ್ತಡ ಹೇರಿದರೆ ಅದು ರಾಜ್ಯಕ್ಕೆ ಮಾರಕವಾಗುವ ಸಾಧ್ಯತೆಯಿದೆಯಲ್ಲವೇ?
- ಇಷ್ಟಾಯಿತು, ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ಪ್ರಕರಣದ ಬಗ್ಗೆ ರಾಜ್ಯ ಸರಕಾರಗಳು ನ್ಯಾಯಾಲಯದ ಆದೇಶವನ್ನು ಕಾಯುವುದು ಬಿಟ್ಟರೆ ಬೇರೇನೂ ಮಾಡಲು ಬರುವುದಿಲ್ಲ ಎಂಬುದು ಕಾಂಗ್ರೆಸ್‌ಗೆ ಅರಿವಿಲ್ಲವೇ?
- ಇನ್ನು ತಮಿಳುನಾಡಿನಲ್ಲಿ ಕಾಂಗ್ರೆಸ್‌ದೇ ಮಿತ್ರಪಕ್ಷ ಡಿಎಂಕೆ ಅಧಿಕಾರದಲ್ಲಿದೆ. ಎಲ್ಲಾ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವಂತೆ ಡಿಎಂಕೆ ಪಕ್ಷವನ್ನು ಮನವೊಲಿಸಬಹುದಲ್ಲವೇ?
- ನಮ್ಮ ನೀರು ನಮ್ಮ ಹಕ್ಕು ನಿಜ. ಆದರೆ ಅಂತರರಾಜ್ಯ ವಿವಾದವಿರುವ ನದಿ ನೀರನ್ನು ಹಂಚಿಕೊಳ್ಳುವಾಗ ಕೆಲವು ಮಾನದಂಡಗಳು ಹಾಗೂ ಕೆಲವು ಕಾನೂನಿನಾತ್ಮಕ ಪ್ರಕ್ರಿಯೆಗಳನ್ನು ಅನುಸರಿಸಲೇ ಬೇಕು ಎಂಬ ಪರಿಜ್ಞಾನ ಕಾಂಗ್ರೆಸ್‌ಗೆ ಇಲ್ಲವೇ?
- ಯೋಜನೆ ಶೀಘ್ರ ಪೂರ್ಣಗೊಳ್ಳಬೇಕು ಎಂಬ ಆಕಾಂಕ್ಷೆ ಬಿಜೆಪಿಗೂ ಇದೆ. ಆದರೆ ಆ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳುವುದಕ್ಕೂ ಒಂದು ರೀತಿ ಮತ್ತು ಒಂದು ನೀತಿ ಇದೆ ಎಂಬುದು ಕಾಂಗ್ರೆಸ್‌ಗೆ ಅರಿವಿಲ್ಲವೇ?
- ಆರಂಭಿಕ ಹಂತದಲ್ಲಿ ವಿಳಂಬವಾದಾಗ, ತಾನು ಅಧಿಕಾರದಲ್ಲಿದ್ದಾಗ ಮೌನ ವಹಿಸಿದ, ನಿರ್ಲಕ್ಷ್ಯ ತಾಳಿದ ಕಾಂಗ್ರೆಸ್, ಈಗ ಬಿಜೆಪಿ ಅಧಿಕಾರದಲ್ಲಿದೆ ಎಂಬ ಒಂದೇ ಕಾರಣಕ್ಕೆ ಪಾದಯಾತ್ರೆ ಮಾಡುತ್ತಿದೆಯೇ?
- ಇನ್ನು ಈ ಪಾದಯಾತ್ರೆಯ ಉದ್ದೇಶವಾದರೂ ಏನು? ಯೋಜನೆಯನ್ನು ವಿರೋಧಿಸುತ್ತಿರುವ ತಮಿಳುನಾಡಿನ ಸರಕಾರದ ನೀತಿಯನ್ನು ಖಂಡಿಸಬೇಕು ಇಲ್ಲವೇ, ಅದರ ಮನವೊಲಿಸಿ ರಾಜ್ಯದ ವಿರುದ್ಧದ ತಕರಾರುಗಳನ್ನು ಹಿಂತೆಗೆದುಕೊಳ್ಳಬೇಕು. ಆದರೆ ಇಲ್ಲಿಯವರೆಗೂ ಕಾಂಗ್ರೆಸ್‌ನ ಯಾವ ನಾಯಕರೂ ಈ ಬಗ್ಗೆ ದನಿಯೆತ್ತುತ್ತಿಲ್ಲ ಏಕೆ?

ಯೋಜನೆ ವಿಳಂಬ, ಹೊಣೆ ಯಾರು?

- ನವಂಬರ್ 12, 2014 ರಂದು ಅಂದಿನ ಕಾನೂನು ಸಚಿವ ಶ್ರೀ ಟಿ.ಬಿ. ಜಯಚಂದ್ರರವರು 'ಯೋಜನೆ ಪ್ರಾರಂಭಿಸಲು ಸೂಕ್ತ ಆದೇಶ ನೀಡಬೇಕು' ಎಂಬ ಮನವಿಗೆ ಅಂದಿನ ಮುಖ್ಯಮಂತ್ರಿಗಳು ಅನುಮೋದಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ಅಂದರೆ 2014ರಲ್ಲಿಯೇ ಅನುಮೋದನೆ ದೊರೆತರೂ ಯೋಜನೆ ಜಾರಿಗೆ ವಿಳಂಬವಾಗಿದ್ದಾದರೂ ಹೇಗೆ? ಇದರ ಹೊಣೆಯನ್ನು ಯಾರು ಹೊರಬೇಕು?.
- ಕೇವಲ ಡಿಪಿಆರ್ ಮಾಡಲು ಕಾಂಗ್ರೆಸ್ ಸರಕಾರ ನಾಲ್ಕು ವರ್ಷ ತೆಗೆದುಕೊಂಡಿದೆ. ಪಿಎಫ್‌ಆರ್ ಮೊದಲು ಕಳಿಸಬೇಕೋ, ಡಿಪಿಆರ್ ಮೊದಲು ಕಳಿಸಬೇಕೋ ಎಂಬ ಸಾಮಾನ್ಯ ಜ್ಞಾನವೂ ಇಲ್ಲದ ಅಂದಿನ ಕಾಂಗ್ರೆಸ್ ಸರಕಾರ, ಪಿಎಫ್‌ಆರ್ ಕಳಿಸಿ ಎಂದು ಕೇಂದ್ರ ಸರಕಾರ ಹೇಳಿದರೂ ಕೇಳದೆ ಡಿಪಿಆರ್ ಕಳಿಸಿದ ಕಾಂಗ್ರೆಸ್ ಸರಕಾರವೇ ಯೋಜನೆ ವಿಳಂಬಕ್ಕೆ ಕಾರಣವಲ್ಲವೇ?

ಸುಳ್ಳು ಸುದ್ದಿಗಳನ್ನು ಹರಡುವುದು ಬೇಡ... ಭಾವನೆಗಳನ್ನು ಬಡಿದೆಬ್ಬಿಸಿ ರಾಜಕಾರಣ ಮಾಡುವುದು ಬೇಡ... ವಸ್ತುಸ್ಥಿತಿಯನ್ನು ಅರಿಯೋಣ, ಸಾಕಾರಕ್ಕೆ ಶ್ರಮಿಸೋಣ...

‘ಕೋವಿಡ್ ನಿಯಂತ್ರಿಸಲು ಎಲ್ಲಾ ರೀತಿಯ ಕ್ರಮ’

ಬೆಂಗಳೂರು: ‘ಬೆಂಗಳೂರಿನಲ್ಲಿ ಕೋವಿಡ್ ನಿಯಂತ್ರಿಸಲು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರ ತೀರ್ಮಾನಿಸಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

‘ಕರ್ನಾಟಕದ ನೆಲ, ಜಲ ಹಾಗೂ ಜನರ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ ಕೆಲಸ ಮಾಡಿವೆ. ಮೇಕೆದಾಟು ವಿಚಾರದಲ್ಲಿ ಎಲ್ಲ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಸಾಕಾರಗೊಳಿಸಲು ನಮ್ಮ ಸರ್ಕಾರ ಬದ್ಧವಾಗಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘ಕೋವಿಡ್ 3ನೇ ಅಲೆಯು ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರಿಗೆ ಆವರಿಸಿಕೊಂಡಿದೆ. ಈ ಸಂದರ್ಭದಲ್ಲಿ ರಾಜ್ಯದ ಮತ್ತು ಬೆಂಗಳೂರು ಜನರ ಆರೋಗ್ಯ ಕಾಪಾಡುವುದು ನಮ್ಮೆಲ್ಲರ ಪ್ರಥಮ ಕರ್ತವ್ಯ ಆಗಿದೆ. ಈ ಕರ್ತವ್ಯ ನಿರ್ವಹಿಸಲು ಬದ್ಧತೆ ತೋರಿಸಬೇಕಾಗಿದೆ. ಕೋವಿಡ್ ನಿಯಂತ್ರಿಸುವ ಕಾನೂನನ್ನು ಉಲ್ಲಂಘನೆ ಮಾಡದೇ ಎಲ್ಲರೂ ಸಹಕಾರ ನೀಡಬೇಕೆಂದು ಬಯಸುತ್ತೇನೆ’ ಎಂದು ತಿಳಿಸಿದ್ದಾರೆ.

ಮೂರನೇ ಅಲೆ ಎದುರಿಸಲು ಸನ್ನದ್ಧ, ಸೋಂಕು ನಿಯಂತ್ರಣಕ್ಕೆ ನಿರ್ದಾಕ್ಷಿಣ್ಯ ಕ್ರಮ: ಗೌರವ್ ಗುಪ್ತ

ಹಾಸ್ಟೆಲ್, ಪಿ.ಜಿ.ಗಳಿಗೆ ನಿರ್ಬಂಧ: ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ತ್ವರಿತಗತಿಯಲ್ಲಿ ಹೆಚ್ಚುತ್ತಿರುವುದರಿಂದ ಪೇಯಿಂಗ್ ಗೆಸ್ಟ್ ವಸತಿಗಳು, ಹಾಸ್ಟೆಲ್‌ಗಳ ಮೇಲೆ ಹೆಚ್ಚಿನ ನಿರ್ಬಂಧ ಹೇರಲು ಬಿಬಿಎಂಪಿ ಚಿಂತನೆ ನಡೆಸಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ವರ್ಚುವಲ್ ರೂಪದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಬುಧವಾರ ಈ ವಿಚಾರ ತಿಳಿಸಿದರು.

‘ಪಿ.ಜಿ ಕಟ್ಟಡ ಮತ್ತು ಹಾಸ್ಟೆಲ್‌ಗಳಲ್ಲಿ ಸೋಂಕು ಹರಡುವಿಕೆ ತಡೆಯಲು ಕೆಲವು ಕಠಿಣ ಕ್ರಮಗಳ ಅಗತ್ಯವಿದೆ. ಈ ಬಗ್ಗೆ ಶೀಘ್ರವೇ ಆದೇಶ ಹೊರಡಿಸಲಿದ್ದೇವೆ’ ಎಂದರು.

‘ನಗರದಲ್ಲಿ ದೃಢಪಡುತ್ತಿರುವ ಕೋವಿಡ್ ಪ್ರಕಣಗಳಲ್ಲಿ ಶೇ 70ರಷ್ಟು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ವರದಿಯಾಗುತ್ತಿವೆ. ಸೋಂಕು ಹರಡುವಿಕೆ ತಡೆಯುವಲ್ಲಿ ಅಲ್ಲಿನ ನಿವಾಸಿಗಳ ಪಾತ್ರ ಮಹತ್ವದ್ದಾಗಿದೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ಪಡೆದು ಕಠಿಣ ನಿರ್ಬಂಧ ಜಾರಿಗೊಳಿಸುತ್ತಿದ್ದೇವೆ’ ಎಂದು ತಿಳಿಸಿದರು.

ನಾವು ಭೇಟಿ ಆಗುವ ಪ್ರತಿ ವ್ಯಕ್ತಿಯಲ್ಲೂ ಕೊರೊನಾ ಸೋಂಕು ಇರಬಹುದು ಎಂದು ಪರಿಭಾವಿಸುವಷ್ಟರ ಮಟ್ಟಿಗೆ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಬೇಕು.

ಗೌರವ್ ಗುಪ್ತ, ಬಿಬಿಎಂಪಿ ಮುಖ್ಯ ಆಯುಕ್ತ

‘ಹೊರ ಜಿಲ್ಲೆಗಳಿಂದ ನಗರಕ್ಕೆ ಬರುವವರು ತಮಗೆ ಸೋಂಕು ಇಲ್ಲ ಎಂಬುದನ್ನು ಸಾಬೀತುಪಡಿಸಲು ಆರ್‌ಟಿ-ಪಿಸಿಆರ್ ಪರೀಕ್ಷೆಯ ವರದಿ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸುವ ಅಗತ್ಯವಿಲ್ಲ. ಹೊರಗಿನಿಂದ ನಗರಕ್ಕೆ ಬರುವವರಿಂದ ಈಗ ಸೋಂಕು ಹೆಚ್ಚಳವಾಗುತ್ತಿಲ್ಲ. ಸ್ಥಳೀಯರಿಂದಲೇ ಸೋಂಕು ಹೆಚ್ಚುತ್ತಿದೆ’ ಎಂದು ಅಭಿಪ್ರಾಯಪಟ್ಟರು.

ಅಂಕಿ–ಅಂಶ

28,067 ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಗುರುತಿಸಲಾದ ಹಾಸಿಗೆಗಳು

3,237 ಸರ್ಕಾರಿ ಆಸ್ಪತ್ರೆಗಳಲ್ಲಿ ಗುರುತಿಸಲಾದ ಹಾಸಿಗೆಗಳು	**13,540** ಖಾಸಗಿ ಆಸ್ಪತ್ರೆಗಳಲ್ಲಿ ಗುರುತಿಸಲಾದ ಹಾಸಿಗೆಗಳು	**2,696** ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಗುರುತಿಸಲಾದ ಹಾಸಿಗೆಗಳು
8,594 ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಗುರುತಿಸಲಾದ ಹಾಸಿಗೆಗಳು	**6,255** ಸರ್ಕಾರಿ ಕೋಟಾ ಮೂಲಕ ಹಂಚಿಕೆಗೆ ಲಭ್ಯ ಇರುವ ಹಾಸಿಗೆಗಳು	**362** ಸರ್ಕಾರಿ ಕೋಟಾ ಅಡಿ ಹಂಚಿಕೆ ಮಾಡಿರುವ ಹಾಸಿಗೆಗಳು

‘ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದಾಗ ಎಲ್ಲ ಸೊಂಕಿತರನ್ನೂ ಭೌತಿಕವಾಗಿ ತಪಾಸಣೆ ನಡೆಸಲಾಗುತ್ತಿತ್ತು. 15 ದಿನಗಳಿಂದ ಈಚೆಗೆ ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆಯು 15,000 ಗಡಿ ದಾಟಿದೆ. ಹಾಗಾಗಿ ಕ್ಷೇತ್ರದ ನಿಯಂತ್ರಣ ಕೊಠಡಿಗಳಿಂದ ಸೋಂಕಿತರಿಗೆ ಕರೆ ಮಾಡಿ ಆರೋಗ್ಯ ಪರಿಸ್ಥಿತಿ ವಿಚಾರಿಸಿ, ಡೇಟಾಬೇಸ್‌ನಲ್ಲಿ ದಾಖಲಿಸಲಾಗುತ್ತಿದೆ (ಟೆಲಿ ಟ್ರಯಾಜಿಂಗ್). ಅಗತ್ಯವಿದ್ದರೆ, ರೋಗಲಕ್ಷಣಗಳಿರುವ ವ್ಯಕ್ತಿಗಳ ಮನೆಗೆ ಹೋಗಿ ಅವರ ಭೌತಿಕವಾಗಿ ಆರೋಗ್ಯ ತಪಾಸಣೆ (ಸಂಚಾರ ಟ್ರಯಾಜಿಂಗ್) ನಡೆಸಲಾಗುತ್ತಿದೆ. ಆಸ್ಪತ್ರೆಗೆ ದಾಖಲಾಗುತ್ತಿರುವ ಸೋಂಕಿತರ ಸಂಖ್ಯೆ ಕಡಿಮೆ ಇದೆ’ ಎಂದರು.

‘ಹೆಚ್ಚು ಅಪಾಯ ಎದುರಿಸುವವರಿಗೆ, 60 ವರ್ಷ ಮೇಲ್ಪಟ್ಟವರಿಗೆ, ಅನ್ಯರೋಗಗಳಿಂದ ಬಳಲುತ್ತಿರುವವರಿಗೆ ಮಾತ್ರ ಭೌತಿಕ ಟ್ರಯಾಜಿಂಗ್ ಮಾಡಲಾಗುತ್ತದೆ. ವೈದ್ಯಕೀಯ ತಪಾಸಣೆ ಬಯಸುವ ಸೋಂಕಿತರು ಸಮೀಪದ ಆರೋಗ್ಯ ವೈದ್ಯಾಧಿಕಾರಿ ಕಚೇರಿ ವ್ಯಾಪ್ತಿಯಲ್ಲಿರುವ ಭೌತಿಕ ಟ್ರಯಾಜ್ ಕೇಂದ್ರಕ್ಕೆ (ಪಿಟಿಸಿ) ಭೇಟಿ ನೀಡಬಹುದು’ ಎಂದರು.

ಕೋವಿಡ್ ಸಂಬಂಧಿತ ಹೆಚ್ಚಿನ ಮಾಹಿತಿಗಾಗಿ ಬಿಬಿಎಂಪಿ ವೆಬ್ ಸೈಟ್ (https://apps.bbmpgov.in/covid19/) ನೋಡಬಹುದು.

ಆರೈಕೆ ಕೇಂದ್ರ 14ರ ಒಳಗೆ ಆರಂಭ

ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ ಒಳಗಾಗಲು ಸಾಧ್ಯವಾಗದ ಸೋಂಕಿತರಿಗಾಗಿ ಬಿಬಿಎಂಪಿಯಿಂದ 27 ಕಡೆ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಇದೇ 14ರ ಒಳಗೆ ಇವು ಕಾರ್ಯಾರಂಭ ಮಾಡಲಿವೆ ಎಂದು ಗೌರವ್ ಗುಪ್ತ ತಿಳಿಸಿದರು.

ಸುದ್ದಿ 2 ನಿಮಿಷ

ನಿಂತು ಪ್ರಯಾಣಿಸುವಂತಿಲ್ಲ

ಬೆಂಗಳೂರು: ಮೆಟ್ರೊ ರೈಲಿನಲ್ಲಿ ಲಭ್ಯ ಇರುವ ಆಸನಗಳಲ್ಲಿ ಕುಳಿತು ಪ್ರಯಾಣಕ್ಕಷ್ಟೇ ಬಿಎಂಆರ್‌ಸಿಎಲ್ (ಬೆಂಗಳೂರು ಮೆಟ್ರೊ ರೈಲು ನಿಗಮ) ಅವಕಾಶ ಕಲ್ಪಿಸಿದೆ.

‘ಮೆಟ್ರೊದಲ್ಲಿ ಪ್ರಯಾಣಿಕರು ನಿಂತು ಪ್ರಯಾಣಿಸುವಂತಿಲ್ಲ. ರೈಲಿನಲ್ಲಿ ಆಸನಗಳು ಭರ್ತಿಯಾಗಿದ್ದರೆ ನಂತರ ಬರುವ ರೈಲುಗಳಲ್ಲಿ ಆಸನಗಳು ಲಭ್ಯವಿದ್ದರೆ ಹತ್ತಬೇಕಾಗುತ್ತದೆ’ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ವಾರಾಂತ್ಯದ ಕರ್ಫ್ಯೂ ದಿನಗಳಂದು ಪ್ರತಿ 20 ನಿಮಿಷಕ್ಕೊಂದು ರೈಲು ಸಂಚರಿಸುವ ಬದಲು 30 ನಿಮಿಷಕ್ಕೊಂದು ರೈಲು ಸಂಚರಿಸಲಿದೆ ಎಂದು ತಿಳಿಸಿದೆ.

‘ಕೋವಿಡ್ ಕಾರಣದಿಂದ ಜನರ ಓಡಾಟವು ಕಡಿಮೆಯಾಗಿದೆ. ಪ್ರಯಾಣಿಕರ ಸಂಖ್ಯೆ ಜಾಸ್ತಿಯಾದರೂ ಹೆಚ್ಚುವರಿ ರೈಲುಗಳನ್ನು ಓಡಿಸುವ ಪ್ರಸ್ತಾವ ಸದ್ಯಕ್ಕಿಲ್ಲ. ಕೋವಿಡ್ ಹರಡುವುದನ್ನು ತಡೆಯಲು ಪ್ರಯಾಣಿಕರು ಸಹಕರಿಸಬೇಕಾಗುತ್ತದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಹೇಳಿದರು.

‘ಒಂದು ಸೀಟು ಖಾಲಿ ಬಿಟ್ಟು ಮತ್ತೊಂದು ಸೀಟಿನಲ್ಲಿ ಕೂರುವ ವ್ಯವಸ್ಥೆಯನ್ನು ಕೋವಿಡ್ ಮೊದಲ ಮತ್ತು ಎರಡನೇ ಅಲೆ ಸಂದರ್ಭದಲ್ಲಿ ಮಾಡಲಾಗಿತ್ತು. ಈಗ ಲಭ್ಯ ಇರುವ ಎಲ್ಲ ಸೀಟುಗಳಲ್ಲಿ ಕುಳಿತು ಪ್ರಯಾಣಿಸಬಹುದು. ಸರ್ಕಾರದ ಆದೇಶ ನೋಡಿಕೊಂಡು ಮುಂದಿನ ಬದಲಾವಣೆಗಳನ್ನು ಮಾಡಲಾಗುವುದು’ ಎಂದು ಅವರು ಸ್ಪಷ್ಟಪಡಿಸಿದರು.

ಒಂದೂ ಕಾಲು ವರ್ಷದ ಬಳಿಕ ಶರತ್‌ಗೆ ಹುದ್ದೆ

ಬೆಂಗಳೂರು: ಒಂದೂ ಕಾಲು ವರ್ಷ ಸ್ಥಳ ನಿರೀಕ್ಷೆಯಲ್ಲಿಯೇ ಇದ್ದ ಐಎಎಸ್ ಅಧಿಕಾರಿ ಬಿ. ಶರತ್ ಅವರಿಗೆ ರಾಜ್ಯ ಸರ್ಕಾರ ಕೊನೆಗೂ ಹುದ್ದೆ ತೋರಿಸಿದ್ದು, ಬಿಬಿಎಂಪಿ ಆಯುಕ್ತ (ಕಲ್ಯಾಣ ವಿಭಾಗ) ಹುದ್ದೆಗೆ ಬುಧವಾರ ವರ್ಗಾವಣೆ ಮಾಡಿದೆ.

ಮೈಸೂರು ಜಿಲ್ಲಾಧಿಕಾರಿಯಾಗಿ ವರ್ಷ ಕಳೆಯುವ ಮುನ್ನವೇ (2020ರ ಅಕ್ಟೋಬರ್) ಬಿ. ಶರತ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ಈ ಹುದ್ದೆಗೆ ರೋಹಿಣಿ ಸಿಂಧೂರಿ ಅವರನ್ನು ನೇಮಿಸಿತ್ತು. ಅಕಾಲಿಕವಾಗಿ ವರ್ಗಾವಣೆ ಮಾಡಿದ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದ ಶರತ್ ಅವರು ಸಿಎಟಿ ಮೊರೆ ಹೋಗಿದ್ದರು. ಅಲ್ಲಿಂದ ಇಲ್ಲಿಯವರೆಗೂ ಅವರಿಗೆ ಹುದ್ದೆ ನೀಡಿರಲಿಲ್ಲ.

ಇವರ ಜತೆಗೆ ಇನ್ನೂ ಕೆಲವು ಐಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಬಿ.ಎಚ್.ಅನಿಲ್ ಕುಮಾರ್ ಅವರಿಗೆ ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಹೊಣೆ ವಹಿಸಲಾಗಿದೆ.

ಕೆ.ಪಿ.ಮೋಹನ್‌ರಾಜ್– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿ. ಎಂ.ಆರ್.ರವಿ– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಕರ್ಯ ಅಭಿವೃದ್ಧಿ ನಿಗಮ, ಡಾ.ಸೆಲ್ವಮಣಿ– ಜಿಲ್ಲಾಧಿಕಾರಿ, ಶಿವಮೊಗ್ಗ.

ಕೋವಿಡ್–19: ಐಎಸ್‌ಐ– ಐಐಎಸ್ಸಿ ಸಂಶೋಧಕರ ವಿಶ್ಲೇಷಣೆ

ದಿನಕ್ಕೆ 20 ಸಾವಿರ ಮಂದಿ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜನವರಿ ಅಂತ್ಯಕ್ಕೆ ಅಥವಾ ಫೆಬ್ರುವರಿ 2ರ ವೇಳೆಗೆ 20 ಸಾವಿರದಿಂದ 70 ಸಾವಿರವರೆಗೆ ಕೋವಿಡ್ ಸೋಂಕಿತರು ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆ ಇದೆ ಎಂದು ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆ (ಐಎಸ್‌ಐ) ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸಂಶೋಧಕರು ವಿಶ್ಲೇಷಿಸಿದ್ದಾರೆ.

ಇದೇ ಅವಧಿಯಲ್ಲಿ ತೀವ್ರ ನಿಗಾ ಘಟಕದಲ್ಲಿಯೂ (ಐಸಿಯು)1,000ದಿಂದ 3,000 ಹಾಸಿಗೆಗಳನ್ನು ಮೀಸಲಿರಿಸುವುದು ಅಗತ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕೋವಿಡ್ ಬಗ್ಗೆ ನಿರಂತರ ಅಧ್ಯಯನ ನಡೆಸುತ್ತಿರುವ ವಿಜ್ಞಾನಿಗಳ ಇನ್ನೊಂದು ತಂಡ ‘ಐಎನ್‌ಡಿಎಸ್‌ಸಿಐ-ಎಸ್‌ಐಎಂ’ ಸಹ ಜನವರಿ 25ರ ವೇಳೆಗೆ ಪ್ರತಿ ದಿನ 35 ಸಾವಿರ ಕೋವಿಡ್ ಪ್ರಕರಣಗಳು ಪತ್ತೆಯಾಗಲಿವೆ ಮತ್ತು 500ರಿಂದ 5,000 ಗಂಭೀರ ಪ್ರಕರಣಗಳು ಪತ್ತೆಯಾಗಲಿವೆ. ಎಂದು ತಿಳಿಸಿದ್ದಾರೆ.

‘ದೇಶದಾದ್ಯಂತ ಜನವರಿ 21ರಿಂದ ಫೆಬ್ರುವರಿ 10ರ ವೇಳೆಗೆ 6 ಲಕ್ಷದಿಂದ 9 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಲಿವೆ. ಮಾರ್ಚ್ ವೇಳೆಗೆ, ಪ್ರಕರಣಗಳ ಸಂಖ್ಯೆಯಲ್ಲಿ ಕುಸಿತವಾಗಲಿದೆ. ಈ ಬಾರಿ ಎರಡನೇ ಅಲೆಗಿಂತಲೂ ಹೆಚ್ಚು ಪ್ರಕರಣಗಳು ದೃಢಪಡಲಿವೆ’ ಎಂದು ಹರಿಯಾಣದ ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ ‘ಐಎನ್‌ಡಿಎಸ್‌ಸಿಐ–ಎಸ್‌ಐಎಂ’ ತಂಡದ ಭಾಗವಾಗಿರುವ ಪ್ರೊ. ಗೌತಮ್ ಮೆನನ್ ವಿವರಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್‌ಗಳ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಎಚ್.ಎಂ. ಪ್ರಸನ್ನ, ‘ರಾಜ್ಯದ ಖಾಸಗಿ ವಲಯದ ಆಸ್ಪತ್ರೆಗಳು 1.4 ಲಕ್ಷ ಹಾಸಿಗೆಗಳನ್ನು ಹೊಂದಿಲ್ಲ. ಎರಡನೇ ಅಲೆ ಆರಂಭವಾದಾಗ ಪರಿಶೀಲಿಸಿದಾಗ 66 ಸಾವಿರ ಹಾಸಿಗೆಗಳು ಲಭ್ಯ ಇರುವುದು ಗೊತ್ತಾಯಿತು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಪೋರ್ಟಲ್‌ನಲ್ಲಿಯೂ ಇದೇ ಮಾಹಿತಿ ಇದೆ’ ಎಂದರು.

‘ಸರ್ಕಾರದ ನಿರ್ದೇಶನದ ಅನ್ವಯ ಹಾಸಿಗೆಗಳ ವ್ಯವಸ್ಥೆ ಲಭ್ಯವಾಗಲಿದೆ. ಒಟ್ಟಾರೆ ಹಾಸಿಗೆಗಳ ಸಂಖ್ಯೆ ಮುಖ್ಯವಾಗುವುದಿಲ್ಲ’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

‘ವಯಸ್ಕರಿಗೆ 28,283 ಹಾಸಿಗೆಗಳು ಮತ್ತು ಮಕ್ಕಳಿಗೆ 3,466 ಹಾಸಿಗೆಗಳು ಲಭ್ಯವಾಗಲಿವೆ. ಒಟ್ಟು 31,749 ಹಾಸಿಗೆಗಳು ಲಭ್ಯ’ ಎಂದು ಮಾಹಿತಿ ನೀಡಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

13,34,957 ಒಟ್ಟು ಸೋಂಕಿತರು (13,08,540 ನಿನ್ನೆಯ ವಿವರ)

73,654 ಸಕ್ರಿಯ ಪ್ರಕರಣ	12,44,869 ಗುಣಮುಖ ಆದವರು	16,433 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	15,617
ಗುಣಮುಖ	874
ಸಾವು	06

ಆಧಾರ: ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	31.53 ಕೋಟಿ	3.60 ಕೋಟಿ
ಸಕ್ರಿಯ ಪ್ರಕರಣ	4.74 ಕೋಟಿ	9.55 ಲಕ್ಷ
ಗುಣಮುಖ	26.23 ಕೋಟಿ	3.46 ಕೋಟಿ
ಸಾವು	55.25 ಲಕ್ಷ	4.84 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	28.46 ಲಕ್ಷ	1.94 ಲಕ್ಷ
ಗುಣಮುಖ	9.75 ಲಕ್ಷ	60,405
ಸಾವು	8,265	422

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 6.34 ಲಕ್ಷ ಅಮೆರಿಕ; 1.25 ಲಕ್ಷ ಫ್ರಾನ್ಸ್; 1.48 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 1.99 ಕೋಟಿ ಅಮೆರಿಕ; 40.45 ಲಕ್ಷ ಫ್ರಾನ್ಸ್; 36.73 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 50,053 ಕೇರಳ; 36,886 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 69.87 ಮಹಾರಾಷ್ಟ್ರ; 53.00 ಕೇರಳ; 28.29 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಶುಕ್ರವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಪೀಡಿತ ಗರ್ಭಿಣಿಯರಿಗೆ 70 ಹಾಸಿಗೆ

ಬೆಂಗಳೂರು: ನಗರದ ಸರ್ಕಾರಿ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯಲ್ಲಿ ಕೋವಿಡ್ ಪೀಡಿತ ಗರ್ಭಿಣಿಯರ ಚಿಕಿತ್ಸೆಗೆ 70 ಹಾಸಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಸದ್ಯ ಸೋಂಕಿತ 17 ಗರ್ಭಿಣಿಯರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ.

ಕೋವಿಡ್ ಮೊದಲ ಅಲೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಕೋವಿಡ್ ಪೀಡಿತ ಗರ್ಭಿಣಿಯರನ್ನು ಪ್ರತ್ಯೇಕಿಸಿ, ಆರೈಕೆ ಮಾಡಲಾಗಿತ್ತು. ವಾಣಿ ವಿಲಾಸ ಆಸ್ಪತ್ರೆಯ ವೈದ್ಯರು ಸೋಂಕಿತರ ಮೇಲ್ವಿಚಾರಣೆ ನಡೆಸಿದ್ದರು. ಕೋವಿಡ್ ಎರಡನೇ ಅಲೆಯಲ್ಲಿ ಗರ್ಭಿಣಿಯರೂ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪೀಡಿತರಾಗಿದ್ದರು. ಆಗ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯನ್ನು ಅವರ ಆರೈಕೆಗೆ ಮೀಸಲಿಡಲಾಗಿತ್ತು. 700ಕ್ಕೂ ಅಧಿಕ ಕೋವಿಡ್ ಪೀಡಿತ ಗರ್ಭಿಣಿಯರನ್ನು ಅಲ್ಲಿ ದಾಖಲಿಸಿಕೊಳ್ಳಲಾಗಿತ್ತು. ಸೋಂಕಿತರ ಸಂಖ್ಯೆ ಇಳಿಮುಖ ಮಾಡಿದ ಬಳಿಕ ಅಲ್ಲಿ ಕೋವಿಡೇತರ ಚಿಕಿತ್ಸೆಯನ್ನು ಪ್ರಾರಂಭಿಸಲಾಗಿತ್ತು.

ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಮತ್ತೆ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯನ್ನು ಸರ್ಕಾರ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಿದೆ. ಸೋಂಕಿತ ಗರ್ಭಿಣಿಯರಿಗೆ ಅಲ್ಲಿ ಏಕರೀತಿಯ ಚಿಕಿತ್ಸೆ ಒದಗಿಸಿ, ಹೆರಿಗೆ ಮಾಡಿಸಲಾಗುತ್ತಿದೆ.

ಎಚ್‌ಎಸ್‌ಐ.ಎಸ್ ಘೋಷಾ ಆಸ್ಪತ್ರೆ

‘ಗರ್ಭಿಣಿಯರು ಉಸಿರಾಟದ ಸಮಸ್ಯೆ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅನಗತ್ಯವಾಗಿ ಹೊರಗಡೆ ಓಡಾಟ ನಡೆಸಬಾರದು. ಈಗಾಗಲೇ ಆಸ್ಪತ್ರೆಗೆ ದಾಖಲಾದ ಗರ್ಭಿಣಿಯರಿಗೆ ಸೋಂಕು ತೀವ್ರ ಸ್ವರೂಪದಲ್ಲಿ ಕಾಣಿಸಿಕೊಂಡಿಲ್ಲ. ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ತುಳಸಿದೇವಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋವಿಡ್ ಕಾಯಿಲೆ ದೂರವಾಗುವವರೆಗೂ ಸಮಾರಂಭಗಳು ಸೇರಿದಂತೆ ಹೆಚ್ಚು ಜನ ಸೇರುವ ಕಡೆ ಗರ್ಭಿಣಿಯರು ಹೋಗಬಾರದು. ಮನೆಯಲ್ಲಿ ಯಾರಾದರೂ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರೆ ಸ್ವಯಂ ನಿಗಾ ವ್ಯವಸ್ಥೆಗೆ ಒಳಪಡಬೇಕಾಗುತ್ತದೆ’ ಎಂದರು.

ಬಜೆಟ್ ಪೂರ್ವಭಾವಿ ಸಭೆಯನ್ನು ಶಾಸಕ ಎಂ.ಪಿ.ಕುಮಾರಸ್ವಾಮಿ ಉದ್ಘಾಟಿಸಿದರು. ದಲಿತ ಮುಖಂಡರಾದ ಮಾವಳ್ಳಿ ಶಂಕರ್, ನಾಗರಾಜ್, ಶಾಸಕ ಎನ್. ಮಹೇಶ್, ಗಾಂಧಿ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಸಿ.ಜಿ. ಶ್ರೀನಿವಾಸನ್ ಇದ್ದರು –ಪ್ರಜಾವಾಣಿ ಚಿತ್ರ

‘ದಲಿತರ ಹಣ ಮೇಲ್ಸೇತುವೆ, ನಾಲೆಗೆ ಬಳಕೆಯಾಗಬಾರದು’

ಬೆಂಗಳೂರು: ‘ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣಕ್ಕೆ ನಿಗದಿ ಮಾಡುವ ಅನುದಾನವನ್ನು ಅದೇ ಸಮುದಾಯದ ಅಭಿವೃದ್ಧಿಗೆ ಮೀಸಲಿಡಬೇಕು. ನಾಲೆ, ವಿಮಾನ ನಿಲ್ದಾಣ, ಮೇಲ್ಸೇತುವೆ ನಿರ್ಮಾಣಕ್ಕೆ ಬಳಕೆ ಮಾಡಬಾರದು’ ಎಂದು ಬಿಜೆಪಿ ಶಾಸಕ ಎಂ.ಪಿ. ಕುಮಾರಸ್ವಾಮಿ ಒತ್ತಾಯಿಸಿದರು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘ ನಗರದಲ್ಲಿ ಬುಧವಾರ ಆಯೋಜಿಸಿದ್ದ 2022–23ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆ ಉದ್ಘಾಟಿಸಿದ ಅವರು, ‘ದಲಿತರ ಕಲ್ಯಾಣ ಕಾರ್ಯಕ್ರಮಗಳಿಗೆ ₹26 ಸಾವಿರ ಕೋಟಿ ಒದಗಿಸಲಾಗಿದೆ ಎಂದಾಗ ಎಲ್ಲರ ಕಣ್ಣುಗಳು ಕೆಂಪಗಾಗುತ್ತವೆ. ಘೋಷಣೆ ಕೇವಲ ಹೆಸರಿಗಷ್ಟೇ ಆಗುತ್ತಿದೆ. ನಾಲೆ ನಿರ್ಮಾಣಕ್ಕೆ ಈ ಅನುದಾನ ಬಳಕೆ ಮಾಡುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

ಶಾಸಕ ಎನ್.ಮಹೇಶ್ ಮಾತನಾಡಿ, ‘ಕಂದಾಯ ಸಚಿವರೇ ಹೇಳಿರುವಂತೆ ಉಳುಮೆಯಾಗದ 10 ಲಕ್ಷ ಹೆಕ್ಟೇರ್ ಭೂಮಿ ಇದೆ. ಅದನ್ನು ಭೂ ರಹಿತ ದಲಿತರಿಗೆ ಹಂಚಿ ನೀರಾವರಿ ಸೌಲಭ್ಯ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

‘ಕಾರ್ಯಕ್ರಮ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ದಲಿತ ಶಾಸಕರು ಮತ್ತು ಮುಖಂಡರು ನಿಯೋಗದಲ್ಲಿ ತೆರಳಿ ಮುಖ್ಯಮಂತ್ರಿ ಅವರಿಗೆ ವಿವರಿಸೋಣ’ ಎಂದರು. ‘ಬೆಂಗಳೂರು ಸುತ್ತಮುತ್ತಲ ಕೈಗಾರಿಕಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹಂಚಿಕೆಯಾಗಬೇಕಿದ್ದ 800 ಎಕರೆಯಷ್ಟು ಭೂಮಿ ದಲಿತೇತರಿಗೆ ಹಂಚಿಕೆಯಾಗಿದೆ’ ಎಂದು ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸ್ ಆರೋಪಿಸಿದರು.

ಪಾದಯಾತ್ರೆ ತಡೆಯಲು ಬಿಜೆಪಿ ಶಾಸಕರ ಒತ್ತಾಯ

ಬೆಂಗಳೂರು: ನಗರದಲ್ಲಿ ಮೇಕೆದಾಟು ಪಾದಯಾತ್ರೆಗೆ ಅನುಮತಿ ನೀಡಬಾರದು ಎಂದು ಬಿಜೆಪಿ ಶಾಸಕರು ಮುಖ್ಯಮಂತ್ರಿಯವರನ್ನು ಒತ್ತಾಯಿಸಿದ್ದಾರೆ.

ಬಿಜೆಪಿ ಕಾರ್ಯಾಲಯದಲ್ಲಿ ಬುಧವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಅರವಿಂದ ಲಿಂಬಾವಳಿ, ಎಲ್.ಎ.ರವಿಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಎಂ. ಸತೀಶ್ ರೆಡ್ಡಿ ಮಾತನಾಡಿದರು.

‘ಕಾಂಗ್ರೆಸ್ ನಡೆಸುತ್ತಿರುವ ಈ ಪಾದಯಾತ್ರೆಯಿಂದ ಕೋವಿಡ್ ಇನ್ನಷ್ಟು ವ್ಯಾಪಕವಾಗಿ ಹರಡಲಿದೆ. ಆದ್ದರಿಂದ ಪಾದಯಾತ್ರೆ ನಿಲ್ಲಿಸಬೇಕು ಎಂಬುದು ನಮ್ಮ ಏಕೈಕ ಒತ್ತಡ. ಪಾದಯಾತ್ರೆ ಮುನ್ನಡೆಸುವ ನಾಯಕರು ನಿಯಮ ಪಾಲಿಸುತ್ತಾರೆ ಎಂದುಕೊಂಡಿದ್ದೆವು. ಕೊರೊನಾ ಜಾಸ್ತಿ ಆದರೆ ಇಬ್ಬರೇ ಪಾದಯಾತ್ರೆ ಮಾಡುತ್ತೇವೆ ಎಂದೂ ಹೇಳಿದ್ದರು. ಈಗ ಜಾತ್ರೆ ಮಾಡಿದ್ದಾರೆ’ ಎಂದು ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

‘ಬೆಂಗಳೂರಿನ ಜನ ಪಾದಯಾತ್ರೆ ವಿರೋಧಿಸುತ್ತಾರೆ. ಪಾದಯಾತ್ರೆ ನಿಲ್ಲಿಸದಿದ್ದರೆ ಪ್ರತಿರೋಧ ಒಡ್ಡಲಿದ್ದೇವೆ. ಜನರ ಪ್ರಾಣ ಮುಖ್ಯವೇ ಹೊರತು ಪಾದಯಾತ್ರೆ– ಹೋರಾಟ ಮುಖ್ಯವಲ್ಲ. ಪಾದಯಾತ್ರೆ ನಿಲ್ಲಿಸದಿದ್ದರೆ ಜನ ಕಾಂಗ್ರೆಸ್ ಅನ್ನು ತಿರಸ್ಕರಿಸಲಿದ್ದಾರೆ’ ಎಂದು ಎಂ. ಸತೀಶ್ ರೆಡ್ಡಿ ಹೇಳಿದರು.

‘ದಿನಗೂಲಿಗಳು, ವ್ಯಾಪಾರಿಗಳು ಇರುವ ಮತ್ತು ಅಧಿಕ ಜನದಟ್ಟಣೆಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಪಾದಯಾತ್ರೆ ಬಂದರೆ ಅನಾಹುತವಾಗುತ್ತದೆ. ಆದ ಕಾರಣ ಬೆಂಗಳೂರಿಗೆ ಪಾದಯಾತ್ರೆಗೆ ಅವಕಾಶ ನೀಡಬಾರದು’ ಎಂದು ಉದಯ್ ಗರುಡಾಚಾರ್ ಆಗ್ರಹಿಸಿದರು.

ಶಾಸಕ ರವಿಸುಬ್ರಹ್ಮಣ್ಯ ಮಾತನಾಡಿ, ‘ಮತ್ತೊಂದು ಲಾಕ್‌ಡೌನ್ ಬೆಂಗಳೂರಿಗೆ ಬೇಡ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಬೆಂಗಳೂರಿಗೆ ಪಾದಯಾತ್ರೆ ತರಬೇಡಿ. ಪಾದಯಾತ್ರೆ ವಿರುದ್ಧ ಕಠಿಣ ಕ್ರಮವನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ನಗರದ ಜನರ ಮೇಲೆ ಪರಿಣಾಮ’

ಬೆಂಗಳೂರು: ನಗರದಲ್ಲಿ ಮೇಕೆದಾಟು ಪಾದಯಾತ್ರೆಯಿಂದ ರಾಜ್ಯದಲ್ಲಿ ಮತ್ತು ಬೆಂಗಳೂರು ನಗರದ ಜನರು ವಿಶೇಷವಾಗಿ ಮಕ್ಕಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದ್ದಾರೆ.

ಕಾಂಗ್ರೆಸ್ ನಾಯಕರು ಬೆಂಗಳೂರಿನ ಜನರ ಪ್ರಾಣದ ಜತೆ ಚೆಲ್ಲಾಟ ಆಡುವುದನ್ನು ನಿಲ್ಲಿಸಬೇಕು. ದೊಡ್ಡ ಸಂಖ್ಯೆಯಲ್ಲಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಇದ್ದಾರೆ. ಇವರಿಗೆ ತೊಂದರೆ ಆದರೆ ಅದರ ಜವಾಬ್ದಾರಿಯನ್ನು ಕಾಂಗ್ರೆಸ್ ನಾಯಕರೇ ಹೊರಬೇಕು ಎಂದಿದ್ದಾರೆ.

ಒತ್ತಾಯ: ‘ಕಾಂಗ್ರೆಸ್‌ನ ಮೇಕೆದಾಟು ಪಾದಯಾತ್ರೆ ಬೆಂಗಳೂರು ಪ್ರವೇಶಿಸಲು ಬಿಡಬಾರದು. ನಿಲ್ಲಿಸಲು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು’ ಎಂದು ಬಿಎಂಟಿಸಿ ಉಪಾಧ್ಯಕ್ಷ ಎಂ.ಆರ್.ವೆಂಕಟೇಶ್ ಆಗ್ರಹಿಸಿದರು.

‘ಅನರ್ಹ’ ಅಭ್ಯರ್ಥಿಗಳಿಗೆ ಕೋರ್ಟ್‌ನಲ್ಲಿ ಗೆಲುವು

ಕೆಪಿಎಸ್‌ಸಿ ವಿರುದ್ಧ ಗೆದ್ದ 10 ಅಭ್ಯರ್ಥಿಗಳು

• ರಾಜೇಶ್ ರೈ ಚಟ್ಲ

ಬೆಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿನ ಮುಖ್ಯೋಪಾಧ್ಯಾಯರ ಹುದ್ದೆಗಳ ನೇಮಕಾತಿಯ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಆಯ್ಕೆಯಾಗಿದ್ದರೂ, ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಕೈಬಿಟ್ಟಿದ್ದ 102 ಅಭ್ಯರ್ಥಿಗಳ ಪೈಕಿ, ಹೈಕೋರ್ಟ್ ಮೆಟ್ಟಿಲೇರಿದ್ದ 10 ಅಭ್ಯರ್ಥಿಗಳು ‘ಅರ್ಹತೆ’ ಗಿಟ್ಟಿಸಿಕೊಂಡಿದ್ದಾರೆ.

100 ಹುದ್ದೆಗಳ (ಗ್ರೂಪ್ ‘ಬಿ’) ನೇಮಕಾತಿಗೆ 1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ 264 ಅಭ್ಯರ್ಥಿಗಳ ಪೈಕಿ, 102 ಮಂದಿಯನ್ನು ಮೂಲ ದಾಖಲಾತಿಗಳ ಪರಿಶೀಲನೆ ಬಳಿಕ ಕೆಪಿಎಸ್‌ಸಿ ಕೈಬಿಟ್ಟಿತ್ತು. ಹುದ್ದೆಗೆ ಸ್ನಾತಕೋತ್ತರ ಪದವಿಯ ಜೊತೆಗೆ ಸಂಬಂಧಿಸಿದ ವಿಷಯ ಟೀಚಿಂಗ್ ಮೆಥಡ್‌ನಲ್ಲಿ ಬಿ.ಎಡ್ ಪದವಿ ಪಡೆದಿರಬೇಕು. ಈ ವಿದ್ಯಾರ್ಹತೆ ಇಲ್ಲ ಎಂಬ ಕಾರಣ ನೀಡಿ ವ್ಯಕ್ತಿತ್ವ ಪರೀಕ್ಷೆಯ ಪಟ್ಟಿಯಿಂದ ಹೊರಗಿಟ್ಟಿತ್ತು.

ಒಟ್ಟು 19 ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಪೈಕಿ, 9 ಅಭ್ಯರ್ಥಿಗಳ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಆದರೆ, ಆಯ್ಕೆಯಾಗಿದ್ದ ಇತರ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆಯನ್ನು ಕೆಪಿಎಸ್‌ಸಿ ಈಗಾಗಲೇ ಮುಗಿಸಿ, ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅಲ್ಲದೆ, ಆಯ್ಕೆಯಾದವರು ನೇಮಕಾತಿ ಆದೇಶ ಪಡೆದು ಕರ್ತವ್ಯಕ್ಕೂ ಹಾಜರಾಗಿದ್ದಾರೆ. ಇದೀಗ ಹೈಕೋರ್ಟ್ ಆದೇಶದಂತೆ 9 ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆಯನ್ನು ಕೆಪಿಎಸ್‌ಸಿ ನಡೆಸಬೇಕಿದೆ. ಆಯ್ಕೆ ಪಟ್ಟಿ ಪರಿಷ್ಕೃತಗೊಂಡರೆ ಕೆಲವರು ಕೆಲಸ ಕಳೆದುಕೊಳ್ಳುವ ಸಾಧ್ಯತೆಯೂ ಇದೆ.

ಅರ್ಜಿ ತಿರಸ್ಕರಿಸಿದ್ದ ಕೆಎಟಿ: ವ್ಯಕ್ತಿತ್ವ ಪರೀಕ್ಷೆಯಿಂದ ಕೆಪಿಎಸ್‌ಸಿ ಕೈಬಿಟ್ಟಿದ್ದ ಪಟ್ಟಿಯಲ್ಲಿದ್ದವರಲ್ಲಿ 24 ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ (ಕೆಎಟಿ) ಮೊರೆ ಹೋಗಿದ್ದರು. ಆದರೆ, ಕೆಎಟಿ ಈ ಅಭ್ಯರ್ಥಿಗಳ ವಾದವನ್ನು ಪುರಸ್ಕರಿಸಿರಲಿಲ್ಲ. ಆ ಬಳಿಕ, ಈ ಪೈಕಿ 19 ಅಭ್ಯರ್ಥಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್ ನಿರ್ದೇಶನದಂತೆ ವಿದ್ಯಾರ್ಥಿಗಳ ಮನವಿಯನ್ನು ಪರಿಶೀಲಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ತಜ್ಞರ ಸಮಿತಿ ರಚಿಸಿತ್ತು. ಈ ಸಮಿತಿ 2021ರ ಸೆ. 14ರಂದು ಸರ್ಕಾರಕ್ಕೆ ವರದಿ ನೀಡಿತ್ತು. ಆ ವರದಿಯನ್ನು ಒಪ್ಪಿಕೊಂಡಿದ್ದ ಸರ್ಕಾರ, ಅದನ್ನು ಕೋರ್ಟ್‌ಗೂ ನೀಡಿತ್ತು.

‘1:3 ಆಯ್ಕೆ ಪಟ್ಟಿಯಲ್ಲಿದ್ದರೂ ಸ್ನಾತಕೋತ್ತರ ಪದವಿ ಪಡೆದ ವಿಷಯವು ಬಿ.ಇಡಿ ಕೋರ್ಸ್‌ನಲ್ಲಿ ಕಲಿಸುವ ವಿಧಾನದಲ್ಲಿ (ಟೀಚಿಂಗ್ ಮೆಥಡಾಲಜಿ) ಇರಬೇಕೆಂಬ ವಿದ್ಯಾರ್ಹತೆಯ ನಿಯಮದ ಕಾರಣಕ್ಕೆ ಅನರ್ಹಗೊಂಡಿದ್ದೆವು. ಕೆಎಸ್‌ಒಯು, ಇಗ್ನೊ ಮುಂತಾದ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಬಿ.ಇಡಿ ಕೋರ್ಸ್‌ನಲ್ಲಿ ಕಲಿಸುವ ವಿಧಾನದಲ್ಲಿ ಸಮಾಜ ವಿಜ್ಞಾನ ಅಧ್ಯಯನ ಮಾಡಿದ ಅನೇಕ ಅಭ್ಯರ್ಥಿಗಳು, ಇತಿಹಾಸದ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮಾಡಿದ್ದಾರೆ. ಬಿ.ಇಡಿ ಕೋರ್ಸ್‌ನಲ್ಲಿ ಇತಿಹಾಸ ವಿಷಯದ ಪದ ಇಲ್ಲ ಎಂಬ ಕಾರಣಕ್ಕೆ ಅಂಥವರನ್ನು ಪಟ್ಟಿಯಿಂದ ಕೈ ಬಿಡಲಾಗಿತ್ತು. ವಿದ್ಯಾರ್ಹತೆ ವಿಷಯವನ್ನು ಕೆಪಿಎಸ್‌ಸಿ ತಪ್ಪಾಗಿ ಅರ್ಥೈಸಿಕೊಂಡಿತ್ತು. ತಜ್ಞರ ಸಮಿತಿಯ ವರದಿ ಪರಿಗಣಿಸಿ ಹೈಕೋರ್ಟ್ ತೀರ್ಪು ನೀಡಿದೆ. ಕೆಪಿಎಸ್‌ಸಿ ವಿರುದ್ಧದ ಒಂದೂವರೆ ವರ್ಷದ ಕಾನೂನು ಹೋರಾಟದಲ್ಲಿ ಕೊನೆಗೂ ಜಯ ಸಿಕ್ಕಿದೆ’ ಎಂದು ಅಭ್ಯರ್ಥಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

ತಜ್ಞರ ವರದಿಯಿಂದ ‘ಅರ್ಹತೆ’

‘ರಾಜ್ಯಶಾಸ್ತ್ರ ಅಥವಾ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ (ಪಿಜಿ) ಪದವಿ ಪಡೆದು, ಬಿ.ಇಡಿ ಕೋರ್ಸ್‌ನಲ್ಲಿ ಸಮಾಜ ವಿಜ್ಞಾನ ಮತ್ತು ಇಂಗ್ಲಿಷ್ ಅಭ್ಯಾಸ ಮಾಡಿದ್ದರೆ ಕಲಿಸುವ ವಿಧಾನದಲ್ಲಿ (ಟೀಚಿಂಗ್ ಮೆಥಡಾಲಜಿ) ರಾಜ್ಯಶಾಸ್ತ್ರ ಮತ್ತು ಇತಿಹಾಸ ಸೇರಿದೆ. ಭೌತವಿಜ್ಞಾನದಲ್ಲಿ ಪಿಜಿ ಪದವಿ ಪಡೆದು ಬಿ.ಇಡಿ ಕೋರ್ಸ್‌ನಲ್ಲಿ ಗಣಿತ ಮತ್ತು ಫಿಸಿಕಲ್ ಸೈನ್ಸ್ ಓದಿದ್ದರೆ ಕಲಿಸುವ ವಿಧಾನದಲ್ಲಿ ಭೌತವಿಜ್ಞಾನವೂ ಸೇರಿರುತ್ತದೆ. ಭೌತ ವಿಜ್ಞಾನ ಅಥವಾ ರಸಾಯನವಿಜ್ಞಾನದಲ್ಲಿ ಪಿಜಿ ಪದವಿ ಪಡೆದು, ಬಿ.ಇಡಿ ಕೋರ್ಸ್‌ನಲ್ಲಿ ಗಣಿತ ಮತ್ತು ಫಿಸಿಕಲ್ ಸೈನ್ಸ್ ಓದಿದ್ದರೆ, ಕಲಿಸುವ ವಿಧಾನದಲ್ಲಿ ಭೌತವಿಜ್ಞಾನ ಮತ್ತು ರಸಾಯನವಿಜ್ಞಾನ ಸೇರಿರುತ್ತದೆ. ಸಸ್ಯವಿಜ್ಞಾನದಲ್ಲಿ ಪಿಜಿ ಪದವಿ ಪಡೆದು, ಬಿ.ಇಡಿ ಕೋರ್ಸ್‌ನಲ್ಲಿ ಜೀವವಿಜ್ಞಾನ ಮತ್ತು ರಸಾಯನವಿಜ್ಞಾನ ಓದಿದ್ದರೆ, ಕಲಿಸುವ ವಿಧಾನದಲ್ಲಿ ಸಸ್ಯವಿಜ್ಞಾನ ಸೇರಿರುತ್ತದೆ. ಹೀಗೆ ತತ್ಸಮಾನ ಎಂದು ಪರಿಗಣಿಸಬಹುದು ಎಂದು ವರದಿ ನೀಡಿತ್ತು. ಅಂಥ 10 ಅಭ್ಯರ್ಥಿಗಳು ಹುದ್ದೆಗೆ ಅರ್ಹರು. ಆದರೆ, ಉಳಿದ 9 ಅಭ್ಯರ್ಥಿಗಳು ಪಿಜಿ ಪದವಿಯಲ್ಲಿ ಓದಿದ ವಿಷಯವು ಬಿ.ಇಡಿ ಕೋರ್ಸ್‌ನ ಕಲಿಸುವ ವಿಧಾನದಲ್ಲಿ ಇಲ್ಲದ ಕಾರಣ ಅವರು ಅರ್ಹರಾಗುವು ದಿಲ್ಲ’ ಎಂದು ತಜ್ಞರ ಸಮಿತಿ ವರದಿ ನೀಡಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to bring to the NOTICE of the general public that, I, Vijayakumar Ramachandran (son of Mr. Ramachandran Natarajan, aged about 45 years, residing at 3560, Sturbridge Ct., Ann Arbor, MI 48105, USA), the absolute owner in peaceful possession of all that piece and parcel of the site bearing No. 18A, carved out in Survey No. 12, situated in Anjanapura Village, Uttarahalli Hobli, Bangalore South Taluk (more fully described hereto and hereinafter referred to as "Schedule Property"), have misplaced the original "Sale Deed dated 15.07.2004 executed by Mr. K. Venkitaraman, son of Mr. K.K.S. Mani in favour of Mr. Vijaya Kumar Ramachandran (represented by his GPA Holder, Mrs. Sharadamba), registered as document bearing No. KEN-1-15091-2004-05, pages 1 – 16, in Book I, stored in C.D. No. KEND115, at the office of the Sub-Registrar, Kengeri, Bengaluru" (hereinafter referred to as "document") in respect of the Schedule Property, and I am unable to trace the same despite my best efforts and a thorough search.

The public at large is therefore requested to return the aforementioned document forthwith to the undersigned, in the event the same is found.

Further, the general public is hereby CAUTIONED that if any person(s) is in possession of the aforementioned document, and is misusing the same in any manner, such person(s) would be liable for criminal prosecution.

SCHEDULE PROPERTY

All that piece and parcel of the site bearing No. 18A, carved out in Survey No. 12, measuring East to West: 80 feet and North to South: 50 feet, totally measuring 4,000 square feet, situated in Anjanapura Village, Uttarahalli Hobli, Bangalore South Taluk, and bounded as follows:

East by : Site No. 37
West by : Road
North by : Site No. 18B and Site No. 36
South by : Site No. 18

Dated this the 13th day of January, 2022.

Sd/-
Mr. Vijayakumar Ramachandran
C/o B-003, Adarsh Residency, 47th Cross, Jayanagar 8th Block, Bengaluru – 560 070.

JOB OPPORTUNITIES

Hospital & Medical Jobs

WANTED Lab analysists and lab technician (for diagnostics) (both male and female) location RR Nagar Bangalore contact :-7338133755, 7829689303

D PHARMACY -Both male and female ,branch manager ,both experience and fresher,location RR nagar bangalore contact :-7338133755

Part-Time Jobs

REPUTED MNC Company Provide Work From Home to 30 to 35K at Malleswaram: 7019215243/ 9886641282

Teachers/ Professors

WANTED BE / Diploma in Mechanical, Electronics, Computers to take Part time/Full time Diploma classes and Graduates for Marketing Assistants. Contact: Personally with resume, original documents between 9AM to 11AM . Nadgir Institute, Near Modi Hospital, Rajajinagar, Bangalore - 560010. Ph: 23387333, 23389444, 8867065525.

AUTOMOTIVE

Four Wheelers Selling

Others

QUOTATIONS REQUIRED for without RC KA05 MP3299/ Nissan Micra Xtronic CVTXV/ 2013/ Burnt vehicle. 9972038947/ 9844080129.

BEAUTY & HEALTH

Health Clinic

ANU SPA Massage Therapy Available near Ring Road, Bharath Petrol Bunk, Koramangala. Contact No: 9035930397

BUSINESS

Business to Business

Financial Services

'AISHWARYA GROUP' Invest 1L- 10L in Trading, Multiple Businesses. Monthly 7% Secured Fixed Returns. Investors Welcome. Contact:-7892818780.

Business Offers

Finance

NRI'S INVESTMENT And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

I, Y.N. BHARAT KUMAR S/o Y.R. Nagesh Kumar, resident at No. 51/A, 1st B Main Road, 'B' Sector, Near Ganesh Temple, Yelahanka New Town, Bangalore-560064 have changed name to, BHARAT NAGESH, vide affidavit date-12-01-2022, before Notary H. Sridhar Rao, Bangalore.

I, DEETYA SATHISH D/o Satish Kumar, R/at No. 633, OMBR Layout, Banasawadi, Bangalore- 560043 have changed my name to DEETYA SATISH vide affidavit Dated: 7/1/2022 Before Notary K.C. Pemmaiah Bangalore.

I, MANJULA RAO, residing at Bengaluru-37 have changed my name as, JAGANA MANJULA RAO, vide affidavit dated 12/1/2022, before Notary K.S. Bammappanavar, Bengaluru

I, SUNEELKUMAR GURAV have changed my name to SUNILKUMAR GURAV vide affidavit dated: 12/1/2022 Before Notary Shreeshail. B. Gobbani Bangalore

Lost

LOST
I, Dr. Om Prakash, have lost a Share Certificate of: Company: Piramal Enterprises Ltd Folio No. 0053392; Certificate No.19584 Number of Shares: 215 Distinctive No. 23453191- 23453405. If found, please Call: 9343692830.

ಗುರುವಾರ, ಜನವರಿ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 13 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಎಸ್‌ಎಸ್‌ಸಿ, ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗಾಗಿ ನಡೆಯುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಮಾರ್ಗದರ್ಶಿ ಇಲ್ಲಿದೆ.

ಆಳ-ಅಗಲ
ಉತ್ತರಾಖಂಡ: ಪರ್ಯಾಯ ಆಡಳಿತದ ಪರಿಪಾಟ
ಎಎಪಿಯ 'ಪಂಜಾಬ್ ಮಾದರಿ' ಘೋಷಣೆ 12
ಬಿಜೆಪಿ ಸಂಪುಟ ಬಿಟ್ಟ ಮತ್ತೊಬ್ಬ ಒಬಿಸಿ ನಾಯಕ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,150 ▲	18,212 ▲	₹49,400 (ಬೆಂಗಳೂರು)	₹62,600 (ಬೆಂಗಳೂರು)	73.93 ▲

ಕೈ ಯಾತ್ರೆ ನಿಷೇಧಿಸಿದ ಸರ್ಕಾರ: ಮಾಡಿಯೇ ತೀರುತ್ತೇವೆ—ಡಿ.ಕೆ. ಶಿವಕುಮಾರ್

ಸಂಘರ್ಷದತ್ತ ಕಾಂಗ್ರೆಸ್ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನಡೆಸುತ್ತಿರುವ ಮೇಕೆದಾಟು ಪಾದಯಾತ್ರೆ ತಡೆಯಲಾಗದಷ್ಟು ಸರ್ಕಾರ ಅಸಮರ್ಥವಾಗಿದೆಯೇ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಚಾಟಿ ಬೀಸಿದ ಬೆನ್ನಲ್ಲೇ, ಪಾದಯಾತ್ರೆ ಹಾಗೂ ಆ ಉದ್ದೇಶಕ್ಕಾಗಿ ಸಾಗುವ ಜನ ಮತ್ತು ವಾಹನಗಳ ಓಡಾಟ ನಿಷೇಧಿಸಿ ರಾಜ್ಯ ಸರ್ಕಾರ ಬುಧವಾರ ರಾತ್ರಿ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಹೊರಬೀಳುತ್ತಿದ್ದಂತೆ ರಾಮನಗರದಲ್ಲಿ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನಿಗದಿತ ಅವಧಿಯ ಯಾತ್ರೆಯನ್ನು ಮಧ್ಯದಲ್ಲೇ ಕೈಬಿಡುವ ಪ್ರಶ್ನೆಯೇ ಇಲ್ಲ. ಮುಂದುವರಿಸಿಯೇ ತೀರುತ್ತೇವೆ' ಎಂದು ಹೇಳಿದ್ದಾರೆ.

ನಿಷೇಧದ ಆದೇಶಕ್ಕೆ ಕಾಂಗ್ರೆಸ್ ಸಡ್ಡು ಹೊಡೆದಿರುವುದರಿಂದಾಗಿ, ಗುರುವಾರ ರಾಮನಗರದಿಂದ ಬೆಂಗಳೂರು ಕಡೆಗೆ ಸಾಗಬೇಕಿರುವ ಯಾತ್ರೆ ಭವಿಷ್ಯ ಕುತೂಹಲಕ್ಕೆ ಕಾರಣವಾಗಿದೆ.

ಸರ್ಕಾರದ ಆದೇಶವೇನು?: 'ನಮ್ಮ ನೀರು ನಮ್ಮ ಹಕ್ಕು ಅಥವಾ ಮೇಕೆದಾಟು ಪಾದಯಾತ್ರೆ' ಹೀಗೆ ಯಾವುದೇ ಹೆಸರಿನಲ್ಲಿ ಅಂತರ್ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯೊಳಗೆ ವಾಹನಗಳು ಹಾಗೂ ಜನರ ಓಡಾಟವನ್ನು ತಕ್ಷಣದಿಂದಲೇ ನಿಷೇಧಿಸಲಾಗಿದೆ' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಹೊರಡಿಸಿದ ಆದೇಶದಲ್ಲಿ ತಿಳಿಸಿದ್ದಾರೆ.

ಮುಂದಿನ ಆದೇಶದವರೆಗೆ ವಾಹನಗಳ ಓಡಾಟ ಮತ್ತು ಜನರ ಸಾಗಣೆಗೆ ನಿರ್ಬಂಧಿಸಲು ಜಿಲ್ಲಾಧಿಕಾರಿಗಳು, ಎಸ್ಪಿಗಳು, ಪೊಲೀಸ್ ಕಮಿಷನರ್ ಮತ್ತು ಸಾರಿಗೆ ಆಯುಕ್ತರು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ಯಾವುದೇ ವ್ಯಕ್ತಿ ನಿಯಮವನ್ನು ಉಲ್ಲಂಘಿಸಿದರೆ, ವಿಕೋಪ ನಿರ್ವಹಣೆ ಕಾಯ್ದೆ 2005 ರ ಸೆಕ್ಷನ್ 51 ಮತ್ತು 60 ರ ಅಡಿ ಹಾಗೂ ಐಪಿಸಿ 188 ರ ಅಡಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಕೊರೊನಾ ಸೋಂಕು ಹರಡುವಿಕೆಯ ಸರಪಳಿ ತುಂಡರಿಸುವ ಉದ್ದೇಶದಿಂದ ಈಗಾಗಲೇ, ಪ್ರತಿಭಟನೆ, ರ‍್ಯಾಲಿ, ಹೆಚ್ಚಿನ ಜನ ಸೇರುವುದನ್ನು ನಿರ್ಬಂಧಿಸಲಾಗಿದೆ. ಹೀಗಿದ್ದರೂ, ಮೇಕೆದಾಟು ಪಾದಯಾತ್ರೆಯಲ್ಲಿ ಭಾಗವಹಿಸಲು ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿ ವಿವಿಧ ಜಿಲ್ಲೆಗಳಿಂದ ಜನರನ್ನು ಕರೆದುಕೊಂಡು ಬರಲಾಗುತ್ತಿದೆ. ಇದರಿಂದ ರಾಜ್ಯದ ಅಪಾರ ಸಂಖ್ಯೆಯ ಜನರ ಆರೋಗ್ಯವನ್ನು ಅಪಾಯಕ್ಕೆ ಒಡ್ಡಲಾಗಿದೆ. ಅಲ್ಲದೆ, ಕೋವಿಡ್ ಪರಿಸ್ಥಿತಿಯೂ ಬಿಗಡಾಯಿಸಲಿದೆ ಎಂದು ಅವರು ಆದೇಶದಲ್ಲಿ ವಿವರಿಸಿದ್ದಾರೆ.

ಹೈಕೋರ್ಟ್ ಎಚ್ಚರಿಕೆ ಬೆನ್ನಲ್ಲೇ, ಸರ್ಕಾರ ತೆಗೆದುಕೊಳ್ಳಬೇಕಾದ ಮುಂದಿನ ಹೆಜ್ಜೆಗಳ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ವರ್ಚುವಲ್ ರೂಪದಲ್ಲಿ ಸಭೆ ನಡೆಯಿತು. ಈ ಸಭೆಯಲ್ಲಿ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಭಾಗಿಯಾಗಿದ್ದರು.

8ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3GrRYsL

ಸರ್ಕಾರ, ಕಾಂಗ್ರೆಸ್‌ಗೆ ಹೈಕೋರ್ಟ್ ಚಾಟಿ

ಬೆಂಗಳೂರು: 'ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ (ಕೆಪಿಸಿಸಿ) ನಡೆಸುತ್ತಿರುವ ಪಾದಯಾತ್ರೆ ತಡೆಯಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆಕ್ಷೇಪಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ಕೆಪಿಸಿಸಿಗೂ ಕಿವಿ ಹಿಂಡಿದೆ.

'ಪಾದಯಾತ್ರೆ ವೇಳೆ ಕೋವಿಡ್ ಮಾರ್ಗಸೂಚಿಗಳನ್ನು ಎಷ್ಟರ ಮಟ್ಟಿಗೆ ಪಾಲನೆ ಮಾಡಿದ್ದೀರಿ ಎಂಬ ಬಗ್ಗೆ ಸೂಕ್ತ ವಿವರಣೆ ನೀಡಿ' ಎಂದು ಕೆಪಿಸಿಸಿಗೆ ಖಡಕ್ ನಿರ್ದೇಶನ ನೀಡಿದೆ.

'ಪಾದಯಾತ್ರೆ ತಡೆಯಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ತಿಂಡ್ಲು ನಿವಾಸಿ ಎ.ವಿ.ನಾಗೇಂದ್ರ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ಸೂರಜ್ ಗೋವಿಂದರಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಹಿರಿಯ ವಕೀಲ ಅರವಿಂದ ಕಾಮತ್ ಹಾಗೂ ಶ್ರೀಧರ ಪ್ರಭು, 'ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ವಿಧಿಸಿರುವ ನಿರ್ಬಂಧಗಳ ನಡುವೆಯೂ ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕೆಪಿಸಿಸಿ ಇದೇ 9ರ ಭಾನುವಾರದಿಂದ 10 ದಿನಗಳ ಪಾದಯಾತ್ರೆ ಆರಂಭಿಸಿದೆ. ಇದರಲ್ಲಿ ಕಾರ್ಯಕರ್ತರು, ಮುಖಂಡರು, ಸಾಂಸ್ಕೃತಿಕ ತಂಡಗಳೂ ಸೇರಿದಂತೆ ಸಾವಿರಾರು ಜನರು ಹಾಗೂ ಪಟ್ಟಣ ಪ್ರದೇಶಗಳ ಜನರು ಭಾಗವಹಿಸುತ್ತಿದ್ದಾರೆ. ಇದರಿಂದ ಕೋವಿಡ್ ವೇಗವಾಗಿ ಹರಡುವ ಸಾಧ್ಯತೆ ಇದೆ. ತಪ್ಪಿತಸ್ಥರ ವಿರುದ್ಧ ಸರ್ಕಾರ ಈತನಕ ಯಾವುದೇ ಕ್ರಮ ಜರುಗಿಸಿಲ್ಲ' ಎಂದು ಆರೋಪಿಸಿದರು.

'ರಾಜ್ಯದಲ್ಲಿ ಸದ್ಯ 70 ಸಾವಿರ ಸಕ್ರಿಯ ಪ್ರಕರಣಗಳಿವೆ. ಓಮಿಕ್ರಾನ್ ಎಂಬ ಹೊಸ ಕೊರೊನಾ ರೂಪಾಂತರಿ ತಳಿಯಿಂದ ರಾಜ್ಯವು ತತ್ತರಿಸುತ್ತಿದೆ. ಎಲ್ಲ ನಿಯಮಗಳನ್ನೂ ಉಲ್ಲಂಘಿಸಿ ನಡೆಸಲಾಗುತ್ತಿರುವ ಪಾದಯಾತ್ರೆಯನ್ನು ತಕ್ಷಣವೇ ನಿರ್ಬಂಧಿಸಬೇಕಿದೆ. ಇಲ್ಲವಾದಲ್ಲಿ ಸಾರ್ವಜನಿಕರು ದೊಡ್ಡ ಪ್ರಮಾಣದ ಸಂಕಷ್ಟಕ್ಕೆ ಸಿಲುಕಲಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದರು.

8ನೇ ಪುಟ ನೋಡಿ

ಕೋವಿಡ್: ಲಕ್ಷದತ್ತ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಬುಧವಾರ 21,390 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಲಕ್ಷದ ಗಡಿ (93,099) ಸಮೀಪಿಸಿದೆ.

ಏಳೂವರೆ ತಿಂಗಳ ಬಳಿಕ ಹೊಸ ಪ್ರಕರಣಗಳು 20 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿವೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗಿದೆ. ಒಂದು ದಿನದ ಅವಧಿಯಲ್ಲಿ 1.95 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 10.96 ರಷ್ಟು ವರದಿಯಾಗಿದೆ.

ಎಲ್ಲ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿದ್ದು, 19 ಜಿಲ್ಲೆಗಳಲ್ಲಿ ಈ ಸಂಖ್ಯೆ ಮೂರಂಕಿಗೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, 15,617 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ತುಮಕೂರಿನಲ್ಲಿ 594, ಮೈಸೂರಿನಲ್ಲಿ 524, ದಕ್ಷಿಣ ಕನ್ನಡದಲ್ಲಿ 519 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.



ಬೆಂಗಳೂರು: ಜ.31ರವರೆಗೆ 1– 9 ತರಗತಿ ಸ್ಥಗಿತ

ಬೆಂಗಳೂರು: 'ಕೊರೊನಾ ಸೋಂಕು ಪ್ರಕರಣಗಳು ಹೆಚ್ಚುತ್ತಿರುವುದರಿಂದ ಬಿಬಿಎಂಪಿ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾತ್ರ 1ರಿಂದ 9ರವರೆಗಿನ ತರಗತಿಗಳ ಭೌತಿಕ ತರಗತಿಗಳನ್ನು ಜ. 31ರವರೆಗೆ ಸ್ಥಗಿತಗೊಳಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ರಾಜ್ಯದ ಜಿಲ್ಲಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಬುಧವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಅವರು, ತಾಲ್ಲೂಕು, ಸ್ಥಳೀಯ ಮಟ್ಟದಲ್ಲಿ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸುವ ಕುರಿತು ಶಿಕ್ಷಣ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಜಿಲ್ಲಾಧಿಕಾರಿ, ತಹಶೀಲ್ದಾರ್‌ಗಳು ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಸೂಚಿಸಿದರು.

8ನೇ ಪುಟ ನೋಡಿ

ಹಣದುಬ್ಬರ ಹೆಚ್ಚಳ, ಕೈಗಾರಿಕಾ ಉತ್ಪಾದನೆ ಶೇ 1.4ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಡಿಸೆಂಬರ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ದರವು ಆರು ತಿಂಗಳ ಗರಿಷ್ಠ ಮಟ್ಟವಾದ ಶೇಕಡ 5.59ಕ್ಕೆ ತಲುಪಿದೆ. ಆಹಾರ ವಸ್ತುಗಳು, ಇಂಧನದ ಬೆಲೆ ಹೆಚ್ಚಳ ಆಗಿದ್ದು ಇದಕ್ಕೆ ಒಂದು ಕಾರಣ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ನವೆಂಬರ್‌ನಲ್ಲಿ ಶೇ 4.91ರಷ್ಟು ಇತ್ತು. 2020ರ ಡಿಸೆಂಬರ್‌ನಲ್ಲಿ ಇದು ಶೇ 4.59ರಷ್ಟು ಆಗಿತ್ತು. 2021ರ ಅಕ್ಟೋಬರ್ ನಂತರದಲ್ಲಿ ಚಿಲ್ಲರೆ ಹಣದುಬ್ಬರ ದರವು ಹೆಚ್ಚಳ ಆಗುತ್ತಿದೆ.

ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ಚಿಲ್ಲರೆ ಹಣದುಬ್ಬರ ದರವನ್ನು ಶೇಕಡ 4ಕ್ಕೆ ಮಿತಿಗೊಳಿಸಬೇಕು ಎಂಬ ಗುರಿ ನೀಡಿದೆ. ಆದರೆ, ಚಿಲ್ಲರೆ ಹಣದುಬ್ಬರ ದರವು ಶೇ 4 ಕ್ಕಿಂತ ಎರಡು ಅಂಶಗಳಷ್ಟು ಹೆಚ್ಚಾಗಲು (ಶೇ 6ಕ್ಕೆ ತಲುಪಲು) ಅಥವಾ ಕಡಿಮೆ ಆಗಲು (ಶೇ 2ಕ್ಕೆ ಇಳಿಯಲು) ಅವಕಾಶ ಇದೆ.

ಡಿಸೆಂಬರ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ದರವು ಗರಿಷ್ಠ ಮಟ್ಟಕ್ಕೆ (ಶೇ 6) ಸನಿಹದಲ್ಲಿದೆ. ಹೀಗಿದ್ದರೂ, ಓಮೈಕ್ರಾನ್ ಸೃಷ್ಟಿಸಿರುವ ಅಸ್ಥಿರ ವಾತಾವರಣದ ಕಾರಣದಿಂದಾಗಿ ಆರ್‌ಬಿಐ ಹಣದುಬ್ಬರ ನಿಯಂತ್ರಣಕ್ಕಿಂತಲೂ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡುವ, ಹಣಕಾಸಿನ ನೀತಿಯಲ್ಲಿ ಬದಲಾವಣೆ ಮಾಡದೆ ಇರುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಹಾರ ಮತ್ತು ಪಾನೀಯದ ಜೊತೆಗೆ ಬಟ್ಟೆ ಹಾಗೂ ಪಾದರಕ್ಷೆಗಳ ಬೆಲೆಯಲ್ಲಿ ಕೂಡ ಡಿಸೆಂಬರ್‌ನಲ್ಲಿ ಏರಿಕೆ ಆಗಿದೆ.

14ನೇ ಪುಟ ನೋಡಿ

ಹಣದುಬ್ಬರ ಕರ್ನಾಟಕದಲ್ಲಿ ಹೆಚ್ಚು

ಬೆಂಗಳೂರು: ಕೇಂದ್ರ ಸಾಂಖ್ಯಿಕ ಮತ್ತು ಯೋಜನೆ ಅನುಷ್ಠಾನ ಸಚಿವಾಲಯವು ಬುಧವಾರ ಬಿಡುಗಡೆ ಮಾಡಿರುವ ಚಿಲ್ಲರೆ ಹಣದುಬ್ಬರ ಕುರಿತ ಅಂಕಿ–ಅಂಶಗಳಲ್ಲಿ ರಾಜ್ಯವಾರು ವಿವರಗಳು ಕೂಡ ಇವೆ. ಈ ವಿವರಗಳ ಪ್ರಕಾರ, ಕರ್ನಾಟಕದಲ್ಲಿ ಡಿಸೆಂಬರ್‌ನಲ್ಲಿನ ಹಣದುಬ್ಬರ ಪ್ರಮಾಣವು ಶೇ 6.44 ಆಗಿದೆ. ಇದು ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಹಣದುಬ್ಬರ ದರವು ಶೇ 5.69ರಷ್ಟು ಆಗಿದೆ. ನಗರ ಪ್ರದೇಶಗಳಲ್ಲಿನ ಹಣದುಬ್ಬರ ದರವು ಶೇ 7.13ಕ್ಕೆ ತಲುಪಿದೆ.

ಮೈಲಾರಲಿಂಗೇಶ್ವರ ದೇವಸ್ಥಾನದ ವಿಶೇಷ

ಕೋಳಿ ಕೂಗದ, ಮಂಚ ಇಲ್ಲದ ಮೈಲಾಪುರ

• ಬಿ.ಜಿ. ಪ್ರವೀಣಕುಮಾರ

ಯಾದಗಿರಿ: ಇಲ್ಲಿ ಪ್ರತಿ ದಿನ ಬೆಳಿಗ್ಗೆ ಕೋಳಿ ಕೂಗುವ ಶಬ್ದ ಕೇಳಿಸುವುದಿಲ್ಲ. ಗ್ರಾಮದ ಯಾವುದೇ ಮನೆಯಲ್ಲಿ ಮಂಚವೂ ಇಲ್ಲ.

–ಇದು ಮೈಲಾರಲಿಂಗೇಶ್ವರ ದೇವಸ್ಥಾನ ಇರುವ ತಾಲ್ಲೂಕಿನ ಮೈಲಾಪುರದ ವಿಶೇಷತೆ. ಈ ಗ್ರಾಮದಲ್ಲಿ 350 ಕುಟುಂಬಗಳು ಇವೆ. 2 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ.

'ಮಲ್ಲಯ್ಯದೇವರಿಗೆ ಕೋಳಿ ಕೂಗುವ ಶಬ್ದ ಕೇಳಬಾರದು ಎನ್ನುವ ಕಾರಣಕ್ಕೆ ಶತಮಾನಗಳಿಂದ ಕೋಳಿ ಸಾಕುವುದಿಲ್ಲ. ದೇಗುಲದಲ್ಲಿ ಮಂಚ ಇರುವುದರಿಂದ ಗ್ರಾಮದಲ್ಲಿ ಯಾರೊಬ್ಬರೂ ಮಂಚ ಬಳಸುವುದಿಲ್ಲ. ಹಿಂದಿನಿಂದಲೂ ಈ ಪದ್ಧತಿಯನ್ನು ಶ್ರದ್ಧಾಭಕ್ತಿಯಿಂದ ಪಾಲಿಸಿಕೊಂಡು ಬಂದಿದ್ದೇವೆ' ಎನ್ನುತ್ತಾರೆ ಗ್ರಾಮಸ್ಥರು.

ಮದುವೆ ಮಾಡಿ ಮಗಳನ್ನು ಗಂಡನ ಮನೆಗೆ ಕಳಿಸುವಾಗ ತವರಿನವರು ಮಂಚ ಸೇರಿದಂತೆ ಅಗತ್ಯ ಮನೆಬಳಕೆ ವಸ್ತುಗಳನ್ನು ಉಡುಗೊರೆಯಾಗಿ ನೀಡುವುದು ಸಂಪ್ರದಾಯ. ಆದರೆ ಈ ಊರಿಗೆ ಮದುವೆಯಾಗಿ ಬರುವವರು, ಇಲ್ಲಿಂದ ಬೇರೆಡೆ ಹೋಗುವವರಿಗೆ ಮಂಚವನ್ನು ಉಡುಗೊರೆಯಾಗಿ ಕೊಡುವುದಿಲ್ಲ.

'ಬಾಣಂತಿ ಸೇರಿದಂತೆ ಯಾರೂ ಮಂಚದ ಮೇಲೆ ಮಲಗುವುದಿಲ್ಲ. ಮೈಲಾಪುರ ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಮಲ್ಲಯ್ಯ, ಮಲ್ಲಪ್ಪ ಎನ್ನುವ ಹೆಸರುಗಳು ಸಾಮಾನ್ಯವಾಗಿವೆ' ಎನ್ನುತ್ತಾರೆ ಮೈಲಾರಲಿಂಗೇಶ್ವರ ದೇವಸ್ಥಾನದ ಪೂಜಾರಿಗಳಾದ ಮಲ್ಲಣ್ಣ ಅಡಗಿಮನಿ, ಬಸವರಾಜ ಅಡಗಿಮನಿ.

'ಗ್ರಾಮದಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲೂ ಮಂಚ ಬಳಸುವುದಿಲ್ಲ. ಟೇಬಲ್ ವ್ಯವಸ್ಥೆ ಇದೆ' ಎನ್ನುತ್ತಾರೆ ಗ್ರಾಮಸ್ಥ ಬನ್ನಪ್ಪ ಎಂ. ಪೂಜಾರ.

ಜಾತ್ರೆ ರದ್ದು: ಸಂಕ್ರಾಂತಿ ಅಂಗವಾಗಿ ಪ್ರತಿ ವರ್ಷ ಮೈಲಾರಲಿಂಗೇಶ್ವರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಬಾರಿ ಇದೇ 13ರಿಂದ 18 ವರೆಗೆ ಉತ್ಸವ ನಡೆಯಬೇಕಾಗಿತ್ತು. ಕೋವಿಡ್ ಕಾರಣದಿಂದ ಜಾತ್ರೆ ರದ್ದುಪಡಿಸಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ವೈದ್ಯಕೀಯ ಆಮ್ಲಜನಕ ಸಂಗ್ರಹಕ್ಕೆ ಸೂಚನೆ 8
'ವಿಐಎಲ್ ಆಡಳಿತ ನಿರ್ವಹಣೆ: ಕೇಂದ್ರ ಸರ್ಕಾರಕ್ಕಿಲ್ಲ ಆಸಕ್ತಿ' 14
ಇನ್ಫೊಸಿಸ್ ನಿವ್ವಳ ಲಾಭ ಶೇ 11.8ರಷ್ಟು ಹೆಚ್ಚಳ 14

₹ 4 ಲಕ್ಷ ಸುಲಿಗೆ: ದೂರುದಾರನೇ ಆರೋಪಿ !

ಬೆಂಗಳೂರು: ತಾನು ಕೆಲಸ ಮಾಡುತ್ತಿದ್ದ ಕಂಪನಿಗೆ ಸೇರಿದ್ದ ₹ 4 ಲಕ್ಷ ದೋಚಲು 'ಸುಲಿಗೆ' ನಾಟಕವಾಡಿದ್ದ ಆರೋಪಿ ಅರುಣ್‌ಕುಮಾರ್ ಎಂಬಾತನನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೆ.ಪಿ.ನಗರ ನಿವಾಸಿ ಅರುಣ್ ಕುಮಾರ್, 'ಅಟ್ಟಿಕಾ ಗೋಲ್ಡ್' ಕಂಪನಿಯ ಶಿವಾಜಿನಗರದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ. ಕಂಪನಿಯ ಬೇರೆ ಬೇರೆ ಕಚೇರಿಗಳಿಗೆ ಅಗತ್ಯವಿರುವ ಹಣವನ್ನು ತಲುಪಿಸುವ ಜವಾಬ್ದಾರಿಯನ್ನು ಆತನಿಗೆ ವಹಿಸಲಾಗಿತ್ತು. ಸುಲಿಗೆ ಪ್ರಕರಣದಲ್ಲಿ ಆತನನ್ನು ಬಂಧಿಸಿ, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 8 ಲಕ್ಷದಲ್ಲಿ ₹ 4 ಲಕ್ಷ ಸುಲಿಗೆ ದೂರು: 'ಶಿವಾಜಿನಗರ ಕಚೇರಿಗೆ ಬುಧವಾರ ಬೆಳಿಗ್ಗೆ ಬಂದಿದ್ದ ಆರೋಪಿ, ₹ 8 ಲಕ್ಷ ಪಡೆದುಕೊಂಡಿದ್ದ. ಇತರೆಡೆ ಇರುವ ಕಚೇರಿಗಳಿಗೆ ಹಣ ತಲುಪಿಸುವುದಾಗಿ ಹೇಳಿ ಶಿವಾಜಿನಗರದಿಂದ ಹೊರಟಿದ್ದ' ಎಂದು ಮೂಲಗಳು ತಿಳಿಸಿವೆ.

'₹ 4 ಲಕ್ಷವನ್ನು ತನ್ನ ಮನೆಯಲ್ಲಿ ಮುಚ್ಚಿಟ್ಟಿದ್ದ ಆರೋಪಿ, ಉಳಿದ ₹ 4 ಲಕ್ಷವನ್ನು ಮಾತ್ರ ಗಾಂಧಿನಗರದಲ್ಲಿರುವ ಕಚೇರಿಗೆ ನೀಡಿದ್ದ. ಬಳಿಕ ನಾಯಂಡನಹಳ್ಳಿಗೆ ಬಂದಿದ್ದ. ಅಲ್ಲಿಂದಲೇ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಆತ, 'ನಾಯಂಡಹಳ್ಳಿ ಮೆಟ್ರೊ ನಿಲ್ದಾಣ ಬಳಿ ಅಪರಿಚಿತರಿಬ್ಬರು ಕಣ್ಣಿಗೆ ಖಾರದ ಪುಡಿ ಎರಚಿ ₹ 4 ಲಕ್ಷ ಸುಲಿಗೆ ಮಾಡಿಕೊಂಡು ಹೋಗಿದ್ದಾರೆ' ಎಂದು ಸುಳ್ಳು ದೂರು ನೀಡಿದ್ದ.'

'ಸ್ಥಳಕ್ಕೆ ಹೋಗಿದ್ದ ಬ್ಯಾಟರಾಯನಪುರ ಪೊಲೀಸರು, ಕೃತ್ಯದ ಬಗ್ಗೆ ಮಾಹಿತಿ ಕಲೆಹಾಕಿದ್ದರು. ಸ್ಥಳದಲ್ಲಿರುವ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದಾಗ, ದೂರುದಾರನ ಮೇಲೆಯೇ ಅನುಮಾನ ಬಂದಿತ್ತು.'ಅರುಣ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ
ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ: ಬೆಂ.ದ.ತಾ.ಪಂ/ಲೆ.ಶಾ/ವೈ.ಜ/02/2021–22 ದಿನಾಂಕ: 07–01–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿಯ 2020–21ನೇ ಸಾಲಿನ ಅನಿರ್ಬಂಧಿತ ಅನುದಾನದಡಿಯಲ್ಲಿ ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸಲು ಕೆ.ಟಿ.ಪಿ.ಪಿ. ನಿಯಮಾನುಸಾರ ಟೆಂಡರ್ ಮೂಲಕ ಖರೀದಿಗಾಗಿ ಟೆಂಡರ್ ಆಹ್ವಾನಿಸಿದೆ.

ಇ.ಎಂ.ಡಿ. ಮೊತ್ತ: ರೂ. 5,000/–

1) ಟೆಂಡರ್ ಅರ್ಜಿ ಮತ್ತು ದಸ್ತಾವೇಜುಗಳನ್ನು ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಿ ದಿನಾಂಕ: **10–01–2022 ರಿಂದ ಕಛೇರಿ ಸಮಯದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ** ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. 2) ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಮುಚ್ಚಿದ ಲಕೋಟೆಗಳೊಂದಿಗೆ ಕಛೇರಿಯಲ್ಲಿ ಸ್ವೀಕರಿಸುವ ದಿನಾಂಕ: **25–01–2022ರಂದು ಸಂಜೆ 5.00 ಗಂಟೆವರೆಗೆ.** 3) ಬಿಡ್ ತೆರೆಯುವ ದಿನಾಂಕ: **27–01–2022ರಂದು ಸಂಜೆ 5.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ

ವಾಸಾಸಂಇ/ಬೆಂ.ನ/ಅಡ್ವರ್ಟೋರ್/2815/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೇಳ ನಡೆಸಲು ಕೋವಿಡ್ ಅಡ್ಡಿ ● ಹಬ್ಬದ ಉತ್ಪನ್ನಗಳಿಗೆ ವಿಶೇಷ ದರ ನಿಗದಿ

ಹಾಪ್‌ಕಾಮ್ಸ್: 'ಸಂಕ್ರಾಂತಿ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಆವರಣದಲ್ಲಿ ಮಕರ ಸಂಕ್ರಾಂತಿ ಅಂಗವಾಗಿ ಹಾಪ್‌ಕಾಮ್ಸ್ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ನಡೆಯುತ್ತಿದ್ದ 'ಸಂಕ್ರಾಂತಿ ಮೇಳ'ವನ್ನು ಕೋವಿಡ್ ಕಾರಣದಿಂದ ಈ ಬಾರಿ ರದ್ದು ಮಾಡಲಾಗಿದೆ.

ಹಾಪ್‌ಕಾಮ್ಸ್‌ನ ಮಳಿಗೆಗಳಲ್ಲೇ ಸಂಕ್ರಾಂತಿ ವಿಶೇಷವಾಗಿ ಬಳಸುವ ಗೆಣಸು, ಅವರೆ, ಬಾಳೆ, ಬೆಲ್ಲ, ಕಬ್ಬು, ಕೊಬ್ಬರಿ, ಕಡಲೆಕಾಯಿ, ಎಲಚಿ ಹಣ್ಣು, ರಸಬಾಳೆ, ಪಚ್ಚಬಾಳೆ, ನೇಂದ್ರ ಬಾಳೆ ಸೇರಿದಂತೆ ಅಗತ್ಯ ಉತ್ಪನ್ನಗಳ ಖರೀದಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಹಬ್ಬಕ್ಕಾಗಿ ಆಯ್ದ ಉತ್ಪನ್ನಗಳನ್ನು ವಿಶೇಷ ದರದಲ್ಲಿ ಮಾರಾಟ ಮಾಡಲು ಹಾಪ್‌ಕಾಮ್ಸ್ ಮುಂದಾಗಿದೆ.

'ಸಂಕ್ರಾಂತಿ ವೇಳೆ ಬಳಕೆಯಾಗುವ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಸಂಕ್ರಾಂತಿ ಮೇಳ ಆಯೋಜಿಸುತ್ತಿದ್ದೆವು. ಈ ಬಾರಿಯೂ ಮೇಳ ಆಯೋಜಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ, ಕೋವಿಡ್ ತೀವ್ರಗೊಂಡಿರುವ ಕಾರಣಕ್ಕೆ ಕೊನೆಯ ಹಂತದಲ್ಲಿ ಮೇಳ ರದ್ದು ಮಾಡಲಾಗಿದೆ' ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ 'ಪ್ರಜಾವಾಣಿ'ಗೆ ತಿಳಿಸಿದರು.

ಉಮೇಶ್ ಎಸ್. ಮಿರ್ಜಿ

'ಗ್ರಾಹಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಸಂಕ್ರಾಂತಿ ಮೇಳ ಆಯೋಜಿಸಲಾಗಿದೆ. ಹಬ್ಬಕ್ಕೆ ಬೇಕಾದ ಉತ್ಪನ್ನಗಳನ್ನು ತಮ್ಮ ಸಮೀಪದ ಮಳಿಗೆಗಳಲ್ಲೇ ಖರೀದಿಸುವ ವ್ಯವಸ್ಥೆ ಕಲ್ಪಿಸಿದ್ದೇವೆ. ಆಯ್ದ ಉತ್ಪನ್ನಗಳನ್ನು ಹೊರತುಪಡಿಸಿ ಉಳಿದೆಲ್ಲ ಉತ್ಪನ್ನಗಳ ದರ ಯಥಾಸ್ಥಿತಿಯಲ್ಲಿ ಇರಲಿದೆ' ಎಂದರು.

ಸಂಕ್ರಾಂತಿ ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಅವರೆಬೇಳೆ (ಬಿಡಿಸಿದ್ದು)	270
ಒಣಕೊಬ್ಬರಿ	250
ಎಳ್ಳು, ಬೆಲ್ಲ, ಕುಸುರಿ ಕಾಳು ಮಿಶ್ರಣ	190
ಕಡಲೆಕಾಯಿ	99
ಅವರೆಕಾಯಿ	70
ಗೆಣಸು	40
ಕಬ್ಬು	40 (ಒಂದಕ್ಕೆ)
ಏಲಕ್ಕಿ ಬಾಳೆ	44
ಪಚ್ಚಬಾಳೆ	22

ಸಂಕ್ರಾಂತಿ ಅಂಗವಾಗಿ ಲಾಲ್‌ಬಾಗ್ ಉದ್ಯಾನದಲ್ಲಿ ಹಾಪ್‌ಕಾಮ್ಸ್ ವತಿಯಿಂದ ಆಯೋಜಿಸಲಾಗಿರುವ ಸಂಕ್ರಾಂತಿ ಮೇಳಕ್ಕೆ ಸೋಮವಾರ ಚಾಲನೆ ನೀಡಲಾಯಿತು. ಪ್ರಜಾವಾಣಿ ಚಿತ್ರ.

ಸಂಕ್ರಾಂತಿವರೆಗೆ ಒಂದೇ ಬೆಲೆಯಲ್ಲಿ ಮಾರಾಟ

'ಕಳೆದ ವರ್ಷ ಸಂಕ್ರಾಂತಿ ಮೇಳದಲ್ಲಿ ಆಯ್ದ ಉತ್ಪನ್ನಗಳಿಗೆ ರಿಯಾಯಿತಿ ನೀಡಲಾಗಿತ್ತು, ರೈತರು ಬಂದು ವ್ಯಾಪಾರದಲ್ಲಿ ತೊಡಗಿ, ಲಾಭ ಪಡೆಯುತ್ತಿದ್ದರು. ಕೋವಿಡ್‌ನಿಂದ ಮೇಳ ನಡೆಯುತ್ತಿಲ್ಲ. ಭಾರಿ ಮಳೆಯಿಂದ ಈ ಸಲ ಅವರೆಕಾಯಿ, ಕಡಲೆಕಾಯಿ ಫಸಲು ಕಡಿಮೆಯಾಗಿದೆ. ಇದರಿಂದ ದರಗಳೂ ಏರಿವೆ. ಈ ಪರಿಸ್ಥಿತಿಯಲ್ಲಿ ರಿಯಾಯಿತಿ ನೀಡಲು ಸಂಸ್ಥೆಗೂ ಹೊರೆ. ಆದರೆ, ಸಂಕ್ರಾಂತಿ ಮುಗಿಯುವವರೆಗೆ ಆಯ್ದ ಉತ್ಪನ್ನಗಳಿಗೆ ಒಂದೇ ದರ ನಿಗದಿ ಮಾಡಲಾಗಿದೆ' ಎಂದು ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜ್ ಮಾಹಿತಿ ನೀಡಿದರು.

'ಹಬ್ಬದ ವೇಳೆಗೆ ದರ ಏರಿದರೂ ಹಾಪ್‌ಕಾಮ್ಸ್‌ನಲ್ಲಿ ಇದೇ ಬೆಲೆಯಲ್ಲಿ ಮಾರಾಟ ಇರಲಿದೆ. ಸಂಸ್ಥೆಯ ಆನ್‌ಲೈನ್ ಸೇವೆಯ ಮೂಲಕವೂ ಹಬ್ಬಕ್ಕೆ ಉತ್ಪನ್ನಗಳನ್ನು ಮನೆಗೆ ತರಿಸಿಕೊಳ್ಳಬಹುದು' ಎಂದರು.

ಜ.17ಕ್ಕೆ ಕಾರ್ಮಿಕರ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಗೋದಾಮುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಗುರುತಿನ ಚೀಟಿ, ರಜೆ ಸೇರಿದಂತೆ ವಿವಿಧ ಸವಲತ್ತುಗಳಿಗೆ ಆಗ್ರಹಿಸಿ ಕೆಎಫ್‌ಸಿಎಸ್‌ಸಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರ ಒಕ್ಕೂಟವು ಇದೇ 17ರಂದು ರಾಜ್ಯದ ಎಲ್ಲ ಗೋದಾಮುಗಳ ಎದುರು ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಒಕ್ಕೂಟದ ಅಧ್ಯಕ್ಷ ಜಿ.ಆರ್.ಶಿವಶಂಕರ್ ಅವರು ಹೇಳಿದರು.

ಅತಿಥಿ ಉಪನ್ಯಾಸಕರಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಎಂಎಸ್ಸಿ ಸೂಕ್ಷ್ಮ ಜೀವವಿಜ್ಞಾನ (ಮೈಕ್ರೊಬಯಾಲಜಿ) ವಿಭಾಗದ 'ಆಹಾರ ತಂತ್ರಜ್ಞಾನ' ವಿಷಯದಲ್ಲಿ ಬೋಧನೆ ಮಾಡಲು ಅರೆಕಾಲಿಕ ಅಥವಾ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಿಎಚ್.ಡಿ ಹಾಗೂ ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಶೇ 50ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಪೂರೈಸಿರಬೇಕು. ಎನ್‌ಇಟಿ ಅಥವಾ ಎಸ್‌ಎಲ್‌ಇಟಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಆದ್ಯತೆ ನೀಡಲಾಗುವುದು. ಆಸಕ್ತರು ಸ್ವವಿವರಗಳನ್ನು ಜ.20ರೊಳಗೆ ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಮುಖ್ಯಸ್ಥರು, ಮೈಕ್ರೊಬಯಾಲಜಿ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ.

ಸುದ್ದಿ 2 ನಿಮಿಷ

ಬಿಬಿಎಂಪಿ: ಮತದಾರರ ಅಂತಿಮ ಪಟ್ಟಿ ಪ್ರಕಟ ಇಂದು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಮತದಾರರ ಅಂತಿಮ ಪಟ್ಟಿಯನ್ನು (2022ರ ಜ.1ಕ್ಕೆ ಅನ್ವಯವಾಗುವಂತೆ) ಸಿದ್ಧಪಡಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿನ ಮತದಾರರ ನೋಂದಣಾಧಿಕಾರಿ ಕಚೇರಿಗಳಲ್ಲಿ, ಮತದಾರರ ಸಹಾಯಕ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಮತ್ತು ವಾರ್ಡ್ ಕಚೇರಿಗಳಲ್ಲಿ ಮತದಾರರ ಅಂತಿಮ ಪಟ್ಟಿಯನ್ನು ಇದೇ 13ರಂದು ಪ್ರಕಟಿಸಲಾಗುತ್ತಿದೆ.

ರಾಜ್ಯದ ಮುಖ್ಯ ಚುನಾವಣಾಧಿಕಾರಿ ಕಚೇರಿಯ ವೆಬ್‌ಸೈಟ್‌ನಲ್ಲಿ (www.ceokarnataka.kar.nic.in) ಹಾಗೂ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (www.bbmp.gov.in) ಮತದಾರರ ಅಂತಿಮ ಪಟ್ಟಿಯನ್ನು ನೋಡಬಹುದು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 94,92,564 ಮತದಾರರಿದ್ದಾರೆ. ಅವರಲ್ಲಿ 49,34,810 ಮಂದಿ ಪುರುಷರು, 45,56,097 ಮಂದಿ ಮಹಿಳೆಯರು, 1,657 ಮಂದಿ ತೃತೀಯ ಲಿಂಗಿಗಳು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

'ಶಿಕ್ಷಣ ವ್ಯವಸ್ಥೆಗೆ ಡಿಜಿಟಲೀಕರಣ ಸ್ಪರ್ಶ'

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಆಶಯಗಳಿಗೆ ತಕ್ಕಂತೆ ರಾಜ್ಯದಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

'ಸಮರ್ಥ ಭಾರತ' ಸಂಘಟನೆ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯ ಬುಧವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 159ನೇ ಜಯಂತಿ ಮತ್ತು ರಾಷ್ಟ್ರೀಯ ಯುವ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈಗಾಗಲೇ ಉನ್ನತ ಶಿಕ್ಷಣದಲ್ಲಿ ಈ ಕಾರ್ಯ ಪೂರ್ಣಗೊಂಡಿದೆ. ಇನ್ನು ಒಂದು ವರ್ಷದಲ್ಲಿ ಶೇ100ರಷ್ಟು ಡಿಜಿಟಲೀಕರಣ ಆಗಲಿದೆ' ಎಂದು ತಿಳಿಸಿದರು.

'ಎನ್‌ಇಪಿ ಮೂಲಕ ಯುವಜನರಿಗೆ ಅಗತ್ಯ ಕೌಶಲಗಳನ್ನು ಕಲಿಸುವ ನಿಟ್ಟಿನಲ್ಲಿ ಸರ್ಕಾರಿ ಐಟಿಐಗಳ ಸಮಗ್ರ ಸುಧಾರಣೆ ಕೈಗೊಳ್ಳಲಾಗುತ್ತಿದೆ. ಜತೆಗೆ, ಪದವಿ ಶಿಕ್ಷಣದಲ್ಲಿ ಗುಣಮಟ್ಟದ ಬೋಧನೆ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಉದ್ಯಮರಂಗದ ಸಹಭಾಗಿತ್ವ ಮುಂತಾದ ಉಪಕ್ರಮಗಳನ್ನು ಜಾರಿಗೊಳಿಸಲಾಗಿದೆ' ಎಂದು ಸಚಿವರು ನುಡಿದರು.

ಬೀಗ ಹಾಕಿರುತ್ತಿದ್ದ ಮನೆ ಗುರುತಿಸಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಜುನಾಥ್ ಹಾಗೂ ಹೇಮಂತ್ ಬಂಧಿತರು. ಅವರಿಂದ ₹ 9 ಲಕ್ಷ ಮೌಲ್ಯದ ಚಿನ್ನಾಭರಣ, 6 ದ್ವಿಚಕ್ರ ವಾಹನ, ಕಾರು ಹಾಗೂ ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ಅಂಥ ಮನೆಗಳಿಗೆ ರಾತ್ರಿ ನುಗ್ಗಿ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು.'

'ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ಮನೆಯಲ್ಲಿ 2021ರ ಅಕ್ಟೋಬರ್ 10ರಂದು ಕಳ್ಳತನವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಾಗಲೇ ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದೂ ತಿಳಿಸಿದರು.

'ಕೆಲವೆಡೆ ದ್ವಿಚಕ್ರ ವಾಹನಗಳನ್ನೂ ಆರೋಪಿಗಳು ಕದ್ದಿರುವುದು ಗೊತ್ತಾಗಿದೆ. ಅಪರಾಧ ಕೃತ್ಯಗಳಿಂದ ಸಂಪಾದಿಸಿದ್ದ ಹಣದಲ್ಲಿ ಆರೋಪಿಗಳು ಕಾರು ಖರೀದಿಸಿದ್ದರು' ಎಂದೂ ಪೊಲೀಸರು ಮಾಹಿತಿ ನೀಡಿದರು.

ಸರ್ವೊ: ಬಿಎಸ್–6ಗೆ ಸೂಕ್ತವಾದ ಆಯಿಲ್ ಬಿಡುಗಡೆ

ಬೆಂಗಳೂರು: ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಎಂಜಿನ್ ಆಯಿಲ್ ಬ್ರ್ಯಾಂಡ್ ಆಗಿರುವ ಸರ್ವೊ, ಮಾರುಕಟ್ಟೆಗೆ ಬಿಡುಗಡೆ ಆಗಿ 50 ವರ್ಷಗಳು ಸಂದಿವೆ. ಬಿಎಸ್–6 ಎಂಜಿನ್‌ಗೆ ಸೂಕ್ತವಾಗುವ ಸರ್ವೊ ಫ್ಯೂಚುರಾ ನೆಕ್ಸ್ಟ್‌ಅನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗಿದೆ.

ಹೊಸ ಎಂಜಿನ್ ಆಯಿಲ್, ಇಂಧನ ಬಳಕೆಯಲ್ಲಿ ಇನ್ನಷ್ಟು ದಕ್ಷತೆಯನ್ನು ತರುತ್ತದೆ, ಹೊಸ ತಲೆಮಾರಿನ ಕಾರುಗಳಿಗಾಗಿ ಇದನ್ನು ಸಿದ್ಧಪಡಿಸಲಾಗಿದೆ ಎಂದು ಇಂಡಿಯನ್ ಆಯಿಲ್ ಕಂಪನಿಯ ಪ್ರಕಟಣೆ ಹೇಳಿದೆ. ಸರ್ವೊ ಎಂಜಿನ್ ಆಯಿಲ್‌ಅನ್ನು 1972ರಲ್ಲಿ ಮೊದಲು ಬಿಡುಗಡೆ ಮಾಡಲಾಯಿತು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ ಮತ್ತು ನೆಲದ ಅಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಜ.13ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಅದ್ದಿಗಾನಹಳ್ಳಿ, ಮಾರಸಂದ್ರ, ನೆಲಕುಂಟೆ, ರಾಜನಕುಂಟೆ, ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ಶಾನುಭೋಗನಹಳ್ಳಿ, ಹೆಗ್ಗನಹಳ್ಳಿ, ಲಕ್ಷ್ಮಣ್‌ನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಸುಂಕದಕಟ್ಟೆ, ರಾಜೀವ ಗಾಂಧಿ ನಗರ, ಭೈರವೇಶ್ವರ ನಗರ, ಹನುಮಂತರಾಯನಪಾಳ್ಯ, ಅನ್ನಪೂರ್ಣೇಶ್ವರಿ ನಗರ, ಪಾಪರೆಡ್ಡಿಪಾಳ್ಯ, ಬಿನ್ನಿ ಬಡಾವಣೆ, ಕಾಮಾಕ್ಷಿಪಾಳ್ಯ, ಬಿಎಚ್‌ಇಎಲ್ ಸುತ್ತಮುತ್ತ ಪ್ರದೇಶಗಳು.

ದಿ ಮಲ್ಲೇಶ್ವರಂ ಕೋ–ಆಪರೇಟೀವ್ ಬ್ಯಾಂಕ್ ಲಿಮಿಟೆಡ್.,
ಪ್ರಧಾನ ಕಛೇರಿ : # 102, 7 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003, ದೂರವಾಣಿ – 080–23342713 / 23342323, ಇ–ಮೇಲ್: mcb_mall@yahoo.com, ವೆಬ್‌ಸೈಟ್: www.mcbl.in

ಇ-ಹರಾಜು ನೋಟೀಸು

ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರ (ರು) / ಅಡಮಾನುದಾರರು ಮತ್ತು ಜಾಮೀನುದಾರರಿಗೆ ಅಧಿಕೃತ ಅಧಿಕಾರಿಯು ಈ ಮೂಲಕ ಸಾಮಾನ್ಯವಾಗಿ ನೀಡುವ ಸೂಚನೆ : **ದಿ ಮಲ್ಲೇಶ್ವರಂ ಕೋ–ಆಪರೇಟೀವ್ ಬ್ಯಾಂಕ್ ಲಿಮಿಟೆಡ್., ಮಲ್ಲೇಶ್ವರಂ ಶಾಖೆ,** ಇಲ್ಲಿ ಅಡಮಾನ ಮಾಡಿರುವ ಮತ್ತು ಸರ್ಫೇಸಿ ಕಾಯಿದೆ 2002ರ ಅಡಿಯಲ್ಲಿ ವಶಕ್ಕೆ ತೆಗೆದುಕೊಂಡಿರುವ ಈ ಕೆಳಗೆ ತಿಳಿಸಿದ ಆಸ್ತಿಗಳನ್ನು ಇ–ಗುತ್ತಿಗೆ ಮತ್ತು ಹರಾಜ ಮೂಲಕ **ದಿನಾಂಕ : 17/02/2022** ರಂದು **"ಎಲ್ಲಿ ಹೇಗಿದೆಯೋ ಹಾಗೆ ಮತ್ತು ಎಲ್ಲಿ ಏನಿದೆಯೋ ಹಾಗೆ"** ಆಧಾರದ ಮೇಲೆ ಬ್ಯಾಂಕಿಗೆ ಬರಬೇಕಾದ ಬಾಕಿಯನ್ನು ವಸೂಲಿ ಮಾಡಲು ಮಾರಾಟ ಮಾಡಲಾಗುವುದು. ಈ ಸೂಚನೆಯು ಸಾಲಗಾರರಿಗೆ / ಜಾಮೀನುದಾರರಿಗೆ / ಅಡಮಾನದಾರರಿಗೆ ಕೆಳಗೆ ಸೂಚಿಸಿರುವ ಈ ಹರಾಜಿಗೆ ಇರುವ ಖಾತೆಗಳಲ್ಲಿನ ಬಾಕಿಯನ್ನು ಪೂರ್ತಿಯಾಗಿ ಇ –ಹರಾಜು ಮಾರಾಟದ ದಿನಾಂಕದ ಒಳಗೆ ಪಾವತಿಸದಿದ್ದರೆ, ಬ್ಯಾಂಕ್ ಕೆಳಕಂಡ ಸ್ವತ್ತುಗಳನ್ನು ಮಾರಾಟ ಮಾಡುತ್ತದೆ.

ಸಾಲಗಾರರ / ಜಾಮೀನುದಾರರ / ಹೆಸರು ಮತ್ತು ವಿಳಾಸ :

1. **ಶ್ರೀ ಉಮಾ ಮಹೇಶ್ ಎಂ ಎಸ್** ಬಿನ್ ಶಿವಶಂಕರಪ್ಪ ಎಂ ನಂ.1986, 8ನೇ ಮುಖ್ಯ ರಸ್ತೆ, ರಾಜಾಜಿನಗರ, 2ನೇ ಹಂತ, ಅಂಭಾಭವಾನಿ ದೇವಸ್ಥಾನದ ಸ್ಟ್ರೀಟ್, ಬೆಂಗಳೂರು–560010.	2. **ಶ್ರೀಮತಿ. ರಂಜಿತಾ ವೈ ಎಂ** ಕೋಂ. ಉಮಾ ಮಹೇಶ್ ಎಂ ಎಸ್, ನಂ.1986, 8ನೇ ಮುಖ್ಯ ರಸ್ತೆ, ರಾಜಾಜಿನಗರ, 2ನೇ ಹಂತ, ಅಂಭಾಭವಾನಿ ದೇವಸ್ಥಾನದ ಸ್ಟ್ರೀಟ್, ಬೆಂಗಳೂರು–560010.

ಸಾಲದ ಸಂಖ್ಯೆ 08001/349, ಗೆ ದಿನಾಂಕ : 10/01/2022 ರಂತೆ ಬಾಕಿ ಬರಬೇಕಾದ ಬಾಕಿ ಮೊತ್ತ
ರೂ. 1,45,43,850/– (ರೂಪಾಯಿ ಒಂದು ಕೋಟಿ ನಲವತ್ತೈದು ಲಕ್ಷದ ನಲವತ್ತಮೂರು ಸಾವಿರದ ಎಂಟುನೂರ ಐವತ್ತು ಮಾತ್ರ) ವಸೂಲು ಮಾಡಲು ಈ ಕೆಳಕಂಡ ಸ್ಥಿರಾಸ್ತಿಯನ್ನು **ವೆಬ್‌ಸೈಟ್ https://www.bankeauctionwizard.com** ಮೂಲಕ ದಿನಾಂಕ : 17/02/2022 ರಂದು ಇ–ಹರಾಜು ಮಾಡಲಾಗುವುದು.

ಆಸ್ತಿಯ ವಿವರಗಳು : ವಾಸಯೋಗ್ಯ ಸ್ಥಿರಾಸ್ತಿ ಹೊಂದಿರುವ ಮುನಿಸಿಪಲ್ ಹೊಸ ಸಂ.2/1, (ಹಳೆಯ ಸಂ.11/82), ಪಿಐಡಿ ಸಂಖ್ಯೆ.2–100–2/1, 5 ನೇ ಕ್ರಾಸ್, ಎಸ್‌ಬಿಎಂ ಕಾಲೋನಿ, ಬೃಂದಾವನ ನಗರ, ಬೆಂಗಳೂರು ಈ ಹಿಂದಿನ ಖಾನೇಶುಮಾರಿ ನಂ.11, ಸರ್ವೆ ನಂ.82 ರಲ್ಲಿ ರೂಪುಗೊಂಡಿದೆ, ಮತ್ತಿಕೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಅದಕ್ಕೆ ಪೂರಕತೆ ಎಲ್ಲವೂ ಒಳಗೊಂಡಿದೆ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ, ಉತ್ತರದಿಂದ ದಕ್ಷಿಣಕ್ಕೆ 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ನಿವೇಶನದಲ್ಲಿ ನಿರ್ಮಿಸಲಾಗಿದೆ ಇದರ ಚಕ್ಕುಬಂದಿ: ಪೂರ್ವಕ್ಕೆ: ಗುರುಮೂರ್ತಪ್ಪನವರ ಆಸ್ತಿ, ಪಶ್ಚಿಮಕ್ಕೆ: 25 ಅಡಿ ರಸ್ತೆ, ಉತ್ತರಕ್ಕೆ: ಹಳೇ ಕಾರ್ಪೊರೇಶನ್ ನಂ.10, ಪ್ರಸ್ತುತವಾಗಿ ಕಾಮತ್‌ರವರ ಆಸ್ತಿ, ದಕ್ಷಿಣಕ್ಕೆ: ಹಳೆ ಕಾರ್ಪೊರೇಶನ್ ನಂ.12, ಪ್ರಸ್ತುತವಾಗಿ ವೆಂಕಟನಾರಸ್ವಾಮಿರವರ ಆಸ್ತಿ

ಮೀಸಲು ಬೆಲೆ	ರೂ.1,56,25,000/–(ರೂಪಾಯಿ ಒಂದು ಕೋಟಿ ಐವತ್ತಾರು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ)
ಅರ್ನೆಸ್ಟ್ ಮನಿ ಠೇವಣಿ	ರೂ.15,62,500/–(ರೂಪಾಯಿ ಹದಿನೈದು ಲಕ್ಷ ಅರವತ್ತೆರಡು ಸಾವಿರದ ಐದು ನೂರು ಮಾತ್ರ)
ಬಿಡ್ ಹೆಚ್ಚಳ ಮೊತ್ತ	ರೂ.25,000/– ಅಥವಾ ಗುಣಾಂಕಗಳಲ್ಲಿ
ಇಎಂಡಿ ಮತ್ತು ಕೆವೈಸಿ ದಾಖಲೆಗಳೊಂದಿಗೆ ಟೆಂಡರ್ ಪ್ರತಿ ಸಲ್ಲಿಸಲು ಕೊನೆಯ ದಿನಾಂಕ	16/02/2022 ರಂದು ಸಂಜೆ 6.00 ಗಂಟೆಯೊಳಗೆ
ಆನ್‌ಲೈನ್ ಸೇವೆ ತೆರೆದುಕೊಳ್ಳುವ ದಿನಾಂಕ ಮತ್ತು ಸಮಯ	ಇ–ಹರಾಜು ಪೋರ್ಟಲ್: www.bankeauctionwizard.com ದಿನಾಂಕ 17/02/2022 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ ಆಟೋ ಅನಿಯಮಿತದೊಂದಿಗೆ ತಲಾ 5 ನಿಮಿಷಗಳ ಸಮಯ ವಿಸ್ತರಣೆ
ಇ–ಹರಾಜಿನ ಸೇವೆ ಒದಗಿಸುವವರ ವಿವರಗಳು ಮತ್ತು ವೆಬ್ ಸೈಟ್	ಮೆ॥ ಆಂಟಾರೆಸ್ ಸಿಸ್ಟಮ್ಸ್ ಲಿಮಿಟೆಡ್ ವಿಳಾಸ: #24, ಸುಧಾ ಕಾಂಪ್ಲೆಕ್ಸ್, 3ನೇ ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು–560079. ಸಂಪರ್ಕಿಸಬೇಕಾದ ವ್ಯಕ್ತಿ: ಮನೋಹರ್ ಎಸ್ ಸಹಾಯವಾಣಿ ಸಂಖ್ಯೆ: 9686196755/56 ಲ್ಯಾಂಡ್ ಲೈನ್: 080–40482100 ಇ–ಮೇಲ್ ಐಡಿ: manohar.s@antaressystems.com

ಸಾಲಗಾರರಿಗೆ / ಅಡಮಾನುದಾರರಿಗೆ / ಜಾಮೀನುದಾರರಿಗೆ ನಿಯಮ 8 (6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಈ ಪ್ರಕಟಣೆಯ ಮೂಲಕ 30 ದಿನಗಳ ನೋಟೀಸು

ಹರಾಜು ಮಾರಾಟದ ಷರುತ್ತುಗಳು :

1. ಹರಾಜು/ಕೂಗುವ ಪ್ರಕ್ರಿಯೆಯನ್ನು ಕೇವಲ **"ಆನಲೈನ್ ಎಲೆಕ್ಟ್ರಾನಿಕ್ ಮಾದರಿ"** ಯಲ್ಲಿಯೇ ಈ ಮುಂದೆ ನೀಡಲಾದ ಸೇವೆ ನೀಡುವ ವೈಬ್‌ಸೈಟ್ **https://www.bankeauctionwizard.com** ಸಲ್ಲಿಸಬೇಕು. **ಮೆ. ಅಂತ್ರಾಸ್ ಸಿಸ್ಟಮ್ಸ್ ಲಿಮಿಟೆಡ್** ಇವರು ಸೇವೆ ನೀಡುವವರಾಗಿದ್ದು, ಈ ಹರಾಜು ಮಾಡಲು ನಿಮಗೆ ವೇದಿಕೆಯನ್ನು ಒದಗಿಸಿಕೊಡುವರು.
2. ಇ–ಹರಾಜಿನಲ್ಲಿ ಭಾಗವಹಿಸುವವರು ಇಂಟರ್ನೆಟ್ ಸೌಲಭ್ಯವನ್ನು ಹೊಂದಿರಬೇಕು ಹಾಗೂ ತಮ್ಮ ಸ್ಥಳದಿಂದಲೇ ಹರಾಜಿನಲ್ಲಿ ಭಾಗವಹಿಸಬಹುದು. ಹರಾಜಿನಲ್ಲಿ ಭಾಗವಹಿಸುವ ಮೊದಲು ಅವರು ತಮ್ಮನ್ನು ತಾವು ಹರಾಜು ಕೂಗುವವರೆಂದು ಖಚಿತಪಡಿಸಿಕೊಳ್ಳಬೇಕು. ಬ್ಯಾಂಕ್/ಸರ್ವೀಸ್ ನೀಡುವವರು ಯಾವುದೇ ಇಂಟರ್‌ನೆಟ್ ಸಂಪರ್ಕಕ್ಕೆ ನೆಟ್‌ವರ್ಕ್ ಸಮಸ್ಯೆಗಳಿಗೆ, ಸಿಸ್ಟಮ್ ಕ್ರಾಶ್ ಆಗುವುದಕ್ಕೆ ಹಾಗೂ ವಿದ್ಯುತ್ ವ್ಯತ್ಯಾಸಗಳು ಮುಂತಾದವುಗಳಿಗೆ ಜವಾಬ್ದಾರರಲ್ಲ. ಅನುತ್ತೀರ್ಣಗೊಂಡ ಬಿಡ್ಡುದಾರರ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
3. ವಿವರಗಳಿಗಾಗಿ, ಸಹಾಯಕ್ಕಾಗಿ, ವಿಧಾನಗಳಿಗೆ ಮತ್ತು ಈ ಹರಾಜಿನಲ್ಲಿ ಪಾಲುಗೊಳ್ಳಲು ತರಬೇತಿ ಪಡೆದುಕೊಳ್ಳಲು ಸವಾಲು ಕೂಗುವವರು ಇವರನನ್ನು ಸಂಪರ್ಕಿಸಬಹುದು. **ಮೆ/ಅಂತ್ರಾಸ್ ಸಿಸ್ಟಮ್ಸ್ ಲಿಮಿಟೆಡ್, 24, ಒಂದನೇ ಮಹಡಿ, ಸುಧಾ ಕಾಂಪ್ಲೆಕ್ಸ್, 3ನೇ ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು–560079, ಫೋನ್: 080–40482100. ಶ್ರೀ ಮನೋಹರ್ ಎಸ್. 9686196755, 9686196756, ಇ–ಮೇಲ್: id.manohar.s@antaressytems.com.**
4. ಇ–ಹರಾಜಿನ ಮಾರಾಟದಲ್ಲಿ ಭಾಗವಹಿಸಬೇಕೆಂದುಕೊಳ್ಳುವ ಸವಾಲುದಾರರು ತಮ್ಮ ವಿವರಗಳನ್ನು ಸೇವೆ ನೀಡುವವರಾದ **ಮೆ. ಅಂತ್ರಾಸ್ ಸಿಸ್ಟಮ್ಸ್ ಲಿಮಿಟೆಡ್.,** ಬಳಿ ನೊಂದಾಯಿಸಿಕೊಳ್ಳಬೇಕು. ಮುಂಚಿತವಾಗಿಯೇ ನೊಂದಣಿ ಮಾಡಿಕೊಂಡು ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬೇಕು. ಪಡೆದುಕೊಂಡ ಮೇಲೆ ಪಾಸ್‌ವರ್ಡ್ ಅನ್ನು ಮಾತ್ರವೇ ಬದಲಾಯಿಸಬಹುದಾಗಿದೆ. ಸವಾಲುದಾರರು ತಮ್ಮ ಡಿಜಿಟಲ್ ಸಹಿಯನ್ನು ಹೊಂದಿದ ಪ್ರಮಾಣಪತ್ರವನ್ನು ಈ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಮುಂಚೆ ತಮ್ಮ ಸ್ವಂತ ವೆಚ್ಚದಲ್ಲಿ ಪಡೆದುಕೊಂಡಿರಬೇಕು. ಬಿಡ್‌ದಾರರು ಗುರುತಿನ ಪುರಾವೆಗಾಗಿ ಪ್ಯಾನ್ ಕಾರ್ಡ್‌ನ ಪ್ರತಿಯನ್ನು ಲಗತ್ತಿಸಬೇಕು ಮತ್ತು ಆಧಾರ್, ಪಾಸ್‌ಪೋರ್ಟ್, ಚುನಾವಣಾ ಐ.ಡಿ., ಡ್ರೈವಿಂಗ್ ಲೈಸೆನ್ಸ್ ಇತ್ಯಾದಿಗಳಂತಹ ನಿವಾಸದ ಪುರಾವೆಯನ್ನು ಲಗತ್ತಿಸಬೇಕು.
5. ಆಸ್ತಿಯನ್ನು ಮೀಸಲು ಬೆಲೆಗಳಿಗಿಂತ ಕಡಿಮೆ ಬೆಲೆಗೆ **"ಮಾರಾಟ ಮಾಡುವುದಿಲ್ಲ"**.
6. ಈ ಆಸ್ತಿಗಳನ್ನು **"ಎಲ್ಲಿದೆಯೋ ಹೇಗಿದೆಯೋ ಹಾಗೆ ಇರುವ ಸ್ಥಿತಿಯಲ್ಲಿಯೇ"** ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಪ್ರಕಾರ ಮಾರಾಟ ಮಾಡಲಾಗುವುದು.
7. ಯಶಸ್ವಿ ಬಿಡ್ಡುದಾರರು ಮಾರಾಟದ ದಿನದಂದೇ 25% ಬಿಡ್ ಮೊತ್ತವನ್ನು (ಇಎಮ್‌ಡಿ ಸೇರಿದಂತೆ) ಠೇವಣಿ ಮಾಡಬೇಕು, ಮತ್ತು ಮಾರಾಟದ ದಿನಾಂಕದಿಂದ 15 ದಿನಗಳಲ್ಲಿ ಉಳಿದ 75% ಬಿಡ್ ಮೊತ್ತವನ್ನು ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಫಂಡ್ಸ್ ಟ್ರಾನ್ಸ್‌ಫರ್ ಮಾಡುವ ಮೂಲಕ **ಅಕೌಂಟ್ ನಂ. 001490030000009. ದಿ ಮಲ್ಲೇಶ್ವರಂ ಕೋ–ಆಪರೇಟೀವ್ ಬ್ಯಾಂಕ್ ಲಿಮಿಟೆಡ್., ಮಲ್ಲೇಶ್ವರಂ ಶಾಖೆ, ಬೆಂಗಳೂರು** ಈ ಖಾತೆಗೆ ಹಣವನ್ನು ತುಂಬಬೇಕು. ಈ ಖಾತೆಯ **ಐಎಫ್‌ಎಸ್‌ಸಿ ಕೋಡ್ "HDFC0CMCOBL** ಅಥವಾ ಡಿಮಾಂಡ್ ಡ್ರಾಫ್ಟ್/ಪೇ ಆರ್ಡರ್ **ಮೂಲಕ ಪಾವತಿ ಮಾಡುವವರು ದಿ ಮಲ್ಲೇಶ್ವರಂ ಕೋ–ಆಪರೇಟೀವ್ ಬ್ಯಾಂಕ್, ಮಲ್ಲೇಶ್ವರಂ ಶಾಖೆ, ಬೆಂಗಳೂರು** ಇವರಿಗೆ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಪಡೆಯಬೇಕು. ಪೂರ್ಣ ಬಿಡ್ ಮೊತ್ತವನ್ನು ಸ್ವೀಕರಿಸಿದ ನಂತರ ಮಾರಾಟ ಪ್ರಮಾಣಪತ್ರವನ್ನು ಯಶಸ್ವಿ ಬಿಡ್ದಾರರ ಪರವಾಗಿ ಮಾತ್ರ ನೀಡಲಾಗುತ್ತದೆ. ಮಾರಾಟ ಪ್ರಮಾಣಪತ್ರದಲ್ಲಿ ಯಾವುದೇ ರೀತಿಯ ನಾಮನಿರ್ದೇಶನ ಸೌಲಭ್ಯವಿರುವುದಿಲ್ಲ.
8. ಯಾವುದೇ ಹಂತದಲ್ಲಿಯಾಗಲಿ ಯಶಸ್ವಿ ಸವಾಲುದರರು/ಹರಾಜಿನಲ್ಲಿ ಕೊಂಡುಕೊಂಡವರು ನಿಗದಿತ ಅವಧಿಯೊಳಗೆ ಪಾವತಿ ಮಾಡಲು ತಪ್ಪಿದಲ್ಲಿ ಮಾರಾಟವು ರದ್ದಾಗುವುದು. ಮತ್ತು ಈಗಾಗಲೇ ಪಾವತಿ ಮಾಡಲಾಗಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಅಂತಹ ಆಸ್ತಿಯನ್ನು ಮತ್ತೆ ಮಾರಾಟಕ್ಕಿಡಲಾಗುವುದು.
9. ಎಲ್ಲಾ ರೀತಿಯ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಚಾರ್ಜ್‌ಗಳು, ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ ನೋಂದಣಿ ಶುಲ್ಕ ಇತ್ಯಾದಿಯಂತಹ ಎಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿ ಬಿಡ್ಡುದಾರರುಗಳೇ ಭರಿಸಬೇಕು.
10. ಯಾವುದೇ ಸ್ಥಳೀಯ ಅಧಿಕಾರಕ್ಕೆ ಮತ್ತು ಯಾವುದೇ/ಎಲ್ಲಾ ಅಂತಹ ತೆರಿಗೆಗಳಿಗೆ, ಆದಾಯ/ಬಾಕಿ, ಯಾವುದೇ ಸ್ಥಳೀಯ ಆಡಳಿತಕ್ಕೆ/ ಶಾಸನಬದ್ಧ ಅಧಿಕಾರಕ್ಕೆ ಪಾವತಿಸುವುದಿದ್ದಲ್ಲಿ ಬ್ಯಾಂಕ್‌ನ ಗಮನದಲ್ಲಿ ಇರುವುದಿಲ್ಲ ಮತ್ತು ಯಶಸ್ವಿ ಬಿಡ್‌ದಾರರೇ ಭರಿಸಬೇಕಾಗುತ್ತೆ.
11. ಒಮ್ಮೆ ಕೂಗಿದ ಬಿಡ್ಡನ್ನು ರದ್ದು ಮಾಡಲಾಗುವುದಿಲ್ಲ ಅಥವಾ ಹಿಂಪಡೆಯಲಾಗುವುದಿಲ್ಲ. ಎಲ್ಲಾ ಬಿಡ್ಡುಗಳನ್ನು ತಮ್ಮ ಯೂಸರ್ ಐಡಿಯಿಂದ ಮಾಡಲಾಗುವುದರಿಂದ ಅದನ್ನು ಅವರೇ ಮಾಡಿದ್ದಾರೆ ಎಂದು ಭಾವಿಸಲಾಗುವುದು.
12. ಸವಾಲನ್ನು ಕೂಗಬೇಕೆಂದಿರುವ ಪೋಟಿದಾರರು ಶೀರ್ಷಿಕೆ ಪತ್ರಗಳನ್ನು (ಹಕ್ಕುಪತ್ರಗಳನ್ನು) ಬ್ಯಾಂಕಿನಿಂದ ಪಡೆದು ಅದನ್ನು ಈ ಮೊದಲೇ ನೋಡಿ ಅದರ ಎನ್ಕಂಬರೆನ್ಸ್ ಸರ್ಟಿಫಿಕೇಟ್ ಅನ್ನು ಮತ್ತು ರೆವೆನ್ಯೂ/ಮುನಿಷಿಫಲ್ ದಾಖಲೆಗಳನ್ನು ತೆಗೆಯಿಸಿ ಪ್ರಮಾಣಿಸಿ ನೋಡಿ ಆಸ್ತಿಯ ಬಗ್ಗೆ ತಕ್ಕ ಜಾಗ್ರತೆಯನ್ನು ತೆಗೆದುಕೊಂಡು ಶೀರ್ಷಿಕೆ ಹಾಗೂ ಎನ್ಕಂಬರೆನ್ಸ್ ಸರಿಯಾಗಿದೆಯೆಂದು ಖಚಿತಪಡಿಸಿಕೊಳ್ಳಬೇಕು.
13. ಕೆಳಸಹಿದಾರರು ಅಧಿಕೃತ ಅಧಿಕಾರಿಗಳು ಮಾರಾಟ ದೃಡೀಕರಿಸಿದ ನಂತರ ಸ್ಥಿರಾಸ್ತಿಯು ಖರೀದಿದಾರರ ಹೆಸರಿನಲ್ಲಿರುತ್ತದೆ ಮತ್ತು ಎಲ್ಲಾ ರೀತಿಯಲ್ಲೂ ಅವರದೇ ಜವಾಬ್ದಾರಿಯಲ್ಲಿರುತ್ತದೆ. ಯಾವುದೇ ರೀತಿಯ ನಷ್ಟ ಅಥವಾ ಅಗ್ನಿ ಆಕಸ್ಮಿಕ ಅಥವಾ ಕಳ್ಳತನದಿಂದ ಅಥವಾ ಇತರೆ ಅಪಘಾತದಿಂದ ಆಸ್ತಿಗೆ ಆಗುವ ಹಾನಿಗೆ ಖರೀದಿದಾರರೇ ಜವಾಬ್ದಾರಿಯಾಗುತ್ತಾರೆ. ಯಶಸ್ವಿ ಬಿಡ್‌ದಾರರು ಯಾವುದೇ ಕಾರಣಕ್ಕೂ ಆಸ್ತಿಯ ಮಾರಾಟವನ್ನು ರದ್ದಪಡಿಸಲಾಗುವುದಿಲ್ಲ.
14. ಎಲ್ಲಾ ಬಿಡ್ಡುದಾರರು ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ಹಾಗೂ ಷರತ್ತುಗಳನ್ನು ಈ ಮೊದಲೇ ಓದಿದ್ದಾರೆ ಹಾಗೂ ಅದಕ್ಕೆ ಬದ್ಧರಾಗಿದ್ದಾರೆ ಎಂದು ಪರಿಗಣಿಸಲಾಗುವುದು.
15. ಯಾವುದೇ ಕಾರಣವನ್ನು ನೀಡದೇ ಈ ಹರಾಜಿಗೆ ಸಂಬಂಧಪಟ್ಟ ಅಧಿಕಾರಿಯು ಈ ಹರಾಜನ್ನು ರದ್ದು ಮಾಡಬಹುದು/ ಮುಂದೂಡಬಹುದು. ಮಾರಾಟವು ಭದ್ರತಾ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ, ಅವರು ಯಾವುದೇ ಕಾರಣವನ್ನು ನೀಡದೆಯೇ ಹೆಚ್ಚಿನ ಬಿಡ್ ಅನ್ನು ತಿರಸ್ಕರಿಸಬಹುದು. ಭದ್ರತಾ ಸಾಲದಾತರು ಅಂತಹ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಅಂತಹ ನಿರ್ಧಾರದ ವಿರುದ್ಧ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ಲೈಮ್ ಮಾಡಲಾಗುವುದಿಲ್ಲ. ಒಂದು ವೇಳೆ, ಅತ್ಯಧಿಕ ಬಿಡ್ ಅನ್ನು ತಿರಸ್ಕರಿಸಿದರೆ, ಅಧಿಕೃತ ಅಧಿಕಾರಿಯು ಉಳಿದಿರುವ ಯಾವುದೇ ಬಿಡ್‌ದಾರರುಗಳೊಂದಿಗೆ ಅಥವಾ ಯಾವುದೇ ಇತರ ವ್ಯಕ್ತಿ(ಗಳು) ಜೊತೆಗೆ ಖಾಸಗಿ ಒಪ್ಪಂದದ ಮೂಲಕ ಹೆಚ್ಚಿನ ಬಿಡ್‌ಗಿಂತ ಹೆಚ್ಚಿನ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲು ಮುಂದುವರೆಯಬಹುದು.
16. ಒಂದು ವೇಳೆ ನಿಗದಿಪಡಿಸಿದ ದಿನಾಂಕದಿಂದ **30 ದಿನದ ಒಳಗೆ** ಈ ಹರಾಜನ್ನು ಮುಂದೂಡಲಾದರೆ ಆಗ ಮುಂದೂಡಲಾದ ವಿಷಯವನ್ನು ವೆಬ್‌ಸೈಟನಲ್ಲಿ ಪ್ರಕಟಿಸಲಾಗುವುದು.

ಸೂಚನೆ : ಆಸಕ್ತ ಬಿಡ್ಡುದಾರರು, ಆಸ್ತಿಯ ವಿವರಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಆಸ್ತಿಯ ತಪಾಸಣೆ ಮಾಡಲು ದಿ ಮಲ್ಲೇಶ್ವರಂ ಕೋ–ಆಪರೇಟೀವ್ ಬ್ಯಾಂಕ್ ಲಿಮಿಟೆಡ್, ಮಲ್ಲೇಶ್ವರಂ ಶಾಖೆ H.O: #102, 7ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು –560003 ಅನ್ನು ಸಂಪರ್ಕಿಸಬಹುದು. ಹಾಗೂ ಬ್ಯಾಂಕ್ ನಿಗದಿಪಡಿಸಿದ ದಿನಾಂಕದಂದು ಆಸ್ತಿಯ ಪರಿಶೀಲನೆ ಮಾಡಬಹುದು.

ದಿನಾಂಕ : 12.01.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಮಲ್ಲೇಶ್ವರಂ ಕೋ – ಆಪರೇಟೀವ್ ಬ್ಯಾಂಕ್ ಲಿಮಿಟೆಡ್., ಮಲ್ಲೇಶ್ವರಂ ಶಾಖೆ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
(ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ)
(CIN : U85110KA1970SGC001919)

ಸಂಖ್ಯೆ: KPCL/2021-22/OW/WORK_INDENT12050 ದಿನಾಂಕ: 11.01.2022

ಅಲ್ಪಾವಧಿ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾಮಗಾರಿಯ ಹೆಸರು: Providing Poly-urethane Injection grouting to leakage points of BCN 2A & 2B tail end dewatering area at BTPS. ಈ ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯನ್ವಯ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 19.01.2022, 16.30 ಘಂಟೆಯವರೆಗೆ.** ಟೆಂಡರ್ ಅಂದಾಜು ಮೊತ್ತ: **ರೂ. 9.56 ಲಕ್ಷಗಳು.** ಇ.ಎಂ.ಡಿ ಮೊತ್ತ: **ರೂ. 24,000/-.** ಗುತ್ತಿಗೆದಾರರ ವರ್ಗ: ಯಾವುದೇ ಪ್ರತಿಷ್ಠಿತ ಸಂಸ್ಥೆ. ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ: **1 month (Including monsoon).** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನ್ನು ನೋಡಬಹುದು. ಯಾವುದೇ ಸ್ಪಷ್ಟೀಕರಣಕ್ಕಾಗಿ **ಕಾರ್ಯನಿರ್ವಾಹಕ ಅಭಿಯಂತರು (ಆರ್‌ಟಿಎಂ), ಬಿಟಿಪಿಎಸ್, ಕೆಪಿಸಿಎಲ್, ಕುಡತಿನಿ– 583152, ಬಳ್ಳಾರಿ (ಜಿಲ್ಲೆ),** ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು (ಮೊಬೈಲ್ ಸಂಖ್ಯೆ: 9449599137).

ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್
ನೋಂದಾಯಿತ ಕಚೇರಿ ವಿಳಾಸ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಮ್ ಮಾರ್ಗ, ಲೋವರ್ ಪರೇಲ್, ಮುಂಬೈ–400013. **ಶಾಖೆ ವಿಳಾಸ:** 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರೋಡ್, ಬೆಂಗಳೂರು–560025, ದೂರವಾಣಿ ಸಂ.: 09030001897/09866577659

ಸ್ಥಿರಾಸ್ತಿ ಮಾರಾಟ ಕುರಿತಾದ ಮಾರಾಟ ಪ್ರಕಟಣೆ (ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 8(6) ಅಡಿಯಲ್ಲಿ)
ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟ ಕುರಿತಾದ ಇ-ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಕೆಳಕಂಡ ಸಾಲಗಾರರಿಗೆ/ಸಹ-ಸಾಲಗಾರರಿಗೆ ತಿಳಿಸುವುದು ಏನೆಂದರೆ, ಈ ಕೆಳಗೆ ವಿವರಿಸಲಾಗಿರುವ ಸ್ಥಿರಾಸ್ತಿಗಳನ್ನು (ಭದ್ರತಾ ಸ್ವತ್ತುಗಳನ್ನು) **ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ (ಸೆಕ್ಯೂರ್ಡ್ ಕ್ರೆಡಿಟರ್)** ಇವರಿಗೆ ಅಡಮಾನ ನೀಡಲಾಗಿರುತ್ತದೆ, ಮಾನ್ಯ ಹೆಚ್ಚುವರಿ ಸಿಎಂಎಂ ಕೋರ್ಟ್, ಬೆಂಗಳೂರು (ಸಿ.ಮಿಸ್.ನಂ.3960/2021 ಆರ್ಡರ್ ದಿ.29/11/2021 ಮೇರೆಗೆ) ಇವರ ಆದೇಶದ ಮೇರೆಗೆ **ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್**‌ನ (ಸೆಕ್ಯೂರ್ಡ್ ಕ್ರೆಡಿಟರ್‌ರ) ಅಧಿಕೃತ ಅಧಿಕಾರಿಯು ಸದರಿ ಅಡಮಾನ ಸ್ವತ್ತನ್ನು **30ನೇ ಡಿಸೆಂಬರ್, 2021 ರಂದು** ತಮ್ಮ ಭೌತಿಕ ಸ್ವಾಧೀನತೆಗೆ ಪಡೆದುಕೊಂಡಿದ್ದು, ಸದರಿ ಸ್ವಾಧೀನ ಸ್ವತ್ತುಗಳನ್ನು **25ನೇ ಫೆಬ್ರವರಿ 2022 ರಂದು (ಶುಕ್ರವಾರ) "ಹೇಗಿದೆಯೊ ಎಲ್ಲಿದೆಯೊ"** ಮತ್ತು **"ಹೇಗಿದೆಯೊ ಏನಿದೆಯೊ"** ಮತ್ತು **"ಅಲ್ಲಿ ಏನೇನಿದೆಯೊ"** ಆಧಾರದಲ್ಲಿ ಮಾರಾಟ ಮಾಡಲಾಗುತ್ತದೆ. ಮೀಸಲು ಬೆಲೆ ಮತ್ತು ಭದ್ರತಾ ಠೇವಣಿ ಮೊತ್ತದ ವಿವರಗಳು ಕೆಳಗಿನಂತಿರುತ್ತವೆ.

ಭದ್ರತಾ ಸಾಲವನ್ನು ವಸೂಲಾತಿ ಮಾಡಿಕೊಳ್ಳಲೆಂದು ಸದರಿ ಭದ್ರತಾ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಮುಂದೂಡಿಕೆ/ರದ್ದುಪಡಿಸುವಿಕೆ ಉಂಟಾಗದಿದ್ದಲ್ಲಿ, ಸದರಿ ಭದ್ರತಾ ಸ್ವತ್ತುಗಳನ್ನು **25ನೇ ಫೆಬ್ರವರಿ 2022 ರಂದು (ಶುಕ್ರವಾರ) ಅಪರಾಹ್ನ 2 ಗಂಟೆಗೆ ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್** 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರೋಡ್, ಬೆಂಗಳೂರು-560025 ವಿಳಾಸದಲ್ಲಿ ಮಾರಾಟ ಮಾಡಲಾಗುತ್ತದೆ. ಸದರಿ ಸ್ವತ್ತುಗಳ ಖರೀದಿಗಾಗಿ ಮೊಹರಾದ ಇ-ಹರಾಜು ಮತ್ತು ಎಇಂಡಿ ರೂಪದ ಡಿಮಾಂಡ್ ಡ್ರಾಫ್ಟನ್ನು **ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯವರು **24ನೇ ಫೆಬ್ರವರಿ, 2022 (ಗುರುವಾರ) ಸಂಜೆ 5 ಗಂಟೆಯವರೆಗೆ** ಸ್ವೀಕರಿಸುತ್ತಾರೆ. ಸದರಿ ಸ್ವತ್ತಿನ ಮಾರಾಟವನ್ನು "ಹೇಗಿದೆಯೊ ಎಲ್ಲಿದೆಯೊ ಸ್ಥಿತಿಯಲ್ಲಿ" ಮಾರಾಟ ಮಾಡಲಾಗುತ್ತದೆ ಮತ್ತು ಇಲ್ಲಿಯವರೆಗೆ ಕಂಡುಬಂದಿರುವ ಸದರಿ ಸ್ವತ್ತಿಗೆ ಸಂಬಂಧಿತ ಹೊಣೆಗಾರಿಕೆಗಳು ಮತ್ತು ಕ್ಲೇಮ್‌ಗಳ ಬಗ್ಗೆ ಷೆಡ್ಯೂಲ್‌ನಲ್ಲಿ ವಿವರಿಸಲಾಗಿದೆ.

ಲೋನ್ ಅಕೌಂಟ್ ನಂ.	ಗ್ರಾಹಕರ ಹೆಸರು	12/01/2022 ರಂತೆಗಿನ ವಸೂಲಾತಿ ಮೊತ್ತ	ಭದ್ರತಾ ಸ್ವತ್ತುಗಳ ವಿವರ	ಮೀಸಲು ಬೆಲೆ (ರೂ.)	ಇಎಂಡಿ/ಹೆಚ್ಚಳ ಮೊತ್ತ (ರೂ.)
8643909	ಚಲಪತಿರಾವ್ ಜಿ	Rs. 66,39,672/- (ರೂಪಾಯಿ ಅರವತ್ತಾರು ಲಕ್ಷ ಮೂವತ್ತೊಂಬತ್ತು ಸಾವಿರದ ಆರು ನೂರ ಎಪ್ಪತ್ತೆರಡು ಮಾತ್ರ/-).	ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ ಸೈಟ್ ನಂ. 07, ಖಾತಾ ನಂ. 129/07 ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ **ಸ್ವತ್ತಿನ ಚಕ್ಕುಬಂದಿ:** ಪೂರ್ವಕ್ಕೆ: ಶ್ರೀನಿವಾಸುಲುರವರ ನಿವೇಶನ; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ಶ್ರೀಮತಿ ಗಂಗಮ್ಮನವರ - ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ 30 ಅಡಿ ಒಟ್ಟಾರೆ 1200 ಚ.ಅ ವಿಸ್ತೀರ್ಣದ ಜಿಎಫ್+ಎಫ್‌ಎಫ್+ಎಸ್‌ಎಫ್ ಹೊಂದಿರುವ ಸ್ವತ್ತು.	Rs. 83,43,000/-	Rs.8,34,300/- ರೂ. 25 ಸಾವಿರ ಗುಣಾಂಕಗಳಲ್ಲಿ

ಮಾರಾಟಕ್ಕೆ ನಿಗದಿಪಡಿಸಲಾಗಿರುವ ಸ್ವತ್ತಿನ ವಿವರವು ಷೆಡ್ಯೂಲ್‌ನಲ್ಲಿದೆ. ಒಂದು ವೇಳೆ ಮೇಲ್ಕಾಣಿಸಿದ ಬಾಕಿಮೊತ್ತವು, ಬಡ್ಡಿ ಮತ್ತು ಶುಲ್ಕಗಳ ಸಮೇತ (ಮಾರಾಟದ ವೆಚ್ಚವೂ ಸೇರಿದಂತೆ) **'ಅಧಿಕೃತ ಅಧಿಕಾರಿ'** ಇವರಿಗೆ ಪಾವತಿಗೊಂಡಲ್ಲಿ ಅಥವಾ ಸದರಿ ಭದ್ರತಾ ಸಾಲವನ್ನು, ಬಡ್ಡಿ ಮತ್ತು ಶುಲ್ಕಗಳ ಸಮೇತ ಮರುಪಾವತಿಸಿರುವ ಕುರಿತಂತೆ ಅವರ ತೃಪ್ತಿಗನುಸಾರವಾದ ಪುರಾವೆ ಸಲ್ಲಿಸಿದಲ್ಲಿ, ಸದರಿ ಮಾರಾಟವನ್ನು ಸ್ಥಗಿತಗೊಳಿಸಲಾಗುತ್ತದೆ. ಸದರಿ ಮಾರಾಟಕ್ಕೆ ಸಾಮಾನ್ಯ ಜನರನ್ನು ತಮ್ಮ ಟೆಂಡರ್‌ನ್ನು ಖುದ್ದಾಗಿ ಸಲ್ಲಿಸಲು ಆಹ್ವಾನಿಸಲಾಗಿದೆ. ಸದರಿ ಮಾರಾಟಕ್ಕೆ ಸಂಬಂಧಿತ ಯಾವುದೇ ಕರ್ತವ್ಯಕ್ಕೆ ನಿಯೋಜಿತರಾದ ಯಾವುದೇ ವ್ಯಕ್ತಿಯಾಗಲಿ ಅಥವಾ ಅಧಿಕಾರಿಯಾಗಲಿ, ಸದರಿ ಮಾರಾಟದಲ್ಲಿ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಬಿಡ್ ಸಲ್ಲಿಸುವಂತಿಲ್ಲ, ಮಾರಾಟಗೊಂಡ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿ ಸಾಧಿಸುವ ಪ್ರಯತ್ನವನ್ನು ಕೂಡ ಮಾಡುವಂತಿಲ್ಲ.

ಒಂದು ವೇಳೆ ಮಾರಾಟ ದಿನಾಂಕಕ್ಕೆ ಮುಂಚಿತವಾಗಿಯೇ, ಸಾಲಗಾರರು ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌ಗೆ ಸಂದಾಯ ಆಗಬೇಕಿರುವ ಬಾಕಿಮೊತ್ತವನ್ನು ಸಂಪೂರ್ಣ ಮರುಪಾವತಿಸಿದಲ್ಲಿ, ಸದರಿ ಮಾರಾಟವನ್ನು ಸ್ಥಗಿತಗೊಳಿಸಲಾಗುತ್ತದೆ. ಈ ಮಾರಾಟವು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ಮತ್ತು ಕೆಳಕಂಡ ಷರತ್ತುಗಳ ನಿಬಂಧನೆಗೆ ಒಳಪಟ್ಟಿರುತ್ತದೆ:

ಷರತ್ತು ಮತ್ತು ನಿಬಂಧನೆಗಳು: ಸದರಿ ಇ-ಹರಾಜು ಪ್ರಕ್ರಿಯೆಯನ್ನು https://disposalhub.com ಪೋರ್ಟಲ್‌ನಲ್ಲಿ, ತಲಾ 10 ನಿಮಿಷಗಳ ಅಸೀಮಿತ ವಿಸ್ತರಣಗಳೊಂದಿಗೆ, **25ನೇ ಫೆಬ್ರವರಿ 2022 (ಶುಕ್ರವಾರ)** ರಂದು ಮಧ್ಯಾಹ್ನ 2.00 ರಿಂದ 3.00 ಗಂಟೆಯೊಳಗೆ ಕೈಗೊಳ್ಳಲಾಗುತ್ತದೆ. 1) ಈ ಕೆಳಗಿನ ಷೆಡ್ಯೂಲ್‌ನಲ್ಲಿ ನೀಡಲಾಗಿರುವ ವಿವರಗಳು ಈ ಕೆಳಗೆ ಸಹಿ ಹಾಕಿರುವವರ ಅತ್ಯುತ್ತಮ ತಿಳುವಳಿಕೆಯ ಮೇರೆಗೆ ನೀಡಲ್ಪಟ್ಟಿರುತ್ತವೆ, ಆದರೆ ಸದರಿ ವಿವರಣೆಯಲ್ಲಿ ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ದೋಷಗಳು ಕಂಡುಬಂದಲ್ಲಿ, ಅಂತಹುದಕ್ಕೆ ಕೆಳಗೆ ಸಹಿ ಹಾಕಿರುವವರು ಹೊಣೆಗಾರರಾಗಿರುವುದಿಲ್ಲ. ಬಿಡ್ ಮೊತ್ತಕ್ಕೆ ಸಂಬಂಧಿಸಿದಂತೆ, ಬಿಡ್‌ದಾರರಲ್ಲಿ ಯಾವುದೇ ತಗಾದೆ ಉದ್ಭವವಾದ ಸಂದರ್ಭದಲ್ಲಿ, ಸದರಿ ಲಾಟ್‌ನ್ನು ಪುನಃ ಹರಾಜಿಗೆ ನಿಗದಿಪಡಿಸಲಾಗುತ್ತದೆ. 2) ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಈ ಸ್ವತ್ತನ್ನು ಮಾರಾಟ ಮಾಡಲಾಗುವುದಿಲ್ಲ. 3) ಬಿಡ್ ಹೆಚ್ಚಳ ಮೊತ್ತ **ರೂ. 25,000/- (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ/-)** ಆಗಿರುತ್ತದೆ. 4) ಸ್ವತ್ತಿನ ಖರೀದಿಗಾಗಿ ಸಲ್ಲಿಸಲಾಗುವ ಎಲ್ಲಾ ಬಿಡ್‌ಗಳ ಜೊತೆಗೆ ಭದ್ರತಾ ಠೇವಣಿ ಮೊತ್ತದ ಡಿಮಾಂಡ್ ಡ್ರಾಫ್ಟ್ ಲಗತ್ತಾಗಿರಬೇಕು ಮತ್ತು ಅದು **"ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್"** ಹೆಸರಿನಲ್ಲಿ ಪಡೆದಿರಬೇಕು ಹಾಗೂ ಬೆಂಗಳೂರು ಶಾಖೆಯಲ್ಲಿ ಪಾವತಿಯಾಗುವಂತಿರಬೇಕು. ಯಶಸ್ವಿಯಾಗದಿರುವ ಬಿಡ್‌ದಾರರಿಗೆ ಅವರ ಡಿಮಾಂಡ್ ಡ್ರಾಫ್ಟ್ ಹಿಂದಿರುಗಿಸಲಾಗುತ್ತದೆ. 5) ಯಾವುದೇ ಲಾಟ್‌ನಲ್ಲಿ ಗರಿಷ್ಠ ಬಿಡ್ ಕೂಗಿದ ಬಿಡ್‌ದಾರರನ್ನು, ಅವರು ಕೂಗಿದ ಬಿಡ್ ಮೊತ್ತವು ಮೀಸಲು ಬೆಲೆಗಿಂತ ಇಲ್ಲದಿದ್ದ ಪಕ್ಷದಲ್ಲಿ, ಅಂತಹವರನ್ನು ಖರೀದಿದಾರ ಎಂದು ಘೋಷಿಸಲಾಗುತ್ತದೆ. ಒಂದು ವೇಳೆ ಕೂಗಿದ ಗರಿಷ್ಠ ಬೆಲೆಯು ಭದ್ರತಾ ಸಾಲಕ್ಕೆ ಸೂಕ್ತವಾಗಿದೆಯೊ ಇಲ್ಲವೊ ಎಂಬುದನ್ನು ನಿರ್ಧರಿಸುವುದು **'ಅಧಿಕೃತ ಅಧಿಕಾರಿ'** ವಿವೇಚನೆಗೆ ಒಳಪಟ್ಟಿರುತ್ತದೆ. 6) ಸ್ವತ್ತಿನ ಪರಿಶೀಲನೆಯನ್ನು **28ನೇ ಜನವರಿ, 2022 (ಶುಕ್ರವಾರ)** ರಂದು ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯೊಳಗೆ ಕೈಗೊಳ್ಳಬಹುದಾಗಿರುತ್ತದೆ. 7) ಸ್ವತ್ತಿನ ಪರಿಶೀಲನೆಯನ್ನು **28ನೇ ಜನವರಿ, 2022 (ಶುಕ್ರವಾರ)** ರಂದು ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ ಮಾಡಿಕೊಳ್ಳಬಹುದು. 8) ಖರೀದಿದಾರ ಎಂದು ಘೋಷಿಸಲ್ಪಟ್ಟ ವ್ಯಕ್ತಿಯು, ಘೋಷಣೆಯಾದ ತಕ್ಷಣವೇ, ಖರೀದಿ ಮೊತ್ತದ ಶೇಕಡ ಇಪ್ಪತ್ತೈದರಷ್ಟು ಮೊತ್ತವನ್ನು 'ಅಧಿಕೃತ ಅಧಿಕಾರಿ' ಇವರಿಗೆ ಪಾವತಿಸುವುದು. ಇದಕ್ಕೆ ತಪ್ಪಿದಲ್ಲಿ, ಅವರ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಸದರಿ ಸ್ವತ್ತನ್ನು ಪುನಃ ಮಾರಾಟಕ್ಕೆ ನಿಗದಿಪಡಿಸಿ ಮಾರಾಟ ಮಾಡಲಾಗುತ್ತದೆ. 9) ಒಂದು ವೇಳೆ ತಿಳಿಸಿದಂತೆ ಆರಂಭಿಕ ಮೊತ್ತವನ್ನು ಪಾವತಿಸಿದಲ್ಲಿ, ಪಾವತಿಸಬೇಕಾದ ಖರೀದಿ ಮೊತ್ತದಲ್ಲಿನ ಇನ್ನುಳಿದ ಮೊತ್ತವನ್ನು ಖರೀದಿದಾರರು ಸ್ವತ್ತು ಮಾರಾಟ ಖಚಿತಗೊಂಡ ದಿನಾಂಕದಿಂದ 15ನೇ ದಿನದೊಳಗೆ, ಆ ದಿನವನ್ನು ಹೊರತುಪಡಿಸಿ ಅಥವಾ 15ನೇ ದಿನದಂದು ಭಾನುವಾರ ಅಥವಾ ಇನ್ನಾವುದೇ ರಜಾದಿನವಾಗಿದ್ದಲ್ಲಿ ಮಾರನೇಯ ಕಚೇರಿ ಕೆಲಸದ ದಿನದಂದು ಅಧಿಕೃತ ಅಧಿಕಾರಿಗೆ ಪಾವತಿಸತಕ್ಕದ್ದು, ಈ ಅವಧಿಯನ್ನು ಸರ್ಫಾಯೆಸಿ ಕಾಯ್ದೆಗೆ ಅನುಗುಣವಾಗಿ ಅಧಿಕೃತ ಅಧಿಕಾರಿಯು ಮುಂದಿನ ಲಿಖಿತಾಚಾರದ ಪ್ರಕಾರ ವಿಸ್ತರಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ಸಂಪೂರ್ಣ ಮೊತ್ತ ಪಾವತಿಯಾಗದಿದ್ದ ಪಕ್ಷದಲ್ಲಿ, ಹೊಸದಾಗಿ ಮರು ಮಾರಾಟ ಘೋಷಣೆ ಹೊರಡಿಸಿ ಸದರಿ ಸ್ವತ್ತನ್ನು ಪುನಃ ಮಾರಾಟ ಮಾಡಲಾಗುತ್ತದೆ ಮತ್ತು ಇಲ್ಲಿಯವರೆಗೆ ಜಮೆ ಮಾಡಲಾಗಿರುವ ಎಲ್ಲಾ ಮೊತ್ತಗಳನ್ನು **ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌**ಗೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಸುಸ್ತಿದಾರ ಖರೀದಿದಾರರು ಸ್ವತ್ತಿಗೆ ಸಂಬಂಧಿತ ಎಲ್ಲಾ ಕ್ಲೇಮ್‌ಗಳನ್ನು ಕಳೆದುಕೊಳ್ಳುತ್ತಾರೆ ಅಥವಾ ಮರು ಮಾರಾಟ ಮಾಡಲಾಗುವ ಸ್ವತ್ತಿನ ಮೊತ್ತದಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಅಧಿಕೃತ ಅಧಿಕಾರಿಯ ವಿವೇಚನೆಯ ಮೇರೆಗೆ ಸ್ವತ್ತನ್ನು ಮರು ಮಾರಾಟ ಮಾಡಲಾಗುತ್ತದೆ. 10) ಸದರಿ ಸ್ವತ್ತಿಗೆ ಸಂಬಂಧಿಸಿದ ಮತ್ತು **ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌**ಗೆ ತಿಳಿದಿರುವಂತಹ ಯಾವುದೇ ಋಣಭಾರಗಳ ವಿವರ: ಶೂನ್ಯ. ಸದರಿ ಸ್ವತ್ತಿಗೆ ಸಂಬಂಧಿತ ಯಾವುದೇ ಕ್ಲೇಮ್‌ಗಳಿದ್ದಲ್ಲಿ ಮತ್ತು ಸ್ವತ್ತಿನ ಮೌಲ್ಯ ಸ್ವರೂಪದ ಮೇಲೆ ಪ್ರಭಾವ ಬೀರಬಲ್ಲ ಯಾವುದೇ ಬಲ್ಲ ವಿವರಗಳು: ಮೇಲ್ಕಾಣಿಸಿರುವುದನ್ನು ಹೊರತುಪಡಿಸಿ ಶೂನ್ಯ. 11) ಇ-ಹರಾಜಿಗೆ ಸಂಬಂಧಿತ ವಿವರ, ನೆರವು, ಪ್ರಕ್ರಿಯೆ ಮತ್ತು ಆನ್‌ಲೈನ್ ತರಬೇತಿಗಾಗಿ ಸೇವಾ ಪೂರೈಕೆದಾರರಾದ **ಮೆ. ನೆಕ್ಸ್‌ಜೆನ್ ಸೊಲ್ಯೂಷನ್ಸ್ ಲಿಮಿಟೆಡ್, ಹೆಸರು: ಕ್ಲೈಂಟ್ ಸರ್ವೀಸ್ ಡೆಲಿವರಿ (ಸಿಎಸ್‌ಡಿ)** ನಮ್ಮ ಮಾರಾಟ ಪಾಲುದಾರರಾದ ಇವರನ್ನು ಇ-ಮೇಲ್ ಐಡಿ: **csd@disposalhub.com, ಫೋನ್ ನಂ. +91 40 2782 2864, ಮೊಬೈಲ್ ನಂ. +91 9010911100** ಇವರನ್ನು ಆಸಕ್ತಿಯುಳ್ಳ ಬಿಡ್‌ದಾರರು ಸಂಪರ್ಕಿಸಬಹುದು. 12) **ಸೂಚನೆ:** ಆಸಕ್ತಿಯುಳ್ಳ ಬಿಡ್‌ದಾರರು **ಅಧಿಕೃತ ಅಧಿಕಾರಿ ಶ್ರೀ. ನೀಲಾ ಪ್ರತಾಪ್/ಶ್ರೀ. ಚಂದ್ರಶೇಖರ ಯು** ಇವರನ್ನು ಸಂಪರ್ಕಿಸಬಹುದು, ಇಮೇಲ್ **Lrneela.pratap@tatacapital.com/chandrasekhar.u@tatacapital.com** ಮತ್ತು ಮೊಬೈಲ್ ನಂ. 9030001897/9866577659 ಮತ್ತು 13) ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಸೆಕ್ಯೂರ್ಡ್ ಕ್ರೆಡಿಟರ್‌ರವರ www.tatacapital.com/tcfsl.html ವೆಬ್‌ಸೈಟ್ ಪರಿಶೀಲಿಸಿರಿ.

ಸ್ಥಳ: ಬೆಂಗಳೂರು
ದಿನಾಂಕ: 13/01/2022

ಸಹಿ/- ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ ಮೊಬೈಲ್ ನಂ. 9030001897/09866577659

ಸುರಕ್ಷಿತ ರಕ್ತ ಒದಗಿಸುವ ಕಾರ್ಯದಲ್ಲಿ ತೊಡಗಿರುವ ಸಂಸ್ಥೆ: ಥಲಸ್ಸೇಮಿಯಾ ರೋಗಿಗಳಿಗೆ ನೆರವು

ಜೀವ ರಕ್ಷಣೆ ನೀಡುವ 'ಸಂಕಲ್ಪ'

ಪ್ರಜಾವಾಣಿ ವಾರ್ತೆ

ಹೊಸ ಬೆಳಕು

ಬೆಂಗಳೂರು: ಸಾಮಾಜಿಕ ಕಾಳಜಿಯ ಆಶಯದೊಂದಿಗೆ ಸಮಾನ ಮನಸ್ಕರು ಸೇರಿ ಆರಂಭಿಸಿದ ಸಂಸ್ಥೆ, ಈಗ ಅತ್ಯಮೂಲ್ಯ ಜೀವ ಉಳಿಸುವ ಕೈಂಕರ್ಯದಲ್ಲಿ ತೊಡಗಿದೆ.

'ರಚನಾತ್ಮಕ ಕಾರ್ಯಗಳ ಮೂಲಕ ಸಮಾಜಕ್ಕೆ ನಮ್ಮದೇ ಆದ ಕೊಡುಗೆ ನೀಡಬೇಕು. ಬದಲಾವಣೆ ನಮ್ಮಿಂದಲೇ ಆರಂಭವಾಗಬೇಕು' ಎನ್ನುವ ಉದ್ದೇಶದೊಂದಿಗೆ 2003ರಲ್ಲಿ ಸ್ನೇಹಿತರೇ ಒಗ್ಗೂಡಿ ಬೆಂಗಳೂರಿನಲ್ಲಿ ಆರಂಭಿಸಿದ 'ಸಂಕಲ್ಪ ಇಂಡಿಯಾ ಫೌಂಡೇಷನ್', ರಕ್ತಕ್ಕೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

ಬಹುತೇಕ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸೇರಿಕೊಂಡು ಸ್ಥಾಪಿಸಿರುವ ಸಂಸ್ಥೆ ಇದಾಗಿದ್ದು, ರಕ್ತದಾನಿಗಳಿಗೂ ಮತ್ತು ರೋಗಿಗಳ ನಡುವಣ ಸಂಪರ್ಕದ ಕೊಂಡಿಯಾಗುವ ಜತೆಗೆ ಥಲಸ್ಸೇಮಿಯಾದಂತಹ ರೋಗಿಗಳು ಚಿಕಿತ್ಸೆ ಪಡೆಯಲು ನೆರವಾಗುತ್ತಿದೆ. ರಕ್ತ ನಿಧಿಗಳ ಜತೆ ಸಮನ್ವಯ ಸಾಧಿಸಿ 'ಸುರಕ್ಷಿತ ರಕ್ತ'ವನ್ನು ಅಗತ್ಯ ಇರುವ ರೋಗಿಗಳಿಗೆ ಒದಗಿಸುವ ಕಾರ್ಯದಲ್ಲಿ ತೊಡಗಿದೆ.

ದೇಶದಾದ್ಯಂತ ತನ್ನ ಜಾಲವನ್ನು ವಿಸ್ತರಿಸಿಕೊಂಡಿರುವ ಈ ಸಂಸ್ಥೆಯು ಕರ್ನಾಟಕದಲ್ಲಿ 1600ಕ್ಕೂ ಹೆಚ್ಚು ರಕ್ತ ದಾನ ಶಿಬಿರಗಳನ್ನು ಆಯೋಜಿಸಿ 1.5 ಲಕ್ಷ ಯೂನಿಟ್ ರಕ್ತವನ್ನು ಸಂಗ್ರಹಿಸಿದೆ. ರಕ್ತದಾನಿಗಳ ಸಮಗ್ರ ಮಾಹಿತಿಯನ್ನು ಸಹ ಸಂಗ್ರಹಿಸಿಟ್ಟುಕೊಂಡಿದೆ.

ಈ ಸಂಸ್ಥೆ ಅಡಿಯಲ್ಲಿ 'ರಕ್ತಕ್ರಾಂತಿ' ಎನ್ನುವ ಯೋಜನೆ ಆರಂಭಿಸಲಾಗಿದೆ. ಇದರ ಅನ್ವಯ ರಕ್ತ ದಾನಿಗಳ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

2011ರಲ್ಲಿ ಥಲಸ್ಸೇಮಿಯಾ ಪೀಡಿತರಿಗೆ ಚಿಕಿತ್ಸೆ ಪಡೆಯುವವರಿಗೆ ನೆರವಾಗಲು ಸಂಸ್ಥೆಯು, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಸಹಯೋಗದೊಂದಿಗೆ 'ಡೇ ಕೇರ್ ಸೆಂಟರ್' ಆರಂಭಿಸಿತು.

ಇಲ್ಲಿಗೆ ಬರುವ ರೋಗಿಗಳಿಗೆ ತಪಾಸಣೆ, ಚಿಕಿತ್ಸೆ, ಔಷಧಿ ಇಲ್ಲಿ ಒದಗಿಸಲಾಗುತ್ತದೆ. ಈ ರೀತಿಯ ಕೇಂದ್ರಗಳನ್ನು ದೇಶದ 17 ಸ್ಥಳಗಳಲ್ಲಿ ಆರಂಭಿಸಲಾಗಿದೆ.

ಥಲಸ್ಸೇಮಿಯಾ ರೋಗಿಗಳಿಗೆ ಮೂಳೆ ಮಜ್ಜೆ ಕಸಿ (ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟ್) ಚಿಕಿತ್ಸೆಯನ್ನು ನಗರದ ವಸಂತನಗರದ ಭಗವಾನ ಮಹಾವೀರ ಜೈನ್ ಆಸ್ಪತ್ರೆಯಲ್ಲಿ ಈ ಸಂಸ್ಥೆಯ ನೆರವಿನೊಂದಿಗೆ ಮಾಡಲಾಗುತ್ತಿದೆ. ಇಲ್ಲಿಯವರೆಗೆ ಈ ಸಂಸ್ಥೆಯ ಆಶ್ರಯದಲ್ಲಿ 250ಕ್ಕೂ ಹೆಚ್ಚು ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟೇಷನ್ ಮಾಡಲಾಗಿದೆ.

'ಸಂಕಲ್ಪ ಇಂಡಿಯಾ ಫೌಂಡೇಷನ್' ಆಶ್ರಯದಲ್ಲಿ ಚಿಕಿತ್ಸೆ ಪಡೆದ ಮಕ್ಕಳು (ಸಂಗ್ರಹ ಚಿತ್ರ)

ಸಂಕಲ್ಪ ಸಹಾಯವಾಣಿ ಸಂಖ್ಯೆ: 9480044444

'ನಮ್ಮದು ಲಾಭರಹಿತ ಸಂಸ್ಥೆ. ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಥಲಸ್ಸೇಮಿಯಾಗೆ ಮೂಳೆ ಮಜ್ಜೆ ಕಸಿ ಚಿಕಿತ್ಸೆ ಪಡೆಯುವುದು ದುಬಾರಿ. ಹಣ ಇಲ್ಲದ ಕಾರಣ ಮಕ್ಕಳು ಚಿಕಿತ್ಸೆಯಿಂದ ವಂಚಿತರಾಗಬಾರದು ಎನ್ನುವುದು ನಮ್ಮ ಉದ್ದೇಶ' ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಕೇಶ್ ಹೇಳುತ್ತಾರೆ.

'ಖಾಸಗಿ ಆಸ್ಪತ್ರೆಗಳಲ್ಲಿ ಥಲಸ್ಸೇಮಿಯಾಗೆ ಚಿಕಿತ್ಸೆ ಪಡೆಯಲು ಸುಮಾರು ₹20 ಲಕ್ಷ ವೆಚ್ಚವಾಗುತ್ತದೆ. ನಾವು ಸುಮಾರು 9 ಲಕ್ಷ ವೆಚ್ಚದಲ್ಲಿ ಈ ಚಿಕಿತ್ಸೆ ಮಾಡಿಸುತ್ತಿದ್ದೇವೆ. ಇದರಲ್ಲಿ ಪೋಷಕರು ಸಾಧ್ಯವಿರುವಷ್ಟು ವೆಚ್ಚ ಭರಿಸುತ್ತಾರೆ. ಇದು ಅವರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬಿಸುತ್ತದೆ. ಉಳಿದ ಮೊತ್ತವನ್ನು ನಾವು ವಿವಿಧ ಸಂಘ–ಸಂಸ್ಥೆಗಳು, ಕಂಪನಿಗಳಿಂದ ಹಣ ಸಂಗ್ರಹಿಸಿ ಕೊಡುತ್ತೇವೆ' ಎಂದು ಹೇಳುತ್ತಾರೆ.

4 ಖಾತೆ, 20 ಯುವತಿಯರಿಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: ಸಾಮಾಜಿಕ ಮಾಧ್ಯಮಗಳ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು, ರೂಪದರ್ಶಿ ಮಾಡುವುದಾಗಿ ಆಮಿಷವೊಡ್ಡಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿ ಪ್ರಪಂಚ್ ನಾಚಪ್ಪ (21) ಎಂಬಾತನನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೊಡಗಿನ ಪ್ರಪಂಚ್, ನಗರದ ಕಾಲೇಜೊಂದರಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿದ್ದ. ಯುವತಿಯರ ಹೆಸರಿನಲ್ಲೇ ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆಗಳನ್ನು ತೆರೆದು ವಂಚಿಸುತ್ತಿದ್ದ. ಯುವತಿಯೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ನಾಲ್ಕು ನಕಲಿ ಖಾತೆಗಳನ್ನು ಆರೋಪಿ ತೆರೆದಿದ್ದ. ಅದರ ಮೂಲಕ 20 ಯುವತಿಯರನ್ನು ಸಂಪರ್ಕಿಸಿ, ಅವರ ಅರೆನಗ್ನ ಫೋಟೊ ಹಾಗೂ ವಿಡಿಯೊಗಳನ್ನು ತರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಿರುವ ಮಾಹಿತಿ ಇದುವರೆಗಿನ ತನಿಖೆಯಿಂದ ಗೊತ್ತಾಗಿದೆ. ನೊಂದ ಯುವತಿಯರ ಹೇಳಿಕೆ ಪಡೆಯಲಾಗುತ್ತಿದೆ' ಎಂದೂ ತಿಳಿಸಿದರು.

ನಗ್ನ ಫೋಟೊ ಹಾಗೂ ಹಣಕ್ಕೆ ಬೇಡಿಕೆ: 'ಆರೋಪಿ ಪ್ರಪಂಚ್, ನಕಲಿ ಖಾತೆಗಳಿಂದ ಯುವತಿಯರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸುತ್ತಿದ್ದ. ಯುವತಿಯರು ರಿಕ್ವೆಸ್ಟ್ ಸ್ವೀಕರಿಸುತ್ತಿದ್ದಂತೆ ಚಾಟಿಂಗ್ ಮಾಡಲಾರಂಭಿಸುತ್ತಿದ್ದ' ಎಂದೂ ಅಧಿಕಾರಿ ಹೇಳಿದರು.

'ನನಗೆ ವಸ್ತ್ರ ವಿನ್ಯಾಸಕರ ಪರಿಚಯವಿದೆ. ನಿಮ್ಮನ್ನು ರೂಪದರ್ಶಿ ಮಾಡುತ್ತೇನೆ' ಎಂಬುದಾಗಿ ಯುವತಿಯರಿಗೆ ಆರೋಪಿ ಹೇಳುತ್ತಿದ್ದ. ಆತನ ಮಾತು ನಂಬುತ್ತಿದ್ದ ಯುವತಿಯರು, ತಮ್ಮ ಫೋಟೊ ಹಾಗೂ ವಿಡಿಯೊಗಳನ್ನು ಕಳುಹಿಸುತ್ತಿದ್ದರು. ಅದೇ ಫೋಟೊ ಹಾಗೂ ವಿಡಿಯೊವನ್ನು ಅಶ್ಲೀಲವಾಗಿ ಬಿಂಬಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಹೇಳಿ ಆರೋಪಿ ಯುವತಿಯರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ' ಎಂದು ತಿಳಿಸಿದರು.

ಆನ್‌ಲೈನ್‌ನಲ್ಲಿಯೇ ಚಿತ್ರಸಂತೆ?

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ 19ನೇ ಚಿತ್ರಸಂತೆಯನ್ನು ಆನ್‌ಲೈನ್ ವೇದಿಕೆ ಮೂಲಕವೇ ಆಯೋಜಿಸಲು ಕರ್ನಾಟಕ ಚಿತ್ರಕಲಾ ಪರಿಷತ್ತು ಚಿಂತನೆ ನಡೆಸಿದೆ.

ಜನವರಿ ತಿಂಗಳಲ್ಲಿ ಒಂದು ದಿನ ಕುಮಾರಕೃಪಾ ರಸ್ತೆಯಲ್ಲಿ ಭೌತಿಕ ಪ್ರದರ್ಶನ ಆಯೋಜಿಸಲು ಪರಿಷತ್ತು ಯೋಜನೆ ರೂಪಿಸಿತ್ತು. ಆದರೆ, ನಗರದಲ್ಲಿ ಓಮೈಕ್ರಾನ್ ಪ್ರಕರಣಗಳ ಪತ್ತೆ ಹಾಗೂ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳದಿಂದ ಭೌತಿಕ ಆಯೋಜನೆಗೆ ಸರ್ಕಾರ ಅನುಮತಿ ನೀಡಿಲ್ಲ. ಕೋವಿಡ್ ನಿಯಂತ್ರಣಕ್ಕೆ ಬರದಿದ್ದರೆ ಫೆಬ್ರುವರಿ ತಿಂಗಳಲ್ಲಿ ಆನ್‌ಲೈನ್ ಮೂಲಕವೇ ಚಿತ್ರಸಂತೆ ನಡೆಸಲು ಪರಿಷತ್ತು ಮುಂದಾಗಿದೆ.

ಕಳೆದ ವರ್ಷ ಕೋವಿಡ್ ಕಾರಣ 18ನೇ ಚಿತ್ರಸಂತೆಯನ್ನು ಆನ್‌ಲೈನ್‌ಗೆ ಸೀಮಿತಗೊಳಿಸಲಾಗಿತ್ತು. ಪರಿಷತ್ತಿನ ವೆಬ್ ಪೋರ್ಟಲ್ ಜತೆಗೆ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್‌ಗಳಲ್ಲೂ ಕಲಾಕೃತಿಗಳ ವೀಕ್ಷಣೆಗೆ ಅವಕಾಶ ನೀಡಲಾಗಿತ್ತು. ಕಲಾವಿದರನ್ನು ಸಂಪರ್ಕಿಸಿ, ಕಲಾಕೃತಿಗಳನ್ನು ಖರೀದಿಸುವ ವ್ಯವಸ್ಥೆ ರೂಪಿಸಲಾಗಿತ್ತು. ಈ ಬಾರಿಯೂ ಅದೇ ವ್ಯವಸ್ಥೆ ರೂಪಿಸಲು ಪರಿಷತ್ತು ಯೋಜನೆ ರೂಪಿಸುತ್ತಿದೆ.

850ಅರ್ಜಿಗಳು: ಈಬಾರಿಯ ಚಿತ್ರಸಂತೆಯಲ್ಲಿ ಕಲಾಕೃತಿಗಳ ಪ್ರದರ್ಶನಕ್ಕೆ ಸಂಬಂಧಿಸಿದಂತೆ 2021ರ ನವೆಂಬರ್ ತಿಂಗಳಲ್ಲಿಯೇ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿತ್ತು. ಈವರೆಗೆ 850 ಅರ್ಜಿಗಳು ಸಲ್ಲಿಕೆಯಾಗಿವೆ. ರಾಜಸ್ಥಾನ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರೂ ಅರ್ಜಿ ಸಲ್ಲಿಸಿದ್ದಾರೆ. ಕಳೆದ ಬಾರಿ 1,100 ಕಲಾವಿದರು ಭಾಗವಹಿಸಿದ್ದರು. ಪ್ರತಿಯೊಬ್ಬರಿಗೂ ಪ್ರತ್ಯೇಕ ಆನ್‌ಲೈನ್ ಪುಟಗಳನ್ನು ಒದಗಿಸಲಾಗಿತ್ತು.

'ಈ ಬಾರಿ ಭೌತಿಕವಾಗಿ ಆಯೋಜಿಸಲು ಯೋಜನೆ ರೂಪಿಸಲಾಗಿತ್ತು. ಆದರೆ, ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಹೀಗಾಗಿ, ಈ ಬಾರಿಯೂ ಆನ್‌ಲೈನ್ ಮೂಲಕವೇ ಎರಡು ತಿಂಗಳು ನಡೆಸಬೇಕಾಗುತ್ತದೆ. ಈ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ' ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಪ್ರೊ.ಕೆ.ಎಸ್. ಅಪ್ಪಾಜಯ್ಯ ತಿಳಿಸಿದರು.

ಎಸ್‌ಟಿಸಿಎಲ್‌ಗೆ ವಂಚನೆ: ಹಾಂಕಾಂಗ್ ಕಂಪನಿ ನಿರ್ದೇಶಕನ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವಿದೇಶಿ ವ್ಯಾಪಾರ ಚಟುವಟಿಕೆಯಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಸ್ಪೈಸಸ್ ಟ್ರೇಡಿಂಗ್ ಕಾರ್ಪೋರೇಷನ್ ಲಿಮಿಟೆಡ್‌ಗೆ (ಎಸ್‌ಟಿಸಿಎಲ್) ₹ 1,841 ಕೋಟಿ ವಂಚಿಸಿದ್ದ ಆರೋಪದ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಹಾಂಕಾಂಗ್‌ನ ಹೊಯ್‌ವಿಲಾಯಿ ಜಿನ್ಸು ಕಂಪನಿಯ ನಿರ್ದೇಶಕ ಅನೂಪ್ ನಾಗರಾಳ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ.

ವಿದೇಶಿ ವ್ಯಾಪಾರ ನಡೆಸಲು ಎಸ್‌ಟಿಸಿಎಲ್ ಜತೆಗೆ ಎಫ್‌ಎಂಪಿಎಲ್ ಮತ್ತು ಎಫ್‌ಇಐಪಿಎಲ್ ಎಂಬ ಕಂಪನಿಗಳು ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡಿದ್ದವು. ಈ ಕಂಪನಿಗಳ ಅಧ್ಯಕ್ಷ ನವೀನ್ ಶ್ರೀರಾಂ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುಧೀರ್ ಶ್ರೀರಾಂ ಬ್ಯಾಂಕ್ ಖಾತರಿ ಒದಗಿಸಿದ್ದರು. ಆದರೆ, ನಂತರದಲ್ಲಿ ಎಸ್‌ಟಿಸಿಎಲ್‌ಗೆ ಬಾಕಿ ಪಾವತಿ ಆಗಿರಲಿಲ್ಲ. ಸಾಲ ಖಾತರಿ ಪತ್ರಗಳು ನಗದಾಗದೇ ವಾಪಸ್ ಆಗಿದ್ದವು.

ಎಸ್‌ಟಿಸಿಎಲ್‌ಗೆ ₹ 1,841 ಕೋಟಿ ವಂಚಿಸಿದ ಆರೋಪದಡಿ 2009ರಲ್ಲಿ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅದನ್ನು ಆಧರಿಸಿ ಇ.ಡಿ ಅಧಿಕಾರಿಗಳು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಪ್ರಕರಣ ದಾಖಲಿಸಿದ್ದರು. 2019ರ ಮಾರ್ಚ್ 1ರಂದು ಪಿಎಂಎಲ್‌ಎ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿಯನ್ನೂ ಸಲ್ಲಿಸಿದ್ದರು.

ತ್ರಿಪಕ್ಷೀಯ ಒಪ್ಪಂದದಲ್ಲಿ ಹಾಂಕಾಂಗ್‌ನ ಹೊಯ್‌ವಿಲಾಯಿ ಜಿನ್ಸು ಕಂಪನಿ ಖರೀದಿದಾರನಾಗಿತ್ತು. ಈ ಕಂಪನಿಯ ನಿರ್ದೇಶಕ ಅನೂಪ್ ನಾಗರಾಳ್ ಅವರನ್ನೂ ಆರೋಪಿಯನ್ನಾಗಿ ಹೆಸರಿಸಿ ಇ.ಡಿ ದೂರು ಸಲ್ಲಿಸಿತ್ತು. 2021ರ ಜುಲೈ 28ರಂದು ಅವರ ವಿರುದ್ಧ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿತ್ತು.

'2021ರ ಡಿಸೆಂಬರ್‌ನಲ್ಲಿ ಭಾರತಕ್ಕೆ ವಾಪಸಾದ ಅನೂಪ್ ಅವರನ್ನು ಸಿಬಿಐ ಬಂಧಿಸಿತ್ತು. ಜಾಮೀನು ಪಡೆದು ಬಿಡುಗಡೆ ಆದ ಬಳಿಕ ಪಿಎಂಎಲ್‌ಎ ಕಾಯ್ದೆ ವಿಶೇಷ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗಿರಲಿಲ್ಲ. ಅವರ ವಿರುದ್ಧ ನ್ಯಾಯಾಲಯ ಡಿಸೆಂಬರ್ 31ರಂದು ವಾರೆಂಟ್ ಜಾರಿಗೊಳಿಸಿತ್ತು' ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ನ್ಯಾಯಾಲಯದ ವಾರೆಂಟ್ ಆಧಾರದಲ್ಲಿ ಅನೂಪ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಜನವರಿ 17ರವರೆಗೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮಾರಾಟ ಮಳಿಗೆಗೆ ನುಗ್ಗಿ ಕೃತ್ಯ ಎಸಗಿದ್ದ ಆರೋಪಿ

₹ 2 ಕೋಟಿ ಮೌಲ್ಯದ ಗಡಿಯಾರ ಕದ್ದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ 100 ಅಡಿ ರಸ್ತೆಯಲ್ಲಿರುವ ಕೈ ಗಡಿಯಾರ ಮಾರಾಟ ಮಳಿಗೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿ ಅಖ್ತರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ಅಖ್ತರ್, ಅಪರಾಧ ಹಿನ್ನೆಲೆಯುಳ್ಳವ. ಬಿಹಾರದ ಸ್ನೇಹಿತರ ಗುಂಪು ಕಟ್ಟಿಕೊಂಡು ಮಳಿಗೆಯಲ್ಲಿ ಕಳ್ಳತನ ಮಾಡಿದ್ದ. ಆತನಿಂದ ₹ 2 ಕೋಟಿ ಮೌಲ್ಯದ ಕೈ ಗಡಿಯಾರಗಳನ್ನು ಜಪ್ತಿ ಮಾಡಲಾಗಿದೆ. ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಗಮ್ಮನಪಾಳ್ಯದಲ್ಲಿ ನೆಲೆಸಿದ್ದ ಆರೋಪಿಗಳು, ಕೈ ಗಡಿಯಾರ ಮಾರಾಟ ಮಳಿಗೆ ಎದುರು ಹಲವು ಬಾರಿ ಸುತ್ತಾಡಿದ್ದರು. ಮಳಿಗೆ ತೆರೆಯುವ ಹಾಗೂ ಬಂದ್ ಮಾಡುವ ಸಮಯವನ್ನು ತಿಳಿದುಕೊಂಡಿದ್ದರು. ಗ್ರಾಹಕರ ಸೋಗಿನಲ್ಲಿ ಮಳಿಗೆಗೆ ಹೋಗಿ ಬಂದು, ಕಳ್ಳತನ ಹೇಗೆ ಮಾಡಬೇಕೆಂದು ಸಂಚು ರೂಪಿಸಿದ್ದರು.'

'ಜ. 4ರಂದು ರಾತ್ರಿ ಮಳಿಗೆಯ ಬೀಗ ಮುರಿದು ಒಳನುಗ್ಗಿದ್ದ ಆರೋಪಿಗಳು, ₹ 2 ಕೋಟಿ ರೂ. ಮೌಲ್ಯದ ದುಬಾರಿ ಕೈ ಗಡಿಯಾರಗಳನ್ನು ಕದ್ದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಮಳಿಗೆ ಮಾಲೀಕರು ದೂರು ನೀಡಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಇತರೆ ಪುರಾವೆ ಆಧರಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಯಿಂದ ಜಪ್ತಿ ಮಾಡಲಾದ ಕೈ ಗಡಿಯಾರಗಳು

ಹತ್ತು ವರ್ಷದ ಹಿಂದೆಯೂ ಕೃತ್ಯ: 'ಬಂಧಿತ ಅಖ್ತರ್ ಹಾಗೂ ತಲೆಮರೆಸಿಕೊಂಡಿರುವ ನಾಲ್ವರು ಆರೋಪಿಗಳು, 2012ರಲ್ಲೂ ನಗರಕ್ಕೆ ಬಂದಿದ್ದರು. ಮೊಬೈಲ್ ಹಾಗೂ ಕ್ಯಾಮೆರಾ ಮಾರಾಟ ಮಳಿಗೆಯಲ್ಲಿ ಕಳ್ಳತನ ಎಸಗಿ ಪರಾರಿಯಾಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳ ಕೃತ್ಯದ ಬಗ್ಗೆ 2012ರಲ್ಲಿ ಕೋರಮಂಗಲ, ಅಶೋಕನಗರ ಹಾಗೂ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು. ಆದರೆ, ಆರೋಪಿಗಳು 10 ವರ್ಷಗಳಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದರು. ಅವರ ಬಗ್ಗೆ ಯಾವುದೇ ಸುಳಿವು ಇರಲಿಲ್ಲ.'

'ಜ. 4ರಂದು ಕೈ ಗಡಿಯಾರಗಳನ್ನು ಕಳ್ಳತನ ಮಾಡಿ ಆರೋಪಿ ಸಿಕ್ಕಿಬಿದ್ದಿದ್ದಾನೆ. ಹಳೇ ಪ್ರಕರಣಗಳ ಬಗ್ಗೆಯೂ ಆಯಾ ಠಾಣೆಗಳಿಂದ ಮಾಹಿತಿ ಪಡೆಯಲಾಗಿದೆ. ಉಳಿದ ಆರೋಪಿಗಳ ಪತ್ತೆಗೂ ವಿಶೇಷ ತಂಡ ರಚಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ನೇಪಾಳದಲ್ಲಿ ಮಾರಾಟ: 'ನಗರದಲ್ಲಿ ಕದ್ದುಕೊಂಡು ಹೋಗಿದ್ದ ಮೊಬೈಲ್, ಕ್ಯಾಮೆರಾ ಹಾಗೂ ಕೈ ಗಡಿಯಾರಗಳನ್ನು ಆರೋಪಿಗಳು ನೇಪಾಳದಲ್ಲಿ ಮಾರುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳಿಂದಲೇ ಸುಲಿಗೆ ಪೊಲೀಸರಿಬ್ಬರ ಅಮಾನತು

ಬೆಂಗಳೂರು: ರಕ್ತ ಚಂದನದ ತುಂಡುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದವರನ್ನೇ ಸುಲಿಗೆ ಮಾಡಿದ್ದ ಆರೋಪದಡಿ ನಗರದ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಮಹದೇವಪುರ ಠಾಣೆಯ ಮಮ್ತೇಶ್ ಗೌಡ ಹಾಗೂ ಗಿರಿನಗರ ಠಾಣೆಯ ಮೋಹನ್ ಅಮಾನತಾದ ಹೆಡ್ ಕಾನ್‌ಸ್ಟೆಬಲ್‌ಗಳು. ನಗರದ ಸಿಸಿಬಿಯಲ್ಲಿ ಕೆಲಸ ಮಾಡುತ್ತಿದ್ದ ಇವರಿಬ್ಬರನ್ನು ವಾರದ ಹಿಂದಷ್ಟೇ ಠಾಣೆಗಳ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಅವರಿಬ್ಬರನ್ನು ಅಮಾನತು ಮಾಡಿ ಕಮಿಷನರ್ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹೆಡ್ ಕಾನ್‌ಸ್ಟೆಬಲ್‌ಗಳ ಕೃತ್ಯದ ಬಗ್ಗೆ ಹೊಸಕೋಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತನಿಖೆ ನಡೆಸಿದ್ದ ಅಲ್ಲಿಯ ಪೊಲೀಸರು, ಕಮಿಷನರ್ ಅವರಿಗೆ ಇತ್ತೀಚೆಗೆ ವರದಿ ನೀಡಿದ್ದರು. ರಕ್ತ ಚಂದನ ಸಾಗಿಸುತ್ತಿದ್ದ ಆರೋಪಿಗಳನ್ನೇ ಹೆಡ್ ಕಾನ್‌ಸ್ಟೆಬಲ್‌ಗಳು ಸುಲಿಗೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ಸಿಸಿಬಿ ಹೆಸರಿನಲ್ಲಿ ದಾಳಿ: 'ಬೆಂಗಳೂರು ಸಿಸಿಬಿಯಲ್ಲಿ ಕೆಲಸ ಮಾಡುತ್ತಿದ್ದ ಹೆಡ್ ಕಾನ್‌ಸ್ಟೆಬಲ್‌ಗಳಿಗೆ, ಹೊಸಕೋಟೆ ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ರಕ್ತ ಚಂದನದ ಅಕ್ರಮ ಸಾಗಣೆ ಬಗ್ಗೆ ಮಾಹಿತಿ ಇತ್ತು. ಅಕ್ರಮವಾಗಿ ಹಣ ಸಂಪಾದಿಸಲು ಮುಂದಾಗಿದ್ದ ಹೆಡ್ ಕಾನ್‌ಸ್ಟೆಬಲ್‌ಗಳು, ಸಿಸಿಬಿ ಹೆಸರಿನಲ್ಲೇ ದಾಳಿ ಮಾಡಿ ಕೃತ್ಯ ಎಸಗಿದ್ದರೆಂಬ ಸಂಗತಿ ವರದಿಯಲ್ಲಿದೆ' ಎಂದು ಅಧಿಕಾರಿ ವಿವರಿಸಿದರು.

'ಆಂಧ್ರಪ್ರದೇಶದಿಂದ ರಕ್ತ ಚಂದನದ ತುಂಡುಗಳನ್ನು ನಗರಕ್ಕೆ ಅಕ್ರಮವಾಗಿ ತರಲಾಗುತ್ತಿತ್ತು. ಈ ಬಗ್ಗೆ ತಿಳಿದುಕೊಂಡಿದ್ದ ಹೆಡ್ ಕಾನ್‌ಸ್ಟೆಬಲ್‌ಗಳು, 2021ರ ಡಿಸೆಂಬರ್ 15ರಂದು ಹೊಸಕೋಟೆಯ ಸಂತೇಗೇಟ್ ಬಳಿ ವಾಹನ ಅಡ್ಡಗಟ್ಟಿದ್ದರು. ಚಾಲಕನಿಗೆ ಬಂಧಿಸುವುದಾಗಿ ಬೆದರಿಸಿದ್ದರು. ನಂತರ, ವಾಹನ ಸಮೇತ ಆತನನ್ನು ಅಪಹರಿಸಿದ್ದರು. ನಿರ್ಜನ ಪ್ರದೇಶವೊಂದಕ್ಕೆ ಚಾಲಕನನ್ನು ಕರೆದೊಯ್ದು, ₹ 13 ಲಕ್ಷ ಮೌಲ್ಯದ ರಕ್ತ ಚಂದನದ ತುಂಡುಗಳನ್ನು ಸುಲಿಗೆ ಮಾಡಿದ್ದರು' ಎಂದೂ ಅಧಿಕಾರಿ ತಿಳಿಸಿದರು.

'ಸ್ವಿಗ್ಗಿ' ಬಾಯ್ ಸುಲಿಗೆ: ಆರೋಪಿ ಬಂಧನ

ಬೆಂಗಳೂರು: 'ಸ್ವಿಗ್ಗಿ' ಆ್ಯಪ್ ಮೂಲಕ ಆಹಾರ ಪೂರೈಸುವ ಡೆಲಿವರಿ ಬಾಯ್ ಯೊಬ್ಬರನ್ನು ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಗುನ್ನಾಲ್ (25) ಎಂಬಾತನನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಗ್ರಾಹಕರೊಬ್ಬರಿಗೆ ಆಹಾರದ ಪೊಟ್ಟಣ ಕೊಟ್ಟು ಡೆಲಿವರಿ ಬಾಯ್ ವಾಪಸು ಮನೆಗೆ ಹೊರಟಿದ್ದಾಗ ಅಡ್ಡಗಟ್ಟಿ ಸುಲಿಗೆ ಮಾಡಲಾಗಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಸುಲಿಗೆ ಮಾಡಿದ್ದ ದ್ವಿಚಕ್ರ ವಾಹನ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ಚಂದ್ರು ತಲೆಮರೆಸಿಕೊಂಡಿದ್ದಾನೆ' ಎಂದೂ ತಿಳಿಸಿದರು.

ಹಿಂಬಾಲಿಸಿ ಕೃತ್ಯ: 'ಅಪರಾಧ ಹಿನ್ನೆಲೆಯುಳ್ಳ ಗುನ್ನಾಲ್ ಹಾಗೂ ಚಂದ್ರು, ಸ್ವಿಗ್ಗಿ ಬಾಯ್ ಅವರನ್ನು ಹಿಂಬಾಲಿಸಿದ್ದರು. ಅವರ ಬಳಿ ಹಣವಿರಬಹುದೆಂದು ತಿಳಿದು, ಅದನ್ನು ಕಿತ್ತುಕೊಳ್ಳಲು ದ್ವಿಚಕ್ರ ವಾಹನ ಅಡ್ಡಗಟ್ಟಿದ್ದರು. ಹಣವಿಲ್ಲದಿದ್ದಾಗ ವಾಹನ ಹಾಗೂ ಮೊಬೈಲ್ ಸುಲಿಗೆ ಮಾಡಿಕೊಂಡು ಹೋಗಿದ್ದರು' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ವೈಕುಂಠ ಏಕಾದಶಿ ಪ್ರಯುಕ್ತ 'ತಿರುಪತಿ ಗಿರಿವಾಸ ನಮೋ ವೆಂಕಟೇಶ' ಧ್ವನಿಸುರುಳಿ ಬಿಡುಗಡೆ: ಕಣ್ಣನ್, ಅತಿಥಿಗಳು– ನಾಗರಾಜ್, ಬೆಳಗೆರೆ ಗೌರಿ ನಾಗರಾಜ್, ವೀಣಾ ಸುರೇಶ್, ನಿರ್ಮಾಣ ಮತ್ತು ಆಯೋಜನೆ–ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ–ತಿರುಪತಿ ತಿರುಮಲ ದೇವಾಲಯ, ಜೆ.ಪಿ.ನಗರ 1ನೇ ಹಂತ, ಬೆಳಿಗ್ಗೆ 10

'ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಭವಿಷ್ಯದ ಡಿಜಿಟಲ್ ಉದ್ಯೋಗಾವಕಾಶಗಳು' ಕಾರ್ಯಕ್ರಮ ಅನುಷ್ಠಾನ ಸಂಬಂಧ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ (ಡಿಸಿಟಿಇ) ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ನಡುವೆ ಒಪ್ಪಂದ: ಅತಿಥಿಗಳು–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಟ್ಯಾಲೆನ್ಸಿಯಾ ಗ್ಲೋಬಲ್ ಸಿಇಒ ಎಸ್. ಸುಬ್ರಮಣಿಯನ್, ಕೆಡಿಇಎಂ ಮುಖ್ಯಸ್ಥ ಕೆ.ವಿ.ನಾಯ್ಡು, ಐಟಿಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪಿ.ಪ್ರದೀಪ್, ಸ್ಥಳ–ಕೊಠಡಿ ಸಂಖ್ಯೆ 334, ಸಮಾವೇಶ ಸಭಾಂಗಣ, 3ನೇ ಮಹಡಿ, ವಿಧಾನಸೌಧ, ಬೆಳಿಗ್ಗೆ 11

ಸಂಕ್ರಾಂತಿ ಅಂಗವಾಗಿ ವೃದ್ಧರಿಗೆ ಹಣ್ಣು, ವಸ್ತ್ರ, ಹೊದಿಕೆ ವಿತರಣೆ: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಸ್ಥಳ–ಸಾಂತ್ವಾನ ಮಹಿಳಾ ಅಭಿವೃದ್ಧಿ ಸಂಸ್ಥೆಯ ವೃದ್ಧಾಶ್ರಮ, ಅದಿತ್ಯನಗರ, ಜೆ.ಪಿ.ನಗರ 8ನೇ ಹಂತ, ಬೆಳಿಗ್ಗೆ 11.30

'ಕರ್ನಾಟಕ ಪತ್ರಕರ್ತರ ಸಹಕಾರ ಸಂಘ'ದ ಕ್ಯಾಲೆಂಡರ್ ಬಿಡುಗಡೆ: ಶಾಸಕ ಜಿ.ಟಿ.ದೇವೇಗೌಡ, ಸ್ಥಳ–ಸಂಘದ ಕಚೇರಿ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11.30

ಕರ್ನಾಟಕ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಸಮಾರೋಪ: ಅತಿಥಿ–ಸಚಿವ ಆರಗ ಜ್ಞಾನೇಂದ್ರ, ಬಹುಮಾನ ವಿತರಣೆ–ಪ್ರಪುಲ್ಲಾ ಆರಗ ಜ್ಞಾನೇಂದ್ರ, ಸ್ಥಳ–ಕೆಎಸ್‌ಆರ್‌ಪಿ ಕ್ರೀಡಾಂಗಣ, ಕೋರಮಂಗಲ, ಸಂಜೆ 4.30

'ಜಾನಪದದಲ್ಲಿ ಮಹಿಳೆಯರ ಪಾತ್ರ' ಉಪನ್ಯಾಸ: ವೇದಾ ಮಂಜುನಾಥ್ ಬೆಳಗೆರೆ, ಅಧ್ಯಕ್ಷತೆ–ಜಗದೀಶ್ ರೆಡ್ಡಿ, ಅತಿಥಿಗಳು–ಎಂ.ಸಿ.ನರೇಂದ್ರ, ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ಸಿಜಿಕೆ ರಾಷ್ಟ್ರೀಯ ರಂಗೋತ್ಸವ: ಸಂಜೆ 5ಕ್ಕೆ ರಂಗ ಸಂವಾದ:ಅಧ್ಯಕ್ಷತೆ–ಕೆ.ವೈ. ನಾರಾಯಣಸ್ವಾಮಿ, ಅತಿಥಿಗಳು– ಜೋಸೆಫ್, ಶಶಿಧರ್ ಭಾರಿಘಾಟ್, ಅರ್ಚನಾ ಶ್ಯಾಂ, ಸಿ.ಕೆ.ಗುಂಡಣ್ಣ, ಡಿ.ಎಸ್.ಚೌಗಲೆ, ಸಂಜೆ 7ಕ್ಕೆ 'ಮಧುರ ಮಂಡೋದರಿ' ಏಕವ್ಯಕ್ತಿ ನಾಟಕ ಪ್ರದರ್ಶನ, ರಚನೆ–ಪ್ರಸನ್ನ ಕೆರಗೋಡು, ನಿರ್ದೇಶನ–ಮಧು ಮಳವಳ್ಳಿ, ತಂಡ–ರಂಗಬಂಡಿ ನಿರಂತರ ಪಯಣ, 'ಚಿಟ್ಟೆ' ನಾಟಕ ಖ್ಯಾತಿಯ ಗೋಕುಲ ಸಹೃದಯ ಅವರಿಗೆ ಸನ್ಮಾನ, ಆಯೋಜನೆ–ರಂಗನಿರಂತರ, ಸ್ಥಳ–ವಿ.ಚನ್ನಪ್ಪ ವೇದಿಕೆ, ನಯನ ಸಭಾಂಗಣ

ಲಸಿಕೆ: 4 ಕೋಟಿ ದಾಟಿದ 2ನೇ ಡೋಸ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದವರ ಸಂಖ್ಯೆ 4 ಕೋಟಿ ಗಡಿ (4.02 ಕೋಟಿ) ದಾಟಿದೆ.

ಸದ್ಯ 7 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಬುಧವಾರ 4.04 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ರಾಜ್ಯದಲ್ಲಿ ವಿತರಿಸಲಾಗಿದೆ. ಈವರೆಗೆ 5.03 ಕೋಟಿ ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560 027.

ಸಂ: ಕರಾಸ/ಕೇಕ/ಕಾಇ/ಡಿಬಿ–3/1039/2021–22 ದಿನಾಂಕ: 12.01.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ: 01 ರಿಂದ 11/2021–22

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಅರ್ಹ ಏಜನ್ಸಿಗಳಿಂದ ಈ ಕೆಳಕಂಡ ಉದ್ದೇಶಿತ ಖಾಸಗೀ ಸಹಭಾಗಿತ್ವದ ಯೋಜನೆಗಳಿಗೆ ತಾಂತ್ರಿಕ ಸಮಾಲೋಚನೆ ಒದಗಿಸುವ ಕೆಲಸಗಳಿಗೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತರು ಸದರಿ ಟೆಂಡರ್‌ನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ **https://eproc.karnataka.gov.in** ರಲ್ಲಿ ದಿನಾಂಕ: **14.01.2022** ರಿಂದ ಪಡೆಯಬಹುದಾಗಿರುತ್ತದೆ. ಪ್ರೀಬಿಡ್ ಮೀಟಿಂಗ್ ಅನ್ನು ದಿನಾಂಕ **21.01.2022** ರಂದು ಬೆಳಿಗ್ಗೆ **11:30**ಕ್ಕೆ ಆಯೋಜಿಸಲಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ: **29.01.2022** ಕೊನೆಯ ದಿನಾಂಕವಾಗಿರುತ್ತದೆ.

Sl. No.	Name of Work	Earnest Money Deposit (In Rs. Lakhs)
1	Feasibility Studies and Transaction Advisory services for Construction of Bus Station, MLCP and Commercial Establishments at Tumakuru City, Karnataka in PPP mode.	1.00
2	Feasibility Studies and Transaction Advisory services for Construction of Bus Depots and Commercial Establishments at Deepanjalinagara, Bengaluru, Karnataka in PPP mode.	1.00
3	Feasibility Studies and Transaction Advisory services for Construction of Office space (Software park) and Commercial Establishments at Peenya, Bengaluru, Karnataka in PPP mode.	1.00
4	Feasibility Studies and Transaction Advisory services for Construction of Office space (Software park), Convention center and Commercial Establishments at Shanthinagar, Bengaluru, Karnataka in PPP mode.	1.00
5	Feasibility Studies and Transaction Advisory services for Construction of Office space and Commercial Establishments at Wilson Garden, Bengaluru, Karnataka in PPP mode.	1.00
6	Feasibility Studies and Transaction Advisory services for Construction of Office space and Commercial Establishments at K.H. Road, Shanthinagar, Bengaluru, Karnataka in PPP mode.	1.00
7	Feasibility Studies and Transaction Advisory services for Construction of Commercial Establishments at Bannimantapa, Mysuru, Karnataka in PPP mode.	1.00
8	Feasibility Studies and Transaction Advisory services for Construction of Commercial Establishments at Old Bus station, Nanjanagudu, Karnataka in PPP mode.	1.00
9	Feasibility Studies and Transaction Advisory services for Construction of Commercial Establishments at Bus station, Arakalagudu, Karnataka in PPP mode.	1.00
10	Feasibility Studies and Transaction Advisory services for Construction of Commercial Establishments at Bus station, Arasikere, Karnataka in PPP mode.	1.00
11	Feasibility Studies and Transaction Advisory services for Construction of Commercial Establishments at land adjacent to Bus station, Chikkamagaluru, Karnataka in PPP mode.	1.00

ಹೆಚ್ಚಿನ ವಿವರಗಳಿಗಾಗಿ ಮುಖ್ಯ ಕಾಮಗಾರಿ ಅಭಿಯಂತರರ ಕಛೇರಿ, ಕ.ರಾ.ರ.ಸಾ.ನಿಗಮ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು ಇಲ್ಲ ಕೆಲಸದ ದಿನಗಳಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–, ಮುಖ್ಯ ಕಾಮಗಾರಿ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು

ವಾಸಾಸಂಇ/ಉನಿನ/ಎಲ್‌ಸಿ/2834/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯಕ್ಷಗಾನ ಅಕಾಡೆಮಿಗೆ ಜಿ.ಎಲ್ ಹೆಗಡೆ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಯಕ್ಷಗಾನ ಅಕಾಡೆಮಿಗೆ ಡಾ.ಜಿ.ಎಲ್. ಹೆಗಡೆ ಮಣಕಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.


ಡಾ.ಜಿ.ಎಲ್ ಹೆಗಡೆ ಮಣಕಿ

ಪ್ರೊ.ಎಂ.ಎ. ಹೆಗಡೆ ಅವರ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನ, ಒಂಬತ್ತು ತಿಂಗಳಿಂದ ಖಾಲಿಯಿತ್ತು.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಮಣಕಿಯ ಜಿ.ಎಲ್. ಹೆಗಡೆ ಅವರು, ಯಕ್ಷಗಾನದ ವಿವಿಧ ವಿಭಾಗಗಳಲ್ಲಿ ಕೊಡುಗೆ ನೀಡಿದ್ದಾರೆ. ಅವರು ಕುಮಟಾದ ಬಾಳಿಗಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಕುಮಟಾ ಯಕ್ಷಗಾನ ಸಂಶೋಧನಾ ಕೇಂದ್ರದ ಸಂಸ್ಥಾಪಕ ನಿರ್ದೇಶಕರಾಗಿರುವ ಅವರು, 'ಅಂಧಕಾಸುರ ವಧೆ' ಮತ್ತು 'ಭಾಗವತ ಪಾರಮ್ಯ' ಎಂಬ ಯಕ್ಷಗಾನ ಪ್ರಸಂಗ ರಚಿಸಿದ್ದಾರೆ.

ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸಿ, ನಿರ್ದೇಶಿಸಿದ್ದಾರೆ. ಕಲಾವಿದರೂ ಆಗಿರುವ ಅವರು, 50 ವರ್ಷಗಳಿಂದ ಬಯಲಾಟ ಮೇಳಗಳಲ್ಲಿ ಪಾತ್ರಧಾರಿಯಾಗಿ ಅಭಿನಯಿಸುತ್ತಿದ್ದಾರೆ. ಕೌರವ, ಭೀಮ, ಜರಾಸಂಧ ಸೇರಿದಂತೆ ವಿವಿಧ ಪೌರಾಣಿಕ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ದಾರಿ ಯಾವುದಯ್ಯಾ ವೈಕುಂಠಕೆ...

● ತನ್ಮಯಿ ಪ್ರೇಮ್‌ಕುಮಾರ್

'ಇಷ್ಟು ದಿನ ಈ ವೈಕುಂಠ, ಎಷ್ಟು ದೂರವೋ ಎನ್ನುತ್ತಲಿದ್ದೆ; ದೃಷ್ಟಿಯಿಂದಲಿ ನಾನು ಕಂಡೆ, ಸೃಷ್ಟಿಗೀಶನೆ ಶ್ರೀರಂಗಶಾಯಿ' – ಕನಕದಾಸರು ಭಕ್ತಿಯ ಪರಾಕಾಷ್ಠೆಯಲ್ಲಿ ವೈಕುಂಠದ ಬಗ್ಗೆ ಹೇಳುತ್ತಾರೆ. ವೈಕುಂಠ, ವಿಷ್ಣುವಿನ ಆವಾಸಸ್ಥಾನ. ಎಲ್ಲಿ ಯಾವ ಕೊರತೆಗಳ ಸಣ್ಣ ಸುಳಿವೂ ಇಲ್ಲವೋ, ಎಲ್ಲಿ ಎಲ್ಲವೂ ಅತ್ಯಂತ ಸಮೃದ್ಧಿಯಿಂದ ಕೂಡಿರುತ್ತವೆಯೋ ಅದೇ ವೈಕುಂಠ.

ವೈಕುಂಠವನ್ನು ಪ್ರವೇಶಿಸುವ ಎಲ್ಲ ಜೀವಗಳೂ ಸ್ವತಃ ನಾರಾಯಣನ ಸ್ವರೂಪವನ್ನು ಪಡೆಯುತ್ತಾರೆ. ಅಲ್ಲಿ ಸೃಷ್ಟಿ–ಸೃಷ್ಟಿಕರ್ತ, ದೇವ–ಸೇವಕ – ಯಾವ ಭೇದವೂ ಇರುವುದಿಲ್ಲ ಎನ್ನುತ್ತದೆ, ಶ್ರೀಮದ್ಭಾಗವತ. ಆಚಾರ್ಯ ರಾಮಾನುಜಾಚಾರ್ಯರು ಹೇಳುವಂತೆ ವೈಕುಂಠವೆಂಬುದು ಪರಮಪದ; ಇಹಪರಲೋಕಗಳಲ್ಲಿ ಶ್ರೇಷ್ಠವಾದುದು; ದಿವ್ಯವಾದುದು, ನಿತ್ಯಚಿರಂತನವಾದ ಪುಣ್ಯಸ್ಥಳ. ಸ್ವತಃ ಶ್ರೀವಿಷ್ಣು ಲಕ್ಷ್ಮೀ ಸಮೇತನಾಗಿ ವೈಕುಂಠದಲ್ಲಿ ವಾಸಿಸುತ್ತಾನೆ. ಜಯವಿಜಯರು ಅದರ ದ್ವಾರವನ್ನು ಕಾಯುತ್ತಾರೆ ಎಂಬುದು ನಮ್ಮ ಸಂಸ್ಕೃತಿಯ ನಂಬಿಕೆ. ಅಂತಹ ವೈಕುಂಠದ ದ್ವಾರ ಧನುರ್ಮಾಸದ ಏಕಾದಶಿಯಂದು ತೆರೆಯುತ್ತದೆಯಂತೆ.

ವೆಂಕಟರಮಣ

ಇಂದು ವೈಕುಂಠ ಏಕಾದಶಿ

ಈ ವೈಕುಂಠ ಏಕಾದಶಿಗೆ ಪೌರಾಣಿಕ ಹಿನ್ನೆಲೆಗಳೂ ಇವೆ. ಒಮ್ಮೆ ಭಗವಾನ್ ವಿಷ್ಣುವು ವೈಕುಂಠದ್ವಾರವನ್ನು ಇಬ್ಬರು ಅಸುರರನ್ನು ಕೊಲ್ಲಬೇಕೆಂದು ತೆರೆಯುತ್ತಾನೆ. ಆಗ ಆ ರಾಕ್ಷಸರು ತಮ್ಮ ಕೊನೆಯ ಆಸೆಯನ್ನು ಹೇಳಿಕೊಳ್ಳುತ್ತಾರೆ. ಯಾರು ತಮ್ಮ ಕಥೆಯನ್ನು ಕೇಳಿ, ಶ್ರೀವಿಷ್ಣುವನ್ನು ವೈಕುಂಠದ್ವಾರದ ಮೂಲಕ ನೋಡುತ್ತಾರೋ, ಅವರಿಗೆ ಮುಕ್ತಿ ದೊರೆಯುವಂತೆ ವರ ಬೇಡುತ್ತಾರೆ. ಇದೇ ಕಾರಣಕ್ಕೆ ಅನೇಕ ದೇವಾಲಯಗಳಲ್ಲಿ ವೈಕುಂಠದ ದ್ವಾರದ ಪ್ರತಿಕೃತಿ ಮಾಡಿ ಮಹಾವಿಷ್ಣುವಿನ ದರ್ಶನ ಮಾಡಿಸುವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ.

ದೇವತೆಗಳಿಗೆ ಉಪಟಳವನ್ನು ನೀಡುತ್ತಿದ್ದ ಮುರ ಎಂಬ ರಾಕ್ಷಸನನ್ನು ಸಂಹರಿಸಲು ದೇವತೆಗಳೆಲ್ಲ ಶಿವನ ಬಳಿ ಕೇಳಿಕೊಳ್ಳುತ್ತಾರೆ. ಆಗ ಅವನು 'ವಿಷ್ಣುವು ಲೋಕಪಾಲಕ. ಆದ್ದರಿಂದ ಲೋಕಕಂಟಕನಾದ ಮುರನನ್ನು ಸಂಹರಿಸಲು ವಿಷ್ಣುವೇ ಸರಿ' ಎನ್ನುತ್ತಾನೆ. ದೇವತೆಗಳೆಲ್ಲಾ ವಿಷ್ಣುವಿನ ಬಳಿ ತಮ್ಮ ಅಳಲನ್ನು ತೋಡಿಕೊಂಡಾಗ, ಮುರನನ್ನು ಸಂಹರಿಸಲು ಒಪ್ಪಿ ಅದಕ್ಕಾಗಿ ಹೊಸ ಆಯುಧವೊಂದು ಬೇಕಾದ್ದರಿಂದ, ಹಿಮಾಲಯದ ತಪ್ಪಲಿನ ಬದರಿಕಾಶ್ರಮದ ಹೈಮಾವತಿದೇವಿಯ ಗುಹೆಯಲ್ಲಿ ತಪಸ್ಸಿಗೆ ತೊಡಗುತ್ತಾನೆ. ಆ ಸಂದರ್ಭದಲ್ಲಿ ವಿಷ್ಣುವಿಗೆ ಮುರ ಅಡ್ಡಿಯನ್ನುಂಟುಮಾಡಲಾರಂಭಿಸುತ್ತಾನೆ. ಆಗ ದೇವಿಯು ವಿಷ್ಣುವಿನೊಳಗೆ ಸ್ತ್ರೀಭಾವದ ಜಾಗೃತಿಯನ್ನುಂಟುಮಾಡುತ್ತಾಳೆ. ಆ ಶಕ್ತಿಯ ನೆರವಿನಿಂದ ಮುರನನ್ನು ಸಂಹರಿಸಿದ ಮಹಾವಿಷ್ಣುವು 'ಮುರಾರಿ' ಎಂಬ ಹೆಸರನ್ನು ಪಡೆಯುತ್ತಾನೆ. ದೇವಿ ಮಾಡಿದ ಸಹಾಯಕ್ಕಾಗಿ ಅವಳಿಗೆ 'ಏಕಾದಶಿ' ಎಂಬ ಹೆಸರನ್ನಿಟ್ಟು, ವರವನ್ನು ಕೇಳಲು ಹೇಳುತ್ತಾನೆ. ಏಕಾದಶಿಯಂದು ಉಪವಾಸ ಮಾಡುವ ಎಲ್ಲರಿಗೂ ವೈಕುಂಠದಲ್ಲಿ ಸ್ಥಾನ ಸಿಗಬೇಕೆಂದು ಕೇಳಿಕೊಳ್ಳುತ್ತಾಳೆ, ದೇವಿ. ಹೀಗಾಗಿ ಏಕಾದಶಿಯನ್ನು 'ಮೋಕ್ಷದಾ ಏಕಾದಶಿ', 'ಪುತ್ರದಾ ಏಕಾದಶಿ' ಎಂದೂ ಕರೆಯುತ್ತಾರೆ. ಇದು ಪದ್ಮಪುರಾಣದ ಕಥೆ. ನಮ್ಮೊಳಗಿನ ರಾಜಸಿಕ ತಾಮಸಿಕ ಗುಣಗಳನ್ನು ಮೀರುವ ಸಾತ್ವಿಕತೆಯನ್ನು ರೂಢಿಸಿಕೊಳ್ಳುವ ಸಂಕಲ್ಪಕ್ಕೆ ನೀರೆರೆಯುವ ಮತ್ತು ಮನಸ್ಸು ಬುದ್ಧಿ ಭಾವಗಳನ್ನು ಆ ನಿಟ್ಟಿನಲ್ಲಿ ಉದ್ಬೋಧಕಗೊಳಿಸುವ ವಿಶಿಷ್ಟ ದಿನವೇ ವೈಕುಂಠ ಏಕಾದಶಿ.

ಏಕಾದಶಿಯಂದು ಉಪವಾಸದ ಕ್ರಮವಿದೆ. ಉಪ-ವಾಸವೆಂದರೆ ಹತ್ತಿರದ ವಾಸವೆಂಬ ಅರ್ಥವಿದೆ. ಆತ್ಮೋನ್ನತಿಗಾಗಿ ಭಗವಂತನಿಗೆ ಅಥವಾ ತನಗೆ ತಾನು ಹತ್ತಿರವಾಗುವ ಕ್ರಿಯೆ ಉಪವಾಸ. ಅದು ಯಾವುದೇ ಆಹಾರ ಅಥವಾ ಇತರ ಇಂದ್ರಿಯಗಳ ಪ್ರಲೋಭನೆಗೆ ಒಳಗಾಗದೆ ಏಕಾಗ್ರಚಿತ್ತದಿಂದ ಮಾಡಬೇಕಾದ ಕ್ರಿಯೆ. ದೇಹವನ್ನು ಎಲ್ಲ ಕಲ್ಮಷಗಳಿಂದ ದೂರ ಮಾಡುವುದಕ್ಕಾಗಿ ಉಪವಾಸ ಅತ್ಯಂತ ಸಹಕಾರಿಯಾದುದು. ಅದು ತಮ್ಮ ಮನೋನಿಗ್ರಹದ ಪರೀಕ್ಷೆ ಹಾಗೂ ಸಂಯಮದ ಪಾಠ ಹೇಳುವ ಕಾಲವೂ ಹೌದು. ಹೀಗೆ ಭಕ್ತಿ, ಆಚರಣೆ, ಸಂಪ್ರದಾಯ, ಐತಿಹ್ಯಗಳ ಒಟ್ಟು ಸಮ್ಮಿಲನವಾಗಿ ವೈಕುಂಠ ಏಕಾದಶಿ ನಮ್ಮ ನೆಲದ ಪರಂಪರೆಯಲ್ಲಿ ಬೆರೆತುಹೋಗಿದೆ. ವೈಷ್ಣವ ಸಂಪ್ರದಾಯದಲ್ಲಂತೂ ಅಭಿನ್ನ ಅಂಗವಾಗಿ ನಡೆದುಕೊಂಡುಬಂದಿದೆ. ಅನೇಕ ತೀರ್ಥಕ್ಷೇತ್ರಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ವೈಕುಂಠ ಏಕಾದಶಿಯನ್ನು ಆಚರಿಸುತ್ತಾರೆ.

ವೈಕುಂಠವೆಂಬ ದಿವ್ಯವಾದ ಪ್ರತಿಮೆ; ಭಕ್ತಿಯ ಆಧಾರಸ್ತಂಭವಾಗಿ, ಜೀವನಮೌಲ್ಯಗಳ ಸಂಸ್ಕೃತಿಕೇಂದ್ರ ಎನಿಸಿದೆ. ವೈಕುಂಠವೆಂಬ ಪರಮಪದವನ್ನು ಸ್ಮರಿಸಿಕೊಡುವ 'ವೈಕುಂಠ ಏಕಾದಶಿ'ಯೆಂಬ ದಿವ್ಯಪರ್ವ ನಮ್ಮೊಳಗೆ ಸದ್ಭಕ್ತಿ ಸದ್ವಿಚಾರಗಳನ್ನು ಎಚ್ಚರಗೊಳಿಸಲಿ.

'ಸಂವಿಧಾನ ರಕ್ಷಣೆಗೆ ಗ್ರಾಮಗಳಲ್ಲೂ ಅಭಿಯಾನ'

ಪ್ರಜಾವಾಣಿ ವಾರ್ತೆ

21 ಸದಸ್ಯರ ಸಮಿತಿ ರಚನೆ

ರಾಜ್ಯದಲ್ಲಿ ಸಂವಿಧಾನ ಸುರಕ್ಷಾ ಆಂದೋಲನವನ್ನು ಮುನ್ನಡೆಸುವುದಕ್ಕಾಗಿ ಸಂಚಾಲನಾ ಸಮಿತಿಯನ್ನು ಬುಧವಾರದ ಸಭೆಯಲ್ಲಿ ರಚಿಸಲಾಯಿತು.

ಜ್ಞಾನಪ್ರಕಾಶ ಸ್ವಾಮೀಜಿ, ಬಸವ ನಾಗಿದೇವ ಸ್ವಾಮೀಜಿ, ಡಾ.ಸಿ.ಎಸ್. ದ್ವಾರಕಾನಾಥ್, ಎಸ್‌ಡಿಪಿಐ ಮುಖಂಡ ಮಜೀದ್ ಕೊಡ್ಲಿಪೇಟೆ ಸೇರಿದಂತೆ 21 ಸದಸ್ಯರು ಸಮಿತಿಯಲ್ಲಿದ್ದಾರೆ.

ಬೆಂಗಳೂರು: ಸಂವಿಧಾನವನ್ನು ಮೂಲ ಸ್ವರೂಪದಲ್ಲೇ ಉಳಿಸಿಕೊಳ್ಳುವ ಸಲುವಾಗಿ ದೇಶದ ಎಲ್ಲ ಗ್ರಾಮಗಳಲ್ಲೂ ಜಾಗೃತಿ ಅಭಿಯಾನ ನಡೆಸಬೇಕಿದೆ ಎಂದು ಸಂವಿಧಾನ ಸುರಕ್ಷಾ ಆಂದೋಲನದ ನೇತಾರ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ರಾಜರತ್ನ ಅಂಬೇಡ್ಕರ್ ಹೇಳಿದರು.

ರಾಜರತ್ನ ಅಂಬೇಡ್ಕರ್

ಬುಧವಾರ ಶಾಸಕರ ಭವನದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಸಂವಿಧಾನ ಸುರಕ್ಷಾ ಆಂದೋಲನದ ಕರ್ನಾಟಕ ಘಟಕವನ್ನು ರಚಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೇರೆ ಬೇರೆ ಸ್ವರೂಪದಲ್ಲಿ ಸಂವಿಧಾನಕ್ಕೆ ಧಕ್ಕೆ ಉಂಟುಮಾಡುವ ಪ್ರಯತ್ನಗಳು ನಡೆಯುತ್ತಿವೆ. ಸಂವಿಧಾನದ ಪ್ರಸ್ತಾವನೆಯನ್ನೂ ಬದಲಿಸುವಂತಹ ಪ್ರಯತ್ನಗಳು ನಡೆಯುತ್ತಿವೆ. ಗ್ರಾಮ ಗ್ರಾಮಗಳಲ್ಲೂ ಇದರ ವಿರುದ್ಧ ಪ್ರತಿರೋಧ ಸೃಷ್ಟಿಸಬೇಕಿದೆ' ಎಂದರು.

ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಅಸ್ತಿತ್ವವೇ ಸಂವಿಧಾನದ ಮೇಲೆ ನಿಂತಿದೆ. ಸಂವಿಧಾನಕ್ಕೆ ಧಕ್ಕೆಯಾದರೆ ಈ ಸಮುದಾಯಗಳ ಅಸ್ತಿತ್ವಕ್ಕೆ ಅಪಾಯ ಎದುರಾಗುತ್ತದೆ. ಜನಪರವಾದ ಎಲ್ಲ ಹೋರಾಟಗಳೂ ಸಂವಿಧಾನದ ಬಲದಿಂದಲೇ ಗೆಲುವು ಸಾಧಿಸಿವೆ. ಈಗ ಸಂವಿಧಾನವನ್ನು ಮೂಲ ಸ್ವರೂಪದಲ್ಲೇ ಉಳಿಸಿಕೊಳ್ಳುವುದಕ್ಕೆ ಬಲವಾದ ಹೋರಾಟ ಕಟ್ಟಬೇಕಿದೆ ಎಂದು ಹೇಳಿದರು.

ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ ಮಾತನಾಡಿ, 'ಹಂತ ಹಂತವಾಗಿ ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ. ಸಂವಿಧಾನ ಮತ್ತು ಅದರ ಆಶಯಗಳಿಗೆ ವಿರುದ್ಧವಾದ ಕಾನೂನುಗಳನ್ನು ತರಲಾಗುತ್ತಿದೆ.ಇಂತಹ ಪ್ರಯತ್ನಗಳನ್ನು ಬಲವಾಗಿ ವಿರೋಧಿಸಲೇಬೇಕಾಗಿದೆ' ಎಂದರು.

ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, 'ಸಂವಿಧಾನದ ಬಲದಲ್ಲೇ ಭಾರತ ನಿಂತಿದೆ. ಈಗ ಶಿಕ್ಷಣ, ಉದ್ಯೋಗ ಮತ್ತು ಇತರ ಹಕ್ಕುಗಳನ್ನು ದಮನಿಸುವ ಮೂಲಕ ಬಹುಸಂಖ್ಯಾತ ಜನರನ್ನು ಅಂಚಿಗೆ ತಳ್ಳುವ ಪ್ರಯತ್ನ ನಡೆದಿದೆ. ಸಂವಿಧಾನವನ್ನು ಉಳಿಸಿಕೊಂಡರೆ ಮಾತ್ರ ಈ ಜನರ ಹಕ್ಕುಗಳನ್ನು ರಕ್ಷಿಸಲು ಸಾಧ್ಯ. ಅದಕ್ಕಾಗಿ ಪ್ರತಿರೋಧ ರೂಪಿಸಲಾಗುವುದು' ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಡಾ.ಸಿ.ಎಸ್. ದ್ವಾರಕಾನಾಥ್ ಮಾತನಾಡಿ, 'ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಅದೆಲ್ಲವನ್ನೂ ಸಂಘಟಿತವಾಗಿ ವಿರೋಧಿಸುವುದು ಈ ಆಂದೋಲನದ ಗುರಿ' ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಜ್ ಕನಕಗುರು ಪೀಠ ಹಾಲುಮತ ಕೇಂದ್ರದಲ್ಲಿ 'ಹಾಲುಮತ ಸಂಸ್ಕೃತಿ ವೈಭವ'ವನ್ನು ಕಾಗಿನೆಲೆ ಕನಕಗುರು ಪೀಠದ ಸ್ವಾಮಿ ನಿರಂಜನಾನಂದ ಪುರಿ ಅವರು ಬುಧವಾರ ಉದ್ಘಾಟಿಸಿದರು. ಬಾದಿಮನಾಳ ಪೀಠದ ಶಿವಸಿದ್ದೇಶ್ವರ ಸ್ವಾಮೀಜಿ, ತಿಂಥಣಿ ಬ್ರಿಜ್ ಪೀಠದ ಸಿದ್ಧರಾಮಾನಂದ ಪುರಿ ಸ್ವಾಮೀಜಿ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಶರಣು ತಳಕೇರಿ, ಸಮಾಜದ ಮುಖಂಡ ಕೆ.ವಿರೂಪಾಕ್ಷಪ್ಪ ಇದ್ದರು

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕಾರ್ಯನಿರ್ವಾಹಕ ಇಂಜಿನೀಯರರು, ಬಾ.ಪ.ಅ.ಪ್ರಾ ವಿಭಾಗ ನಂ.02, ಬಾಗಲಕೋಟೆ

ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ–2/ಟೆಂಡರ ನಂ.1/2021–22/3219/3228 ದಿನಾಂಕ: 11.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ. (ಇ–ಪ್ರೋಕ್ಯೂರಮೆಂಟ್ ಮುಖಾಂತರ)

ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 9.20 ರಿಂದ 14.27 ಲಕ್ಷಗಳು ಇರುತ್ತದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ:25.01.2022 ಸಂಜೆ 5.00 ಘಂಟೆ ವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ದಿನಾಂಕ: 27.01.2022 ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–233313 ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ.,ವಿಭಾಗ ನಂ.2,ಬಾಗಲಕೋಟೆ

DIPR/BGK/RO-NO-470/MCA/2021-22

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.
ಫೋನ್/ಫ್ಯಾಕ್ಸ್:08192-268754 Email:eeknnlmbr@gmail.com

ನಂ.ಕಾಇಂ/ಕನೀನಿನಿ/ಭನಾವಿ–3/ಮಬೆ/ಸ.ಇಂ.2/ಟೆಂಡರ್ ಪ್ರಕಟಣೆ–6/1312/2021–22/ ದಿನಾಂಕ: 06.01.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

[ಇ–ಪ್ರೊಕ್ಯೂರ್‌ಮೆಂಟ್ ಮೂಲಕ]

ವ್ಯವಸ್ಥಾಪಕ ನಿರ್ದೇಶಕರು, ಕನೀನಿ, ಬೆಂಗಳೂರು, ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಲೋಕೋಪಯೋಗಿ/ಜಲಸಂಪನ್ಮೂಲ ಇಲಾಖೆಗಳಲ್ಲಿ ನೋಂದಾಯಿತ ಹಾಗೂ ಇ–ಟೆಂಡರ್‌ಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ರೂಪದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಆಹ್ವಾನಿಸಲಾಗಿದೆ.

(1) ಕಾಮಗಾರಿಯ ಹೆಸರು ಮತ್ತು ಲೆಕ್ಕಶೀರ್ಷಿಕೆ:–4701 ಭದ್ರಾ (2) ಕರೆ:– 1ನೇ ಕರೆ (3) ಕಾಮಗಾರಿಗಳ ಸಂಖ್ಯೆ: 1 (4) ಟೆಂಡರ್ ಗಿಟ್ಟ ಅಂದಾಜು ಮೊತ್ತ :– 30.00 ಲಕ್ಷ (5) ಅರ್ಹ ಗುತ್ತಿಗೆದಾರರು:– **KPWD Class-I or KNNL Category-III & above**

(1) ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ದಿನಾಂಕ: 13.01.2022 ರಿಂದ 20.01.2022ರ ಸಂಜೆ 5 ಗಂಟೆವರೆಗೆ ಪಡೆಯಬಹುದಾಗಿದೆ. (2) ಟೆಂಡರ್ ಸಂಬಂಧ ವಿಚಾರಣೆ ದಿನಾಂಕ: 18.01.2022 ರ ಸಂಜೆ 5.00 ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವ ದಿನಾಂಕ: 20.01.2022 ರ 5–00 ಗಂಟೆಯವರೆಗೆ (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 21.01.2022 ಸಂಜೆ 5.01 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ 08192–200255 ರಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/624/ಎಂಸಿಎ/2021–22

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ,
ನಂ.3, ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.

KRISHNA BHAGYA JALA NIGAM LIMITED

(A Government of Karnataka Undertaking)

Office of the Executive Engineer, KBJNL, Dam Division, Almatti-586201. Tq:B.Bagewadi Dt: Vijayapur.
Phone:08426-295311 E-mail:dam_division@rediffmail.com

No: KBJNL/DDA/Quotation/2021-22/2954 Dated:10.01.2022

SHORT TERM QUOTATION

Requesting to submit the quotation rates for following works pertaining Almatti Dam. The details of the works are as under:

1) Providing Upstream underwater treatment to the Critical Block, & Block Joints on upstream surface of Almatti Dam (Rehabilitation and Improvement Works to Almatti Dam Under World Bank aided DRIP program Phase-II).

2) Survey, Design, Engineering, Installation and commissioning of Electronic security Surveillance, Access Control and Public Address system for Almatti Dam site including 5 years comprehensive maintenance.

For further details it is requested to visit the undersigned office personally and get the details of each work. You are requested to visit the site before submission of the quotations. The quotations should be submitted in sealed cover or by E-mail. This office has rights to accept or reject any of the quotations. Last date for submission of quotations is **17.01.2022.**

Further any information required can be obtained from Dam_divison@rediffmail.com, aeegates26@gmail.com Vithal, AE Cell No: 9480165309, 8971361932

Sd/- Executive Engineer,
KBJNL, Dam Division, Almatti

ವಾಸಾಸಂಇ/ವಿಜಯಪುರ/466/ಎಂಸಿಎ/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ. 4, ಹೊಸದುರ್ಗ–577527. ಚಿತ್ರದುರ್ಗಜಿಲ್ಲೆ.
Phone/Fax No: 08199 - 230018, e-Mail ID: eeubpdvn4@gmail.com
ಸಂಖ್ಯೆ: ಕಾಇಂ/ವಿಜನಿನಿ/ಭಮೇಯೋ/ವಿ–4/ಹೊ/ಟೆಂಡರ್–12/2021–22/
ದಿನಾಂಕ: 10.01.2022

ಟೆಂಡರ್ ತಿದ್ದುಪಡಿ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ: (1) ಟೆಂಡರ್ ಅಧಿಸೂಚನೆ ಸಂಖ್ಯೆ: No.: VJNL/UBP/EE/D-4/HSD/TND-12/SB/2021-22 Dated: 24.12.2021.

ಈ ಮೇಲಿನ ಉಲ್ಲೇಖಿತ ಟೆಂಡರ್ ಅಧಿಸೂಚನೆಯಲ್ಲಿ ಪ್ರಕಟಗೊಳಿಸಿದ "CONSTRUCTION OF SAMUDAYA BHAVANA IN MADHURE VILLAGE OF HOSADURGA TALUK IN CHITRADURGA DISTRICT (INDENT NO.1983)" ಕಾಮಗಾರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ.

(1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 17.01.2022ರ ಅಪರಾಹ್ನ 04:00 ಗಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.01.2022ರಂದು ಸಂಜೆ 04:30 ಗಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ ಇವರ ಕಛೇರಿಯಲ್ಲಿ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ನಲ್ಲಿ ಅನುಮೋದನೆಯದ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

RO No. 749: DIPR/CTA/MCA/2021-22

ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–560052

ಸಂ.: ಕವಶಿಸಸ/ಆಡಳಿತ(ಆಹಾರ ಪೂರೈಕೆ)/ಸಿ.ಆರ್.–40/2021–22 ದಿನಾಂಕ: 11.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಗಲಕೋಟೆ, ಉತ್ತರ ಕನ್ನಡ, ಬಳ್ಳಾರಿ, ಹಾವೇರಿ, ಗದಗ, ಧಾರವಾಡ, ಬೆಳಗಾವಿ, ವಿಜಯಪುರ, ಮಂಡ್ಯ, ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರಗಿ, ಬೀದರ್, ಉಡುಪಿ, ಮೈಸೂರು, ಬೆಂಗಳೂರು ನಗರ, ಕೊಡಗು, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಚಾಮರಾಜನಗರ, ದಾವಣಗೆರೆ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿನ ವಸತಿ ಶಾಲೆಗಳು / ಕಾಲೇಜುಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು (ಕ್ರಮವಾಗಿ ಇಂಡೆಂಟ್ ಸಂಖ್ಯೆ 277, 278, 279, 280, 281, 282, 283, 284, 285, 286, 287, 288, 289, 290, 291, 292, 293, 294, 295, 296, 297, 297, 298, 299, 300, 301, 302, 303, 304, 305, 306) ಇ–ಪೋರ್ಟಲ್ ಮುಖಾಂತರ ದಿನಾಂಕ: **12.01.2022**ರಂದು ಜಿಲ್ಲಾವಾರು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **01.02.2022**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು
ಕ.ವ.ಶಿ.ಸ.ಸಂ., ಬೆಂಗಳೂರು

ವಾಸಾಸಂಇ/ಉನಿನ/ಎಲ್‌ಸಿ/2835/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4, ಹೊಸದುರ್ಗ, ಚಿತ್ರದುರ್ಗ (ಜಿ)
Ph/Fax: 08199-230018, E-Mail: eeubpdvn4@gmail.com
ಸಂಖ್ಯೆ : ಕಾಇಂ/ವಿಜನಿನಿ/ಭಮೇಯೋ/ವಿ–4/ಹೊ/ಟೆಂಡರ್14/2021–22/
ದಿನಾಂಕ: 06.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲೆಕ್ಕಶೀರ್ಷಿಕೆ 4701 ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ "Restoration of Cavin action occurred in Janakal Tunnel exit side from Ch.60920 mts to Ch.61080 mts under Chitradurga Branch Canal Indent No.1711-Call-2" ಕಾಮಗಾರಿಗಳಿಗೆ ದ್ವಿಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ ಮಾಡಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 06.01.2022ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 21.01.2022ರ ಅಪರಾಹ್ನ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ/ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ:13.01.2022ರ ಅಪರಾಹ್ನ 1:30 ಗಂಟೆಯವರೆಗೆ ಸಂಪರ್ಕಿಸಬಹುದು. ಸದರಿ ಕಾಮಗಾರಿಗಳಿಗೆ ಫ್ರೀ–ಬಿಡ್ ಸಭೆಯನ್ನು ಮುಖ್ಯ ಅಭಿಯಂತರರು, ವಿಜನಿನಿ, ಭ.ಮೇ.ಯೋ ವಲಯ, ಚಿತ್ರದುರ್ಗ ಇವರ ಕಚೇರಿಯಲ್ಲಿ ದಿನಾಂಕ: 14.01.2022ರಂದು ಬೆಳಗ್ಗೆ 11:00 ಗಂಟೆಗೆ ನೆಡೆಸಲಾಗುವುದು. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 24.01.2022ರಂದು ಬೆಳಗ್ಗೆ 11:00 ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ ರವರ ಕಛೇರಿಯಲ್ಲಿ ಹಾಗೂ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ವಿ.ಸೂ:– ಇ.ಪಿ.ಎಫ್ ನೋಂದಣಿ ಕಡ್ಡಾಯವಾಗಿದ್ದು, ಇ.ಪಿ.ಎಫ್. ನೋಂದಣಿ ಇಲ್ಲದ ಗುತ್ತಿಗೆದಾರರ ಟೆಂಡರ್ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು.

RO No. 757: DIPR/CTA/MCA/2021-22

ಸಹಿ/– ಕಾರ್ಯಪಾಲಕ ಇಂಜಿನಿಯರ್

KARNATAKA GRAMIN BANK

(A Scheduled Bank,Established by Govt. Of India, Sponsored by Canara Bank)
Head Office, Gandhi Nagar, Ballari. Phone: 08392 – 236461, 236418, 236449

TENDER NOTICE

Karnataka Gramin Bank, Head Office Ballari invites application for DISPOSAL of FBR Safes with the Branches in the prescribed format for DISPOSAL OF FBR Safes' (Fire & Burglary Resistance Safe) at various Branches/Offices in the districts of Ballari, Chitradurga, Davangere, Kolar, Shivamogga, Raichur, Koppal, Yadgiri, Kalaburagi, Bidar, Chikkaballapura, Bengaluru (North), Bengaluru (South), Mysuru, Mandya, Madikeri, Hassan, Chamarajnagar, Tumkuru, Ramanagara, Vijayanagara & Chikkamagaluru. For details / application form, contact above office or log on to our web site **www.karnatakagraminbank.com** and go to the link Tenders. The scope of work will be valid upto 31.12.2022.

The last date for submission of completed application forms duly sealed is 25.01.2022 up to 04.00 PM and Applications will not be considered received thereafter.

Place: Ballari
Date: 11.01.2022

Sd/- GENERAL MANAGER

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಅಥಣಿ–591304, ಕಾರ್ಯಾಲಯ, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)

ಅಧಿಸೂಚನೆ ಸಂ.ಕನೀನಿನಿ/ಪುಪುವಿ/ಯೋಶಾ/ಟೆಂಡರ/ಟಿ.ಬಿ.ಎಲ್.ಐ.ಎಸ್/ಡಿ.ಸಿ–1ಎ/ಎಫ್.ಐ.ಸಿ/ಕಾಮಗಾರಿ/21–22/2126 ದಿನಾಂಕ:11–01–2022

ಅಲ್ಪಾವಧಿ ಟೆಂಡರ ಅಧಿಸೂಚನೆ
(ಇ–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಆರ್&ಆರ್ ವಿಭಾಗ ಅಥಣಿ, ಇವರು ಇ–ಪ್ರೊಕ್ಯೂರಮೆಂಟ ಪೋರ್ಟಾಲ್ ಮುಖಾಂತರ ಕರ್ನಾಟಕ ನೀರಾವರಿ ನಿಗಮದಲ್ಲಿ ಕನ್ಸಲ್ಟನ್ಸಿ ಏಜನ್ಸಿ ನೊಂದಾಯಿತಗೊಂಡ ಗುತ್ತಿಗೆದಾರರಿಂದ "Construction of FIC's of Kalabilagi East canal Package-1 to Package-7 of DC-1A of Tubachi Babaleshwar Lift Irrigation scheme. ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ಅಹ್ವಾನಿಸುತ್ತಾರೆ.

ಗುತ್ತಿಗೆದಾರರು ಎರಡು ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಅಂದಾಜು ಮೊತ್ತ 1) P-1 Rs.375.89 ಲಕ್ಷಗಳು, P-2 Rs.283.01 ಲಕ್ಷಗಳು, P-3 Rs.397.91 ಲಕ್ಷಗಳು, P-4 Rs.419.12 ಲಕ್ಷಗಳು , P-5 Rs.325.89 ಲಕ್ಷಗಳು , P-6 Rs. 375.65 ಲಕ್ಷಗಳು, P-7 Rs.426.48 ಲಕ್ಷಗಳು, ಇರುತ್ತವೆ. ಟೆಂಡರ ಅವಧಿ ಮಳೆಗಾಲ ಸಹಿತ 06 ತಿಂಗಳು.

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯ ಬಹುದಾದ ದಿನಾಂಕ:13.01.2022 ರಿಂದ ದಿನಾಂಕ 29–01–2022 ರ 4.00 ಪಿ.ಎಂ. ರವರೆಗೆ, 2:ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ:17–01–2022 ರ 17.00 ಘಂಟೆಯವರೆಗೆ. 3:ಪೂರ್ವಭಾವಿ ಸಭೆ (ಪ್ರಿ–ಬಿಡ್ ಮಿಟಿಂಗ್) ದಿನಾಂಕ:17.01.2022 ರ 11.00 ಘಂಟೆ, 4:ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:13–01–2022 ರಿಂದ ದಿನಾಂಕ 29–01–2022 ರ 4.00 ಪಿ.ಎಂ. ರವರೆಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:31–01–2022 ರ 11.00 ಘಂಟೆಯ ನಂತರ, 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:07–02–2022 ಅಥವಾ ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ:08289–285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–(ಆರ್.ಜಿ ರಾಠೋಡ)
ಕಾರ್ಯನಿರ್ವಾಹಕ ಅಭಿಯಂತರರು, ಪುವ ಮತ್ತು ಪುನಿ ವಿಭಾಗ, ಅಥಣಿ.

DIPR/BGM/RO-NO-1253/MCA/2021-22

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

4ನೇ ಮಹಡಿ, ಟಿಟಿಎಂಸಿ, ಬಿಲ್ಡಿಂಗ್ "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39 ಫ್ಯಾಕ್ಸ್: 22483645/22113106

Ref: ADM1-027/TENDER/SECURITY/2022-23 Date: 12.01.2022

ಹೊರಗುತ್ತಿಗೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಟೆಂಡರ್ ಪ್ರಕಟಣೆ

ನಿಗಮದ ಮದ್ಯಮಳಿಗೆಗಳಿಗೆ ಮತ್ತು ಮದ್ಯಸಾರ ಸಾಗಾಣಿಕೆ ಟ್ಯಾಂಕರ್ ಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಭದ್ರತಾ ಸಿಬ್ಬಂದಿಗಳ ಸೇವೆ ಒದಗಿಸಲು, ಕರ್ನಾಟಕ ರಾಜ್ಯದಲ್ಲಿ ನೊಂದಾಯಿಸಲ್ಪಟ್ಟು, ಸಾಕಷ್ಟು ಅನುಭವವುಳ್ಳ ಮತ್ತು ಮಾನವ ಸಂಪನ್ಮೂಲ ಹೊಂದಿರುವ, ಅರ್ಹ ಏಜೆನ್ಸಿಗಳಿಂದ, ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಪ್ರೊಕ್ಯೂರ್ ಮೆಂಟ್ ಮೂಲಕ ಮಾತ್ರ ಈ ಕೆಳಗಿನಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

(ಮೊತ್ತ ರೂ.ಲಕ್ಷಗಳಲ್ಲಿ)

ಕ್ರ.ಸಂ.	ವಿವರಗಳು	ಟೆಂಡರ್ ಮೊತ್ತ	ಇಎಂಡಿ ಮೊತ್ತ.
1	2	3	4
I	ಮಧ್ಯ ಮಳಿಗೆಗಳಿಗೆ ಭದ್ರತಾ ಸಿಬ್ಬಂದಿ ಒದಗಿಸಲು:		
	ಪೂರ್ವ ವಲಯ	505.69	7.59
	ಪಶ್ಚಿಮ ವಲಯ	391.36	5.87
	ಉತ್ತರ ವಲಯ	342.99	5.14
	ದಕ್ಷಿಣ ವಲಯ	967.41	14.51
II	ಮದ್ಯಸಾರ ಟ್ಯಾಂಕರ್ ಗಳ ಸಾಗಾಣಿಕೆಗೆ ಬೆಂಗಾವಲು ಸಿಬ್ಬಂದಿ ಒದಗಿಸಲು:		
	ವಲಯ–1	463.85	6.96
	ವಲಯ–2	276.93	4.15
	ವಲಯ–3	80.93	1,21
	ವಲಯ–4	493.16	7.40

ಟೆಂಡರ್ ನಲ್ಲಿ ಭಾಗವಹಿಸುವ ಏಜೆನ್ಸಿಗಳು ಮೇಲಿನ ಕಾಲಂ ಸಂಖ್ಯೆ(4)ರಲ್ಲಿ ತಿಳಿಸಿರುವಂತೆ ಟೆಂಡರ್ ಗಿಟ್ಟ ಮೊತ್ತದ ಇಎಂಡಿಯನ್ನು ಪ್ರತಿ ಸೇವೆಗೆ, ಪ್ರತಿ ವಲಯಾವಾರು ಪ್ರತ್ಯೇಕವಾಗಿ ಅನ್ವಯವಾಗುವಂತೆ, ನಿಯಮಾನುಸಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರತ್ಯೇಕವಾಗಿ ಸಂದಾಯ. ಮಾಡಬೇಕು. ಟೆಂಡರ್ ಕಾಲಕ್ರಮ ಈ ಕೆಳಗಿನಂತಿರುತ್ತದೆ.

1) ಟೆಂಡರ್ ನೋಟಿಫಿಕೇಶನ್ ಪ್ರಕಟಣೆ: **13.01.2022.** 2) ಪ್ರಿ–ಬಿಡ್ ಮೀಟಿಂಗ್ **19.01.2022ರ 11.30 ಗಂಟೆಗೆ.** 3) ಪ್ರಿ–ಬಿಡ್ ಮೀಟಿಂಗ್ ನಡೆಯುವ ಸ್ಥಳ ಬೋರ್ಡ್ ರೂಂ, ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, 4ನೇ ಮಹಡಿ, ಟಿಟಿಎಂಸಿ "ಎ" ಬ್ಲಾಕ್, ಬಿಎಂಟಿಸಿ. ಕಟ್ಟಡ, ಶಾಂತಿನಗರ, ಬೆಂಗಳೂರು–560027. 4) ಬಿಡ್ಡುಗಳನ್ನು ಅಪ್–ಲೋಡ್ ಮಾಡಲು ಕೊನೆಯ **ದಿನಾಂಕ: 11.02.2022 ರಂದು ಸಂಜೆ 17.30 ಗಂಟೆಯವರೆಗೆ.** 5) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 14.02.2022 ರಂದು ಬೆಳಿಗ್ಗೆ 11.30 ಗಂಟೆಯ ನಂತರ.** 6) ಆರ್ಥಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 21.02.2022ರಂದು ಬೆಳಿಗ್ಗೆ 11.30 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು **https://eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ವಾಸಾಸಂಇ/ಬೆಂನ/ಜಿಎ/2824/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ವಿಸ್ತಾರ ಓದು ಯಶಸ್ಸಿನ ಗುಟ್ಟು

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮುದಗನೂರು ಕಾವಲು ಗ್ರಾಮದ ಚನ್ನಕೇಶವ ಎಂ.ಬಿ ಅವರು 2017ರಲ್ಲಿ ಕೆಎಎಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ವಾಣಿಜ್ಯ ತೆರಿಗೆ ಇಲಾಖೆಯ ಹಾಸನ ಜಿಲ್ಲಾ ಕಚೇರಿಯಲ್ಲಿ ಪ್ರೊಬೆಷನರಿ ಸಹಾಯಕ ಆಯುಕ್ತರಾಗಿ ಕೆಲಸ ಮಾಡುತ್ತಿದ್ದಾರೆ. ಬಡತನದ ಕಾರಣಕ್ಕೆ ನಿರಂತರ ಶಿಕ್ಷಣ ಮುಂದುವರಿಸಲಾಗದೇ, ದೂರ ಶಿಕ್ಷಣದಲ್ಲಿ ಪದವಿ ಪಡೆದು ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ಸಾಧನೆ ಮಾಡಿದ್ದಾರೆ. ಅವರು ಯಶಸ್ಸಿನ ಸೂತ್ರದ ಗಂಟನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಚನ್ನಕೇಶವ ಎಂ.ಬಿ

ಭೀಮಣ್ಣ ಬಾಲಯ್ಯ

1. ನಿಮ್ಮ ಶೈಕ್ಷಣಿಕ ಜೀವನ ಪಯಣ ಹೇಗಿತ್ತು ?

ನಮ್ಮದು ಬಡ ಕುಟುಂಬ. ತಂದೆ–ತಾಯಿ ಅನಕ್ಷರಸ್ಥರು. ಹುಟ್ಟೂರಿನಲ್ಲಿಯೇ 4ನೇ ತರಗತಿವರೆಗೂ ವ್ಯಾಸಂಗ ಮಾಡಿದೆ. ಹುಲಿಕಲ್ ಹಾಗೂ ಅರಕಲಗೂಡಿನಲ್ಲಿ ಮಾಧ್ಯಮಿಕ, ಪ್ರೌಢ ಹಾಗೂ ಡಿ.ಇಡಿ ಶಿಕ್ಷಣ ಮುಗಿಸಿದೆ. ಬಳಿಕ ಎರಡು ವರ್ಷ ಖಾಸಗಿ ಶಾಲೆ ಶಿಕ್ಷಕನಾಗಿ ಕೆಲಸ ಮಾಡಿದೆ. ಅಂದಿನಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದಲು ಆರಂಭಿಸಿದೆ. ಸರ್ಕಾರಿ ಹುದ್ದೆಗಳಿಗೆ ಆಯ್ಕೆಯಾದೆ, ಆದರೂ ಗುರಿ ಸಾಧಿಸಬೇಕು ಎನ್ನುವ ಛಲ ಕಡಿಮೆಯಾಗಲಿಲ್ಲ. ಕೊನೆಗೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿದ್ದುಕೊಂಡೇ, ಕೆಎಎಸ್‌ಗೆ ತಯಾರಿ ನಡೆಸಿ, ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆ.

2. ಕೆಎಎಸ್ ಅಧಿಕಾರಿಯಾಗಲು ಏನು ಸ್ಫೂರ್ತಿ?

ಮುದಗನೂರು ಕಾವಲು ಗ್ರಾಮದಲ್ಲಿ ತಂದೆ–ತಾಯಿ ಸಾಹುಕಾರರೊಬ್ಬರ ಮನೆಗೆ ಕೆಲಸಕ್ಕೆ ತೆರಳುತ್ತಿದ್ದರು. ಕೆಲವೊಮ್ಮೆ ನಾನೂ ಜತೆಗೆ ಹೋಗುತ್ತಿದ್ದೆ, ಅವರ ಮನೆಯಲ್ಲಿ ಒಬ್ಬರು ಕೆಎಎಸ್ ಅಧಿಕಾರಿ ಇದ್ದರು, ಅವರು ಕಾರಿನಲ್ಲಿ ಬರುತ್ತಿದ್ದರು. ಅದನ್ನು ನೋಡಿ ‘ನಾನೂ ಅವರಂತೆ ಆಗಬೇಕು. ನನ್ನ ಹೆಸರಿನ ಮುಂದೆಯೂ ಕೆಎಎಸ್ ಎಂದು ಬರೆದು ಕೊಳ್ಳಬೇಕು‘ ಎನ್ನುವ ಆಸೆ ಹುಟ್ಟಿತು. ಅಂದಿನಿಂದ ಕೆಎಎಸ್ ಅಧಿಕಾರಿಯಾಗಬೇಕೆಂಬ ಗುರಿ ಇಟ್ಟುಕೊಂಡೆ. 2014ರಲ್ಲಿ ಮೊದಲ ಬಾರಿಗೆ ಕೆಎಎಸ್ ಪೂರ್ವಭಾವಿ ಪರೀಕ್ಷೆ ಪಾಸ್ ಮಾಡಿದೆ. ಆದರೆ, ಯುಜಿಸಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಾನ್ಯತೆ ರದ್ದು ಮಾಡಿದ ಕಾರಣ ಮುಖ್ಯ ಪರೀಕ್ಷೆ ಬರೆಯಲು ಅವಕಾಶ ಸಿಕ್ಕಿರಲಿಲ್ಲ. ಕೊನೆಗೆ 2017ರಲ್ಲಿ ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆ ಮತ್ತು 2018ರಲ್ಲಿ ಮುಖ್ಯಪರೀಕ್ಷೆಯನ್ನೂ ಬರೆದು ಪಾಸ್ ಮಾಡಿದೆ. 2020ರಲ್ಲಿ ಕೆಲಸಕ್ಕೆ ಸೇರಿದೆ.

3.ಪೂರ್ವಭಾವಿ ಪರೀಕ್ಷೆಗೆ ತಯಾರಿ ಹೇಗಿರಬೇಕು?

5 ರಿಂದ 12 ನೇ ತರಗತಿವರೆಗಿನ ರಾಜ್ಯ ಸರ್ಕಾರದ ಪಠ್ಯಪುಸ್ತಕಗಳು ಹಾಗೂ ದಿನ ಪತ್ರಿಕೆಗಳನ್ನು ನಿರಂತರವಾಗಿ ಓದಬೇಕು. ಆಕಾಶವಾಣಿಯಲ್ಲಿ ಬರುವ ಕನ್ನಡ ಹಾಗೂ ಇಂಗ್ಲಿಷ್ ವಾರ್ತೆಗಳನ್ನು ಕೇಳಿಸಿಕೊಳ್ಳಬೇಕು. ಪ್ರತಿದಿನ ಕನಿಷ್ಠ ಮೂರು ಗಂಟೆ ಓದುವುದನ್ನು ರೂಢಿಸಿಕೊಳ್ಳಬೇಕು. ಓದಿದ ಪ್ರಮುಖ ಅಂಶಗಳನ್ನು ಟಿಪ್ಪಣಿ ಮಾಡಿಟ್ಟುಕೊಳ್ಳುವುದು ಅಗತ್ಯ. ಸ್ನೇಹಿತರೊಂದಿಗೆ ಗುಂಪು ಚರ್ಚೆ ಮಾಡಬೇಕು. ಅದರಿಂದ ಓದಿದ ವಿಷಯಗಳನ್ನು ನೆನಪಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಕೆಎಎಸ್ ಪರೀಕ್ಷೆಯ ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಬೇಕು. ಇದರಿಂದ ಪ್ರಶ್ನೆಗಳ ಸ್ವರೂಪ ತಿಳಿದುಕೊಂಡು ಉತ್ತರಿಸಲು ಅನುಕೂಲವಾಗುತ್ತದೆ.

4.ಮುಖ್ಯ ಪರೀಕ್ಷೆ ಎದುರಿಸಲು ಸಿದ್ಧತೆ ಹೇಗಿರಬೇಕು ?

ಮುಖ್ಯ ಪರೀಕ್ಷೆಗೆ ವಿಸ್ತಾರವಾದ ಓದಿನ ಅಗತ್ಯ ಇರುತ್ತದೆ. ಮೊದಲು ಕರ್ನಾಟಕ ಲೋಕಸೇವಾ ಆಯೋಗ ನೀಡಿದ ಪಠ್ಯಕ್ರಮ ಅಧ್ಯಯನ ಮಾಡಬೇಕು. ಅದನ್ನು ಇಟ್ಟುಕೊಂಡು ನಿರ್ದಿಷ್ಟ ಲೇಖಕರ ಪುಸ್ತಕಗಳನ್ನು ಓದಬೇಕು. ಪತ್ರಿಕೆಗಳಲ್ಲಿ ಪ್ರಕಟವಾಗುವ ಸಂಪಾದಕೀಯ ಹಾಗೂ ಲೇಖನಗಳನ್ನು ಓದಿ ಬರೆದಿಟ್ಟುಕೊಳ್ಳಬೇಕು. ಇದರಿಂದ ಪ್ರಬಂಧ ಬರಹಕ್ಕೆ ಅನುಕೂಲವಾಗುತ್ತದೆ. ಸರ್ಕಾರ ಪ್ರಕಟಿಸುವ ಆರ್ಥಿಕ ಸಮೀಕ್ಷೆ, ಯೋಜನಾ ಹಾಗೂ ಜನಪದ ನಿಯತಕಾಲಿಕೆ ಓದಬೇಕು. ಮುಖ್ಯ ಪರೀಕ್ಷೆಯಲ್ಲಿ ಕೈ ಬರಹಕ್ಕೆ ಮಹತ್ವ ನೀಡುವುದರಿಂದ ಮೊದಲಿಂದಲೇ ಬರೆಯುವುದನ್ನು ರೂಢಿಸಿಕೊಳ್ಳಬೇಕು. ಮಾದರಿ ಪರೀಕ್ಷೆಗಳನ್ನು ತೆಗೆದುಕೊಂಡರೆ, ಸಮಯ ನಿರ್ವಹಣೆ ಅಭ್ಯಾಸವಾಗುತ್ತದೆ. ಆದ್ದರಿಂದ ಸಾಧ್ಯವಾದರೆ ಸ್ಪರ್ಧಾತ್ಮಕ ತರಬೇತಿ ಕೇಂದ್ರಗಳಲ್ಲಿ ಮಾದರಿ ಪರೀಕ್ಷೆಗಳನ್ನು (ಅಣಕು ಪರೀಕ್ಷೆಗಳು) ತೆಗೆದುಕೊಳ್ಳಬೇಕು.

5. ಸ್ಪರ್ಧಾಕಾಂಕ್ಷಿಗಳಿಗೆ ನಿಮ್ಮ ಸಲಹೆ ಏನು?

ಸಮಯ ವ್ಯರ್ಥ ಮಾಡದೆ, ನಿರಂತರವಾಗಿ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು. ಗುರಿ ಮುಟ್ಟುವವರೆಗೂ ವಿಶ್ರಮಿಸಬಾರದು. ಆತ್ಮವಿಶ್ವಾಸ ನಿಮ್ಮನ್ನು ಕಾಪಾಡುತ್ತದೆ. ಆರಂಭದ ಉತ್ಸಾಹವನ್ನು ಕೊನೆಯವರೆಗೂ ಕಾಪಿಟ್ಟುಕೊಳ್ಳುವುದು ಅಗತ್ಯ. ಗ್ರಂಥಾಲಯವನ್ನು ಸಮರ್ಪಕವಾಗಿ ಬಳಸಿಕೊಳ್ಳಿ, ಸರ್ಕಾರದ ವಿವಿಧ ಇಲಾಖೆಗಳು ಪ್ರವೇಶ ಪರೀಕ್ಷೆ ನಡೆಸುವ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೊಡಿಸುತ್ತವೆ. ಅದರ ಸದುಪಯೋಗ ಪಡೆಯಿರಿ. ಯಾವ ವಿಷಯವನ್ನೂ ಕಷ್ಟದಿಂದ ಓದಬೇಡಿ, ಸಂಪೂರ್ಣವಾಗಿ ತೊಡಗಿಸಿಕೊಂಡು, ಆಸಕ್ತಿಯಿಂದ ಓದಿ ಅಂದುಕೊಂಡ ಗುರಿ ತಲುಪಿ. ❖

ಪರೀಕ್ಷಾ ಮಾರ್ಗದರ್ಶಿಯಾದ ‘ಪ್ರಜಾವಾಣಿ’

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಲು ಆರಂಭಿಸಿದ ದಿನದಿಂದಲೂ ‘ಪ್ರಜಾವಾಣಿ’ ಪತ್ರಿಕೆಯನ್ನು ಓದುತ್ತಿದ್ದೇನೆ. ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು, ಸಂಪಾದಕೀಯವನ್ನು ನಿರಂತರವಾಗಿ ಓದಿದ್ದರಿಂದ ಪರೀಕ್ಷೆಯಲ್ಲಿ ಬಹಳ ಅನುಕೂಲವಾಯಿತು. ನನ್ನಂಥ ಅನೇಕರಿಗೆ ‘ಪ್ರಜಾವಾಣಿ’ ಪರೀಕ್ಷಾ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತಿದೆ.

ಎಸ್‌ಎಸ್‌ಸಿ ಅಧ್ಯಯನ ಸಿದ್ಧತೆ ಹೇಗೆ?

ಮಹೇಶ್ ಎಚ್. ನಾಯಕ್

ಕಳೆದ ಸಂಚಿಕೆಯಲ್ಲಿ ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಪ್ರಾಧಿಕಾರದ (ಸ್ಟಾಫ್ ಸಲೆಕ್ಷನ್ ಕಮಿಷನ್– ಎಸ್‌ಎಸ್‌ಸಿ) ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಯ ಮೊದಲ ಹಂತದ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಗಿತ್ತು.

ಈ ವಾರದ ಸರಣಿಯಲ್ಲಿ ಪರೀಕ್ಷೆಗೆ ಬೇಕಾದ ಅಧ್ಯಯನ ಸಾಮಗ್ರಿಗಳನ್ನು ಸಂಗ್ರಹಿಸುವುದು ಹೇಗೆ? ಯಾವ ಪ್ರಕಟಣೆಯ ಯಾವ ಪುಸ್ತಕಗಳನ್ನು ಓದಬಹುದು. ಅವುಗಳನ್ನು ಸಂಗ್ರಹಿಸುವುದು ಹೇಗೆ ? ಈ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಕೇಂದ್ರಗಳು ಯಾವುವು ಎಂಬದರ ಕುರಿತು ಮಾಹಿತಿ ನೀಡಲಾಗುತ್ತಿದೆ.

ಅಧ್ಯಯನ ಸಾಮಗ್ರಿ

ಅಧ್ಯಯನ ಸಾಮಗ್ರಿಯ ಸಂಗ್ರಹಣೆ ಒಂದು ಕಲೆಯಿದ್ದಂತೆ. ಮುಖ ಪುಟವನ್ನು ನೋಡಿ ಪುಸ್ತಕದೊಳಗಿನ ಹೂರಣವನ್ನು ನಿರ್ಧಾರ ಮಾಡಿ, ಖರೀದಿಸುವ ಬದಲು, ಪುಸ್ತಕದ ಒಳಗಿರುವ ವಸ್ತು ವಿಷಯವನ್ನು ಅವಲೋಕಿಸಬೇಕು. ಈ ಪರೀಕ್ಷೆಯಲ್ಲಿ ಯಶಸ್ವಿಯಾದ ಒಂದಿಬ್ಬರು ಅಭ್ಯರ್ಥಿಗಳನ್ನು ಮಾತನಾಡಿಸಿ, ಅಭಿಪ್ರಾಯ ಸಂಗ್ರಹಿಸಬೇಕು. ಅವರು ಯಾವ ಪುಸ್ತಕಗಳನ್ನು ಓದಿದ್ದಾರೆ ಎಂಬುದನ್ನು ತಿಳಿಯಬೇಕು. ನಂತರ ಅಧ್ಯಯನ ಸಾಮಗ್ರಿಗಳನ್ನು ಸಂಗ್ರಹಿಸಬೇಕು.

ಪ್ರಸ್ತುತ ಮಾರುಕಟ್ಟೆಯಲ್ಲಿ ಜಿ.ಕೆ ಪ್ರಕಾಶನ, ದಿಶಾ ಪ್ರಕಾಶನ, ಅರಿಹಂತ್ ಪ್ರಕಾಶನ, ಅಡ್ಡಾ 24 x 7, ಎಜುರೈಸ್ ಪ್ರಕಾಶನ, ಎಜುಗೊರಿಲ್ಲಾ ಪ್ರಕಾಶನ, ಅಗರ್ ವಾಲ್ , ಎಕ್ಸಾಂ ಕಾರ್ಟ್ ಪ್ರಕಾಶನ ಪುಸ್ತಕಗಳಲ್ಲದೆ. ಸ್ಥಳೀಯ ಪ್ರಕಾಶನದ ಪುಸ್ತಕಗಳು ಲಭ್ಯವಿದೆ. ಅಭ್ಯರ್ಥಿಗಳು ತಮ್ಮ ಮನಸ್ಥಿತಿ ಹಾಗೂ ಬೌದ್ಧಿಕತೆ ಹೊಂದುವ ಅಧ್ಯಯನ ಸಾಮಾಗ್ರಿ ಸಂಗ್ರಹಿಸಬೇಕು.

ತರಬೇತಿ ಕೇಂದ್ರಗಳು

ಸಂಯೋಜಿತ ಪದವಿ ಮಟ್ಟದ ಪರೀಕ್ಷೆ (ಸಿ. ಜಿ.ಎಲ್) ಗೆ ಆನ್-ಲೈನ್ ಹಾಗೂ ಆಫ್-ಲೈನ್ ತರಬೇತಿ ನೀಡುವ ಅನೇಕ ಪ್ರತಿಷ್ಠಿತ ಖಾಸಗಿ ತರಬೇತಿ ಸಂಸ್ಥೆಗಳಿವೆ. ಪ್ರಮುಖವಾಗಿ ಮಹೇಂದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಟ್ರೈನಿಂಗ್, ಕರಿಯರ್ ಪವರ್, ಕರಿಯರ್ ಲಾಂಚರ್, ಪ್ಯಾರಾಮೌಂಟ್ ಕೋಚಿಂಗ್ ಸೆಂಟರ್, ಬಿ.ಎಸ್.ಸಿ. ಅಕಾಡೆಮಿ ಸೇರಿದಂತೆ ಅನೇಕ ಸ್ಥಳೀಯವಾಗಿ ತರಬೇತಿ ನೀಡುವ ತರಬೇತಿ ಸಂಸ್ಥೆಗಳಿವೆ.

ತರಬೇತಿ ಸಂಸ್ಥೆಗಳಲ್ಲಿ ಪ್ರಿಲೋಡೆಡ್ ಅನಿಮೇಟೆಡ್ ವಿಡಿಯೊಗಳು, ಡಿಜಿಟಲ್ ಕಂಟೆಂಟ್, ಲಭ್ಯವಿರುತ್ತದೆ. ಪ್ರಮುಖವಾಗಿ ಸರಣಿಯಾಗಿ ಪರೀಕ್ಷೆಗಳನ್ನು ಬರೆದು ಅಭ್ಯಾಸ ಮಾಡುವುದರಿಂದ ಪರೀಕ್ಷಾ ಕೇಂದ್ರದಲ್ಲಿ ಉಂಟಾಗಬಹುದಾದ ಒತ್ತಡ ಕಡಿಮೆಯಾಗುತ್ತದೆ. ಜೊತೆಗೆ ನೈಜ ಸಾಮರ್ಥ್ಯದ ವಾಸ್ತವಿಕತೆ ಅರಿವಾಗುತ್ತದೆ. ತರಬೇತಿ ಪಡೆಯುವುದನ್ನು ಪರೀಕ್ಷಾರ್ಥಿಗಳು ಸ್ವಸಾಮರ್ಥ್ಯದ ಮೇಲೆ ನಿರ್ಧಾರ ಮಾಡಬೇಕು.

ಮಾನಸಿಕ ಸಿದ್ಧತೆ ಅಗತ್ಯ

ಅಭ್ಯರ್ಥಿಗಳು ಅಧ್ಯಯನ ಸಾಮಗ್ರಿ ಸಂಗ್ರಹಿಸುವುದು ಮತ್ತು ತರಬೇತಿ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳುವಷ್ಟೇ ಆದ್ಯತೆಯನ್ನು ಮಾನಸಿಕ ಸಿದ್ಧತೆಗೂ ನೀಡಬೇಕು

ಸ್ಪರ್ಧಾತ್ಮಕ ಪರೀಕ್ಷೆ ಎಂಬುದು ಒಂದು ರೀತಿಯ ಮಾನಸಿಕ ಆಟ (ಸೈಕಾಲಾಜಿಕಲ್ ಗೇಮ್)ವಿದ್ದಂತೆ. ಕಣ್ಮುಂದೆ ಪ್ರಶ್ನೆ ಉತ್ತರಗಳೆರಡೂ ಇದ್ದರೂ ಸರಿ ಉತ್ತರ ನಿರ್ಧರಿಸಲಾಗದಂತಹ ಪರಿಸ್ಥಿತಿ ಇರುತ್ತದೆ. ಅಭ್ಯಾಸದಲ್ಲಿನ ಲೋಪ, ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ವ್ಯವಧಾನವಿಲ್ಲದಿರುವುದು ಹಾಗೂ ವಿವೇಚನೆಯ ಕೊರತೆಯಿಂದಾಗಿ ಮನಸ್ಸಿನಲ್ಲಿ ಗೊಂದಲವೇರ್ಪಡುವುದೇ ಇಂಥ ಪರಿಸ್ಥಿತಿಗೆ ಕಾರಣ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸುಗಳಿಸಬೇಕಾದರೆ ವಿಷಯವನ್ನು ಶಬ್ದ ಹಾಗೂ ಅಕ್ಷರ ರೂಪಕ್ಕೆ ಬದಲಾಗಿ ವಸ್ತು ರೂಪದಲ್ಲಿ ಕೂಡಿಡಬೇಕು. ಕಂಠಪಾಠ ಅಥವಾ ಮೇಲುಸ್ತರದ ಓದು ಕೆಲ ಸಮಯದ ಮಟ್ಟಿಗೆ ನೆನಪಿನಲ್ಲಿ ಉಳಿಯುತ್ತದೆ. ಕೃತಕವಾದ ಜ್ಞಾನವನ್ನು ತಂದು ಕೊಡುತ್ತದೆ. ಆದರೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸುಗಳಿಸಬೇಕಾದರೆ ಸಹಜ ಮತ್ತು ವಸ್ತು ಆಧಾರಿತ ಕಲಿಕೆಯಿಂದ ಮಾತ್ರ ಸಾಧ್ಯ.

(ಮುಂದಿನ ವಾರ: ಎರಡು ಮತ್ತು ಮೂರನೇ ಹಂತಗಳ ಪರೀಕ್ಷಾ ಸಿದ್ಧತೆ)

ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಪರೀಕ್ಷಾ ಮಾರ್ಗದರ್ಶಿ

ಸಾಮಾನ್ಯ ಅಧ್ಯಯನ: ಮಾದರಿ ಪ್ರಶ್ನೋತ್ತರ

ಕೆ.ಎಚ್. ಮಂಜುನಾಥ್

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ 70 ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳ ನೇರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಗೆ ನಿಗದಿಪಡಿ ಸಿರುವ ಪತ್ರಿಕೆ–2ರಲ್ಲಿನ ‘ಸಾಮಾನ್ಯ ಅಧ್ಯಯನ‘ ಕುರಿತಾದ ಮಾದರಿ ಬಹುಆಯ್ಕೆಗಳ ಪ್ರಶ್ನೋತ್ತರಗಳು ಇಲ್ಲಿವೆ.

1) ಪದ್ಮಶ್ರೀ ಪುರಸ್ಕೃತ ಸಿಂಧೂ ತಾಯಿ ಸಪ್‌ಕಾಲ್ ಅವರು ಇತ್ತೀಚಿಗೆ ನಿಧನರಾದರು. ಅವರ ವಿಶೇಷತೆ ಏನು?

ಎ) 2000ಕ್ಕೂ ಅಧಿಕ ಅನಾಥ ಮಕ್ಕಳನ್ನು ದತ್ತು ಪಡೆದು ಸಾಕಿ ಸಲಹಿದ್ದರು

ಬಿ) ಸಾವಿರಾರು ಅಂಗವಿಕಲರಿಗೆ ಉದ್ಯೋಗ ನೀಡಿ ಸಲಹಿದ್ದರು

ಸಿ) ಮಾತು ಬರದ ಮಕ್ಕಳಿಗೆ ಚಿಕಿತ್ಸೆ ನೀಡುವ ನಾಟಿ ವೈದ್ಯರಾಗಿ ಪ್ರಸಿದ್ಧರಾಗಿದ್ದರು.

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:ಎ

2) ಮೊಬೈಲ್ ಮತ್ತಿತರ ಸಾಧನಗಳಲ್ಲಿ ಅಮೆರಿಕದ ಜಿಪಿಎಸ್, ಭಾರತದ ನಾವಿಕ ಮೊದಲಾದವುಗಳನ್ನು ಏಕಕಾಲದಲ್ಲಿ ಬಳಸಲು ಅನುಕೂಲವಾಗುವ ದೇಶೀಯ ಮಾರ್ಗದರ್ಶಿ ಚಿಪ್ (ರೇಡಿಯೊ ಅರ್ಥ ರಿಸೀವರ್) ಅನ್ನು ಬಾಂಬೆ ಐಐಟಿಯಲ್ಲಿ ಪ್ರೊ. ರಾಜೇಶ್ ಹರಿಶ್ಚಂದ್ರ ಝೆಲೆ ಮತ್ತು ಅವರ ತಂಡ ಅಭಿವೃದ್ಧಿಪಡಿಸಿದೆ. ಹಾಗಾದರೆ ಅದರ ಹೆಸರೇನು?

ಎ) ನಾವಿಕ ಬಿ) ಧ್ರುವ

ಸಿ) ನ್ಯಾವಿಗೇಟರ್

ಡಿ) ನಚಿಕೇತ

ಉತ್ತರ:ಬಿ

3) ಪಾಕಿಸ್ತಾನದ ವಾಯವ್ಯ ಭಾಗದಲ್ಲಿರುವ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಕರಕ್ ಜಿಲ್ಲೆಯಲ್ಲಿರುವ ……100 ವರ್ಷದಷ್ಟು ಹಳೆಯದಾದ ಹಿಂದೂ ದೇವಾಲಯವನ್ನು ಪುನರುತ್ಥಾನಗೊಳಿಸಿ, ಇತ್ತೀಚೆಗೆ ಯಾತ್ರಾರ್ಥಿಗಳ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಹಾಗಾದರೆ ಆ ದೇವಾಲಯದಲ್ಲಿ ಯಾವ ಸಂತರ ಸಮಾಧಿ ಇದೆ?

ಎ) ಮಹಾರಾಜ ಪರಮಹಂಸ ಜೀ

ಬಿ) ಸ್ವಾಮಿ ನಾರಾಯಣ

ಸಿ) ಶಂಕರಾಚಾರ್ಯ

ಡಿ) ಮಧ್ವಾಚಾರ್ಯ

ಉತ್ತರ: ಎ

4) ಬೇಲೂರು, ಹಳೆಬೀಡು ದೇವಾಲಯಗಳ ನಿರ್ಮಾಣಕ್ಕೆ ಬಳಸಲಾದ ಶಿಲೆ ಯಾವುದು?

ಎ) ಗ್ರಾನೈಟ್

ಬಿ) ಸುಣ್ಣದ ಕಲ್ಲು/ ಲೈಮ್ ಸ್ಟೋನ್

ಸಿ) ಮರಳುಗಲ್ಲು/ಸ್ಯಾಂಡ್ ಸ್ಟೋನ್

ಡಿ) ಬಳಪದ ಕಲ್ಲು/ಸೋಪ್ ಸ್ಟೋನ್

ಉತ್ತರ: ಡಿ

5) ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಎರಡು ರಾಷ್ಟ್ರಗಳಿಗೆ ರಾಷ್ಟ್ರಗೀತೆ ಬರೆದ ವಿಶ್ವದ ಏಕೈಕ ವ್ಯಕ್ತಿ ರವೀಂದ್ರನಾಥ್ ಟ್ಯಾಗೋರ್

2)ರವೀಂದ್ರನಾಥ್ ಟ್ಯಾಗೋರ್ ಹುಟ್ಟಿ 150 ವರ್ಷಗಳಾದಾಗ ಅವರು ಬರೆದ ಜನಗಣಮನ ಗೀತೆಗೆ 100 ವರ್ಷ ತುಂಬಿತ್ತು.

3) ಜನಗಣಮನ ರಾಷ್ಟ್ರಗೀತೆ ಹಾಡಲು 52 ಸೆಕೆಂಡುಗಳು ಸಾಕು.

4) ‘ಜನಗಣಮನ‘ ರಾಷ್ಟ್ರಗೀತೆಯಲ್ಲಿ ದಕ್ಷಿಣ ಭಾರತದ ಬಗ್ಗೆ ಮಹತ್ವ ನೀಡಿಲ್ಲ, ಭಾರತದಲ್ಲಿ ಇಲ್ಲದ ಸಿಂಧ್‌ನ ಬಗ್ಗೆ ಉಲ್ಲೇಖವಿದೆ. ಬ್ರಿಟಿಷ್ ರಾಜನನ್ನು ಹೊಗಳಲು ಬರೆದ ಗೀತೆ ಈ ಮೊದಲಾದ ಟೀಕೆಗಳು ಇವೆ.

ಉತ್ತರ ಸಂಕೇತ:-

ಎ) ಮೊದಲ ಎರಡು ಮಾತ್ರ ಸರಿ

ಬಿ) ಕೊನೆಯ ಎರಡು ಮಾತ್ರ ಸರಿ

ಸಿ) ಎಲ್ಲಾ ಹೇಳಿಕೆಗಳು ಸರಿ

ಡಿ) ಎಲ್ಲಾ ಹೇಳಿಕೆಗಳು ತಪ್ಪು.

ಉತ್ತರ:ಸಿ

6) ಶ್ರೀ ರಾಮನಾಥ ಕೋವಿಂದ್ ಅವರು...

ಎ) ಭಾರತದ 15ನೇ ರಾಷ್ಟ್ರಾಧ್ಯಕ್ಷರು

ಬಿ) ಭಾರತದ 13ನೇ ರಾಷ್ಟ್ರಾಧ್ಯಕ್ಷರು

ಸಿ) ಭಾರತದ 12ನೇ ರಾಷ್ಟ್ರಾಧ್ಯಕ್ಷರು

ಡಿ) ಭಾರತದ 14ನೇ ರಾಷ್ಟ್ರಾಧ್ಯಕ್ಷರು

ಉತ್ತರ:ಡಿ

7) ಈ ಕೆಳಗೆ ನೀಡಲಾದ ರಾಜ್ಯಗಳ ಪೈಕಿ ಯಾವುದರಲ್ಲಿ ನಗರದ ಜನಸಂಖ್ಯೆ ಅತಿ ಹೆಚ್ಚು?

ಎ) ಮಣಿಪುರ ಬಿ) ಗೋವಾ

ಸಿ) ಅರುಣಾಚಲ ಪ್ರದೇಶ

ಡಿ) ತಮಿಳುನಾಡು

ಉತ್ತರ: ಬಿ (ವಿವರಣೆ: 2011ರ ಜನಗಣತಿಯ ಪ್ರಕಾರ ಗೋವಾ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 49.8 ರಷ್ಟು ಜನ ನಗರಗಳಲ್ಲಿ ವಾಸಿಸುತ್ತಾರೆ)

8) ಇವುಗಳಲ್ಲಿ ಯಾವುದು ಸರಿಯಾಗಿದೆ

ಎ) ವಿಶ್ವದ ಅತಿದೊಡ್ಡ ಖಂಡ- ಉತ್ತರ ಅಮೆರಿಕ

ಬಿ) ಜಗತ್ತಿನಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶ- ಬೀಜಿಂಗ್

ಸಿ) ವಿಶ್ವದಲ್ಲೇ ಅತಿ ಎತ್ತರದಲ್ಲಿರುವ ಪ್ರಸ್ಥಭೂಮಿ- ಟಿಬೆಟ್

ಡಿ) ವಿಶ್ವದ ಅತಿದೊಡ್ಡ ಮರುಭೂಮಿ- ಥಾರ್ ಮರುಭೂಮಿ

ಉತ್ತರ:ಸಿ

(ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾ ಪರೀಕ್ಷಾ ಕೇಂದ್ರ, ಬೆಂಗಳೂರು)

ಸಾಮಾನ್ಯ ಜ್ಞಾನ – ಪರೀಕ್ಷಾ ಮಾರ್ಗದರ್ಶಿ

ಭಾಗ 4

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ರಾಜ್ಯ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಈ ಪರೀಕ್ಷೆಯಲ್ಲಿನ ‘ಸಾಮಾನ್ಯ ಜ್ಞಾನ‘ ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಈ ಕೆಳಗೆ ಉಲ್ಲೇಖಿಸಿರುವ ರಾಷ್ಟ್ರಗಳಲ್ಲಿ ಯಾರು ಉಕ್ರೇನ್ ದೇಶದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ?

ಎ) ಚೀನಾ ಬಿ) ಅಮೆರಿಕ

ಸಿ) ರಷ್ಯಾ ಡಿ) ಟರ್ಕಿ

ಉತ್ತರ: ಸಿ

2) ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ (Counter-Terrorism Committee) ಅಧ್ಯಕ್ಷ ಸ್ಥಾನ ಭಾರತಕ್ಕೆ ಒಲಿದಿದೆ. ಈ ಸ್ಥಾನಕ್ಕೆ ಯಾರನ್ನು ನೇಮಕ ಮಾಡಲಾಗಿದೆ?

ಎ) ಅನುಪಮ ರಾವ್ ಬಿ) ಜೆ. ಸುಶೀಲ ಕುಮಾರ

ಸಿ)ಟಿ.ಎಸ್. ತಿರುಮೂರ್ತಿ ಡಿ) ದೀಪಾ ಫರ್ನಾಂಡಿಸ್

ಉತ್ತರ: ಸಿ

3) ವಿಶ್ವದ ಅತಿಹೆಚ್ಚು ಮೌಲ್ಯಯುತ ಕಂಪನಿ (3 ಟ್ರಿಲಿಯನ್ ಡಾಲರ್ ಮಾರುಕಟ್ಟೆಯ ಮೌಲ್ಯ) ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕಂಪನಿ ಯಾವುದು ?

ಎ) ಆ್ಯಪಲ್ ಬಿ) ಮೈಕ್ರೋ ಸಾಫ್ಟ್

ಸಿ) ವಿಪ್ರೋ ಡಿ) ಟಿಸಿಎಸ್

ಉತ್ತರ:- ಎ

4) ಭಾರತ ಮತ್ತು ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ನಡುವೆ ನಡೆಯಲಿರುವ ಮೂರು ಏಕದಿನ ಸರಣಿಯ ಕ್ರಿಕೆಟ್ ಪಂದ್ಯಗಳಲ್ಲಿ ಕನ್ನಡಿಗ ಕೆ.ಎಲ್.ರಾಹುಲ್ ಭಾರತದ ತಂಡವನ್ನು ಮುನ್ನಡೆಸಲಿದ್ದಾರೆ. ಹಾಗಾದರೆ ರಾಹುಲ್ ಸೇರಿದಂತೆ ಇಲ್ಲಿವರೆಗೆ ಭಾರತದ ಕ್ರಿಕೆಟ್ ತಂಡವನ್ನು ಮುನ್ನಡೆಸಿದ ಕನ್ನಡಿಗರೆಷ್ಟು?

ಎ) 10 ಬಿ) 5 ಸಿ) 3 ಡಿ) 8

ಉತ್ತರ:- ಬಿ

(ವಿವರಣೆ: ಭಾರತದ ತಂಡವನ್ನು ಮುನ್ನಡೆಸಿದವರಲ್ಲಿ ಜಿ.ಆರ್. ವಿಶ್ವನಾಥ್, ಸೈಯದ್ ಕಿರ್ಮಾನಿ ಎರಡನೆಯವರು, ರಾಹುಲ್ ದ್ರಾವಿಡ್ ಮೂರನೆಯವರು. ಅನಿಲ್ ಕುಂಬ್ಳೆ ನಾಲ್ಕನೆಯವರು, ಕೆ.ಎಲ್. ರಾಹುಲ್ ಐದನೆಯವರು)

5) ಭಾರತ ಈ ದಶಕದಲ್ಲೇ ಅತಿ ಹೆಚ್ಚು ಚಿನ್ನವನ್ನು 2021ರಲ್ಲಿ ಆಮದು ಮಾಡಿಕೊಂಡಿದೆ. ಹಾಗಾದರೆ ಭಾರತ ಆಮದು ಮಾಡಿಕೊಂಡಿರುವ ಚಿನ್ನದ ಪ್ರಮಾಣವೆಷ್ಟು?

ಎ) 1050 ಟನ್ ಬಿ) 430 ಟನ್

ಸಿ) 1250 ಟನ್ ಡಿ) 850 ಟನ್

ಉತ್ತರ:-ಎ

6) ಕರ್ನಾಟಕದ ಯಾವ ಉತ್ಸವವನ್ನು ವಿಶ್ವ ಪಾರಂಪರಿಕ ಆಚರಣೆಗಳ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವವನ್ನು ಯುನೆಸ್ಕೊ ಮುಂದೆ ಇಡಲಾಗಿದೆ?

ಎ) ಬೆಂಗಳೂರಿನ ಕರಗ

ಬಿ) ಯುಗಾದಿ ಉತ್ಸವ

ಸಿ) ಸಾರ್ವಜನಿಕ ಗಣೇಶೋತ್ಸವ

ಡಿ) ಮೈಸೂರು ದಸರಾ

ಉತ್ತರ: ಡಿ

7) ಯಾರ ಸಹಾಯವೂ ಇಲ್ಲದೇ ಏಕಾಂಗಿಯಾಗಿ ದಕ್ಷಿಣ ಧ್ರುವವನ್ನು ತಲುಪಿದ ಭಾರತೀಯ ಮೂಲದ ಬ್ರಿಟಿಷ್ ಕ್ಯಾಪ್ಟನ್ ಯಾರು?

ಎ) ಹರ್‌ಪ್ರೀತ್ ಚಾಂದಿ ಬಿ) ಹರ್ ಚರಣ ಸಿಂಗ್ ಬಾದಲ್

ಸಿ) ಅಮೃತಾ ಕೌರ್ ಡಿ) ಜೈಸಿಂಗ್ ಶೇರಾವಾಲಾ

ಉತ್ತರ:ಎ

8) `ಬುಲ್ಲಿ ಬಾಯಿ’ ಏನಿದು?

ಎ) ಮೈಕ್ರೋಸಾಫ್ಟ್ ಕಾರ್ಪೊರೇಷನ್ ಗಿಟ್‌ಹಬ್ ಪ್ಲಾಟ್‌ಫಾರ್ಮ್‌ನಲ್ಲಿ ಸೃಷಿಸಲಾದ ಒಂದು ಅಪ್ಲಿಕೇಷನ್

ಬಿ) ಇನ್‌ಫೋಸಿಸ್ ಕಂಪನಿ ಸೃಷ್ಟಿಸಿದ ಒಂದು ಅಪ್ಲಿಕೇಷನ್

ಸಿ) ಮಣಿಪುರದ ಒಂದು ಜನಪದ ಕ್ರೀಡೆ

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:ಎ

ಮಾಹಿತಿ: Spardha Bharathi UPSC, ಯೂಟ್ಯೂಬ್ ಚಾನೆಲ್

ಸಹಾಯಕ ಪ್ರಾಧ್ಯಾಪಕರ ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ನಿಮಗಿದು ಗೊತ್ತೇ?

ಟಾರ್ಪೆಡೊ

ಟಾರ್ಪೆಡೊ ಒಂದು ಜಲಾಂತರ್ಗಾಮಿ (ಸಬ್‌ಮೆರೀನ್) ನೌಕೆ. ಇದೊಂದು ಸ್ವಯಂಚಾಲಿತ ಅಸ್ತ್ರ. ಕಡಲಾಳದಿಂದಲೇ ಕ್ಷಿಪಣಿ ಪ್ರಯೋಗಿಸುವ ನೌಕೆ. ಶತ್ರು ಪಾಳಯದ ಜಲಾಂತರ್ಗಾಮಿಗಳ ಮೇಲೆ ದಾಳಿ ನಡೆಸುವುದಕ್ಕಾಗಿ ಟಾರ್ಪೆಡೊವನ್ನು ರೂಪಿಸಲಾಗಿದೆ. ಆಧುನಿಕ ಟಾರ್ಪೆಡೊದಲ್ಲಿ ಆಳ ಮತ್ತು ಚಲಿಸುವ ದಿಕ್ಕನ್ನು ನಿಯಂತ್ರಿಸುವ ಸೂಕ್ಷ್ಮ ಪರಿಕರಗಳಿರುತ್ತವೆ. ಶತ್ರುಗಳ ಹಡಗು ಮತ್ತು ಜಲಾಂತರ್ಗಾಮಿಗಳನ್ನು ನಾಶಪಡಿಸುವುದಕ್ಕಾಗಿ ಈ ಅಸ್ತ್ರವನ್ನು ಬಳಸಲಾಗುತ್ತದೆ.

1275ರಲ್ಲಿ ಈಜಿಪ್ಟ್‌ನ ರಾಜ ಮಾಮುಲಿಕ್ ಸುಲ್ತಾನೇಟ್‌ನ ಆಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಸೇನಾ ವಿಜ್ಞಾನಿ ಹಸನ್ ಅಲ್ ರಾಮ್ಮಹ್ (Arab engineer `Hasan al-Rammah), ನೀರಿನಲ್ಲಿ ವೇಗವಾಗಿ ಚಲಿಸಬಲ್ಲ ಹಾಗೂ ಶತ್ರುಗಳನ್ನು ನೀರಿನಲ್ಲಿ ಮುಳುಗಿಸುವ ಸಾಧನದ ಬಗ್ಗೆ ಉಲ್ಲೇಖಿಸಿ ಲೇಖನವೊಂದನ್ನು ಬರೆದಿದ್ದರು. ನಂತರದ ದಿನಗಳಲ್ಲಿ ಇಂಗ್ಲೆಂಡಿನ ರಾಜ ಜೇಮ್ಸ್ ಆಡಳಿತದಲ್ಲಿದ್ದ ಎಂಜಿನಿಯರ್ ಕಾರ್ನೆಲಿಯಸ್ ಡ್ರೇಬೆಲ್ (Dutchman Cornelius Drebbel) ಸಣ್ಣ ಟಾರ್ಪೆಡೊ(spar torpedoes) ತಯಾರಿಸಿದರು. ಇದನ್ನು 1626ರ ಲಾ ರೊಚೆಲ್ಲೆ ಮೇಲಿನ ದಾಳಿಯಲ್ಲಿ ಬಳಸಲಾಯಿತು (expeditions to La Rochelle in 1626) . ಮುಂದೆ 1855ರಲ್ಲಿ ರಷ್ಯನ್ನರು ಕ್ರಿಮಿಯನ್ ಯುದ್ದದಲ್ಲಿ ಬ್ರಿಟಿಷರ ಹಡಗುಗಳನ್ನು ಉರುಳಿಸಲು ಟಾರ್ಪೆಡೊಗಳನ್ನು ಬಳಸಿದರು.

1866ರಲ್ಲಿ ಬ್ರಿಟನ್‌ನ ಎಂಜಿನಿಯರ್ ರಾಬರ್ಟ್ ವೈಟ್‌ಹೆಡ್ ಆಧುನಿಕ ಟಾರ್ಪೆಡೊಗಳನ್ನು ಅಭಿವೃದ್ಧಿಪಡಿಸಿದರು. ಈ ಟಾರ್ಪೆಡೊ ನೀರಿನೊಳಗೆ ಗಂಟೆಗೆ 13 ಕಿ.ಮೀ ವೇಗದಲ್ಲಿ (7 knots) ಚಲಿಸಬಲ್ಲ ಸಾಮರ್ಥ್ಯ ಹೊಂದಿತ್ತು. ಇದಾದ ನಂತರ ಆಧುನಿಕ ಉಪಕರಣಗಳೊಂದಿಗೆ ಹಲವು ಟಾರ್ಪೆಡೊಗಳು ತಯಾರಾದವು. ❖

ಪ್ರಜಾವಾಣಿ ಉದ್ಯೋಗ ವಾರ್ತೆ

ಭೂ ಮಾಪಕರ ಹುದ್ದೆಗೆ ಅರ್ಜಿ ಆಹ್ವಾನ

ಭೂ ಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳ ಇಲಾಖೆ ಭೂ ಮಾಪಕರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಭೂ ಮಾಪಕ

ಹುದ್ದೆಗಳ ಸಂಖ್ಯೆ: 3000

ಸ್ಥಳ: ಕರ್ನಾಟಕದೆಲ್ಲೆಡೆ

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಯು ದ್ವಿತೀಯ ಪಿಯುಸಿಯನ್ನು ಶೇ 60 ಅಂಕಗಳೊಂದಿಗೆ ಪಾಸಾಗಿರಬೇಕು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಇ, ಬಿಟೆಕ್ (ಸಿವಿಲ್), ಡಿಪ್ಲೊಮಾ ಸಿವಿಲ್ ಎಂಜಿನಿಯರಿಂಗ್ ಮುಗಿಸಿದವರು ಅರ್ಜಿ ಸಲ್ಲಿಸಬಹುದು.

ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗೆ ಕನಿಷ್ಠ 18 ಹಾಗೂ ಗರಿಷ್ಠ 65 ವರ್ಷ ಮೀರಿರಬಾರದು.

ಅರ್ಜಿ ಶುಲ್ಕ: ₹ 1000

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜನವರಿ 21, 2022

ಹೆಚ್ಚಿನ ಮಾಹಿತಿಗೆ: **https://rdservices.karnataka.gov.in/**

ಶಿವಮೊಗ್ಗ ಕೋರ್ಟ್‌ನಲ್ಲಿ ಹುದ್ದೆಗಳು

ಶಿವಮೊಗ್ಗ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ ಘಟಕದ ವಿವಿಧ ನ್ಯಾಯಲಯಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಬೆರಳಚ್ಚು ನಕಲುಗಾರ, ಬೆರಳಚ್ಚುಗಾರ ಹಾಗೂ ಶೀಘ್ರಗಾರ ಲಿಪಿಗಾರ

ಹುದ್ದೆಗಳ ಸಂಖ್ಯೆ: 17

ಸ್ಥಳ: ಶಿವಮೊಗ್ಗ

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಪದವಿಯೊಂದಿಗೆ ಹುದ್ದೆಗೆ ಸಂಬಂಧಿಸಿದ ಸರ್ಟಿಫಿಕೇಟ್ ಕೋರ್ಸ್ ಮುಗಿಸಿರಬೇಕು.

ವಯೋಮಿತಿ: ಕನಿಷ್ಠ 18 ವರ್ಷ. ಸಾಮಾನ್ಯ ವರ್ಗಕ್ಕೆ 35 ವರ್ಷ, 2ಎ, 2ಬಿ. 3ಎ, 3ಬಿ ವರ್ಗದವರಿಗೆ 38 ವರ್ಷ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ, ಪ್ರವರ್ಗ 1 ಕ್ಕೆ ಗರಿಷ್ಠ 40 ವರ್ಷ ವಯೋಮಿತಿ ನಿಗದಿ ಮಾಡಲಾಗಿದೆ.

ಅರ್ಜಿ ಶುಲ್ಕ: ಸಾಮಾನ್ಯ ವರ್ಗದವರಿಗೆ ₹ 200, ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹ 100 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜನವರಿ 30, 2022

ಹೆಚ್ಚಿನ ಮಾಹಿತಿಗೆ: **https://districts.ecourts.gov.in/shivamogga**

ಮೈನಿಂಗ್, ರಿಸರ್ಚ್ ಆಫೀಸರ್ ಹುದ್ದೆಗಳಿಗೆ ಅರ್ಜಿ

ಕೇಂದ್ರ ಲೋಕಸೇವಾ ಆಯೋಗವು ಮೈನಿಂಗ್, ರಿಸರ್ಚ್ ಆಫೀಸರ್ ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆಗಳು: ವಿವಿಧ ಆಫೀಸರ್ ಹುದ್ದೆಗಳು

ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ವಯೋಮಿತಿ: ಹುದ್ದೆಗಳಿಗೆ ಅನುಸಾರ ಯುಪಿಎಸ್‌ಸಿ ಪ್ರಕಟಿಸಿರುವ ವಯೋಮಿತಿಯ ಅರ್ಹತೆ ಪಡೆದಿರಬೇಕು. ಇದರ ಮಾಹಿತಿಗೆ ವೆಬ್‌ಸೈಟ್ ನೋಡಬಹುದು.

ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನ ಮೂಲಕ ಆಯ್ಕೆ ನಡೆಯಲಿದೆ.

ಅರ್ಜಿ ಸಲ್ಲಿಕೆ ವಿಧಾನ: ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಇತರೆ ವಿಧಾನದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ: **27-01-2022**

ವೆಬ್‌ಸೈಟ್: **www.upsc.gov.in**

ಕ್ರೀಡಾ ಕೋಟಾದಡಿಯಲ್ಲಿ ಅರ್ಜಿ ಆಹ್ವಾನ

ರೈಲ್ವೆ ಇಲಾಖೆಯ ಆಗ್ನೇಯ (South Eastern Railway) ರೈಲ್ವೆ ವಿಭಾಗದಲ್ಲಿ ಅರ್ಜಿ ಆಹ್ವಾನ

ಸದರಿ ಹುದ್ದೆಗಳು ಗ್ರೂಪ್ ಸಿ ಹುದ್ದೆಗಳಾಗಿರುತ್ತವೆ. ಕ್ರಿಕೆಟ್, ಹಾಕಿ, ಬಾಸ್ಕೆಟ್ ಬಾಲ್, ಕುಸ್ತಿ, ಟೇಬಲ್ ಟೆನಿಸ್, ಹ್ಯಾಂಡ್‌ಬಾಲ್, ವಾಟರ್ ಪೋಲೋ ಕ್ರೀಡೆಗಳಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿರಬೇಕು. ಈ ಸಂಬಂಧದ ಹೆಚ್ಚಿನ ಮಾಹಿತಿಗೆ ರೈಲ್ವೆಯ ವೆಬ್‌ಸೈಟ್ ನೋಡಬಹುದು.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು ಕನಿಷ್ಠ 18 ವರ್ಷ ತುಂಬಿರಬೇಕು. ಗರಿಷ್ಠ 25 ವರ್ಷ ಮೀರಿರಬಾರದು. ಪಿಯುಸಿ/ಪದವಿಯಲ್ಲಿ ಪಾಸಾಗಿರಬೇಕು.

ಅಭ್ಯರ್ಥಿಗಳು **https://ser.indianrailways.gov.in/** ವೆಬ್‌ಸೈಟ್‌ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸಬೇಕು, ಅಗತ್ಯ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಕಡೆ ದಿನ: 02-02-2022

ವೆಬ್‌ಸೈಟ್: **https://ser.indianrailways.gov.in**

‘ಪಾದಯಾತ್ರೆ ನಿಲ್ಲಿಸದಿದ್ದರೆ ಕಠಿಣ ಕ್ರಮ ಕೈಗೊಳ್ಳಿ’

ಬೆಂಗಳೂರು: ಹೈಕೋರ್ಟ್ ಛೀಮಾರಿ ಹಾಕಿದ ಬಳಿಕವೂ ಕಾಂಗ್ರೆಸ್ ಮುಖಂಡರು ಮೇಕೆದಾಟು ಹೆಸರಿನಲ್ಲಿ ನಡೆಸುತ್ತಿರುವ ಪಾದಯಾತ್ರೆಯನ್ನು ನಿಲ್ಲಿಸದಿದ್ದರೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಬುಧವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಮೇಕೆದಾಟು ಪಾದಯಾತ್ರೆಯನ್ನು ‘ಓಮೈಕ್ರಾನ್ ಜಾತ್ರೆ’ಯನ್ನಾಗಿ ಪರಿವರ್ತಿಸಿದ ಕಾಂಗ್ರೆಸ್ ಪಕ್ಷಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಕೋವಿಡ್ ಸೋಂಕಿನ ಬಗ್ಗೆ ನಿರ್ಲಕ್ಷ್ಯ ತೋರಿದ ಸರ್ಕಾರಕ್ಕೂ ಚಾಟಿ ಬೀಸಿದೆ. ಸರ್ಕಾರ ಮತ್ತೆ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಳ್ಳಬಾರದು’ ಎಂದಿದ್ದಾರೆ.

ಈಗಾಗಲೇ ಪರಿಸ್ಥಿತಿ ಕೈಮೀರಿದೆ. ನಾಲ್ಕು ದಿನಗಳಿಂದ ಬಸ್‌ಗಳಲ್ಲಿ ಜನರನ್ನು ಕರೆತಂದು ಜಾತ್ರೆ ನಡೆಸುತ್ತಿದ್ದಾರೆ. ಇದರಿಂದ ಮೇಕೆದಾಟು ಯೋಜನೆಯ ಸಾಕಾರ ಅಸಾಧ್ಯ. ಕಾಂಗ್ರೆಸ್ ಪಾದಯಾತ್ರೆಯಿಂದ ಜೆಡಿಎಸ್‌ಗೆ ಆತಂಕವಿಲ್ಲ. ಜನರು ಆರೋಗ್ಯದ ಕುರಿತು ಆತಂಕದಲ್ಲಿದ್ದಾರೆ. ಕೋವಿಡ್ ಅಟ್ಟಹಾಸದ ಹೊತ್ತಿನಲ್ಲಿ ಈ ಯಾತ್ರೆ ಬೇಕಿರಲಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಹೈಕೋರ್ಟ್ ಸೂಚನೆಯಿಂದ ಕಾಂಗ್ರೆಸ್ ಪಾಳಯದಲ್ಲಿ ಆತಂಕ; ಗುರುವಾರ ನಡಿಗೆ ಮುಂದುವರಿಕೆ

ಜೆಡಿಎಸ್ ಕೋಟೆಯಲ್ಲಿ ಕಾಂಗ್ರೆಸ್ ಸದ್ದು

• ಆರ್. ಜಿತೇಂದ್ರ

ರಾಮನಗರ: ಕಾಂಗ್ರೆಸ್‌ಗೆ ಹೈಕೋರ್ಟ್ ತರಾಟೆ ನಂತರ ಪಕ್ಷದ ನಾಯಕರ ವರಸೆ ಬದಲಾಗಿದ್ದು, ಮೇಕೆದಾಟು ಪಾದಯಾತ್ರೆಯ ನಾಲ್ಕನೇ ದಿನವಾದ ಬುಧವಾರದ ನಡಿಗೆ ಸಂದರ್ಭವೂ ಅದು ವ್ಯಕ್ತವಾಯಿತು. ಸರ್ಕಾರ ಪಾದಯಾತ್ರೆಗೆ ತಡೆಯೊಡ್ಡಲಿದೆ ಎಂಬ ಆತಂಕದ ನಡುವೆಯೂ ನಾಯಕರು ನೀರಿಗಾಗಿ ನಡಿಗೆ ಮುಂದುವರಿಸಿದರು.

ಬೆಳಿಗ್ಗೆ 11.30ಕ್ಕೆ ತಡವಾಗಿ ಪಾದಯಾತ್ರೆ ಆರಂಭಗೊಂಡಿತು. ಕನಕಪುರದಲ್ಲಿ ವಾಸ್ತವ್ಯ ಹೂಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಜೊತೆಯಾಗಿ ಚಿಕ್ಕೇನಹಳ್ಳಿಗೆ ಬಂದರು. ಅಲ್ಲಿಂದ ಸುಮಾರು 7 ಕಿ.ಮೀ. ಉದ್ದಕ್ಕೂ ಇಬ್ಬರೂ ಜೊತೆಯಾಗಿಯೇ ಹೆಜ್ಜೆ ಹಾಕಿದರು. ರಾಮನಗರ ತಾಲ್ಲೂಕಿನ ಕೆ.ಪಿ. ದೊಡ್ಡಿ ರೇಷ್ಮೆ ಫಾರಂ ಬಳಿ ಊಟದ ವಿರಾಮ ದೊರೆಯಿತು. ಅಷ್ಟರಲ್ಲಿ ಆಗಲೇ ಹೈಕೋರ್ಟ್ ಛೀಮಾರಿ ಸುದ್ದಿ ನಾಯಕರಿಗೆ ತಲುಪಿದ್ದು, ಅಲರ್ಟ್ ಆದ ಸಿದ್ದರಾಮಯ್ಯ, ಡಿಕೆಶಿ ಜೊತೆಗೂಡಿ ಪಕ್ಷದ ಇತರ ನಾಯಕರೊಂದಿಗೆ ಅಲ್ಲಿಯೇ ಸಭೆ ನಡೆಸಿದರು. ‘ಪಾದಯಾತ್ರೆಯನ್ನು ನಾವೇ ನಿಲ್ಲಿಸುವುದು ಬೇಡ. ಬೇಕಿದ್ದರೆ ಸರ್ಕಾರವೇ ತಡೆಯಲಿ. ಮುಂದೆ ಹೈಕೋರ್ಟ್ ನಿರ್ಧಾರದಂತೆ ನಡೆಯೋಣ’ ಎಂಬ ಒಮ್ಮತದ ನಿರ್ಧಾರಕ್ಕೆ ಬರಲಾಯಿತು.

ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಪೊನ್ನಣ್ಣ ಪಾದಯಾತ್ರೆ ಸ್ಥಳಕ್ಕೆ ಭೇಟಿ ನೀಡಿ ಸಿದ್ದರಾಮಯ್ಯ ಹಾಗೂ ಡಿಕೆಶಿ ಜೊತೆ ಚರ್ಚಿಸಿದರು. ಪಾದಯಾತ್ರೆ ಕುರಿತು ಕೈಗೊಳ್ಳಬಹುದಾದ ಕಾನೂನು ಕ್ರಮಗಳ ಬಗ್ಗೆ ಚರ್ಚೆ ನಡೆಯಿತು. ‘ಹೈಕೋರ್ಟ್‌ಗೆ ಸಲ್ಲಿಕೆಯಾದ ಪಿಐಎಲ್‌ನಲ್ಲಿ ಕೆಪಿಸಿಸಿ ಅಧ್ಯಕ್ಷರನ್ನು ಆರನೇ ಪ್ರತಿವಾದಿಗಳನ್ನಾಗಿಸಲಾಗಿದೆ. ಪಾದಯಾತ್ರೆ ಮುಂದುವರಿಸುವ ಬಗ್ಗೆ ಪಕ್ಷ ಕೈಗೊಳ್ಳುವ ನಿಲುವನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ. ನ್ಯಾಯಾಲಯವು ನೀಡುವ ಆದೇಶವನ್ನು ತಪ್ಪದೇ ಪಾಲಿಸುತ್ತೇವೆ’ ಎಂದು ಪೊನ್ನಣ್ಣ ಪತ್ರಕರ್ತರಿಗೆ ತಿಳಿಸಿದರು.

ಊಟದ ತರುವಾಯ ಸಿದ್ದರಾಮಯ್ಯ ಬೆನ್ನು ನೋವಿನ ಕಾರಣಕ್ಕೆ ಪಾದಯಾತ್ರೆ ಮೊಟಕುಗೊಳಿಸಿ ಬೆಂಗಳೂರಿಗೆ ತೆರಳಿದರು. ಡಿ.ಕೆ. ಶಿವಕುಮಾರ್ ತಮ್ಮ ಬೆಂಬಲಿಗರೊಂದಿಗೆ ನಡಿಗೆ ಮುಂದುವರಿಸಿದರು.

ದಶಕಗಳಿಂದ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತವರ ಕುಟುಂಬದವರು ಪ್ರತಿನಿಧಿಸುತ್ತಿರುವ ರಾಮನಗರ ಕ್ಷೇತ್ರಕ್ಕೆ ಬುಧವಾರ ಹಾಸನ ಜಿಲ್ಲೆಯ ಜನರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಕರೆಸಿದ್ದು ವಿಶೇಷ. ಇವರೊಟ್ಟಿಗೆ ತುಮಕೂರು, ಆನೇಕಲ್ ಭಾಗದಿಂದಲೂ ಬಸ್‌ಗಳಲ್ಲಿ ಜನರನ್ನು ಕರೆತರಲಾಗಿತ್ತು.

ಪಾದಯಾತ್ರೆಯ ಸಂದರ್ಭ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರನ್ನು ಆದಿಚುಂಚನಗಿರಿ ಪೀಠದ ಅರ್ಚಕರಹಳ್ಳಿ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶಂಭುನಾಥಸ್ವಾಮೀಜಿ, ದಸರೀಘಟ್ಟ ಶಾಖಾ ಮಠದ ಚಂದ್ರಶೇಖರನಾಥ ಸ್ವಾಮೀಜಿ, ಕಬ್ಬಳಿ ಶಾಖಾ ಮಠದ ಶಿವಪುತ್ರನಾಥ ಸ್ವಾಮೀಜಿ ಸನ್ಮಾನಿಸಿದರು

ಬೆಂಗಳೂರು- ಮೈಸೂರು ಹೆದ್ದಾರಿ: ವಾಹನ ಸಂಚಾರ ಮಾರ್ಗ ಬದಲು

ಕಾಂಗ್ರೆಸ್ ಪಾದಯಾತ್ರೆ ರಾಮನಗರ ಪ್ರವೇಶಿಸಿದ್ದು, ಇದೇ 13 ಹಾಗೂ 14ರಂದು ಬೆಂಗಳೂರು - ಮೈಸೂರು ಹೆದ್ದಾರಿ ಮಾರ್ಗದಲ್ಲಿ ಸಾಗಲಿದೆ.ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ವಾಹನ ಸಂಚಾರ ಮಾರ್ಗ ವನ್ನು ಬದಲಾಯಿಸಿದೆ.

ಈ ಪಾದಯಾತ್ರೆಯು ಬೆಂಗಳೂರು ನಗರ ತಲುಪುವವರೆಗೂ ಮೈಸೂರು, ಚಾಮರಾಜನಗರ, ಮಡಿಕೇರಿ ಕಡೆಯಿಂದ ಬೆಂಗಳೂರು ಕಡೆಗೆ ಹಾಗೂ ಬೆಂಗಳೂರು ಕಡೆಯಿಂದ ಮೈಸೂರು, ಚಾಮರಾಜನಗರ, ಮಡಿಕೇರಿ ಕಡೆಗೆ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸಲಿರುವ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಇದಕ್ಕೆ ಪರ್ಯಾಯವಾಗಿ ಮೈಸೂರು-ಬನ್ನೂರು- ಕಿರುಗಾವಲು- ಮಳವಳ್ಳಿ- ಹಲಗೂರು- ಸಾತನೂರು-ಕನಕಪುರ -ಹಾರೋಹಳ್ಳಿ -ಕಗ್ಗಲೀಪುರ- ಬನಶಂಕರಿ- ಸಾರಕ್ಕಿ ಮಾರ್ಗವಾಗಿ ಅಥವಾ ಮೈಸೂರು- ಶ್ರೀರಂಗಪಟ್ಟಣ- ಪಾಂಡವಪುರ- ನಾಗಮಂಗಲ- ಬೆಳ್ಳೂರು ಕ್ರಾಸ್- ಕುಣಿಗಲ್ ನೆಲಮಂಗಲ ಮಾರ್ಗವಾಗಿ ಸಂಚರಿಸಬಹುದಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

64 ಮಂದಿ ವಿರುದ್ಧ ಎಫ್‌ಐಆರ್

ರಾಮನಗರ: ಮೇಕೆದಾಟು ಪಾದಯಾತ್ರೆಯ ಮೂರನೇ ದಿನವಾದ ಸೋಮವಾರ ನೀರಿಗಾಗಿ ನಡಿಗೆಯ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ನ 64 ನಾಯಕರ ವಿರುದ್ಧ ಕನಕಪುರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಡಿ.ಕೆ. ಸುರೇಶ್, ಎಸ್. ರವಿ, ಧ್ರುವನಾರಾಯಣ ಜೊತೆಗೆ ಮೈಸೂರು ಭಾಗದ ನಾಯಕರಾದ ಎಚ್.ಸಿ. ಮಹದೇವಪ್ಪ, ಮಂಜುನಾಥ್, ಯತೀಂದ್ರ ಸಿದ್ದರಾಮಯ್ಯ, ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು ಮೊದಲಾದ ಮುಖಂಡರ ಮೇಲೂ ಪೊಲೀಸರು ಎಫ್‌ಐಆರ್ ದಾಖಲು ಮಾಡಿದ್ದಾರೆ.

ಹೆಚ್ಚಿನ ಭದ್ರತೆ ಸಾಧ್ಯತೆ

ನ್ಯಾಯಾಲಯದ ಸೂಚನೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪೊಲೀಸ್ ಭದ್ರತೆಯನ್ನು ಹೆಚ್ಚಿಸಲಾಗುತ್ತಿದೆ. ಹೊರ ಜಿಲ್ಲೆಗಳಿಂದ ಪೊಲೀಸ್ ಸಿಬ್ಬಂದಿಯನ್ನು ಕರೆಯಿಸಿಕೊಳ್ಳಲಾಗುತ್ತಿದೆ. ಪಾದಯಾತ್ರೆ ಮೇಲೆ ಕಣ್ಣಿಡಲು ಭದ್ರತೆಗಾಗಿ ಕೆಎಸ್‌ಆರ್‌ಪಿ, ಡಿಎಆರ್ ತುಕಡಿ ಸೇರಿದಂತೆ ಈಗಾಗಲೇ ಎರಡು ಸಾವಿರ ಪೊಲೀಸರನ್ನು ನಿಯೋಜಿಸಲಾಗಿದೆ.

ಸುದ್ದಿ 2 ನಿಮಿಷ

‘ಬೆಂಗಳೂರಿಗೆ ಕಾಲ್ನಡಿಗೆ ಜಾಥಾ’

ಹಾಸನ: ‘ಮಲೆನಾಡು ಭಾಗದ ಕಾಡಾನೆ ಸಮಸ್ಯೆ ಹಾಗೂ ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿ ವಿಳಂಬ ವಿರೋಧಿಸಿ ಸಕಲೇಶಪುರದಿಂದ ಬೆಂಗಳೂರಿನವರೆಗೂ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳುವ ಬಗ್ಗೆ ಚಿಂತನೆ ನಡೆದಿದೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ಹೇಳಿದರು.

‘ರಾಷ್ಟ್ರೀಯ ಹೆದ್ದಾರಿ ಕಾಮಗಾರಿ 2019ಕ್ಕೆ ಪೂರ್ಣವಾಗಬೇಕಿತ್ತು. ಗುತ್ತಿಗೆದಾರರ ವಿಳಂಬ ಹಾಗೂ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಶೇ 30 ರಷ್ಟು ಕಾಮಗಾರಿ ಮಾತ್ರ ಆಗಿದೆ. ಜನ ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಸಂಘ ಸಂಸ್ಥೆಗಳು ಮತ್ತು ರೈತರ ಸಭೆ ನಡೆಸಿ ಜಾಥಾ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಇದು ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆಗೆ ಪರ್ಯಾಯವಲ್ಲ ಅಥವಾ ಪಕ್ಷ ಸಂಘಟನೆ ಉದ್ದೇಶಕ್ಕೂ ಅಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

ಯಾರು ಏನೇ ಮಾಡಿದರೂ ಪಾದಯಾತ್ರೆ ನಿಲ್ಲದು: ಡಿಕೆಶಿ

ರಾಮನಗರ: ‘ಗುರುವಾರ ಬೆಳಿಗ್ಗೆ 7-8 ಗಂಟೆ ವೇಳೆಗೆ ಸಾಕಷ್ಟು ಬೆಳವಣಿಗೆ ನಡೆಯಬಹುದು. ಏನೇ ಆದರೂ ರಾಮನಗರದಿಂದ ಪಾದಯಾತ್ರೆ ಮುಂದುವರಿಸುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಇಲ್ಲಿನ ಐಜೂರು ವೃತ್ತದಲ್ಲಿ ಬುಧವಾರ ರಾತ್ರಿ ಪಾದಯಾತ್ರೆ ಅಂಗವಾಗಿ ನಡೆದ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

‘ಜನತಾದಳದ ದೊಡ್ಡ ನಾಯಕ ಕುಮಾರಣ್ಣ ನಾವು ರಾಮನಗರದಿಂದ ಪಾದಯಾತ್ರೆ ಮಾಡಬಾರದು ಎನ್ನುತ್ತಾರೆ. ನಿನ್ನೆ ಅಶ್ವತ್ಥನಾರಾಯಣ ಸುದ್ದಿಗೋಷ್ಠಿ ನಡೆಸಿ ತಾವೇ ಮೇಕೆದಾಟು ಅಣೆಕಟ್ಟೆ ಕಟ್ಟುವುದಾಗಿ ಹೇಳಿದ್ದಾರೆ. ಹಾಗೆ ನಡೆದುಕೊಂಡರೆ ಸಂತೋಷ. ‘ಏನಾದರೂ ಮಾಡಿ ಗಲಾಟೆ ಮಾಡಿ’ ಎಂದೂ ಅವರು ಪ್ರಚೋದನೆ ನೀಡಿ ಹೋಗಿದ್ದಾರೆ. ಹೀಗಾಗಿಯೇ ಇಂದು ಎಲ್ಲ ಕಡೆ ಪೊಲೀಸರು ನಿಂತಿದ್ದಾರೆ. ಪೊಲೀಸರು ಏನೇ ದೊಣ್ಣೆ ಹಿಡಿದು ನಿಂತರೂ ಯಾರು ಹೆದರಬೇಕಾಗಿಲ್ಲ’ ಎಂದರು.

‘ ಕೆಂಗಲ್ ಹನುಮಂತಯ್ಯ, ಎಚ್.ಡಿ. ದೇವೇಗೌಡ, ಕುಮಾರಸ್ವಾಮಿ ಈ ನೆಲದಿಂದ ಮುಖ್ಯಮಂತ್ರಿ ಆಗಿದ್ದಾರೆ. ನಾವು ಹೊರಗಿನವರಿಗೆ ಸಾಕಷ್ಟು ತ್ಯಾಗ ಮಾಡಿದ್ದೇವೆ. ಈಗ ಜಿಲ್ಲೆಯ ಜನರಿಗೋಸ್ಕರ ಇಡೀ ರಾಜ್ಯ ಕಾಂಗ್ರೆಸ್ ನಿಮ್ಮ ಮುಂದೆ ನಿಂತಿದೆ’ ಎಂದರು.

‘ತಪ್ಪು ಮುಚ್ಚಿಕೊಳ್ಳಲು ಕಾರಜೋಳರಿಂದ ಸುಳ್ಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನದ ವಿಚಾರದಲ್ಲಿ ಬಿಜೆಪಿ ಸರ್ಕಾರದ ತಪ್ಪು ಮುಚ್ಚಿಕೊಳ್ಳುವ ಸಲುವಾಗಿ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ದಾಖಲೆಗಳನ್ನು ತಿರುಚಿ ಸುಳ್ಳು ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲ ಆರೋಪಿಸಿದರು.

ಎಂ.ಬಿ. ಪಾಟೀಲ

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಪ್ರಯತ್ನ ಆರಂಭಿಸಲಾಗಿತ್ತು. 2017ರ ಮಾರ್ಚ್ 13ರಂದು ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಸಂಪುಟ ಸಭೆ ಒಪ್ಪಿಗೆ ನೀಡಿತ್ತು. 2017ರ ಜೂನ್ 7ರಂದು ಕೇಂದ್ರ ಜಲ ಆಯೋಗಕ್ಕೆ ಡಿಪಿಆರ್ ಸಲ್ಲಿಸಲಾಗಿತ್ತು’ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಡಿಪಿಆರ್ ಸಲ್ಲಿಸುವ ವಿಚಾರದಲ್ಲಿ ಕಾರಜೋಳ ಆಧಾರರಹಿತ ಆರೋಪ ಮಾಡಿದ್ದಾರೆ. 2017ರಲ್ಲಿ ಕೇಂದ್ರ ಜಲ ಆಯೋಗದ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಲಾಯಿತು. ಬದಲಾದ ಮಾರ್ಗಸೂಚಿ ಪ್ರಕಾರ, ಪೂರ್ವಭಾವಿ ಕಾರ್ಯಸಾಧ್ಯತಾ ವರದಿ (ಪಿಎಫ್‌ಆರ್) ಸಲ್ಲಿಸುವಂತೆ ಆಯೋಗ ನಿರ್ದೇಶನ ನೀಡಿತ್ತು. ಅದರಂತೆ 2017ರ ಅಕ್ಟೋಬರ್ 9ರಂದು ಕೇಂದ್ರ ಜಲ ಆಯೋಗಕ್ಕೆ ಪಿಎಫ್‌ಆರ್ ಸಲ್ಲಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಯಾವ ಲೋಪವೂ ಆಗಿಲ್ಲ ಎಂದರು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಕೂಡ ಯೋಜನೆ ಅನುಷ್ಠಾನಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದರು. ಹೊಸ ದರದ ಅನುಸಾರ ಪರಿಷ್ಕೃತ ಡಿಪಿಆರ್ ಸಿದ್ಧಪಡಿಸಿ ಸಲ್ಲಿಸಿದ್ದರು. ಕೇಂದ್ರ ಜಲ ಸಂಪನ್ಮೂಲ ಸಚಿವರನ್ನೂ ಭೇಟಿಯಾಗಿ ಯೋಜನೆಗೆ ಒಪ್ಪಿಗೆ ನೀಡುವಂತೆ ಒತ್ತಡ ಹೇರಿದ್ದರು ಎಂದು ಹೇಳಿದರು.

2015ರ ಮಾರ್ಚ್‌ನಲ್ಲೇ ಸರ್ವಪಕ್ಷಗಳ ನಾಯಕರ ನಿಯೋಗವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಕರೆದೊಯ್ದಿದ್ದ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೇಕೆದಾಟು ಯೋಜನೆಗೆ ಅನುಮೋದನೆ ನೀಡುವಂತೆ ಮನವಿ ಸಲ್ಲಿಸಿದ್ದರು. ವಿವಾದ ಇತ್ಯರ್ಥಕ್ಕೆ ಕರ್ನಾಟಕ, ತಮಿಳುನಾಡು ಮತ್ತು ಪುದುಚ್ಚೇರಿ ಮುಖ್ಯಮಂತ್ರಿಗಳ ಸಭೆ ಕರೆಯುವಂತೆ ಮನವಿ ಮಾಡಲಾಗಿತ್ತು. ಈವರೆಗೆ ಪ್ರಧಾನಿ ಏನನ್ನೂ ಮಾಡಿಲ್ಲ ಎಂದು ದೂರಿದರು.

ಮೇಕೆದಾಟು ಯೋಜನೆ ಪ್ರಸ್ತಾವ ಈಗ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದಿದೆ. ಪ್ರಾಧಿಕಾರದ ಒಪ್ಪಿಗೆ ಮತ್ತು ಕೇಂದ್ರ ಪರಿಸರ ಇಲಾಖೆಯ ಅನುಮತಿ ಮಾತ್ರ ಬಾಕಿ ಇವೆ. ಪ್ರಾಧಿಕಾರದ ಐದು ಸಭೆಗಳಲ್ಲಿ ಚರ್ಚೆಯೇ ಇಲ್ಲದೆ ವಿಷಯ ಮುಂದೂಡಲಾಗಿದೆ. ತ್ವರಿತವಾಗಿ ಅನುಮತಿ ಪಡೆಯುವಲ್ಲಿ ರಾಜ್ಯದ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

‘ಅನಾಮಧೇಯ ಜಾಹೀರಾತು ಕೊಟ್ಟ ಕಾರಜೋಳ’

ಈಗಿನ ಜಲ ಸಂಪನ್ಮೂಲ ಸಚಿವ ಕಾರಜೋಳ ಅವರು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿಲ್ಲ. ಸರ್ಕಾರದ ಟಿಪ್ಪಣಿ ಹಾಳೆಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವುದು, ಅನಾಮಧೇಯ ಜಾಹೀರಾತು ಪ್ರಕಟಿಸುವಂತಹ ಕೆಟ್ಟ ಮಾದರಿ ಅನುಸರಿಸುತ್ತಿದ್ದಾರೆ ಎಂದು ಎಂ.ಬಿ. ಪಾಟೀಲ ಟೀಕಿಸಿದರು.

‘ಗೋವಿಂದ ಕಾರಜೋಳ ಅವರು ದಾಖಲೆಗಳಿಲ್ಲದೆ ಆರೋಪ ಮಾಡುತ್ತಿದ್ದಾರೆ. ನನ್ನ ಬಳಿ ಇರುವ ದಾಖಲೆಗಳನ್ನು ಅವರಿಗೆ ಕಳುಹಿಸುವೆ. ಮೇಧಾವಿಗಳೂ, ಅನುಭವಿಗಳೂ ಆದ ಅವರು ದಾಖಲೆ ನೋಡಿ ಪ್ರತಿಕ್ರಿಯಿಸಲಿ’ ಎಂದರು.

‘ಹೈಕೋರ್ಟ್ ಆದೇಶಕ್ಕೆ ತಲೆಬಾಗುತ್ತೇವೆ’

ರಾಮನಗರ: ‘ನಾವು ಹೈಕೋರ್ಟ್ ಆದೇಶಕ್ಕೆ ತಲೆ ಬಾಗುತ್ತೇವೆ. ಒಂದು ವೇಳೆ ನ್ಯಾಯಾಲಯ ಪಾದಯಾತ್ರೆ ನಿಲ್ಲಿಸುವಂತೆ ಸೂಚಿಸಿದರೆ ಅಂದೇ ನಿಲ್ಲಿಸುತ್ತೇವೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಕೆ.ಪಿ. ದೊಡ್ಡಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ‘ನಮಗೆ ನೆಲದ ಕಾನೂನು ಮತ್ತು ಸಂವಿಧಾನದ ಬಗ್ಗೆ ಗೌರವ ಇದೆ. ಹೀಗಾಗಿ ನ್ಯಾಯಾಲಯ ನೀಡುವ ಆದೇಶಕ್ಕೆ ಬದ್ಧರಾಗಿರುತ್ತೇವೆ. ’ ಎಂದು ಹೇಳಿದರು.

‘ನೈತಿಕ ನಿಲುವೇ ಹೊರತು ದೌರ್ಬಲ್ಯವಲ್ಲ’

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಪಕ್ಷದ ಪ್ರತಿಭಟನೆ ಅಡ್ಡಿ ಮಾಡಬಾರದು ಎಂಬುದು ಬಿಜೆಪಿ ಸರ್ಕಾರದ ಪ್ರಜಾಸತ್ತಾತ್ಮಕ ಹಾಗೂ ನೈತಿಕ ನಿಲುವೇ ಹೊರತು ದೌರ್ಬಲ್ಯವಲ್ಲ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

‘ಸರ್ಕಾರದ ನಿಯಮಗಳನ್ನು ಪಾಲಿಸಲಿಲ್ಲ. ಅಧಿಕಾರಿಗಳಿಗೆ ತಮ್ಮ ಕರ್ತವ್ಯ ಮಾಡಲು ಬಿಡಲಿಲ್ಲ. ಈಗ ಮಾನ್ಯ ಉಚ್ಚ ನ್ಯಾಯಾಲಯದ ಛೀಮಾರಿಗಾದರೂ ಕಾಂಗ್ರೆಸ್ ಪಕ್ಷ ತಲೆಬಾಗುವುದೇ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಪ್ರಾಣ ಬಲಿ ಪಡೆಯುವ ದುರುದ್ದೇಶ’

‘ಮೇಕೆದಾಟು ಪಾದಯಾತ್ರೆಯು ಕೋವಿಡ್ ಹರಡುವ ಮೂಲಕ ಜನರ ಪ್ರಾಣಬಲಿ ಪಡೆಯುವ ದುರುದ್ದೇಶದಿಂದ ಕೂಡಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಟೀಕಿಸಿದ್ದಾರೆ.

‘ಪಾದಯಾತ್ರೆ ಬಗ್ಗೆ ರಾಜ್ಯ ಹೈಕೋರ್ಟ್ ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿದೆ. ಕಾಂಗ್ರೆಸ್ ಪಕ್ಷದವರಿಗೆ ನ್ಯಾಯಾಂಗದ ಕುರಿತು ವಿಶ್ವಾಸ ಇದ್ದರೆ ಮತ್ತು ಜನರ ಜೀವದ ಬಗ್ಗೆ ಕಳಕಳಿ ಇದ್ದರೆ ತಕ್ಷಣವೇ ಪಾದಯಾತ್ರೆ ರದ್ದುಪಡಿಸಿ, ಕೋವಿಡ್ ಹೆಚ್ಚಳಕ್ಕೆ ಕಾರಣವಾದ ಬಗ್ಗೆ ಜನರ ಕ್ಷಮೆ ಕೇಳಬೇಕು’ ಎಂದು ಒತ್ತಾಯಿಸಿದ್ದಾರೆ.

ಬೆಂಗಳೂರು: ಜ.31ರ ವರೆಗೆ 1– 9 ತರಗತಿ ಸ್ಥಗಿತ

ಒಂದನೇ ಪುಟದಿಂದ

'ಶಾಲೆ, ಪಿಯು ಕಾಲೇಜುಗಳಲ್ಲಿ ಕೋವಿಡ್ ಪ್ರಕರಣ ದೃಢಪಟ್ಟರೆ, ಎಲ್ಲ ಮಕ್ಕಳಿಗೂ ಪರೀಕ್ಷೆ ಮಾಡಿಸಬೇಕು. ಶಾಲೆಯನ್ನು ಸ್ವಚ್ಛಗೊಳಿಸಿ, ಭೌತಿಕ ತರಗತಿಗಳಿಗೆ ರಜೆ ಘೋಷಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಕರು ಗಮನ ಹರಿಸಬೇಕು' ಎಂದು ಸೂಚಿಸಿದರು. 'ಸೋಂಕಿನ ಪ್ರಕರಣಗಳು ಹೆಚ್ಚುತ್ತಿದ್ದರೂ, ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಕಡಿಮೆ ಇದೆ. ಅದರಲ್ಲೂ ಮಕ್ಕಳಲ್ಲಿ ಸೋಂಕು ಬಾಧಿಸುವ ಪ್ರಮಾಣ ಈವರೆಗಿನ ಮಾಹಿತಿ ಪ್ರಕಾರ ಕಡಿಮೆಯೇ ಇದೆ. ಹೀಗಾಗಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸುವ ಅಗತ್ಯ ಕಂಡುಬಂದಿಲ್ಲ. ಈ ಕುರಿತು ತಜ್ಞರ ಜೊತೆ ಚರ್ಚಿಸಲಾಗಿದೆ' ಎಂದರು. 'ಮಕ್ಕಳು ಶೈಕ್ಷಣಿಕವಾಗಿ ಈಗಾಗಲೇ ಸಾಕಷ್ಟು ಕಳೆದುಕೊಂಡಿದ್ದಾರೆ. ಮತ್ತಷ್ಟು ಕಳೆದುಕೊಳ್ಳುವುದು ಬೇಡ. ಆನ್‌ಲೈನ್ ತರಗತಿಗಳು ಭೌತಿಕ ತರಗತಿಗಳಷ್ಟು ಪರಿಣಾಮಕಾರಿ ಆಗಿರುವುದಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಅದರಲ್ಲೂ ಗ್ರಾಮಾಂತರ ಪ್ರದೇಶಗಳ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಓದು, ಬರಹ ಕಳೆದುಕೊಂಡಿದ್ದಾರೆ. ಹೀಗಾಗಿ, ಭೌತಿಕ ತರಗತಿಗಳನ್ನು ನಿಲ್ಲಿಸುವ ಆತುರದ ನಿರ್ಧಾರ ತೆಗೆದುಕೊಳ್ಳುವುದು ಬೇಡ' ಎಂದು ಸಚಿವರು ಹೇಳಿದರು.

ಸರ್ಕಾರ, ಕಾಂಗ್ರೆಸ್‌ಗೆ ಹೈಕೋರ್ಟ್ ಚಾಟಿ

ಒಂದನೇ ಪುಟದಿಂದ

ಇದಕ್ಕೆ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಆರ್.ಸುಬ್ರಹ್ಮಣ್ಯ, ‘ರಾಜ್ಯದಲ್ಲಿ ಎಲ್ಲಾ ರೀತಿಯ ಸಭೆ, ಸಮಾರಂಭ, ಸಮಾವೇಶ, ಪಾದಯಾತ್ರೆ, ಹಬ್ಬ, ರ್‍ಯಾಲಿಗಳನ್ನು ನಿರ್ಬಂಧಿಸಿ ಸರ್ಕಾರ ಇದೇ 4ರಂದು ಆದೇಶ ಹೊರಡಿಸಿದೆ. ಅಂತೆಯೇ, ರಾಮನಗರ ಜಿಲ್ಲಾಧಿಕಾರಿ ಕೆಪಿಸಿಸಿಗೆ ಇದೇ 6ರಂದು ನೋಟಿಸ್ ಜಾರಿ ಮಾಡಿದ್ದು, ಪಾದಯಾತ್ರೆಗೆ ಅನುಮತಿ ನೀಡಿಲ್ಲ. ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಕೆಪಿಸಿಸಿ ಮುಖಂಡರೂ ಸೇರಿದಂತೆ ಹಲವರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ಮೂರು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ’ ಎಂದು ವಿವರಿಸಿದರು.

ಈ ವಿವರಣೆಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಎಲ್ಲಾ ರೀತಿಯ ಸಾರ್ವಜನಿಕ ಚಟುವಟಿಕೆಗಳಿಗೆ ನಿರ್ಬಂಧ ಹೇರಿ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ) ಹೊರಡಿಸಲಾಗಿದೆ, ಪಾದಯಾತ್ರೆಗೆ ರಾಮನಗರ ಜಿಲ್ಲಾಡಳಿತ ನಿರಾಕರಿಸಿದೆ, ಪಾದಯಾತ್ರೆ ನಡೆಸದಂತೆ ಸೂಚಿಸಿ ಕೆಪಿಸಿಸಿಗೆ ನೋಟಿಸ್ ನೀಡಲಾಗಿದೆ ಎಂದೆಲ್ಲಾ ಹೇಳುತ್ತಿದ್ದೀರಿ. ಹಾಗಿದ್ದರೆ, ಪಾದಯಾತ್ರೆ ಮುಂದುವರಿಸಲು ಏಕೆ ಅವಕಾಶ ಮಾಡಿಕೊಟ್ಟಿದ್ದೀರಿ’ ಎಂದು ಅಸಮಾಧಾನ ಹೊರಹಾಕಿತು.

‘ಪಾದಯಾತ್ರೆ ತಡೆಯಲು ಯಾಕೆ ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರ ಅಷ್ಟೊಂದು ಅಸಹಾಯಕವಾಗಿದೆಯೇ, ನಿಯಮಗಳ ಉಲ್ಲಂಘನೆಯಾಗುತ್ತಿದ್ದರೂ ಕ್ರಮ ಜರುಗಿಸದೇ ಇರುವಷ್ಟು ಅಸಮರ್ಥವಾಗಿದೆಯಾ, ಎಫ್‌ಐಆರ್ ದಾಖಲಿಸಿದ್ದರೂ ಕೆಪಿಸಿಸಿ ಹೇಗೆ ಪಾದಯಾತ್ರೆ ನಡೆಸುತ್ತಿದೆ, ಪಾದಯಾತ್ರೆ ನಡೆಸುತ್ತಿದ್ದರೂ ಸರ್ಕಾರ ಏನು ಮಾಡುತ್ತಿದೆ. ಪಾದಯಾತ್ರೆ ನಡೆಸುವವರ ವಿರುದ್ಧ ಕ್ರಮ ಜರುಗಿಸುವುದಕ್ಕೆ ನೀವು ಯಾರ ಆಣತಿಗಾಗಿ ಕಾಯುತ್ತಿದ್ದೀರಿ, ಎಲ್ಲದಕ್ಕೂ ನಿಮಗೆ ನ್ಯಾಯಾಲಯವೇ ನಿರ್ದೇಶನ ನೀಡಬೇಕಾ’ ಎಂದು ಕಟುವಾಗಿ ಪ್ರಶ್ನಿಸಿತು.

ಏತನ್ಮಧ್ಯೆ ವಕೀಲ ಎಸ್. ರಾಜಶೇಖರ್, ‘ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ರಾಜ್ಯ ಸರ್ಕಾರವೂ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದನ್ನು ಆಕ್ಷೇಪಿಸಿ ಅರ್ಜಿ ಸಲ್ಲಿಸಲಾಗಿದ್ದು, ಇದನ್ನೂ ಈ ಅರ್ಜಿಯೊಂದಿಗೆ ವಿಚಾರಣೆ ನಡೆಸಬೇಕು‘ ಎಂದು ಕೋರಿದರು. ಇದಕ್ಕೆ ನ್ಯಾಯಪೀಠ ಸಮ್ಮತಿಸಿತು.

ನೋಟಿಸ್ ನೀಡಿದ ನಂತರವೂ ಪಾದಯಾತ್ರೆ ನಡೆಸುತ್ತಿರುವವರ ವಿರುದ್ಧ ಕ್ರಮ ಜರುಗಿಸಲು ವಿಫಲವಾಗಿರುವ ರಾಮನಗರ ಜಿಲ್ಲಾಧಿಕಾರಿಯನ್ನು ವಜಾಗೊಳಿಸಲು ಆದೇಶಿಸಬೇಕಾಗುತ್ತದೆ.

ಋತುರಾಜ್ ಅವಸ್ಥಿ,
ಮುಖ್ಯ ನ್ಯಾಯಮೂರ್ತಿ

ಕೆಪಿಸಿಸಿ ನಡೆಗೂ ಆಕ್ರೋಶ

ವಿಚಾರಣೆ ವೇಳೆ ಕೆಪಿಸಿಸಿಯ ನಡೆಯನ್ನೂ ನ್ಯಾಯಪೀಠ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು.

'ಪಾದಯಾತ್ರೆಗೆ ನೀವು ಯಾರಿಂದ ಅನುಮತಿ ಪಡೆದಿದ್ದೀರಿ, ಕೋವಿಡ್ ಮಾರ್ಗಸೂಚಿಯನ್ನು ಯಾಕೆ ಪಾಲನೆ ಮಾಡಿಲ್ಲ’ ಎಂದು ಕೆಪಿಸಿಸಿ ವಿರುದ್ಧ ಕೆಂಡ ಕಾರಿದೆ. ‘ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಕೆಪಿಸಿಸಿ ನ್ಯಾಯಾಲಯಕ್ಕೆ ತಕ್ಕ ಉತ್ತರ ನೀಡಬೇಕು‘ ಎಂದು ಆದೇಶಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಲಾಗಿದೆ.

ಸಂಘರ್ಷದತ್ತ ಕಾಂಗ್ರೆಸ್ ಪಾದಯಾತ್ರೆ

ಒಂದನೇ ಪುಟದಿಂದ

ಪಾದಯಾತ್ರೆ ವಿಚಾರದಲ್ಲಿ ಹೈಕೋರ್ಟ್‌ಗೆ ಏನೇನು ಉತ್ತರ ನೀಡಬೇಕು ಮತ್ತು ಕೋವಿಡ್ ನಿಯಮ ಉಲ್ಲಂಘಿಸಿ ಪಾದಯಾತ್ರೆ ನಡೆಸುತ್ತಿರುವವರ ವಿರುದ್ಧ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ವರದಿ ನೀಡಲು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಗಿತ್ತು. ಸಮಿತಿ ವರದಿ ಆಧರಿಸಿ, ಮುಂದಿನ ಹೆಜ್ಜೆ ಇಡಲು ಸರ್ಕಾರ ಆಲೋಚಿಸಿತ್ತು.

ರೆಡ್ಡಿ ಹುಟ್ಟುಹಬ್ಬದಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಆರೋಪ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಇಲ್ಲಿನ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ಮಂಗಳವಾರ ಏರ್ಪಡಿಸಿದ್ದ ಮಾಜಿ ಸಚಿವ ಜಿ. ಜನಾರ್ದನರೆಡ್ಡಿ ಹುಟ್ಟುಹಬ್ಬದ ವೇಳೆ ಕೋವಿಡ್ ನಿಯಮಾವಳಿ ಉಲ್ಲಂಘಿಸಿದ್ದರೂ ಕಾನೂನು ಕ್ರಮ ಕೈಗೊಳ್ಳದೆ ಜಿಲ್ಲಾಡಳಿತ ‘ಜಾಣ ಕುರುಡು’ ಪ್ರದರ್ಶಿಸುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಅಕ್ರಮ ಗಣಿಗಾರಿಕೆ ಆರೋಪದ ಮೇಲೆ ಬಂಧಿತರಾಗಿ, ಜಾಮೀನು ಪಡೆದು ಬಿಡುಗಡೆ ಆಗಿರುವ ಜನಾರ್ದನರೆಡ್ಡಿ ಮಂಗಳವಾರ ಮೊದಲ ಬಾರಿಗೆ ಸಾರ್ವಜನಿಕವಾಗಿ ಪ್ರತ್ಯಕ್ಷವಾಗಿ, ಕನಕ ದುರ್ಗಮ್ಮ ದೇವಸ್ಥಾನದಲ್ಲಿ ತುಲಾಭಾರ ಮಾಡಿಸಿಕೊಂಡು 55ನೇ ಹುಟ್ಟುಹಬ್ಬ ಆಚರಿಸಿಕೊಂಡರು.

ನೂರಾರು ಸಂಖ್ಯೆಯಲ್ಲಿದ್ದ ರೆಡ್ಡಿ ಅಭಿಮಾನಿಗಳು ಮತ್ತು ಬೆಂಬಲಿಗರ ನಡುವೆ ಸಾರಿಗೆ ಸಚಿವ ಬಿ. ಶ್ರೀರಾಮುಲು, ಬಳ್ಳಾರಿ ನಗರದ ಶಾಸಕ ಸೋಮಶೇಖರರೆಡ್ಡಿ, ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಾಲಣ್ಣ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು. ಈ ಸಮಯದಲ್ಲಿ ಅನೇಕರು ಮಾಸ್ಕ್ ಹಾಕಿರಲಿಲ್ಲ. ಪರಸ್ಪರ ಅಂತರ ಕಾಪಾಡಲಿಲ್ಲ ಧಾರ್ಮಿಕ ಇಲಾಖೆ ಅಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಮತ್ತು ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದರೂ ಕ್ರಮ ಕೈಗೊಂಡಿಲ್ಲ ಎಂಬ ಟೀಕೆಗಳು ವ್ಯಕ್ತವಾಗಿವೆ.

ಕನಕ ದುರ್ಗಮ್ಮ ದೇವಸ್ಥಾನದ ಕಾರ್ಯಕ್ರಮ ಕುರಿತು ಎಸ್‌ಪಿ ಸೈದುಲ್ ಅಡಾವತ್ ನನ್ನ ಜತೆ ಮಾತನಾಡಿದ್ದಾರೆ. ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಪವನ್ ಕುಮಾರ್ ಮಾಲಪಾಟಿ,
ಜಿಲ್ಲಾಧಿಕಾರಿ

ರೆಡ್ಡಿ ವಿರುದ್ಧ ಎಫ್‌ಐಆರ್‌ಗೆ ಆಗ್ರಹ: ‘ಜನಾರ್ದನರೆಡ್ಡಿ ಸಾರ್ವಜನಿಕವಾಗಿ ಹುಟ್ಟುಹಬ್ಬ ಆಚರಿಸಿಕೊಂಡು ಕೋವಿಡ್ ನಿಯಯ ಉಲ್ಲಂಘಿಸಿದ್ದಾರೆ. ಅವರ ವಿರುದ್ಧ ಜಿಲ್ಲಾಡಳಿತ ಎಫ್‌ಐಆರ್ ದಾಖಲಿಸಬೇಕು’ ಎಂದು ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಡುತ್ತಿರುವ ಉದ್ಯಮಿ ಟಪಾಲ್ ಗಣೇಶ್ ಆರೋಪಿಸಿದರು.

ಬಳ್ಳಾರಿಯ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ಮಂಗಳವಾರ ನಡೆದ ಮಾಜಿ ಸಚಿವ ಜನಾರ್ದನರೆಡ್ಡಿ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಸೇರಿದ್ದ ಅಭಿಮಾನಿಗಳು. ಸಾರಿಗೆ ಸಚಿವ ಬಿ. ಶ್ರೀರಾಮುಲು ಚಿತ್ರದಲ್ಲಿದ್ದಾರೆ.

ವೈದ್ಯಕೀಯ ಆಮ್ಲಜನಕ ಸಂಗ್ರಹಕ್ಕೆ ಸೂಚನೆ

ಕೋವಿಡ್: ನಿಯಂತ್ರಣ ಕೊಠಡಿಗಳ ಪುನಶ್ಚೇತನಕ್ಕೂ ಕೇಂದ್ರ ನಿರ್ದೇಶನ

ನವದೆಹಲಿ: ದೇಶದಲ್ಲಿ ಕೋವಿಡ್–19 ಪ್ರಕರಣಗಳು ಗಣನೀಯವಾಗಿ ಹೆಚ್ಚುತ್ತಿರುವ ಕಾರಣ ಸಾಕಷ್ಟು ಪ್ರಮಾಣದಲ್ಲಿ ವೈದ್ಯಕೀಯ ಆಮ್ಲಜನಕದ ದಾಸ್ತಾನು ಇರುವುದನ್ನು ಖಾತರಿಪಡಿಸಿಕೊಳ್ಳುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಬುಧವಾರ ಸೂಚಿಸಿದೆ.

‘ಒಳರೋಗಿಗಳಿಗೆ ಹಾಗೂ ಆಮ್ಲಜನಕ ಸೌಲಭ್ಯದ ಹಾಸಿಗೆ ಹೊಂದಿರುವ ಆಸ್ಪತ್ರೆಗಳಲ್ಲಿ ಕನಿಷ್ಠ 48 ಗಂಟೆಗಳಿಗೆ ಆಗುವಷ್ಟು ಆಮ್ಲಜನಕ ಸಂಗ್ರಹ ಇರಬೇಕು. ಆಮ್ಲಜನಕ ಪೂರೈಕೆ–ವಿತರಣೆ ಮೇಲೆ ನಿಗಾ ಇಡಲು ನಿಯಂತ್ರಣ ಕೊಠಡಿಗಳನ್ನು ಪುನಶ್ಚೇತನಗೊಳಿಸಬೇಕು’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ.

ಈ ಸಂಬಂಧ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಗಳಿಗೆ ಪತ್ರ ಬರೆದಿದ್ದಾರೆ.

‘ಆಮ್ಲಜನಕ ಸೌಲಭ್ಯ ಹೊಂದಿರುವ ಖಾಸಗಿ ಆಸ್ಪತ್ರೆಗಳ ಮಾಹಿತಿ ಸಂಗ್ರಹಿಸಬೇಕು. ಅವುಗಳು ಹೊಂದಿರುವ ವೈದ್ಯಕೀಯ ಆಮ್ಲಜನಕ ಉತ್ಪಾದನೆ ಸಾಮರ್ಥ್ಯ ಹಾಗೂ ಬೇಡಿಕೆ ಹೆಚ್ಚಿದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳಿಂದ ವೈದ್ಯಕೀಯ ಆಮ್ಲಜನಕ ಪಡೆಯುವ ಕಾರ್ಯತಂತ್ರವನ್ನು ರೂಪಿಸಬೇಕು ’ ಎಂದು ಸೂಚಿಸಿದ್ದಾರೆ.

‘ಆಸ್ಪತ್ರೆಗಳಲ್ಲಿ ದ್ರವೀಕೃತ ವೈದ್ಯಕೀಯ ಆಮ್ಲಜನಕ (ಎಲ್‌ಎಂಒ) ಟ್ಯಾಂಕರ್‌ಗಳು ಇರುವಂತೆ ನೋಡಿಕೊಳ್ಳಬೇಕು. ಈ ಟ್ಯಾಂಕರ್‌ಗಳ ಭರ್ತಿಗೆ ಹಾಗೂ ಪೂರೈಕೆಗೆ ಯಾವುದೇ ಅಡೆತಡೆ ಇರದಂತೆ ಕ್ರಮ ಕೈಗೊಳ್ಳಬೇಕು’ ಎಂದೂ ಅವರು ಪತ್ರದಲ್ಲಿ ಸೂಚಿಸಿದ್ದಾರೆ.

- ಕೋವಿಡ್‌ನಿಂದ ಬಳಲುತ್ತಿರುವ ಗಾಯಕಿ ಲತಾ ಮಂಗೇಶ್ಕರ್ ಅವರನ್ನು ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಐಸಿಯುನಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ
- ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರಿಗೆ ಬುಧವಾರ ಕೋವಿಡ್–19 ದೃಢಪಟ್ಟಿದೆ.
- ಜ.1ರಿಂದ ಈ ವರೆಗೆ 1,700 ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ ಎಂದು ದೆಹಲಿ ಪೊಲೀಸ್ ಇಲಾಖೆ ಬುಧವಾರ ತಿಳಿಸಿದೆ.
- ಕೇರಳದಲ್ಲಿ ಓಮೈಕ್ರಾನ್ ತಳಿ ಸೋಂಕಿನ 76 ಹೊಸ ಪ್ರಕರಣಗಳ ಪತ್ತೆ

ರಾಜ್ಯದಲ್ಲಿ ಕೋವಿಡ್:

- ಮೇಕೆದಾಟು ಪಾದಯಾತ್ರೆಯಲ್ಲಿ ಮೊದಲ ದಿನ ಭಾಗಿಯಾಗಿದ್ದ ಗೌರಿಬಿದನೂರು ಶಾಸಕ ಎನ್. ಎಚ್.ಶಿವಶಂಕರರೆಡ್ಡಿ ಅವರಿಗೆ ಮಂಗಳವಾರ ಕೋವಿಡ್ ದೃಢಪಟ್ಟಿದೆ.
- ಹುಬ್ಬಳ್ಳಿ–ಧಾರವಾಡ ಪೂರ್ವ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಬುಧವಾರ ಕೋವಿಡ್ ದೃಢಪಟ್ಟಿದೆ.
- ಹಾಸನ ಜಿಲ್ಲೆಯ 22 ಶಾಲೆಗಳ 73 ಮಕ್ಕಳಿಗೆ ಹಾಗೂ ಪದವಿ ಪೂರ್ವ ಕಾಲೇಜಿನ 56 ಮಕ್ಕಳಿಗೆ ಕೋವಿಡ್ ದೃಢಪಟ್ಟಿದೆ. ಜತೆಗೆ 30 ಶಿಕ್ಷಕರಿಗೂ ಸೋಂಕು ತಗುಲಿದೆ. ಸೋಂಕು ಪತ್ತೆಯಾಗಿರುವ ಶಾಲಾ, ಕಾಲೇಜುಗಳನ್ನು ಬಂದ್ ಮಾಡಲಾಗಿದೆ
- ಕಲಬುರಗಿಯ ಕೇಂದ್ರೀಯ ವಿದ್ಯಾಲಯದ ಒಬ್ಬ ಹಾಗೂ ರಾಯಚೂರು ಜಿಲ್ಲೆ ಜಾಲಹಳ್ಳಿ ಗ್ರಾಮದ ಕನ್ಯಾ ಪ್ರೌಢಶಾಲೆಯ 10ನೇ ತರಗತಿಯ ಐವರು ವಿದ್ಯಾರ್ಥಿನಿಯರಿಗೆ ಕೋವಿಡ್ ದೃಢಪಟ್ಟಿದೆ.

ಮುಂಬೈನ ಪೊಯಿಸರ್ ಬಜಾರ್‌ನಲ್ಲಿ ಬುಧವಾರ ಕಂಡು ಬಂದ ಜನಜಂಗುಳಿ –ಪಿಟಿಐ ಚಿತ್ರ

‘ಆರೋಗ್ಯ ಕ್ಷೇತ್ರದ ಮಹತ್ವ ಮನದಟ್ಟು ಮಾಡಿದ ಪಿಡುಗು’

ಚೆನ್ನೈ: ‘ದೇಶದಲ್ಲಿ ಕಾಣಿಸಿಕೊಂಡ ಕೋವಿಡ್–19 ಪಿಡುಗು, ಆರೋಗ್ಯ ಕ್ಷೇತ್ರವನ್ನು ಸದೃಢಗೊಳಿಸುವ ಮಹತ್ವವನ್ನು ಮತ್ತೊಮ್ಮೆ ಒತ್ತಿ ಹೇಳಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಇಲ್ಲಿ ಹೇಳಿದರು.

ತಮಿಳುನಾಡಿನಲ್ಲಿ ಸ್ಥಾಪಿಸಿರುವ 11 ಸರ್ಕಾರಿ ವೈದ್ಯ ಕಾಲೇಜುಗಳನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

‘ಲಸಿಕೆ ಕಾರ್ಯಕ್ರಮದಲ್ಲಿ ಗಣನೀಯ ಸಾಧನೆ ಮಾಡಲಾಗಿದೆ. 15–18 ವರ್ಷ ವಯೋಮಾನದವರಿಗೆ ಲಸಿಕೆ ನೀಡಲು ಆರಂಭಿಸಲಾಗಿದ್ದು, 60 ವರ್ಷ ಮೇಲ್ಪಟ್ಟವರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಬೂಸ್ಟರ್ ಡೋಸ್ ನೀಡಲು ಆರಂಭಿಸಲಾಗಿದೆ’ ಎಂದೂ ಅವರು ಹೇಳಿದರು.

‘300 ಜಿಲ್ಲೆಗಳಲ್ಲಿ ದೃಢಪ್ರಮಾಣ ಶೇ 5ಕ್ಕಿಂತ ಅಧಿಕ’

ದೇಶದ 300 ಜಿಲ್ಲೆಗಳಲ್ಲಿ ವಾರದ ಅವಧಿಯಲ್ಲಿನ ಕೋವಿಡ್–19 ದೃಢಪ್ರಮಾಣ ಶೇ 5ಕ್ಕಿಂತ ಅಧಿಕವಾಗಿರುವುದು ವರದಿಯಾಗಿದೆ. ಹೀಗಾಗಿ ಓಮೈಕ್ರಾನ್ ತಳಿ ಸೋಂಕನ್ನು ಸಾಮಾನ್ಯ ನೆಗಡಿ ಎಂದು ಅಲಕ್ಷ್ಯ ಮಾಡಬಾರದು ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರವಾಲ್, ‘ದೇಶದಲ್ಲಿ ಕೋವಿಡ್ ದೃಢ ಪ್ರಮಾಣ ಡಿ. 30ರಂದು ಶೇ 1.1ರಷ್ಟಿತ್ತು. ಬುಧವಾರ ಶೇ 11.05ಕ್ಕೇರಿದೆ’ ಎಂದರು.

1.94 ಲಕ್ಷ ಹೊಸ ಪ್ರಕರಣಗಳು ಪತ್ತೆ

ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ದೇಶದಲ್ಲಿ ಹೊಸದಾಗಿ 1,94,720 ಕೋವಿಡ್–19 ಪ್ರಕರಣಗಳು ಪತ್ತೆಯಾಗಿವೆ. ಇವುಗಳಲ್ಲಿ ಓಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳ ಸಂಖ್ಯೆ 4,868 ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 9,55,319ಕ್ಕೆ ಏರಿಕೆಯಾಗಿದ್ದು, ಕಳೆದ 211 ದಿನಗಳಲ್ಲಿಯೇ ದಾಖಲೆಯಾದ ಗರಿಷ್ಠ ಸಂಖ್ಯೆಯ ಪ್ರಕರಣಗಳು ಇವಾಗಿವೆ. 442 ಮಂದಿ ಮೃತಪಟ್ಟಿದ್ದು, ಇದರೊಂದಿಗೆ ಮೃತರ ಸಂಖ್ಯೆ 4,84,655ಕ್ಕೇರಿದಂತಾಗಿದೆ ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿನ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 3,60,70,510ಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಒಟ್ಟು ಪ್ರಕರಣಗಳ ಶೇ 2.65ರಷ್ಟು ಎಂದೂ ಸಚಿವಾಲಯ ತಿಳಿಸಿದೆ.

ನಮ್ಮ ನೀರು ನಮ್ಮ ಹಕ್ಕು...

ಅಡೆತಡೆಯ ಚಕ್ರವ್ಯೂಹ ಭೇದಿಸಿದ ಮಹಾನಾಯಕ: ಮೇಕೆದಾಟು ಪಾದಯಾತ್ರೆಯ ರೂವಾರಿ

ಆಧುನಿಕ ಭಗೀರಥ ಡಿ.ಕೆ.ಶಿವಕುಮಾರ್

ಎರಡೂವರೆ ಕೋಟಿ ಜನರಿಗೆ ಪರಿಶುದ್ಧ ಕಾವೇರಿ ಮಾತೆಯ ನೀರನ್ನು ತಲುಪಿಸುವ ಕಂಕಣ ತೊಟ್ಟು, 'ನೀರಿಗಾಗಿ ನಡಿಗೆ'ಯೆಂಬ ಮಹಾಯಾತ್ರೆ ಮುನ್ನಡೆಸಿರುವ ಕನ್ನಡ ನಾಡಿನ ಆಧುನಿಕ ಭಗೀರಥ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್.

ಬೆಂಗಳೂರು ಮಹಾನಗರಕ್ಕೆ ಭವಿಷ್ಯದಲ್ಲಿ ಎದುರಾಗಬಹುದಾದ ನೀರಿನ ಬೇಡಿಕೆಯ ಮುಂಗಾಣ್ಕೆ ಕಂಡ ಜನನಾಯಕ ಶಿವಕುಮಾರ್, ಇಂತಹದೊಂದು ಮಹಾನ್ ಸಂಕಲ್ಪಕ್ಕೆ ನಾಂದಿ ಹಾಡಿದ್ದಾರೆ. ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಕನಸಾದ ಮೇಕೆದಾಟು ಯೋಜನೆಯನ್ನು ಸಾಕಾರಗೊಳಿಸಲೇಬೇಕೆಂಬ ಪಣತೊಟ್ಟಿರುವ ಶಿವಕುಮಾರ್ ತನ್ನ ನಿಲುವಿನಲ್ಲಿ ಕನಕಪುರದ ಬಂಡೆಯಷ್ಟೇ ದೃಢ-ಬಲಿಷ್ಠ. ಯೋಜನೆ ಅನುಷ್ಠಾನಕ್ಕಾಗಿ 'ಜೈಲಿಗೂ ಸೈ, ಪ್ರಾಣಾರ್ಪಣೆಗೂ ಸೈ' ಎಂದು ಉದ್ಘೋಷಿಸಿ ಹೋರಾಟ ಹಾದಿ ತುಳಿದಿದ್ದಾರೆ ರಾಜಕೀಯ ಸವ್ಯಸಾಚಿ. ಜನರ ಅಪೇಕ್ಷೆ-ಆಕಾಂಕ್ಷೆಯನ್ನು ಈಡೇರಿಸುವುದೇ ತನ್ನ ಕಾಯಕ, ನಾಯಕರಾದವರ ದ್ಯೋತಕ ಎಂದು ನಂಬಿರುವ ಶಿವಕುಮಾರ್ ನಡೆಯನ್ನು ಆಡಳಿತಾರೂಢ ಬಿಜೆಪಿ, ವಿರೋಧ ಪಕ್ಷ ಜೆಡಿಎಸ್ ನಾಯಕರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ವಿರೋಧಿಸುತ್ತಿದ್ದಾರೆ. ಆದರೆ, ಮೇಕೆದಾಟುವಿನಿಂದ ಶುರುವಾದ ಪಾದಯಾತ್ರೆಗೆ ವ್ಯಕ್ತವಾಗುತ್ತಿರುವ ಅಭೂತಪೂರ್ವ ಜನಸ್ಪಂದನೆ, ಪಕ್ಷ ಭೇದ ಮರೆತು ಜನ ಭಾಗಿಯಾಗುತ್ತಿರುವುದು ಮೇಕೆದಾಟು ಹೋರಾಟ ಕೇವಲ ಕಾಂಗ್ರೆಸ್ ಹೋರಾಟವಲ್ಲ; ರಾಜ್ಯದ ಜನರ ಹೋರಾಟ ಎಂಬುದನ್ನು ಸಾಬೀತುಪಡಿಸಿದೆ. ಈ ಸತ್ಯ ಗೊತ್ತಾಗಿದ್ದರಿಂದಲೇ ಬಿಜೆಪಿ ನಾಯಕರು, ಮೇಕೆದಾಟು ಹೋರಾಟದ ವಿರುದ್ಧ ನಿರಂತರ ಅಪಪ್ರಚಾರ ನಡೆಸುತ್ತಾ, ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯನವರನ್ನು ವೈಯಕ್ತಿಕವಾಗಿ ಹಂಗಿಸುವ ರಾಜಕಾರಣಕ್ಕೆ ಇಳಿದಿದ್ದಾರೆ.

ರಾಜ್ಯ ರಾಜಧಾನಿ ಬೆಂಗಳೂರು ಸೇರಿದಂತೆ ಹಳೆ ಮೈಸೂರು ಭಾಗಕ್ಕೆ ಭವಿಷ್ಯದಲ್ಲಿ ಜಲ ತತ್ವಾರ ನೀಗಿಸುವ, ಕುಡಿಯುವ ನೀರಿನ ಸಮಸ್ಯೆ ತಡೆಯುವ ದೂರ ದೃಷ್ಟಿಯಿಂದ ಡಿ.ಕೆ. ಶಿವಕುಮಾರ್ ಆಯೋಜಿಸಿರುವ ಮೇಕೆದಾಟು ಪಾದಯಾತ್ರೆಗೆ ಅಪಾರ ಜನ ಬೆಂಬಲ ವ್ಯಕ್ತವಾಗುತ್ತಿದೆ. ಹತ್ತಾರು ಅಡೆತಡೆಯ ನಡುವೆಯೂ ಎದೆಗುಂದದ ಡಿ.ಕೆ. ಸೋದರರ ಗಟ್ಟಿತನ ನಾಡಿನ ಜನರ ಪ್ರಶಂಸೆಗೆ ಪಾತ್ರವಾಗಿದೆ.

ಡಿ.ಕೆ. ಶಿವಕುಮಾರ್ ಅವರು ಮೇಕೆದಾಟು ಪಾದಯಾತ್ರೆ ಆಯೋಜಿಸುತ್ತಿದ್ದಂತೆ ರಾಜಕೀಯ ವಲಯದ ಹುಬ್ಬು ಗಂಟಿಕ್ಕಿಕೊಂಡಿತ್ತು. ಆಡಳಿತಾರೂಢ ಬಿಜೆಪಿ ಜತೆಗೆ ತಾಳ ಹಾಕಿದ ಜೆಡಿಎಸ್, ಶಿವಕುಮಾರ್ ಅವರನ್ನು 'ಅಭಿಮನ್ಯು'ವಿನ ರೀತಿ ರಾಜಕೀಯ ಚಕ್ರವ್ಯೂಹದಲ್ಲಿ ಕಟ್ಟಿಹಾಕಲು ತಂತ್ರಗಾರಿಕೆ ನಡೆಸಿದ್ದವು. ಪಾದಯಾತ್ರೆಗೂ ಮೊದಲೇ ರಾಜಕೀಯ ಬಾಣಗಳನ್ನು ಪ್ರಯೋಗಿಸಿದ್ದ ಈ ಎರಡೂ ಪಕ್ಷಗಳು, ಪಾದಯಾತ್ರೆ ಆರಂಭವಾಗುತ್ತಿದ್ದಂತೆ ಮೇಲೆ ಮತ್ತಷ್ಟು ರಾಜಕೀಯ ಆಟಗಳನ್ನು ಹೆಣೆದವು. ಆದರೆ, ಜನಹಿತವನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡ ಶಿವಕುಮಾರ್ ಅವರು 'ಸರದಾರ'ನ ರೀತಿ ವಿರೋಧಿಗಳ ಕೋಟೆ, ಚಕ್ರವ್ಯೂಹವನ್ನು ಭೇದಿಸಿ ಮುನ್ನಡೆದಿದ್ದಾರೆ

ಬಿಜೆಪಿ, ಜೆಡಿಎಸ್ ಎಷ್ಟೇ ಆಕ್ರಮಣಕಾರಿ ವಾಗ್ದಾಳಿ ನಡೆಸಿದರೂ, ತಾಳ್ಮೆ ಕಳೆದುಕೊಳ್ಳುವಂತೆ ಪ್ರೇರೇಪಿಸಿದರೂ ಶಿವಕುಮಾರ್ ಮಾತ್ರ ಸಂಯಮ ಕಾಯ್ದುಕೊಂಡಿದ್ದಾರೆ. ತಮ್ಮ ಇದುವರೆಗಿನ ನಡೆಯನ್ನು ಮೀರಿ ಸೌಜನ್ಯದ ಪರಿಧಿಯಲ್ಲೇ ರಾಜಕೀಯ ಪ್ರತ್ಯುತ್ತರ ನೀಡುತ್ತಿರುವುದು ಅವರು, ಈಗ ಹಳೆ ಮೈಸೂರು ಭಾಗದಲ್ಲಿ ಮಾತ್ರವಲ್ಲ ಇಡಿ ರಾಜ್ಯದಲ್ಲಿ ಜನ ಪ್ರೀತಿ ಗಳಿಸಿದ್ದಾರೆ. ಎಲ್ಲರ ಮೆಚ್ಚುಗೆಗೆ ಅರ್ಹರಾಗಿದ್ದಾರೆ.

ಮೇಕೆದಾಟು ಯೋಜನೆಯ ಲಾಭ ಹಳೆ ಮೈಸೂರು ಭಾಗಕ್ಕೆ ಸೀಮಿತವಾಗಿದ್ದರೂ ಪಾದಯಾತ್ರೆಯಲ್ಲಿ ರಾಜ್ಯದ ಮೂಲೆಮೂಲೆಗಳಿಂದ ಕಾಂಗ್ರೆಸ್ ಪಕ್ಷದ ನಾಯಕರು, ಕಾರ್ಯಕರ್ತರು ಅಭಿಮಾನಿಗಳು ಭಾಗವಹಿಸಿದ್ದಾರೆ. ಆ ಮೂಲಕ, ಡಿ.ಕೆ. ಶಿವಕುಮಾರ್ ಅವರು ಇಡೀ ರಾಜ್ಯಕ್ಕೆ ಮೆಚ್ಚುಗೆಯಾಗಿರುವ ನಾಯಕ ಎಂಬುದಕ್ಕೆ ಸಾಕ್ಷಿಯಾಗಿದೆ. ಎಲ್ಲರನ್ನೂ ಒಳಗೊಳ್ಳುವ ನಾಯಕತ್ವದ ಗುಣವನ್ನು ಪಾದಯಾತ್ರೆಯ ಮೂಲಕ ಶಿವಕುಮಾರ್ ತೋರುತ್ತಿದ್ದಾರೆ ಎಂಬ ಪ್ರಶಂಸೆಯ ಮಾತು ರಾಜ್ಯದ ಎಲ್ಲ ಮೂಲೆಗಳಿಂದಲೂ ಕೇಳಿಬಂದಿವೆ.

ಬದಲಾದ ಪರಿಸ್ಥಿತಿಯಲ್ಲಿ ರಾಜಕಾರಣದ ಪರಿಭಾಷೆ ಬದಲಾಗಿದೆ. ನೇರ ವಾಗ್ದಾಳಿಯ ಜತೆಗೆ ಸಾಮಾಜಿಕ ಜಾಲ ತಾಣದ ಮೂಲಕ ಇಲ್ಲಸಲ್ಲದ, ತಿರುಚಿದ ಟ್ರೋಲ್‌ಗಳ ಮೂಲಕವೂ ಪಾದಯಾತ್ರೆಯನ್ನು ಅಪಹಾಸ್ಯ ಮಾಡುತ್ತಿದ್ದರೂ ಶಿವಕುಮಾರ್ ಮಾತ್ರ 'ಇಟ್ಟ ಗುರಿ, ತೊಟ್ಟ ಬಾಣ" ಬದಲಾಯಿಸುವ ಪ್ರಶ್ನೆಯೇ ಇಲ್ಲ ಎಂಬಂತೆ ಮುನ್ನುಗ್ಗುತ್ತಿದ್ದಾರೆ. ಪ್ರತ್ಯಕ್ಷ- ಪರೋಕ್ಷ ದಾಳಿಗೆ ಎದೆಯೊಡ್ಡಿ ಹಿಮಾಲಯದಂತೆ ನಿಂತಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಶಿವಕುಮಾರ್ ಅವರ ಈ ನಡೆ ಕಾಂಗ್ರೆಸ್ ಕಾರ್ಯಕರ್ತರ ಪಡೆಯನ್ನು ಬಡಿದೆಬ್ಬಿಸಿದೆ. ಹಿಡಿದ ಹಟವನ್ನು ಸಾಧಿಸುವುದಕ್ಕೆ ಎಂಥ ಅಡೆತಡೆ ಬಂದರೂ ಬಿಡುವುದಿಲ್ಲ ಎಂಬ ಛಲವನ್ನು ಡಿ.ಕೆ. ಸೋದರರು ಅಭೂತಪೂರ್ವ ಮೇಕೆದಾಟು ಪಾದಯಾತ್ರೆ ಆಯೋಜಿಸುವ ಮೂಲಕ ಪ್ರದರ್ಶಿಸಿದ್ದಾರೆ.

ಡಿಕೆ ಸಹೋದರರ ಈ ನಡೆ, ಪಕ್ಷದ ಕಾರ್ಯಕರ್ತರ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಸುತ್ತಮುತ್ತ ರಾಜಕೀಯ ವಿರೋಧಿಗಳೇ ತುಂಬಿದ್ದರೂ ಅದನ್ನು ಬದ್ಧತೆಯ ಮೂಲಕ ಎದುರಿಸುವ ಸಹೋದರರ ಧೈರ್ಯಕ್ಕೆ ಕಾರ್ಯಕರ್ತರು ಈಗ ಹೆಗಲುಗೂಡಿಸಿದ್ದಾರೆ.

ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾದ ಮೇಲೆ ಇಡೀ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚಲನಶೀಲತೆ ಬಂದಿದೆ. ಹಗಲಿರುಳೆನ್ನದೆ ಪಕ್ಷಕ್ಕಾಗಿ ಅವಿರತ ದುಡಿಯುತ್ತಿರುವ ಶಿವಕುಮಾರ್ ಅವರ ಪಕ್ಷ ಒಲವು, ಕಾಂಗ್ರೆಸ್ ಕಾರ್ಯಕರ್ತರ ಉತ್ಸಾಹಕ್ಕೆ ಮತ್ತಷ್ಟು ಟಾನಿಕ್ ನೀಡಿದೆ.

ಮೇಕೆದಾಟು ಪಾದಯಾತ್ರೆ ಹಳೆ ಮೈಸೂರು ಭಾಗ ಮಾತ್ರವಲ್ಲದೆ, ಇಡೀ ಕರ್ನಾಟಕದಲ್ಲಿ ಕಾಂಗ್ರೆಸ್ ಪರ ಭಾವನೆಯನ್ನು ಬಡಿದೆಬ್ಬಿಸಿದೆ. 2023ರ ಚುನಾವಣೆಯಲ್ಲಿ ಏನಾಗಬಹುದು ಎಂಬುದರ ಸ್ಪಷ್ಟ ಮುನ್ಸೂಚನೆಯನ್ನೂ ನೀಡಿದೆ.

64 ಟಿಎಂಸಿ ಅಡಿ
ಅಣೆಕಟ್ಟಿನ ನೀರು ಸಂಗ್ರಹ ಸಾಮರ್ಥ್ಯ

320 ಅಡಿ
ಎತ್ತರ

675 ಮೀಟರ್
ಉದ್ದ

₹9,000 ಕೋಟಿ
ಅಗತ್ಯ ಭೂಮಿ

5,000 ಎಕರೆ
ಅಗತ್ಯ ಭೂಮಿ

ಸ್ಥಳ: ಕನಕಪುರ, ರಾಮನಗರ ಜಿಲ್ಲೆ

ಯೋಜನೆಯ ಅಗತ್ಯತೆ

ಕೆಆರ್‌ಎಸ್ ಜಲಾಶಯದಿಂದ ಬಿಡುಗಡೆಯಾದ ನೀರು ನಂತರ ನೇರವಾಗಿ ತಮಿಳುನಾಡು ಮೂಲಕ ಹರಿದು ಸಮುದ್ರ ಸೇರುತ್ತಿದೆ. ಸುಮಾರು 80 ಟಿಎಂಸಿ ನೀರು ಹೆಚ್ಚುವರಿಯಾಗಿ ಹರಿದು ಪೋಲಾಗುತ್ತಿದೆ. ಈ ನೀರು ಕುಡಿಯಲು ಬಳಸಿಕೊಳ್ಳುವುದು ಯೋಜನೆ ಉದ್ದೇಶ. ಕಾವೇರಿ ಪ್ರದೇಶದಲ್ಲಿ ಅತಿಯಾದ ಮಳೆಯಾದಾಗ ಹೆಚ್ಚುವರಿ ನೀರು ಸಂಗ್ರಹಕ್ಕೆ ನೆರವು.

ಯೋಜನೆ ಅನುಕೂಲ

- ಕಾವೇರಿ ಜಲಾನಯನ ಪ್ರದೇಶದ 2.5 ಕೋಟಿ ಜನರಿಗೆ ಅನುಕೂಲವಾಗಲಿದೆ.
- ಕಡಿಮೆ ವೆಚ್ಚದಲ್ಲಿ 400 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ.
- ಬೆಂಗಳೂರಿನ 1.5 ಕೋಟಿ ಜನರಿಗೆ ಕುಡಿಯುವ ನೀರು ಸಿಗಲಿದೆ.
- ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಕೊರತೆಯಾದಾಗ ತಮಿಳುನಾಡಿಗೆ ಅದರ ಪಾಲಿನ ನೀರು ಬಿಡುಗಡೆಗೆ ಅನುಕೂಲ.
- ವರ್ಷಕ್ಕೆ 365 ದಿನವೂ ಮುಂದಿನ 50 ವರ್ಷಗಳ ಕಾಲ ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆ.
- ಇದರಿಂದಾಗಿ ಸಹಜವಾಗಿ ನೀರಿನ ಟ್ಯಾಂಕರ್ ಹಾಗೂ ಕೊಳವೆಬಾವಿ ಮೇಲಿನ ಅವಲಂಬನೆ ತಪ್ಪಿಸಬಹುದು
- ಮೇಕೆದಾಟು ಯೋಜನೆಯಿಂದ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ.
- ಮಳೆ ಕೊರತೆಯಾದಾಗ ಕಾವೇರಿ ಜಲಾನಯನ ಪ್ರದೇಶದ ಆಣೆಕಟ್ಟುಗಳಾದ ಹೇಮಾವತಿ, ಹಾರಂಗಿ, ಕಬಿನಿ, ಕೆಆರ್‌ಎಸ್ ಮೇಲೆ ಹೊರೆ ತಗ್ಗಿಸಿ ಈ ಭಾಗದ ರೈತರಿಗೆ ನೀರು ಪೂರೈಕೆ ಮಾಡಬಹುದು.
- ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾಸನ, ಕೋಲಾರ, ರಾಮನಗರ, ಚಾಮರಾಜನಗರ, ಮಂಡ್ಯ, ಮೈಸೂರು, ಚಿಕ್ಕಬಳ್ಳಾಪುರ ಹೀಗೆ 10 ಜಿಲ್ಲೆಗಳಿಗೆ ಉಪಯೋಗ

ಮೇಕೆದಾಟು ಯೋಜನೆ ಡಿಕೆಶಿ ಸಾಧನೆ

ಬೆಂಗಳೂರು ನಿವಾಸಿಗಳು, ಕೈಗಾರಿಕೆಗಳಿಗೆ ಕುಡಿಯುವ ನೀರು, ವಿದ್ಯುತ್ ಉತ್ಪಾದನೆ, ಕಾವೇರಿ ಜಲಾಶಯದ ಅಣೆಕಟ್ಟುಗಳ ಮೇಲಿನ ಹೊರೆ ತಗ್ಗಿಸಿ, ಕರ್ನಾಟಕ ಹಾಗೂ ತಮಿಳುನಾಡಿನ ಹಿತಕಾಯುವ ಬಹೋಪಯೋಗಿ ಮೇಕೆದಾಟು ಯೋಜನೆ ಜಾರಿ ಆಗಬೇಕು, ಅದಕ್ಕಾಗಿ ತಮ್ಮ ಪ್ರಾಣ ಹೋದರೂ ಸರಿ, ಅದಕ್ಕಾಗಿ ಎಂತಹುದೇ ಹೋರಾಟಕ್ಕೂ ಬದ್ಧ, ಯಾವುದೇ ಸವಾಲು ಎದುರಿಸಲು ಸಿದ್ಧ ಎಂಬ ಸಂಕಲ್ಪ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರದ್ದು.

ರಾಜಕೀಯ ವಿರೋಧಿಗಳು ಏನೇ ಟೀಕೆ, ಟಿಪ್ಪಣಿ ಮಾಡಿದರೂ ಅದಕ್ಕೆ ಕಿವಿಗೊಡದೆ, ಜನರ ಹಿತಕಾಯಲು ಇಟ್ಟ ಹೆಜ್ಜೆ ಹಿಂದೆ ಸರಿಸುವುದಿಲ್ಲ ಎಂಬ ಸಂದೇಶವನ್ನು ಶಿವಕುಮಾರ್ ಅವರು ಪಾದಯಾತ್ರೆ ಮೂಲಕ ಸಾರಿ, ಸಾರಿ ಹೇಳುತ್ತಿದ್ದಾರೆ.

'ಅಧಿಕಾರ ಇವತ್ತು ಇರುತ್ತದೆ, ನಾಳೆ ಹೋಗುತ್ತದೆ. ಆದರೆ ಜನರ ಪ್ರೀತಿ ವಿಶ್ವಾಸವೇ ಶಾಶ್ವತ' ಎಂದು ನಂಬಿರುವ ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕಾಗಿ ಈ ಹೋರಾಟ ಮಾಡುತ್ತಿಲ್ಲ. ಇದಕ್ಕೆ ಸಾಕ್ಷಿ ಅವರು ಸಮ್ಮಿಶ್ರ ಸರ್ಕಾರದ ಅಲ್ಪಾವಧಿಯಲ್ಲಿ ಮೇಕೆದಾಟು ಯೋಜನೆಗೆ ತೋರಿದ ಬದ್ಧತೆ.

ಜಲಸಂಪನ್ಮೂಲ ಸಚಿವರಾಗಿ ಸಿಕ್ಕಿದ ಅಲ್ಪಾವಧಿಯ ಅಧಿಕಾರದಲ್ಲಿ ಮೇಕೆದಾಟು ಯೋಜನೆಗೆ ಅವರ ಪರಿಶ್ರಮ ಹೀಗಿದೆ...

- 2018ರಲ್ಲಿ ನ್ಯಾಯಾಲಯದಲ್ಲಿ ನೀರು ಹಂಚಿಕೆ ವಿಚಾರವಾಗಿ ತೀರ್ಪು ಬಂದ ನಂತರ ಮೇಕೆದಾಟು ಯೋಜನೆಯ ಪೂರ್ವ ಕಾರ್ಯಸಾಧ್ಯತಾ ವರದಿ ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ
- ಕೇಂದ್ರದಿಂದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಲು ಅನುಮತಿ ಸಿಗುತ್ತಿದ್ದಂತೆ ಸಮರೋಪಾದಿಯಲ್ಲಿ ಕಾರ್ಯಪ್ರವೃತ್ತ
- ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳ ಜತೆ ತಕ್ಷಣವೇ ತಾವೇ ಖುದ್ದು ಮೇಕೆದಾಟು ಸ್ಥಳಕ್ಕೆ ಭೇಟಿ ನೀಡಿ ಯೋಜನೆ ಅಧ್ಯಯನ ಮಾಡಿ, ನೀಲನಕ್ಷೆ ತಯಾರಿ
- ಯೋಜನೆಗೆ ಯಾವುದೇ ತೊಡಕು ಬಾರದಂತೆ ಎಲ್ಲ ತಾಂತ್ರಿಕ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲವೇ ತಿಂಗಳಲ್ಲಿ ಡಿಪಿಆರ್ ಸಿದ್ಧ
- 2019ರ ಜನವರಿಯಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಡಿಪಿಆರ್ ಸಲ್ಲಿಸಿ, ಒಪ್ಪಿಗೆ ಪಡೆಯುವಲ್ಲಿ ಯಶಸ್ವಿ.
- ಅಷ್ಟಕ್ಕೇ ಸುಮ್ಮನಾಗದ ಶಿವಕುಮಾರ್ ಅವರು ಈ ಯೋಜನೆ ಜಾರಿಗೆ ಕೇಂದ್ರ ಸಚಿವರಾದ ಬೈರೋನ್ ಸಿಂಗ್ ಶೆಖಾವತ್, ನಿರ್ಮಲಾ ಸೀತಾರಾಮನ್ ಮತ್ತಿತರರನ್ನು ಭೇಟಿ ಮಾಡಿ ಒತ್ತಡ
- ಅಲ್ಲದೆ, ರಾಜ್ಯದಿಂದ ಕೇಂದ್ರ ಪ್ರತಿನಿಧಿಸುತ್ತಿದ್ದ ಸಚಿವರಾದ ದಿವಂಗತ ಸುರೇಶ್ ಅಂಗಡಿ, ಹಿಂದಿನ ಸಚಿವ ಡಿ.ವಿ. ಸದಾನಂದಗೌಡ ಹಾಗೂ ಈಗ ಸಚಿವರಾಗಿರುವ ಪ್ರಲ್ಹಾದ ಜೋಷಿ ಭೇಟಿ ಮಾಡಿ ಮನವರಿಕೆ. ರಾಜ್ಯದ ಹಿತ ಕಾಯುವ ಯೋಜನೆಗೆ ಬೆಂಬಲ ನೀಡುವಂತೆ ಮನವಿ
- ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಪಳನಿಸ್ವಾಮಿ ಜತೆ ಚರ್ಚೆಗೆ ಅವಕಾಶ ಕೋರಿ ಹಲವು ಬಾರಿ ಪತ್ರ
- ನಂತರ ಮೈತ್ರಿ ಸರ್ಕಾರ ಪತನಗೊಂಡ ವಿರೋಧ ಪಕ್ಷದ ಸಾಲಿಗೆ ಬಂದ ನಂತರವೂ ಬಿಜೆಪಿ ಸರ್ಕಾರಕ್ಕೆ ಈ ಯೋಜನೆ ಜಾರಿಗೆ ಹಲವು ಬಾರಿ ಅಗ್ರಹ

ಮೇಕೆದಾಟು ಪಾದಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಜ್ಜೆ...

ಆತಿಥ್ಯದ ಹೊಣೆ ಹೊತ್ತ ಡಿ.ಕೆ. ಸುರೇಶ್

ಮೇಕೆದಾಟು ಪಾದಯಾತ್ರೆಗೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ. ದಿನ ಕಳೆದಂತೆ ಜನಸಾಗರವೇ ಹರಿದುಬರುತ್ತಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ತವರು ಜಿಲ್ಲೆ ರಾಮನಗರ. ಜಿಲ್ಲೆಯಲ್ಲಿ ಹರಿಯುವ ಕಾವೇರಿ-ಅರ್ಕಾವತಿ ನದಿಯ 'ಸಂಗಮ'ದಿಂದ ಜ. 9ರಂದು ಹೊರಟ ಈ ನಡಿಗೆಯಲ್ಲಿ ಹೆಜ್ಜೆ ಹಾಕಿರುವ ಸಾವಿರಾರು ಸಂಖ್ಯೆಯ ಜನರಿಗೆ ಶಿವಕುಮಾರ್ ಅವರ ಕನಕಪುರ ಮತಕ್ಷೇತ್ರದ ಜನರು ಭರ್ಜರಿ ಆತಿಥ್ಯ ನೀಡಿದ್ದಾರೆ.

ಪಾದಯಾತ್ರೆಗೆ ರಾಜ್ಯದಾದ್ಯಂತ ಜನರು ಸ್ವಯಂಪ್ರೇರಿತರಾಗಿ ಬಂದು ಬೆಂಬಲ ನೀಡುತ್ತಿದ್ದಾರೆ. ಹೀಗೆ ಬಂದವರಿಗೆ ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳುವ ವ್ಯವಸ್ಥೆಯ ಹೊಣೆ ವಹಿಸಿಕೊಂಡಿರುವ ಡಿ.ಕೆ. ಶಿವಕುಮಾರ್ ಸೋದರ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಇದನ್ನು ಸಮರ್ಥವಾಗಿ ನಿಭಾಯಿಸಿ, ಎಲ್ಲೂ ಕುಂದಾಗದಂತೆ ನೋಡಿಕೊಂಡಿದ್ದಾರೆ. ಕನಕಪುರ-ರಾಮನಗರದ ಆತಿಥ್ಯಕ್ಕೆ ಪಾದಯಾತ್ರಿಗಳು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಪಾದಯಾತ್ರಿಗಳು ಪ್ರತಿ ದಿನ ಸರಾಸರಿ 15 ಕಿಲೋ ಮೀಟರ್ ನಡೆಯುತ್ತಿದ್ದಾರೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನೀರಿಗಾಗಿ ಹಮ್ಮಿಕೊಂಡಿರುವ ಈ ಹೋರಾಟವನ್ನು ಬೆಂಬಲಿಸಿ ಹೆಜ್ಜೆ ಹಾಕುತ್ತಿರುವ ಅತಿಥಿಗಳಿಗೆ ಹೆಜ್ಜೆ ಹೆಜ್ಜೆಗೂ ಬೇಕಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಕೋವಿಡ್ ನಿಯಮಗಳನ್ನು ಪಾಲಿಸಿಕೊಂಡೇ ಇಡೀ ಪಾದಯಾತ್ರೆ ನಡೆದಿದೆ. ಜನರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಹಿದೆ. ಬರೋಬ್ಬರಿ 1 ಲಕ್ಷ ಮಾಸ್ಕ್‌ಗಳನ್ನು ಸಾರ್ವಜನಿಕರಿಗಾಗಿ ಈಗಾಗಲೇ ಹಂಚಲಾಗಿದೆ.

ಅಲ್ಲದೆ, ಪಾದಯಾತ್ರೆ ಸಾಗುವ ಹಾದಿಯ ಉದ್ದಕ್ಕೂ ಕಾಂಗ್ರೆಸ್‌ನ ಶಿಸ್ತುಬದ್ಧ ಸ್ವಯಂಸೇವಕರು ಹಾಗೂ ಡಿ.ಕೆ. ಶಿವಕುಮಾರ್ ಅವರ ಅಭಿಮಾನಿಗಳು ಕೈಯಲ್ಲಿ ಸ್ಯಾನಿಟೈಸ್ ಬಾಟಲಿ ಹಿಡಿದು ನಿಂತಿದ್ದಾರೆ. ಆಗಾಗ್ಗೆ ಜನರ ಕೈಗಳಿಗೆ ಸ್ಯಾನಿಟೈಸರ್ ಹಾಕಲಾಗುತ್ತಿದೆ. ಪಾದಯಾತ್ರೆ ಸಂದರ್ಭದಲ್ಲಿ ಯಾರಾದರೂ ಮಾಸ್ಕ್ ಬಳಕೆ ಮರೆತಿದ್ದರೆ, ಅಂಥವರನ್ನು ಸ್ವಯಂಸೇವಕರು ಎಚ್ಚರಿಸಿ ಮಾಸ್ಕ್ ನೀಡುತ್ತಿದ್ದಾರೆ. ಜೊತೆಗೆ, ಬಿಸಿಲಿಗೆ ಜನರ ನೆತ್ತಿ ಸುಡದಂತೆ ತಡೆಯಲು ಟೋಪಿಗಳನ್ನು ಕೂಡಾ ನೀಡಲಾಗುತ್ತಿದೆ. ಜನರ ಆರೋಗ್ಯ ನೋಡಿಕೊಳ್ಳಲೆಂದೇ 100ಕ್ಕೂ ಹೆಚ್ಚು ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ.

ಪ್ರತಿ 2-3 ಕಿ.ಮೀ.ಗೆ ಅಲ್ಲಲ್ಲಿ ತಂಪು ಪಾನೀಯದ ವ್ಯವಸ್ಥೆ ಮಾಡಲಾಗಿದೆ. ಜನರಿಗೆ ಶುದ್ಧ ಕುಡಿಯುವ ನೀರಿನ ಬಾಟಲಿಗಳ ಜೊತೆಗೆ ಎಳನೀರು, ಕಬ್ಬಿನ ಜ್ಯೂಸ್‌ನಂಥ ಆರೋಗ್ಯಕರ ಪೇಯಗಳನ್ನು, ಅವರು ಬಯಸಿದ್ದಷ್ಟು ಪ್ರಮಾಣದಲ್ಲಿ ನೀಡಲಾಗುತ್ತಿದೆ. ಜೊತೆಗೆ, ತಾಜಾ ಹಣ್ಣುಗಳನ್ನು ವಿತರಿಸಲಾಗುತ್ತಿದೆ. ಇದರಿಂದ ಜನರ ಉತ್ಸಾಹ ಹೆಚ್ಚಿ ಅವರು ಚುರುಕುನಿಂದ ಹೆಜ್ಜೆ ಹಾಕುತ್ತಿದ್ದಾರೆ. ಕಾಫಿ-ಟೀ ಅಗತ್ಯ ಇದ್ದವರಿಗೂ ಅದನ್ನೂ ಪೂರೈಸಲಾಗುತ್ತಿದೆ.

ಜೆಡಿಎಸ್, ಬಿಜೆಪಿಗೆ 'ರಾಜಕೀಯ' ಭಯ!

ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಡಿ.ಕೆ ಶಿವಕುಮಾರ್ ಅವರು ಪಕ್ಷದ ಇತರ ನಾಯಕರ ಜೊತೆ ಪಾದಯಾತ್ರೆ ಆರಂಭಿಸು-ತ್ತಿದ್ದಂತೆ, ಹಳೆ ಮೈಸೂರು ಭಾಗದ ಜೆಡಿಎಸ್, ಬಿಜೆಪಿ ನಾಯಕರಲ್ಲಿ ನಡುಕು ಆರಂಭವಾಗಿದೆ. ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಆ ಮೂಲಕ, ಈ ಭಾಗದಲ್ಲಿ ಜೆಡಿಎಸ್‌ಗೆ ದೊಡ್ಡ ಹೊಡೆತ ನೀಡಿದೆ. ಅಲ್ಲದೆ, ಬಿಜೆಪಿಗೂ ನಿರೀಕ್ಷೆಯ ಮತಗಳು ಬಂದಿಲ್ಲ. ನೀರಿಗಾಗಿ ಶಿವಕುಮಾರ್ ನಡೆಸುತ್ತಿರುವ ಪಾದಯಾತ್ರೆಯು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ಲಾಭ ತಂದುಕೊಡಲಿದೆ. ಈ ಕಾರಣಕ್ಕಾಗಿ ಬಿಜೆಪಿ, ಜೆಡಿಎಸ್ ನಾಯಕರು ಯಾತ್ರೆಯನ್ನು ಏರುಧ್ವನಿಯಲ್ಲಿ ಟೀಕಿಸುತ್ತಿದ್ದಾರೆ.

ಅಣ್ಣಾಮಲೈ ಬೆನ್ನಿಗೆ ಸಿ.ಟಿ. ರವಿ!

ತಮಿಳುನಾಡು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣದ ಯೋಜನೆಗೆ ಅಡ್ಡವಾಗಿದ್ದಾರೆ. ತಮಿಳುನಾಡಿನ ಬಿಜೆಪಿ ಉಸ್ತುವಾರಿ, ರಾಜ್ಯದ ಶಾಸಕ ಸಿ.ಟಿ. ರವಿ ಅವರ ಬೆನ್ನಿಗೆ ನಿಂತಿದ್ದಾರೆ. ಪಕ್ಷದ ಹಿತ ಕಾಯಲು ಕರ್ನಾಟಕದ ಹಿತ ಮರೆತು ಮೇಕೆದಾಟು ವಿರೋಧಿಸುತ್ತಿದ್ದಾರೆ ಎನ್ನುವುದು ಡಿ.ಕೆ. ಶಿವಕುಮಾರ್ ಅವರ ಆಕ್ರೋಶ. ಆ ಮೂಲಕ, ರಾಜ್ಯ ಬಿಜೆಪಿ ಯಾವ ಮೂಲೆಯಿಂದ ಯೋಜನೆ ಪರವಾಗಿದೆ ಎನ್ನುವುದು ಅವರ ಪ್ರಶ್ನೆ.

ಬಿಜೆಪಿಯ ಈ ದ್ವಂದ್ವ ವಿರುದ್ಧ ಸಿಡಿದೆದ್ದ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಶಾಸಕರೂ ಆಗಿರುವ ಮಾಜಿ ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ ಮತ್ತಿತರ ಪಕ್ಷದ ಹಿರಿಯ ನಾಯಕರ ಜತೆ ಚರ್ಚಿಸಿ, ಅವರ ಸಹಕಾರದೊಂದಿಗೆ ಪಾದಯಾತ್ರೆ ನಡೆಸಲು ತೀರ್ಮಾನಿಸಿದ್ದರು.

'ಸಾಮಾನ್ಯ ಜಲವರ್ಷದಲ್ಲಿ ಕರ್ನಾಟಕದಿಂದ ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರು ಕಾವೇರಿ ನೀರು ಹರಿಸಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಅದನ್ನು ಬಿಟ್ಟು ತಮಿಳುನಾಡಿಗೆ ಕಾವೇರಿ ನೀರಿನ ವಿಷಯದಲ್ಲಿ ತಕರಾರು ತೆಗೆಯಲು ಕಾನೂನು ರೀತಿಯಲ್ಲಿ ಯಾವುದೇ ಹಕ್ಕು ಇಲ್ಲ. ಸಮುದ್ರ ಸೇರಿ ವ್ಯರ್ಥವಾಗುವ ನೀರನ್ನು ಕುಡಿಯಲು ಮತ್ತು ವಿದ್ಯುತ್ ಉತ್ಪಾದನೆಗೆ ಬಳಸುವ ಉದ್ದೇಶದಿಂದ ಮೇಕೆದಾಟು ಯೋಜನೆಯನ್ನು ರೂಪಿಸಲಾಗಿದೆ. ತಮಿಳುನಾಡು ಈ ಯೋಜನೆಗೆ ತಕರಾರು ತೆಗೆಯಲು ರಾಜ್ಯ ಬಿಜೆಪಿ ನಾಯಕರ ಕುಮ್ಮಕ್ಕು ಕೂಡಾ ಕಾರಣ' ಎನ್ನುತ್ತಾರೆ ಡಿ.ಕೆ. ಶಿವಕುಮಾರ್.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಕನಸುಗಳು ನಿಮ್ಮನ್ನು ನಿಯಂತ್ರಿಸಬಾರದು. ನೀವು ಅವುಗಳನ್ನು ನಿಯಂತ್ರಿಸಬೇಕು.

-ಹರುಕಿ ಮುರಾಕಮಿ

ಸಂಕ್ರಮಣದ ಘಟ್ಟದಲ್ಲಿ ವಿಐಎಲ್ ಕಾಯಬೇಕು ದೂರಸಂಪರ್ಕ ವಲಯದ ಹಿತ

ದೂರಸಂಪರ್ಕ ಸೇವಾ ಕ್ಷೇತ್ರದ ಮಹತ್ವದ ಕಂಪನಿಗಳಲ್ಲಿ ಒಂದಾಗಿರುವ ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಸಂಕ್ರಮಣದ ಕಾಲಘಟ್ಟವೊಂದರಲ್ಲಿ ಇರುವಂತೆ ಕಾಣಿಸುತ್ತಿದೆ. ಕಂಪನಿಯು ಅಂದಾಜು ₹ 1.95 ಲಕ್ಷ ಕೋಟಿ ಸಾಲವನ್ನು ಹೊತ್ತುಕೊಂಡಿದೆ. ಇದು ಕೇಂದ್ರ ಸರ್ಕಾರಕ್ಕೆ ಬೇರೆ ಬೇರೆ ಬಾಕಿ ಮೊತ್ತಗಳನ್ನು ಕೊಡಬೇಕಿದೆ. ಈಗ ₹ 16 ಸಾವಿರ ಕೋಟಿ ಮೊತ್ತವನ್ನು ಕೊಡುವ ಬದಲು, ಕಂಪನಿಯ ಷೇರುಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡಲು ತೀರ್ಮಾನಿಸಲಾಗಿದೆ. ಈ ತೀರ್ಮಾನವು ಕಾರ್ಯರೂಪಕ್ಕೆ ಬಂದ ನಂತರ ಕಂಪನಿಯಲ್ಲಿ ಕೇಂದ್ರ ಸರ್ಕಾರದ ಷೇರುಪಾಲು ಶೇಕಡ 35.8ರಷ್ಟು ಆಗಲಿದೆ. ಕಂಪನಿಯ ಪ್ರವರ್ತಕರ ಸ್ಥಾನದಲ್ಲಿ ಇರುವ ವೊಡಾಫೋನ್ ಸಮೂಹ ಮತ್ತು ಆದಿತ್ಯ ಬಿರ್ಲಾ ಸಮೂಹದ ಷೇರುಪಾಲು ಗಣನೀಯವಾಗಿ ಇಳಿಕೆ ಆಗಲಿದ್ದು, ವೊಡಾಫೋನ್ ಮತ್ತು ಆದಿತ್ಯ ಬಿರ್ಲಾ ಸಮೂಹವು ಕ್ರಮವಾಗಿ ಶೇ 28.5 ಹಾಗೂ ಶೇ 17.8ರಷ್ಟು ಷೇರುಗಳನ್ನು ಹೊಂದಲಿವೆ. ಅಂದರೆ, ಪ್ರವರ್ತಕರ ತಲಾವಾರು ಷೇರುಪಾಲು ಕಡಿಮೆ ಆಗಲಿದ್ದು ಕೇಂದ್ರ ಸರ್ಕಾರವೇ ಅತಿದೊಡ್ಡ ಷೇರುದಾರ ಆಗಲಿದೆ. ಕೇಂದ್ರ ದೂರಸಂಪರ್ಕ ಇಲಾಖೆಯು ದೂರಸಂಪರ್ಕ ಸೇವಾ ಕಂಪನಿಗಳಿಗೆ ಪರಿಹಾರ ಪ್ಯಾಕೇಜ್ ಒಂದನ್ನು ಹಿಂದಿನ ವರ್ಷದಲ್ಲಿ ಪ್ರಕಟಿಸಿತ್ತು. ಅದರ ಅಡಿಯಲ್ಲಿ, ಕೇಂದ್ರಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಬಾಕಿಗಳನ್ನು ಕೊಡಲು ವಿಐಎಲ್ ನಾಲ್ಕು ವರ್ಷಗಳ ಕಾಲಾವಕಾಶ ಪಡೆದುಕೊಂಡಿತ್ತು. ಹೀಗೆ ಕಾಲಾವಕಾಶ ಪಡೆದುಕೊಂಡಿದ್ದು ಕಂಪನಿಯ ಪಾಲಿಗೆ ದೊಡ್ಡ ನೆರವಿನ ರೂಪದಲ್ಲಿ ಬಂದಿತ್ತು. ಬಾಕಿ ಮೊತ್ತಗಳಿಗೆ ಕಂಪನಿಗಳು ಬಡ್ಡಿಯನ್ನು ಕೂಡ ಪಾವತಿಸಬೇಕು. ಬಡ್ಡಿಯ ಬದಲು ಷೇರುಗಳನ್ನು ಕೇಂದ್ರ ಸರ್ಕಾರಕ್ಕೆ ನೀಡುವ ಆಯ್ಕೆಯನ್ನು ದೂರಸಂಪರ್ಕ ಇಲಾಖೆಯು ಕಂಪನಿಗಳಿಗೆ ನೀಡಿತ್ತು. ವಿಐಎಲ್ ಈ ಆಯ್ಕೆಯನ್ನು ಬಳಸಿಕೊಂಡಿದೆ.

ಕೇಂದ್ರವು ದೂರಸಂಪರ್ಕ ವಲಯಕ್ಕೆ ಹೆಚ್ಚಿನ ಹೂಡಿಕೆಗಳು ಬರುವಂತಹ ವಾತಾವರಣವನ್ನು ಸೃಷ್ಟಿಸುವ ಕಡೆ ಗಮನ ನೀಡಬೇಕು

ವಾಣಿಜ್ಯ ವಹಿವಾಟು ನಡೆಸುವುದು ಸರ್ಕಾರದ ಕೆಲಸ ಅಲ್ಲ; ಖಾಸಗಿಯವರು ಮುಕ್ತವಾಗಿ ವಾಣಿಜ್ಯ ವಹಿವಾಟು ನಡೆಸಲು ಅಗತ್ಯವಿರುವ ವ್ಯವಸ್ಥೆಯನ್ನು ರೂಪಿಸಿಕೊಡುವುದು ಸರ್ಕಾರದ ಕೆಲಸ ಎಂಬುದು ಈಗ ಕೇಂದ್ರದಲ್ಲಿ ಸರ್ಕಾರದ ಚುಕ್ಕಾಣಿ ಹಿಡಿದವರು ತಾಳಿರುವ ತಾತ್ವಿಕ ನಿಲುವು. ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಇದು ಸ್ವಾಗತಾರ್ಹ ನಿಲುವು ಕೂಡ ಹೌದು. ಈ ತಾತ್ವಿಕ ನಿಲುವಿನ ಭಾಗವಾಗಿಯೇ ಕೇಂದ್ರವು, ನಷ್ಟದಲ್ಲಿ ಇರುವ ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸಮೂಹಕ್ಕೆ ಮಾರಾಟ ಮಾಡಿದೆ. 'ಪ್ರಮುಖ ವಲ್ಲದ' ಕೆಲವು ಉದ್ಯಮ ವಲಯಗಳಲ್ಲಿನ ತನ್ನ ಬಂಡವಾಳವನ್ನು ಖಾಸಗಿಯವರಿಗೆ ಮಾರಾಟ ಮಾಡುವ ತೀರ್ಮಾನವನ್ನು ಕೈಗೊಂಡಿದೆ. 'ಪ್ರಮುಖ ವಾಗಿರುವ' ಕೆಲವು ಕ್ಷೇತ್ರಗಳಲ್ಲಿ ಮಾತ್ರ ಸರ್ಕಾರಿ ಉದ್ದಿಮೆಗಳು ಇದ್ದರೆ ಸಾಕು ಎಂಬ ನಿಲುವನ್ನೂ ಅದು ತಾಳಿದೆ. ಆದರೆ, ಈಗ ಕೇಂದ್ರ ಸರ್ಕಾರವು ದೂರಸಂಪರ್ಕ ಸೇವಾ ವಲಯದ ಪ್ರಮುಖ ಕಂಪನಿಯೊಂದರ ಅತಿದೊಡ್ಡ ಷೇರುದಾರ ಆಗುವ ಹಂತಕ್ಕೆ ಬಂದು ನಿಂತಿದೆ. ದೇಶದ ದೂರಸಂಪರ್ಕ ಸೇವಾ ವಲಯದಲ್ಲಿ ಹಿಂದೆ ಹಲವು ಕಂಪನಿಗಳು ಹೂಡಿಕೆ ಮಾಡಿದ್ದವು. ಬದಲಾದ ಕಾಲಘಟ್ಟದಲ್ಲಿ ಅವುಗಳಲ್ಲಿ ಕೆಲವು ಕಂಪನಿಗಳು ವಹಿವಾಟಿನಿಂದ ಹಿಂದೆ ಸರಿದವು. ಇನ್ನು ಕೆಲವು ಕಂಪನಿಗಳು ವಿಲೀನಗೊಂಡವು. ವಿಐಎಲ್ ಕಂಪನಿಯು ಸಾಲದ ಸುಳಿಯಲ್ಲಿ ಸಿಲುಕಿದೆ. ದೇಶದಲ್ಲಿ ಮೊಬೈಲ್ ದೂರಸಂಪರ್ಕ ಸೇವೆಗಳನ್ನು ಒದಗಿಸುತ್ತಿರುವ ಕಂಪನಿಗಳು ಈಗ ನಾಲ್ಕು ಮಾತ್ರ. ಆ ಪೈಕಿ ಒಂದು ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್). 2016ರ ನಂತರದಲ್ಲಿ ಈ ಕ್ಷೇತ್ರದಲ್ಲಿ ಶುರುವಾದ ಅತಿಯಾದ ದರ ಸಮರದ ಪರಿಣಾಮವಾಗಿ, ಕಂಪನಿಗಳಿಗೆ ಪ್ರತೀ ಗ್ರಾಹಕನಿಂದ ಬರುವ ಆದಾಯದ (ಎಆರ್‌ಪಿಯು) ಮಟ್ಟವು ಸುಸ್ಥಿರ ಬೆಳವಣಿಗೆಗೆ ಸಾಕಾಗುವಂತೆ ಇಲ್ಲ ಎಂಬ ಮಾತನ್ನು ಉದ್ಯಮದ ಪ್ರಮುಖರು ಹಲವು ಬಾರಿ ಹೇಳಿದ್ದಾರೆ. ಅದಾದ ನಂತರದಲ್ಲಿ ಸೇವಾ ಶುಲ್ಕಗಳಲ್ಲಿ ತುಸು ಹೆಚ್ಚಳ ಮಾಡಲಾಗಿದೆಯಾದರೂ, ಅದು ಕಂಪನಿಗಳ ಪಾಲಿಗೆ ಆರ್ಥಿಕ ಬಿಕ್ಕಟ್ಟಿನಿಂದ ಬೇಗ ಹೊರಬರಲು ಅಗತ್ಯವಿರುವಷ್ಟು ಆದಾಯವನ್ನು ತಂದುಕೊಡುತ್ತಿರುವಂತೆ ಕಾಣುತ್ತಿಲ್ಲ. ಬಡ್ಡಿ ಪಾವತಿಯ ಬದಲು ಷೇರುಗಳನ್ನೇ ನೀಡಲು ವಿಐಎಲ್ ತೀರ್ಮಾನಿಸಿರುವುದು ಈ ಮಾತಿಗೆ ಒಂದು ಆಧಾರ. ಖಾಸಗಿ ಸೇವಾ ವಲಯದಲ್ಲಿನ ಶುಲ್ಕ ಎಷ್ಟಿರಬೇಕು ಎಂಬುದನ್ನು ಸರ್ಕಾರ ತೀರ್ಮಾನಿಸಬೇಕಾಗಿಲ್ಲ ಎನ್ನುವುದು ನಿಜವಾದರೂ, ಶುಲ್ಕವು ಸುಸ್ಥಿರ ಬೆಳವಣಿಗೆಗೆ ನೆರವಾಗುವ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳುವ ಕೆಲಸವನ್ನು ಕಂಪನಿಗಳು ಪರಸ್ಪರ ಮಾತುಕತೆಯ ಮೂಲಕವಾದರೂ ಮಾಡಲೇಬೇಕು. ಉದ್ಯಮದ ಆರೋಗ್ಯದ ದೃಷ್ಟಿಯಿಂದ ಅದು ಬಹಳ ಅಗತ್ಯ.

ವಿಐಎಲ್ ಷೇರುಗಳನ್ನು ಪಡೆದುಕೊಂಡ ನಂತರದಲ್ಲಿ, ಕಂಪನಿಯ ವಹಿವಾಟು ನೋಡಿಕೊಳ್ಳುವ ಕೆಲಸವನ್ನು ತಾನು ಮಾಡುವುದಿಲ್ಲ. ಆ ಕೆಲಸವನ್ನು ಪ್ರವರ್ತಕರೇ ಮುಂದುವರಿಸಬಹುದು ಎಂಬ ಭರವಸೆಯು ವಿಐಎಲ್‌ಗೆ ಸರ್ಕಾರದ ಕಡೆಯಿಂದ ದೊರೆತಿದೆ ಎಂದು ವರದಿಯಾಗಿದೆ. ಕೇಂದ್ರವು ಈ ನಿಲುವನ್ನು ತಾಳಿದ್ದರೆ ಅದು ಸ್ವಾಗತಾರ್ಹ. ಕೇಂದ್ರವು ಈಗಾಗಲೇ ಒಂದು ಕಂಪನಿಯನ್ನು (ಬಿಎಸ್‌ಎನ್‌ಎಲ್) ನಡೆಸುತ್ತಿರುವಾಗ, ಇನ್ನೊಂದು ಕಂಪನಿಯ ಆಡಳಿತವನ್ನೂ ಹೊತ್ತುಕೊಂಡರೆ ಹಿತಾಸಕ್ತಿಗಳ ಸಂಘರ್ಷ ಉಂಟಾಗಬಹುದು. ಅದು ಕಂಪನಿ ಪಾಲಿಗೆ ಅಷ್ಟೇನೂ ಒಳ್ಳೆಯದಲ್ಲ. ಅದರ ಬದಲಿಗೆ, ಕೇಂದ್ರವು ದೂರಸಂಪರ್ಕ ವಲಯಕ್ಕೆ ಹೆಚ್ಚಿನ ಹೂಡಿಕೆಗಳು ಬರುವಂತಹ ವಾತಾವರಣವನ್ನು ಸೃಷ್ಟಿಸುವ ಕಡೆ ಗಮನ ನೀಡಬೇಕು. ದೇಶಿ ಹಾಗೂ ವಿದೇಶಿ ಹೂಡಿಕೆಗಳು ಈ ವಲಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹರಿದುಬಂದಾಗ, ಕಂಪನಿಗಳ ಆರ್ಥಿಕ ಸ್ಥಿತಿ ಒಂದಿಷ್ಟು ಸುಧಾರಣೆ ಕಾಣಬಹುದು. ಈ ಕ್ಷೇತ್ರದಲ್ಲಿನ ದರ ಸಮರ ತೀವ್ರಗೊಳ್ಳದಂತೆಯೂ ನೋಡಿಕೊಳ್ಳಬೇಕು. ದರ ಸಮರದ ಬಿಸಿ ತಾಳಲಾರದೆ ಯಾವುದೇ ಕಂಪನಿ ಕುಸಿದುಬಿದ್ದರೆ, ಅದರ ನೇರ ಪರಿಣಾಮವು ದೇಶದ ಬ್ಯಾಂಕಿಂಗ್ ವಲಯದ ಮೇಲೆಯೂ ಕಂಪನಿಯ ಸಹಸ್ರಾರು ಉದ್ಯೋಗಿಗಳ ಮೇಲೆಯೂ ಆಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ದಿನದ ಟ್ವೀಟ್

ಇದು ತರವೇ?

ಶಿಕ್ಷಣ ಮತ್ತು ಆರೋಗ್ಯವು ಕುಟುಂಬಗಳಿಗೆ ಪ್ರಮುಖ ವೆಚ್ಚದ ಬಾಬ್ತುಗಳಾಗಿವೆ. ವಾಸ್ತವದಲ್ಲಿ, ಇವು ಉಚಿತವಾಗಿ ಮತ್ತು ಖಚಿತವಾಗಿ ಸಿಗಬೇಕಾದ ಸೌಲಭ್ಯಗಳು. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇವುಗಳ ಪೂರೈಕೆಗೆ ಎಷ್ಟೊಂದು ನಿಷ್ಕಾಳಜಿ ತೋರುತ್ತಿವೆಯೆಂದರೆ, ಇವುಗಳಿಗಾಗಿ ಜನ ಪ್ರತಿವರ್ಷವೂ ಸಾವಿರಾರು ರೂಪಾಯಿಯನ್ನು ಖರ್ಚು ಮಾಡಬೇಕಾಗಿ ಬಂದಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಸತ್ಯವು ತನ್ನ ಪ್ರತಿಪಾದನೆಗೆ ಹಲವು ಮಾರ್ಗಗಳನ್ನು ಹೊಂದಿರುತ್ತದೆ. ತಮ್ಮ ಅಧಿಕಾರ ಅವಧಿಯಲ್ಲಿ ಉತ್ತರಪ್ರದೇಶದಲ್ಲಿನ ಯುವಜನರ ನಿರುದ್ಯೋಗ ಪ್ರಮಾಣವು ಶೇ 17ರಿಂದ ಶೇ 4ಕ್ಕೆ ಇಳಿದಿರುವುದಾಗಿ ಯೋಗಿ ಆದಿತ್ಯನಾಥ ಅವರು ಪತ್ರಿಕೆಗಳ ಮುಖಪುಟದ ಜಾಹೀರಾತುಗಳ ಮೂಲಕ ಹೇಳಿಕೊಂಡಿದ್ದರು. ಆದರೆ, ಸಂಪುಟಕ್ಕೆ ರಾಜೀನಾಮೆ ನೀಡಿರುವ ರಾಜ್ಯದ ಕಾರ್ಮಿಕ ಮತ್ತು ಉದ್ಯೋಗ ಸಚಿವರು, ಕಳೆದ ನಾಲ್ಕು ವರ್ಷಗಳಿಂದ ಉತ್ತರಪ್ರದೇಶದಲ್ಲಿ ಯುವಕರಿಗೆ ಏನೇನೂ ಸಿಕ್ಕಿಲ್ಲ ಎಂದು ಹೇಳಿದ್ದಾರೆ!

ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 13-1-1997

• **ಭಿಕ್ಷುಕರಿಗೂ ರೇಷನ್ ಕಾರ್ಡ್**

ನವದೆಹಲಿ, ಜ. 12 (ಪಿಟಿಐ- ಯುಎನ್‌ಐ)- ಸಾರ್ವಜನಿಕ ಪಡಿತರ ವ್ಯವಸ್ಥೆಗೆ ಇನ್ನು ಮುಂದೆ ಭಿಕ್ಷುಕರು ಹಾಗೂ ವಲಸೆ ಕಾರ್ಮಿಕರು ಕೂಡಾ ಸೇರ್ಪಡೆಯಾಗಲಿದ್ದಾರೆ. ಕೇಂದ್ರದ ಸಂಯುಕ್ತರಂಗ ಸರ್ಕಾರವು ಈ ಬಗ್ಗೆ ನಿರ್ಧಾರ ಕೈಗೊಂಡಿದ್ದು, ಜನವರಿ 26ರ ಗಣರಾಜ್ಯೋತ್ಸವ ದಿನದಂದು ಈ ಯೋಜನೆಯನ್ನು ಪ್ರಕಟಿಸಲಾಗುವುದು.

ದೇಶದಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಭಿಕ್ಷುಕರು ಹಾಗೂ ವಲಸೆ ಕಾರ್ಮಿಕರ ಸಹಿತ ಸುಮಾರು 35 ಕೋಟಿ ಜನರಿಗೆ ಪಡಿತರ ವ್ಯವಸ್ಥೆಯಡಿ ಅರ್ಧ ಬೆಲೆಗೆ ಅಕ್ಕಿ, ಗೋಧಿ ವಿತರಿಸಲು ಕೇಂದ್ರ ನಿರ್ಧರಿಸಿದೆ.

• **ವಿಸ್ತರಿಸಿದ ಇಎಸ್‌ಐ ಕಾರ್ಮಿಕರಿಗೆ ಬೇಗುದಿ**

ಬೆಂಗಳೂರು, ಜ. 12- ಕಾರ್ಮಿಕರ ವ್ಯಾಪಕ ಪ್ರತಿಭಟನೆಯ ನಡುವೆಯೂ ಕೇಂದ್ರ ರಾಜ್ಯ ವಿಮಾ ಕಾರ್ಮಿಕರ (ಇಎಸ್‌ಐ) ವಂತಿಗೆಯನ್ನು ಹೆಚ್ಚಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 13-1-1972

• **ಮುಜೀಬ್ ಬಾಂಗ್ಲಾ ದೇಶದ ಪ್ರಧಾನಿ: ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ**

ಢಾಕಾ, ಜ. 12- ವಂಗಬಂಧು ಷೇಖ್ ಮುಜೀಬುರ್ ರೆಹಮಾನ್ ಅವರು ಇಂದು ಬಾಂಗ್ಲಾ ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕಾರ ಮಾಡಿ, ನವೋದಿತ ಗಣರಾಜ್ಯದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ರೂಪಿಸಿದರು.

ಇದಕ್ಕೆ ಮುನ್ನ, ಬಾಂಗ್ಲಾದೇಶದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಮತ್ತು ಢಾಕಾ ವಿ.ವಿ. ಉಪಕುಲಪತಿ ಅಬು ಸಯೀದ್ ಚೌಧುರಿಯವರಿಂದ ಸಂಜೆ 4.25ಕ್ಕೆ ಮುಜೀಬರು ಪ್ರಮಾಣವಚನ ಸ್ವೀಕರಿಸಿದರು.

ಹೊಸ ಸಮತೋಲ ಜಲಾಶಯ ಕಟ್ಟುವ ಬದಲು ನಮ್ಮೊಳಗಿನ ಹೂಳನ್ನು ತೆಗೆಸಿದರೆ ಹೇಗೆ?

ಮೇಕೆ ದಾಟುವಲ್ಲಿ ಕೊರಕಲು ಸಾರ್!

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುತ್ತೇನೆಂದು ಹಿಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹೇಳಿದ್ದರು. ಸಿಂಗಪುರ ನಗರದೇಶ ತನ್ನವರಿಗೆ ನೀರಿನ ಕೊರತೆ ಆಗದಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿಕೊಂಡಿದೆ. ಹಾಗೆ ನೋಡಿದರೆ ಅಲ್ಲಿ ಊರಾಚೆಗೆ ನದಿ ಇಲ್ಲ. ನಗರದ ಸುತ್ತೆಲ್ಲ ಕೆರೆಗಳ ಬದಲು ಉಪ್ಪುನೀರಿನ ಸಮುದ್ರವಿದೆ. ಆದರೂ ಅಲ್ಲಿನವರು ನೀರಿಗಾಗಿ ಗಡಿಯಾಚಿನವರ ಜೊತೆ ಜಗಳ ಕಾಯಲಿಲ್ಲ. ಕೋರ್ಟು ಕಚೇರಿಗಳಿಗೆ ವಕೀಲರನ್ನು ಅಟ್ಟಿ ದಶಕಗಳ ಕಾಲ ಧನಧಾರೆ ಹರಿಸಲಿಲ್ಲ. ಸಾವಿರಾರು ಹೆಕ್ಟೇರ್ ಅರಣ್ಯವನ್ನು ಮುಳುಗಿಸಿಯಾದರೂ ನೀರನ್ನು ತರುತ್ತೇವೆಂದು ತೊಡೆ ತಟ್ಟಲಿಲ್ಲ. ನೀರನ್ನು ಅಧಿಕಾರದ ಮೆಟ್ಟಿಲನ್ನಾಗಿ ಬಳಸಲೆಂದು ಪಾದಯಾತ್ರೆ ಮಾಡಲಿಲ್ಲ. ಪತ್ರಿಕೆಗಳಲ್ಲಿ ಜಾಹೀರಾತು ಕಾಳಗ ನಡೆಸಲಿಲ್ಲ. ಆದರೂ ಮುಂದಿನ ನೂರು ವರ್ಷಗಳವರೆಗೂ ಬೆಳೆಯಬಹುದಾದ ತಮ್ಮ ನಗರಕ್ಕೆ ನೀರಿನ ಅಭಾವ ಉಂಟಾಗದಂತೆ ವ್ಯವಸ್ಥೆ ಮಾಡಿದರು. ಈಗ ಆ ದ್ವೀಪದೇಶದಲ್ಲಿ ಎಲ್ಲಿ ನೋಡಿದಲ್ಲಿ ಪ್ರವಾಸಿಗರ ಕಣ್ಮನ ತಣಿಸುವ, ತಂಪುಣಿಸುವ ಉದ್ಯಾನ, ಕೆರೆ-ಕಾರಂಜಿ; ದೋಣಿಯಾನದ ಜಲೋಲ್ಲಾಸ. ಚಮತ್ಕಾರಿಕ ಪ್ರಾಣಿಪಕ್ಷಿಗಳ ಪ್ರದರ್ಶನ. ಅಲ್ಲೆಲ್ಲ ಸುತ್ತಾಡಿ ಸುಸ್ತಾದರೆ ಕುಡಿಯಲು ಅದೇ ನಗರದ ಚರಂಡಿಯಿಂದ ಸಂಸ್ಕರಿಸಿದ ಶುದ್ಧ ನ್ಯೂವಾಟರ್.

ಅವರು ಮಾಡಿದ್ದಿಷ್ಟೆ: ನೀರಿಗಾಗಿ ನಾಲ್ಕು ಜಲಮೂಲಗಳನ್ನು ಗುರುತಿಸಿದರು: ಮಳೆನೀರಿನದು ಒಂದು ಮೂಲ. ಬಳಸಿ ಚೆಲ್ಲಿದ ನೀರನ್ನು ಸಂಸ್ಕರಿಸುವುದು ಎರಡನೆಯ ಮೂಲ; ಪಕ್ಕದ ಮಲೇಷ್ಯಾದಿಂದ ಬಂದಿದ್ದು ಮೂರನೆಯ ಮೂಲ. ಕೊನೆಯದಾಗಿ, ಸಮುದ್ರದ ಉಪ್ಪುನೀರನ್ನು ಶುದ್ಧೀಕರಿಸುವುದು ನಾಲ್ಕನೆಯ ಮೂಲ. ವಿಜ್ಞಾನಿಗಳ ಸಲಹೆಯಂತೆ ಎಲ್ಲಕ್ಕೂ ಅತ್ಯಾಧುನಿಕ ತಂತ್ರಜ್ಞಾನ. ಜನಬಳಕೆಗೆ, ವಾಣಿಜ್ಯಕ್ಕೆ ಹಾಗೂ ಉದ್ಯಮಕ್ಕೆ ನೀರಿನ ಶಾಶ್ವತ ಸುಭದ್ರತೆ.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿಯವರು ಇಸ್ರೇಲಿನ ಹೈಫಾ ನಗರದ ಜಲಶಕ್ತಿಯನ್ನು ಖುದ್ದಾಗಿ ಹೋಗಿ ನೋಡಿ ಬಂದರು. ಬೆಂಗಳೂರು ಜಿಲ್ಲೆಯಲ್ಲಿ ಸುರಿಯುವ ಮಳೆ ನೀರಿನ ಅರ್ಧದಷ್ಟೂ ಅಲ್ಲಿ ಸುರಿಯುವುದಿಲ್ಲ. ಭೂಗತ ಜಲಾಶಯವನ್ನು ನಿರ್ಮಿಸಿ ಅವರು ಹಣ್ಣು, ತರಕಾರಿ, ಧಾನ್ಯಗಳ ರಫ್ತು ಮಾಡುತ್ತಾರೆ. ಬಳಸಿದ ನೀರನ್ನೇ ಶುದ್ಧೀಕರಿಸಿ, ಮೀನುಸಾಕಣೆ ಮಾಡುತ್ತಾರೆ. ಬದ್ಧ ವೈರಿಗಳೆನಿಸಿದ ಪ್ಯಾಲೆಸ್ಟೀನ್ ಮತ್ತು ಜೋರ್ಡಾನ್ ಜೊತೆ ಕೈಜೋಡಿಸಿ ಜಲರಕ್ಷಣೆಯ ಅಭಿಯಾನ ನಡೆಸುತ್ತಾರೆ.

ನಮ್ಮ ಇನ್ನೊಬ್ಬ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರು ಒಮ್ಮೆ ಮಾರಿಶಸ್ ದೇಶಕ್ಕೆ, ಒಮ್ಮೆ ಮಾಲ್ದೀವ್ಸ್ ದೇಶಕ್ಕೆ ಹೋಗಿದ್ದರು. ಅವೆರಡೂ ದೇಶಗಳು ಜಲಸಂಕಟಗಳನ್ನು ನಿಭಾಯಿಸಿದ ಪರಿ ಅಧ್ಯಯನಯೋಗ್ಯವಾಗಿದ್ದಾದರೂ ಬಿಎಸ್‌ವೈ ಎರಡೂ ಬಾರಿ ಅಧಿಕಾರವನ್ನು ಬಿಡಬೇಕಾದ ಹಂತದಲ್ಲೇ ಪ್ರವಾಸ ಕೈಗೊಂಡಿದ್ದರಿಂದ ಅವರ ಅನುಭವ ಇಲ್ಲಿ ಪ್ರಸ್ತುತವಲ್ಲ. ಆದರೆ ಎರಡನೆಯ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಲಿಂಗನಮಕ್ಕಿ ಜಲಾಶಯದಿಂದ ನೀರನ್ನು ಬೆಂಗಳೂರಿಗೆ ತರುವ ಯೋಜನೆಯನ್ನು ಮುಂದಿಟ್ಟಿದ್ದರು. ಅದು ಅನಗತ್ಯವೆಂದೂ ಸ್ವಯಂಸೋಲಿನ ಹೆಜ್ಜೆಯೆಂದೂ ಜಲತಜ್ಞರು ಸ್ಪಷ್ಟವಾಗಿ ಬಿಂಬಿಸಿದ್ದರು. ಸಾಲದ್ದಕ್ಕೆ ಸ್ಥಳೀಯರಿಂದ ತೀವ್ರ ಪ್ರತಿರೋಧ ಬಂದಿದ್ದರಿಂದ ಯೋಜನೆಗೆ ಹಿನ್ನಡೆಯಾಯಿತು.

ಮೇಕೆದಾಟು ಯೋಜನೆ ಕೂಡ ಏಕೆ ಅನಗತ್ಯ ಎಂಬುದನ್ನು ವಿಜ್ಞಾನಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಿಂದ ತರಬಹುದಾದ ನೀರಿಗಿಂತ ಹೆಚ್ಚು ನೀರನ್ನು ನಾವು ಈಗ ಕೊಳೆ ಮಾಡಿ ಚೆಲ್ಲುತ್ತಿದ್ದೇವೆ; ಮಳೆಗಾಲದಲ್ಲಿ ಪೋಲು ಮಾಡುತ್ತಿದ್ದೇವೆ. ಅದರ ಬದಲು ಬೆಂಗಳೂರು ಸುತ್ತಲಿನ ಕೆರೆಗಳನ್ನು ಚೊಕ್ಕಟಗೊಳಿಸಿ ಇಲ್ಲಿ ಸುರಿಯುವ ಮಳೆನೀರಿನ ಶೇಖರಣೆಗೆ ಅನುಕೂಲ ಮಾಡಿಕೊಟ್ಟರೆ 15 ಟಿಎಮ್‌ಸಿ ಸಿಗುತ್ತದೆ. ಇನ್ನು, ಕೊಳೆನೀರನ್ನು ಸಂಸ್ಕರಿಸಿದರೆ 16 ಟಿಎಮ್‌ಸಿ ಸಿಗುತ್ತದೆ. ಇನ್ನು ಕಾವೇರಿಯ ಈಗಿನ ಸೋರಿಕೆಯನ್ನೂ ತಡೆಗಟ್ಟಿದರೆ ನಗರದ ಅಗತ್ಯಕ್ಕಿಂತ ಇಮ್ಮಡಿ ನೀರು (30 ಟಿಎಮ್‌ಸಿ) ಇಲ್ಲೇ ಲಭ್ಯವಿದೆ.

ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಂಡರೆ ಏನೇನು ನಷ್ಟ ನೋಡೋಣ: ಅಲ್ಲಿನ ಕಾವೇರಿ ಅಭಯಾರಣ್ಯದ ನಾಲ್ಕೂವರೆ ಸಾವಿರ ಹೆಕ್ಟೇರ್ ಅಡವಿ ಮುಳುಗುತ್ತದೆ. ಅದರ ಆಚೀಚಿನ 7500 ಹೆಕ್ಟೇರ್ ಭೂಮಿಯೂ ಮುಳುಗುತ್ತದೆ. ಯೋಜನೆ ಜಾರಿಯಲ್ಲಿದ್ದಷ್ಟು ಕಾಲ, ಸುಮಾರು ಹತ್ತು ವರ್ಷಗಳಲ್ಲಿ ಕನಿಷ್ಠ 2000 ಟನ್ ಡೈನಮೈಟ್ ಸ್ಫೋಟವಾಗುತ್ತದೆ. ಅಷ್ಟೂ ವರ್ಷ ಅಲ್ಲಿನ ವನ್ಯಜೀವಿಗಳು ದಿಕ್ಕಾಪಾಲಾಗಿ ಹೊಲಗಳಿಗೆ ನುಗ್ಗುತ್ತವೆ. ಗುಂಡೇಟಿಗೊ, ವಿದ್ಯುತ್ ತಂತಿಗೋ ಹೆದ್ದಾರಿಗೋ ಬಲಿಯಾಗುತ್ತವೆ. ಮುಳುಗಡೆಗೆ ಮುನ್ನವೇ ಸಂಭವಿಸುವ ಈ ಪ್ರಳಯದ ಬಗ್ಗೆ ಆ ಜೀವಿಗಳು ಮಾತಾಡಲಾರವು. ಪೀಠಭದ್ರರ ವಿರುದ್ಧ ಮತ ಚಲಾಯಿಸಲಾರವು. ಇನ್ನು ಅಣೆಕಟ್ಟೆ ಪೂರ್ತಿಗೊಂಡರೆ ಅಷ್ಟರಮಟ್ಟಿಗೆ ಕಾರ್ಬನ್ನನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಆ ಭೂಭಾಗ ಕಳೆದುಕೊಳ್ಳುತ್ತದೆ. ಜೊತೆಗೆ ಪ್ರತೀ ಬೇಸಿಗೆಯಲ್ಲಿ ನೀರು ಕಡಿಮೆಯಾಗುತ್ತ ಬಂದಹಾಗೆ ಆರೆಂಟು ಸಾವಿರ ಹೆಕ್ಟೇರ್ ಕೆಸರಿನಿಂದ ಶಾಖವರ್ಧಕ ಮೀಥೇನ್ ಅನಿಲ ಬಿಡುಗಡೆಯಾಗುತ್ತದೆ. ಒಟ್ಟಾರೆ ವಾತಾವರಣಕ್ಕೆ ಇನ್ನಷ್ಟು ಬಿಸಿಯೇರುತ್ತದೆ. ಇನ್ನು 60-80 ವರ್ಷಗಳಲ್ಲಿ ಇಡೀ ಜಲಾಶಯ ಹೂಳುತುಂಬಿ ಬರಡು ಮೈದಾನವಾಗುತ್ತದೆ.



ಮೇಕೆದಾಟು ಬೇಡವೆಂದು ನಿರ್ಧರಿಸಿದರೆ ಸಿಗುವ ಅನುಕೂಲಗಳನ್ನು ನೋಡಿ: ಮಳೆನೀರನ್ನು ಇಂಗಿಸಿದರೆ ಅಂತರ್ಜಲದ ಮಟ್ಟ ಏರುತ್ತದೆ. ಜೀವಲೋಕ ಸಮೃದ್ಧವಾಗುತ್ತದೆ. ಕಾರ್ಬನ್ನನ್ನು ಹೀರಿ ತೆಗೆಯುವ ನೆಲದ ಸಾಮರ್ಥ್ಯ ದುಪ್ಪಟ್ಟಾಗುತ್ತದೆ. ಕಾಂಕ್ರೀಟ್ ಕಾಡು ತಂಪಾಗುತ್ತದೆ. ಕೆರೆಗಳ ಹೂಳೆತ್ತುವ ಹತ್ತು ವರ್ಷಗಳ ಅಭಿಯಾನ ಶುರುವಾದರೆ ಲಕ್ಷಾಂತರ ಜನರಿಗೆ ಉದ್ಯೋಗ ಸಿಗುತ್ತದೆ. ಹೂಳೆತ್ತಬಲ್ಲ ಸ್ಮಾರ್ಟ್ ಉಪಕರಣಗಳು ಪ್ರತೀ ಶ್ರಮಿಕನ ಕೈಗೂ ಬರುತ್ತವೆ. ಕೆರೆಗಳೆಲ್ಲ ನಳನಳಿಸುತ್ತವೆ. ಜಲಪಕ್ಷಿಗಳು ಹಿಂದಿರುಗುತ್ತವೆ. ಮೇಲೆತ್ತಿದ ಹೂಳಿನಿಂದ ನಗರದಂಚಿಗೆ ಹೊಸ ಉದ್ಯಾನಗಳು ನೂರಾರಾಗುತ್ತವೆ. ಉದ್ಯಾನ ನಗರಿಯ ಹೆಸರು ಸಾರ್ಥಕವಾಗುತ್ತದೆ, ವಿಸ್ತರಿಸುತ್ತದೆ. ರಾಜ್ಯದ ಎಲ್ಲ ಊರುಗಳಿಗೂ ಮಾದರಿಯಾಗುತ್ತದೆ. ತಮಿಳುನಾಡಿನತ್ತ ಹರಿದು ಹೋಗುವ ಮಳೆನೀರು ಮತ್ತು ಕೊಳೆನೀರು ಶುದ್ಧವಾಗಿ ನಮ್ಮದೇ ಆಸ್ತಿಯಾಗುತ್ತದೆ- ನೆರೆರಾಜ್ಯದ ಜೊತೆಯ ಸಂಬಂಧ ಸೌಹಾರ್ದಯುತವಾಗುತ್ತದೆ. ಕೇರಳ, ಪುದುಚೇರಿ ಕೂಡ ಅಡ್ಡಗಾಲು ಹಾಕುವುದಿಲ್ಲ.

ಚರಂಡಿನೀರಿನ ಶುದ್ಧೀಕರಣದ ತಂತ್ರಜ್ಞಾನಕ್ಕೆಂದು ಸಿಂಗಪೂರ್‌ಗೇ ಹೋಗಬೇಕಿಲ್ಲ. ನಮಗಿಂತ ತೀರ ಹಿಂದುಳಿದ ನಮೀಬಿಯಾ ದೇಶದ ವಿಂಡ್‌ಹೋಕ್ ಅಥವಾ ಸೆನೆಗಾಲ್ ದೇಶದ ಡಾಕಾರ್ ನಗರಗಳಲ್ಲಿ ಜಾರಿಯಲ್ಲಿರುವ ಜಲಶುದ್ಧೀಕರಣ ತಂತ್ರಜ್ಞಾನವನ್ನು ತಂದರೂ ಸಾಕು. ಆ ಯಾವ ನಗರದಲ್ಲೂ (ಬೆಂಗಳೂರಿನಂತೆ) ಚಂದ್ರನಲ್ಲಿ, ಮಂಗಳನಲ್ಲಿ ನೀರಿನಂಶವನ್ನು ಹುಡುಕಬಲ್ಲ ತಂತ್ರಜ್ಞರಿಲ್ಲ ನಿಜ. ಆದರೆ ನಗರದ ದಾಹವನ್ನು ತಣಿಸಬಲ್ಲವರಿದ್ದಾರೆ. ಇರಲಿ, ನಮಗೆ ಬಾಹ್ಯಾಕಾಶ ಟೆಕ್ನಾಲಜಿಯೇ ಬೇಕೆ? ಜರ್ಮನಿಯ ಮ್ಯೂನಿಕ್ ವಿಶ್ವವಿದ್ಯಾಲಯದ ತಜ್ಞರು ಕ್ರಯೊಸ್ಯಾಟ್-2 ಉಪಗ್ರಹವನ್ನು ಬಳಸಿ ಮೆಕಾಂಗ್ ಕಣಿವೆಯ ಆರೂ ದೇಶಗಳ ಎಲ್ಲ ಕೆರೆ ಜಲಾಶಯಗಳ ನೀರಿನ ಮಟ್ಟವನ್ನು ದಿನವೂ ಅಳೆಯುತ್ತಿದ್ದಾರೆ. ಸೆಕೆ ಹೆಚ್ಚಾದರೆ ನೀರು ಆವಿಯಾಗದಂತೆ ಕೆರೆಗಳ ಮೇಲೆ ಸೌರ ತೇಲುತೋಟ ನಿರ್ಮಿಸಿ ವಿದ್ಯುತ್ ಉತ್ಪಾದನೆ ಮಾಡುವ ತಂತ್ರಜ್ಞಾನ ಬಂದಿದೆ. ಅತಿವೃಷ್ಟಿ, ಅನಾವೃಷ್ಟಿ ಎರಡರಲ್ಲೂ ನೀರಿನ ಸಮತೋಲವನ್ನು ಕಾಯ್ದುಕೊಳ್ಳುವ ರೋಬಾಟಿಕ್ ಕವಾಟಗಳು ಬಂದಿವೆ. ಸಮತೋಲ ಜಲಾಶಯದ ಆ ಆಧುನಿಕ ತಂತ್ರಜ್ಞಾನ ನಮಗೆ ಬೇಕಿದೆ.

ನೀರಿನ ತೀವ್ರ ಅಭಾವವಿದ್ದಾಗ ಬೇಕಿದ್ದರೆ ನಾವೆಲ್ಲರೂ ತೊಡೆತಟ್ಟಿ, ಕಟ್ಟೆ-ಕಾಲುವೆಗಳ ನಿರ್ಮಾಣಕ್ಕೆ ಇಳಿಯೋಣ. ಆದರೆ ನಮ್ಮಲ್ಲಿ ನೀರಿನ ಅಭಾವ ಇಲ್ಲ. ಅವ್ಯವಸ್ಥೆ ಇದೆ, ನಿಷ್ಕಾಳಜಿ ಇದೆ, ದುರಾಡಳಿತ ಇದೆ. ಅವನ್ನೆಲ್ಲ ಸರಿಪಡಿಸುವ ಬದಲು ಅವನ್ನೇ ಬಂಡವಾಳ ಮಾಡಿಕೊಂಡ ಹೋರಾಟಕ್ಕೆ ಕೈಜೋಡಿಸಿದರೆ ನಾವು ಮುಳುಗಿಸುವುದು ಕೇವಲ ಅರಣ್ಯಗಳನ್ನಲ್ಲ; ಒಂದು ಜನಾಂಗದ ವಿವೇಕವನ್ನೇ ಸಮಾಧಿ ಮಾಡುತ್ತೇವೆ.

'ಹೂಳು ಕೆರೆಗಳಲ್ಲಿ ತುಂಬಿಲ್ಲ, ನಮ್ಮ ತಲೆಯಲ್ಲಿ ತುಂಬಿದೆ' ಎಂದು ಜಲತಜ್ಞ ಶಿವಾನಂದ ಕಳವೆ ಹಿಂದೊಮ್ಮೆ ಹೇಳಿದ್ದರು. ಮೇಕೆದಾಟು ಅಣೆಕಟ್ಟೆ ಯೋಜನೆಗಾಗಿ ಜಾಗತಿಕ ಟೆಂಡರ್ ಕರೆಯುವ ಬದಲು, ನಮ್ಮಲ್ಲಿ ತುಂಬಿದ ಆ ಹೂಳನ್ನು ತೆಗೆಯಬಲ್ಲ ವಿಧಾನಗಳನ್ನು ನಾವು ಹುಡಕಬೇಕಿದೆ.

ಚುರುಮುರಿ

ನಡಿಗೆ ಪಾಲಿಟಿಕ್ಸ್

• ಆನಂದ

ಪಾದಯಾತ್ರೆಗೂ ವಾಕಿಂಗ್‌ಗೂ ಏನು ವ್ಯತ್ಯಾಸ? ಹೆಂಡತಿಯ ಪ್ರಶ್ನೆ.

ನಾನು ನೀನು ನಡೆದರೆ ವಾಕಿಂಗ್. ದೊಡ್ಡವರು ನಡೆದರೆ ಪಾದಯಾತ್ರೆ.

ಹಾಗಿದ್ದರೆ ದೊಡ್ಡವರು ವಾಕಿಂಗ್ ಮಾಡಿದರೂ ಅದು ಪಾದಯಾತ್ರೆ ಆಗುವುದೇ?

ನೊ, ನಮ್ಮ ತರಹ ವಾಕಿಂಗೇ ಆಗುತ್ತೆ.

ಮತ್ತೆ ವಾಕಿಂಗ್ ಯಾವಾಗ ಪಾದಯಾತ್ರೆ ಆಗುವುದು?

ಇಟ್ ಡಿಪೆಂಡ್ಸ್. ಗಾಂಧೀಜಿ ನಡೆದರು, ದಾಂಡಿ ಮಾರ್ಚ್ ಫೇಮಸ್ ಆಯಿತು. ವಿನೋಬಾಜಿ ದೇಶದ ಉದ್ದಗಲಕ್ಕೂ ನಡೆದರು. ಅದು ಭೂದಾನ ಚಳವಳಿ ಎಂದು ಫೇಮಸ್ ಆಯಿತು. ಅದೂ ವಾಕಿಂಗೇ.

ಮತ್ತೆ ಸಿದ್ದರಾಮಯ್ಯನವರು ಬಳ್ಳಾರಿಗೆ ವಾಕಿಂಗ್ ಮಾಡಿದ್ದು ಪಾದಯಾತ್ರೆನಾ? ಅಷ್ಟಷ್ಟು ದೂರ ನಡೆದಾಗ ಅದು ಸಿಂಪಲ್ ವಾಕಿಂಗ್ ಹೇಗಾಗುತ್ತೆ?

ಅವರೊಬ್ಬರೇ ನಡೆದರೆ? ಅವರ ಜತೇಲಿ ಒಂದು ಹಿಂಡು ಜನ ಇದ್ದರು. ಹಾಗಾಗಿ ಅದು ಪಾದಯಾತ್ರೆನೇ.

ಅಂದರೆ ತುಂಬಾ ದೂರ ನಡೆಯಬೇಕು. ಜತೇಲಿ ಹಿಂಡು ಜನ ಇರಬೇಕು. ಆಗ ಅದು ಪಾದಯಾತ್ರೆ ಆಗುತ್ತೆ. ಇಬ್ಬರೇ ತುಂಬಾ ದೂರ ನಡೆದರೆ? ಶಿವಕುಮಾರ್, ಸಿದ್ದರಾಮಯ್ಯ ತಾವಿಬ್ಬರೇ ಪಾದಯಾತ್ರೆ ಮಾಡೋಕೆ ರೆಡಿ ಅಂದಿದ್ದರು. ಅದು ಸಿಂಪಲ್ ವಾಕಿಂಗ್ ಆಗೊಲ್ಲವೇ ನಾನು ನೀವು ಮಾಡೋ ಹಾಗೆ.

ಛೆ! ಅವರಿಬ್ಬರೂ ಫಿಟ್. ಅದು ವಾಕಿಂಗ್ ಆಗೊಲ್ಲ. ಪಾದಯಾತ್ರೇನೇ ಆಗುತ್ತೆ.

ಈಗ ನಮ್ಮ ಬೀದಿ ಮಹಿಳೆಯರೆಲ್ಲ ನೀರಿಗಾಗಿ ಜಲಮಂಡಳಿ ಕಚೇರಿವರೆಗೂ ನಡೆದರೆ?

ಅದು ಪ್ರತಿಭಟನೆ ಆಗುತ್ತೆ.

ನಾವು ನೀರಿಗಾಗಿ ನಡೆದರೆ ಪ್ರತಿಭಟನೆ ಆಗುತ್ತೆ. ಕಾಂಗ್ರೆಸ್‌ನೋರು ನೀರಿಗಾಗಿ ನಡೆದರೆ ಪಾದಯಾತ್ರೆ ಆಗುತ್ತೆ. ಅದ್ಹೇಗೆ ಅಂತಾ?

ಅದನ್ನೇ ಪಾಲಿಟಿಕ್ಸ್ ಅಂತ ಕರೆಯೋದು.

ನೀವು ಈಗ ಬಿಜೆಪಿ ತರಹ ಮಾತಾಡ್ತಿದ್ದೀರಾ. ಮೇಕೆದಾಟು ಪಾದಯಾತ್ರೇನ ಅವರು ಪಾಲಿಟಿಕ್ಸ್ ಅಂತಾರೆ. ಕಾಂಗ್ರೆಸ್‌ನೋರಿಗೆ ಅದು ನೀರಿಗಾಗಿ ನಡಿಗೆ. ನಾವು ಜಲಮಂಡಳಿ ವರೆಗೆ ನಡೆದರೆ ಅದನ್ನು ಪ್ರತಿಭಟನೆ ಅಂತ ತಳ್ಳಿಹಾಕ್ತೀರ. ಇದನ್ನೇ ನಾನು ಪಾಲಿಟಿಕ್ಸ್ ಅಂತ ಕರೆಯೋದು ಎಂದು ಕೋಪದಿಂದ ಎದ್ದು ಹೋದಳು.

ಸಂಗತ

ಪ್ರೀತಿಯಿಲ್ಲದೆ ಮಾಡುವುದೇನು?

ಅಪ್ಪಟ ಪ್ರೀತಿಯು ಮನುಷ್ಯನನ್ನು ಉದ್ಧರಿಸುವ ಶಕ್ತಿ ಹೊಂದಿದೆ, ಆದರೆ ನಾವು ಅದನ್ನು ಸ್ವೀಕರಿಸಲು ಮಾನಸಿಕವಾಗಿ ಸಿದ್ಧರಾಗಿದ್ದರೆ ಮಾತ್ರ

• ಡಾ. ಜ್ಯೋತಿ

'ಪ್ರೀತಿಯಿಲ್ಲದೆ ಏನನ್ನೂ ಮಾಡಲಾರೆ, ದ್ವೇಷವನ್ನು ಕೂಡ' ಎಂದು ಕನ್ನಡಿಗರಿಗೆ ಸಾರಿದ ಚಂಪಾ ನಮ್ಮನ್ನು ಅಗಲಿದ್ದಾರೆ. ಹಾಗೆಯೇ, ಆಧುನಿಕ ಜಗತ್ತಿಗೆ ಅನ್ವಯಿಸುವಂತೆ ಪ್ರೀತಿಗೆ ಹೊಸ ವ್ಯಾಖ್ಯಾನ ನೀಡಿದ ಅಮೆರಿಕದ ಖ್ಯಾತ ಸ್ತ್ರೀವಾದಿ ಮತ್ತು ಸಾಂಸ್ಕೃತಿಕ ವಿಮರ್ಶಕರಾದ ಬೆಲ್ ಹುಕ್ಸ್ ಕೂಡ ಕಳೆದ ಡಿಸೆಂಬರ್ 15ರಂದು ನಿಧನರಾಗಿದ್ದಾರೆ.

ಬೆಲ್ ಹುಕ್ಸ್, ಸ್ತ್ರೀವಾದಿ ಚಿಂತನೆಯ ವಿವಿಧ ಆಯಾಮಗಳ ಹೂರಣವೆಂಬಂತೆ ಬರೆದಿರುವ ಮೂವತ್ತಕ್ಕೂ ಹೆಚ್ಚು ಗಮನಾರ್ಹ ಪುಸ್ತಕಗಳಲ್ಲಿ ವಿಶಿಷ್ಟವೆನಿಸುವಂತಹ ಕೃತಿ, 'ಆಲ್ ಅಬೌಟ್ ಲವ್: ನ್ಯೂ ವಿಷನ್ಸ್' (ಪ್ರೀತಿಯ ಕುರಿತಾದ ಹೊಸ ದೃಷ್ಟಿಕೋನಗಳು). ಈ ಸಂದರ್ಭದಲ್ಲಿ, ಅವರ ಪ್ರೀತಿಯ ವ್ಯಾಖ್ಯಾನಕ್ಕೆ ಮರುನೋಟ ಬೀರುವುದು ಸೂಕ್ತವೆನಿಸುತ್ತದೆ. ಅದು, ವರ್ತಮಾನ ಕಾಲಕ್ಕೆ ಅನ್ವಯಿಸುವಂತೆ, ಪ್ರೀತಿಯ ತತ್ವಶಾಸ್ತ್ರವನ್ನು ವಿಸ್ತೃತವಾಗಿ ಚರ್ಚಿಸುತ್ತದೆ. 'ನಮ್ಮ ಸಮಾಜದಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಭಾವಹೀನತೆ ಮತ್ತು ಪ್ರೀತಿಯ ಕೊರತೆಯನ್ನು ಕೊನೆಗಾಣಿಸುವ ಹಂಬಲದಿಂದ ಈ ಸಂಶೋಧನಾ ಗ್ರಂಥ ಬರೆದೆ' ಎಂದು ಲೇಖಕರು ಹೇಳಿಕೊಂಡಿದ್ದಾರೆ.

ಇಲ್ಲಿ, ಪುನಃ ಪ್ರೀತಿಗೆ ತೆರೆದುಕೊಳ್ಳುವುದು ಹಾಗೂ ಸ್ಪಂದಿಸುವುದು ಹೇಗೆ ಎನ್ನುವುದನ್ನು ಲೇಖಕಿ ಅತ್ಯಂತ ಸರಳವಾಗಿ ವಿವರಿಸುತ್ತಾರೆ. ಅವರ ಪ್ರಕಾರ, ಮನುಷ್ಯ ಸಂಬಂಧಗಳು ಗಟ್ಟಿಯಾಗಿ ಜೋಡಣೆಯಾಗುವುದು, ಪರಸ್ಪರ ಪ್ರೀತಿ, ಗೌರವ, ಸ್ಪಂದನೆ, ಬದ್ಧತೆ, ನಂಬಿಕೆ ಹಾಗೂ ಕಾಳಜಿಯ ತಳಹದಿಯ ಮೇಲೆ. ಹಾಗೆಯೇ, ಆಧುನಿಕ ಜಗತ್ತಿನಲ್ಲಿ ಪ್ರೀತಿಯ ಸಮಸ್ಯೆಗಳ ಮೂಲ ಬೇರುಗಳೆಂದರೆ, ಪ್ರಾಬಲ್ಯ, ನಿಯಂತ್ರಣ, ಅಹಂ, ಆಕ್ರಮಣಶೀಲತೆ ಹಾಗೂ ಸಿದ್ಧ ಮಾದರಿಯ ಸ್ತ್ರೀ-ಪುರುಷ ವಿಭಿನ್ನ ಪಾತ್ರ ವ್ಯಾಖ್ಯಾನಗಳು.

ಬೆಲ್ ಹುಕ್ಸ್ ಹೇಳಿದಂತೆ, ಅತಿಯಾದ ಸ್ವಮೋಹ ಮತ್ತು ಸ್ವಾರ್ಥ ಸಂಸ್ಕೃತಿಯಿಂದ ಬಿಡಿಸಿಕೊಂಡರೆ ಮಾತ್ರ, ಬೆಚ್ಚಗಿನ ಪ್ರೀತಿ ಸಿಗುವುದು ಸಾಧ್ಯ. ಸಾಮಾನ್ಯವಾಗಿ, ಸಂಬಂಧಗಳಲ್ಲಿ ನೋವು ಕಾಣಿಸಿಕೊಂಡಾಗ ನಮ್ಮ ಮೊದಲ ಪ್ರತಿಕ್ರಿಯೆ, ಬಂಧಗಳನ್ನು ಕಡಿದುಕೊಳ್ಳುವುದರಲ್ಲಿ ಇರುತ್ತದೆಯೇ ವಿನಾ ಬದ್ಧತೆಯನ್ನು ಕಾಪಾಡಿಕೊಳ್ಳುವುದರಲ್ಲಿ ಅಲ್ಲ. ಯಾಕೆಂದರೆ, ಪ್ರೀತಿಯನ್ನು ಎಲ್ಲರೂ ಬಯಸುತ್ತಾರೆ, ಆದರೆ, ನೀಡಲು ಸಿದ್ಧರಿರುವುದಿಲ್ಲ. ಅಪ್ಪಟ ಪ್ರೀತಿಯು ಮನುಷ್ಯನನ್ನು ಉದ್ಧರಿಸುವ ಶಕ್ತಿ ಹೊಂದಿದೆ, ಆದರೆ ನಾವು ಅದನ್ನು ಸ್ವೀಕರಿಸಲು ಮಾನಸಿಕವಾಗಿ ಸಿದ್ಧರಾಗಿದ್ದರೆ ಮಾತ್ರ.

ಸಾಮಾನ್ಯವಾಗಿ ನಾವು ಗಂಡು ಮಕ್ಕಳಿಗೆ, ಸಹಜವಾಗಿ ಭಾವನೆಗಳನ್ನು ವ್ಯಕ್ತಪಡಿಸದೆ ಒಳಗೆ ಅದುಮಿಟ್ಟುಕೊಳ್ಳಲು ಕಲಿಸುತ್ತೇವೆ. ಇದನ್ನು ಪುರುಷತ್ವದ ಪ್ರತೀಕವೆನ್ನುತ್ತೇವೆ. ಅದೇ ರೀತಿ, ಹೆಣ್ಣು ಮಕ್ಕಳಿಗೂ ಸಹಜವಾಗಿರಲು ಬಿಡದೆ, ಅವರದಲ್ಲದ ಆದರೆ ಎಲ್ಲರನ್ನೂ ಆಕರ್ಷಿಸುವ ಅಥವಾ ಖುಷಿಗೊಳಿಸುವ ವ್ಯಕ್ತಿತ್ವವನ್ನು ಹೊಂದುವಂತೆ ಸಿದ್ಧಗೊಳಿಸುತ್ತೇವೆ. ಹೀಗೆ ಅಸಹಜವಾಗಿ ಬೆಳೆದ ಹೆಣ್ಣು-ಗಂಡು ಪರಸ್ಪರ ಮುಖಾಮುಖಿಯಾದಾಗ, ಸಾಮಾಜಿಕ ನಿರೀಕ್ಷೆಗಳಿಗೆ ಅನುಗುಣವಾಗಿ ಸುಳ್ಳುಗಳ ಮೇಲೆಯೇ ಸಂಬಂಧ ಬೆಳೆಸುತ್ತಾರೆ. ಈ ಸುಳ್ಳುಗಳು ಮನಸ್ಸಿಗೆ ಮುದ ನೀಡಬಹುದು, ಆದರೆ, ನಿಜವಾದ ಪ್ರೀತಿ ನಿಂತಿರುವುದು ಸತ್ಯವೆಂಬ ಮೌಲ್ಯದ ಮೇಲೆ.

ವಿಸ್ಮಯವೆಂದರೆ, ಅನೇಕರು ತಮ್ಮ ಒಂಟಿತನದಿಂದ ತಪ್ಪಿಸಿಕೊಳ್ಳಲು ಪ್ರೀತಿಯ ಮೊರೆ ಹೋಗುತ್ತಾರೆ. ಆದರೆ, ಒಂಟಿಯಾಗಿರುವುದನ್ನು ಸಿದ್ಧಿಸುವುದು ನಾವು ಸ್ವತಃ ಕರಗತ ಮಾಡಿಕೊಳ್ಳಬೇಕಾದ ಕಲೆಯೇ ವಿನಾ ಅದಕ್ಕಾಗಿ ಇನ್ನೊಬ್ಬ ವ್ಯಕ್ತಿಗೆ ಜೋತು ಬೀಳುವುದೆಂದರೆ, ಅವರನ್ನು ಸಾಧನವಾಗಿ ಬಳಸಿಕೊಂಡಂತೆಯೇ ಸರಿ. ಅಲ್ಲಿ ಸಹಜ ಪ್ರೀತಿ ಅರಳುವುದು ದುರ್ಲಭ.

ಹೀಗೆ, ಪ್ರೀತಿಯ ಪಯಣದಲ್ಲಿ ಅನಿಶ್ಚಿತತೆಯಿದೆ ಎನ್ನುವುದನ್ನು ಒಪ್ಪಿಕೊಂಡು, ಅಲ್ಲಿ ಸುರಕ್ಷತೆಯನ್ನು ಹುಡುಕುವುದರ ಬದಲಾಗಿ ನಷ್ಟ, ನೋವು ಹಾಗೂ ಅಪಾಯವನ್ನು ಎದುರಿಸಲು ಮಾನಸಿಕವಾಗಿ ಸಿದ್ಧರಾಗುವುದನ್ನು ಅಭ್ಯಸಿಸಬೇಕು. ಯಾಕೆಂದರೆ, ಈ ದಾರಿಯಲ್ಲಿ ಹಲವಾರು ಸಂಗತಿಗಳು ನಮ್ಮ ನಿಯಂತ್ರಣ ಮೀರಿ ನಡೆಯಬಹುದು. ಅದರಂತೆಯೇ, ನಿಜವಾದ ಪ್ರೀತಿ ಅಸ್ತಿತ್ವದಲ್ಲಿಲ್ಲ ಎನ್ನುವ ಸಿನಿಕರಿಗೆ ಪ್ರೀತಿಯ ಸತ್ಯದರ್ಶನ ಆಗುವುದಿಲ್ಲ.



ಆಧುನಿಕ ಜಗತ್ತಿನ ದೊಡ್ಡ ಪಿಡುಗೆಂದರೆ, ಜನರು ಪರಸ್ಪರ ನಂಬಿಕೆ ಕಳೆದುಕೊಂಡು, ಸಂಶಯದಿಂದಲೇ ವ್ಯವಹರಿಸುತ್ತಿರುವುದು. ಹಾಗಾಗಿ, ನಮ್ಮ ಪ್ರೀತಿಯ ಭಾಷೆ ಬದಲಾಗಬೇಕಾಗಿದೆ. ನಾವು ನಮ್ಮ ಆಲೋಚನೆಗಳು ಮತ್ತು ಭಾವನೆಗಳೊಂದಿಗೆ ಸ್ವಲ್ಪ ಹೊತ್ತು ಏಕಾಂಗಿಯಾಗಿ ಸಮಯ ಕಳೆದರೆ, ನಮ್ಮನ್ನು ಅರಿತುಕೊಳ್ಳುವುದು ಸುಲಭ. ಅಲ್ಲಿ, ಪ್ರೀತಿ ಸಹಜವಾಗಿ ಅರಳುತ್ತದೆ. ಪ್ರೀತಿಯ ಮೊದಲ ಮೆಟ್ಟಿಲು ಪ್ರಾಮಾಣಿಕತೆಯಾದರೆ, ಎರಡನೇ ಮೆಟ್ಟಿಲು, ಪರಸ್ಪರ ನಿರಂತರ ಸಂವಹನ. ಸಾಮಾನ್ಯವಾಗಿ ನಾವು ಪ್ರೀತಿಯನ್ನು ನಾಮಪದವಾಗಿ ಉಪಯೋಗಿಸುತ್ತೇವೆ. ಆದರೆ ಅದನ್ನು ಕ್ರಿಯಾಪದವಾಗಿ ಬಳಸಿದಲ್ಲಿ, ಪ್ರೀತಿಸುವುದು ಸುಲಭವಾಗುತ್ತದೆ. ಯಾಕೆಂದರೆ, ಪ್ರೀತಿಯೆಂದರೆ ಕೇವಲ ಭಾವನೆಯಲ್ಲ, ಅದಕ್ಕೆ ಪೂರಕವಾದ ಕಾಯಕವೂ ಮುಖ್ಯ. ಹಾಗಾಗಿ, ಪ್ರೀತಿಸುವುದನ್ನು ಕಲಿಯೋಣ, ಅದಕ್ಕೆ ಮರಳಿ ತೆರೆದುಕೊಳ್ಳೋಣ. ಪ್ರೀತಿಯಿಂದ ಗೆಲ್ಲಲಾಗದ್ದು, ಬೇರೆ ಯಾವುದರಿಂದಲೂ ಗೆಲ್ಲಲು ಅಸಾಧ್ಯ.

ಗಾಂಧಿ ಪ್ರಾಯೋಗಿಕವಾಗಿ ಕಂಡುಕೊಂಡಂತೆ, 'ಏನೇ ಮಾಡಿದರೂ ಪ್ರೀತಿಯಿಂದ ಮಾಡಿ, ಇಲ್ಲವಾದಲ್ಲಿ, ಮಾಡಲು ಹೋಗಲೇಬೇಡಿ'.

ವಾಚಕರ ವಾಣಿ

ಹಿತವಚನ ಶೀಘ್ರ ಕೇಳಿಬರಲಿ

ಕನ್ನಡ ನಾಡಿನ ಶ್ರೇಷ್ಠ ಪ್ರವಚನಕಾರರಲ್ಲಿ ವಿಜಯಪುರದ ಜ್ಞಾನಯೋಗಾಶ್ರಮ ಮಠದ ಸಿದ್ಧೇಶ್ವರ ಸ್ವಾಮೀಜಿ ಸಹ ಒಬ್ಬರು. ಇವರ ಸರಳತೆ, ಎಂತಹವರಿಗೂ ಅರ್ಥವಾಗುವ ಸರಳ ಭಾಷೆಯ ಹಾಗೂ ಅತಿ ಮೌಲ್ಯಯುತ ಪ್ರವಚನಗಳು ಎಲ್ಲರಿಗೂ ಇಷ್ಟ. ಇಂತಹ ವ್ಯಕ್ತಿಗಳು ಪ್ರವಚನ ಕಾರ್ಯಕ್ರಮಕ್ಕಾಗಿ ಬರುತ್ತಿದ್ದಾರೆ ಎಂದರೆ ಕಾರ್ಯಕ್ರಮ ಆಯೋಜಕರು ಸರ್ವ ವಿಧದಲ್ಲೂ ತಯಾರಿ ಮಾಡಿಕೊಂಡಿರಬೇಕು, ಅದರಲ್ಲೂ ಅವರು ಉಳಿದುಕೊಳ್ಳುವ ಮನೆಯನ್ನು ತುಂಬಾ ಜಾಗರೂಕತೆಯಿಂದ ಪರಿಶೀಲನೆ ಮಾಡಬೇಕು.

ಸದ್ಯ ಚಿಕ್ಕೋಡಿ ತಾಲ್ಲೂಕಿನ ಕೆರೂರು ಗ್ರಾಮದಲ್ಲಿ ಶ್ರೀಗಳು ಸ್ನಾನದ ಮನೆಯಲ್ಲಿ ಕಾಲುಜಾರಿ ಬಿದ್ದು ಮೂಳೆ ಮುರಿತಕ್ಕೆ ಒಳಗಾಗಿದ್ದಾರೆ ಎಂಬ ಸುದ್ದಿ ಕೇಳಿ ಶ್ರೀಗಳ ಭಕ್ತ ಸಮೂಹಕ್ಕೆ ನೋವುಂಟಾಗಿದೆ. ಇಳಿವಯಸ್ಸಿನಲ್ಲಿ ಈ ಮಹಾನ್ ಚೇತನವು ಬೇಗನೆ ಚೇತರಿಸಿಕೊಂಡು ಹಿಂದಿನಂತೆಯೇ ಹಿತವಚನ ನೀಡಲಿ ಎಂಬುದು ಭಕ್ತರ ಆಶಯ.

ಹನುಮಂತಪ್ಪ ಎಚ್.ಎಂ., ಚಿಕ್ಕೋಡಿ

ಕುಲಾಂತರಿ ಪ್ರವೇಶಕ್ಕೆ ಅನುಮತಿ ಕುರಿತೂ ಚರ್ಚೆಯಾಗಲಿ

'ಪಶ್ಚಿಮಘಟ್ಟ ಸಂರಕ್ಷಣೆ ಕುರಿತು ವಿಸ್ತೃತ ಚರ್ಚೆ ನಡೆಯಲಿ' ಎಂದು ಆಗ್ರಹಿಸುವ ಸಂಪಾದಕೀಯ ಹಾಗೂ 'ರಾಷ್ಟ್ರೀಯ ಭದ್ರತೆ ಮತ್ತು ಪರಿಸರ ಸಂರಕ್ಷಣೆ' ಎಂಬ ಮುಖ್ಯ ಲೇಖನ (ಪ್ರ.ವಾ., ಜ. 11) ಎರಡೂ ಒಂದೇ ಧಾಟಿಯಲ್ಲಿವೆ. ಪಶ್ಚಿಮ ಘಟ್ಟದಲ್ಲಿ ಆಧುನಿಕತೆ, ಕೃಷಿ, ಹಳ್ಳಿಗಾಡುಗಳ ಅಭಿವೃದ್ಧಿಯೆಲ್ಲಕ್ಕೂ ಎಲ್ಲಿ ಮಿತಿ ಹಾಕಬೇಕೆಂಬುದರ ಬಗ್ಗೆ ಬರೆದ ಮಾಧವ ಗಾಡ್ಗೀಳರ ವರದಿಯಾಗಲೀ ಕಸ್ತೂರಿರಂಗನ್ ವರದಿಯಾಗಲೀ ವರದಿಯ ಹೆಸರುಗಳಷ್ಟೇ ಪರಿಚಯವಿದ್ದು, ಒಳಗೇನಿದೆ ಎಂಬುದು ಜನಸಾಮಾನ್ಯರಿಗ್ಯಾರಿಗೂ ಗೊತ್ತಿಲ್ಲ. ರಾಜಕಾರಣಿಗಳು, ಅಧಿಕಾರಿಗಳು ಖಂಡಿತ ತಲೆಕೆಡಿಸಿಕೊಂಡಿರಲಿಕ್ಕಿಲ್ಲ. ಜನರೊಂದಿಗೆ ಚರ್ಚೆ ಮಾಡದೇ ವರದಿ ಜಾರಿ ಬೇಡ ಎಂದು ಒಂದೊಂದು ಪಕ್ಷ ಅಧಿಕಾರಕ್ಕೆ ಬಂದಾಗಲೂ ತೀರ್ಮಾನ ತೆಗೆದುಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಮಾಡುವ ವಂಚನೆ. ಸರ್ಕಾರವು ಮೊದಲು ಆ ವರದಿಯನ್ನು ಕನ್ನಡೀಕರಣಗೊಳಿಸಿ, ಜನಸಾಮಾನ್ಯರಿಗೆ ಅರ್ಥವಾಗುವಂತೆ ಪ್ರಕಟಿಸಿ ಪ್ರತಿಯೊಂದು ಪಂಚಾಯಿತಿಗೆ, ಹಳ್ಳಿ ಹಳ್ಳಿಗೆ ತಲುಪಿಸಲಿ. ಜನಾಭಿಪ್ರಾಯ ಕೇಳಲಿ.

ಇಲ್ಲಿ ಪಶ್ಚಿಮ ಘಟ್ಟ, ಅಲ್ಲಿ ಹಿಮಾಲಯ ಪರ್ವತ ಶ್ರೇಣಿ. ಇಲ್ಲಿ ಅಭಿವೃದ್ಧಿ ಹೇಗೆ ಆಗಬೇಕು, ಆಗಬಾರದು ಎಂದು ಹೇಳುವ ವರದಿಯಾದರೆ, ಅಲ್ಲಿ ರಸ್ತೆ ಅಗಲೀಕರಣದ ಕುರಿತು ಸುಪ್ರೀಂ ಕೋರ್ಟ್‌ನ ಆದೇಶ. ಒಂದೇ ವ್ಯತ್ಯಾಸವೆಂದರೆ, ಪಕ್ಕದ ಚೀನಾ ದೇಶದ ಆಕ್ರಮಣವನ್ನು ತಡೆಯಲು ಯುದ್ಧಾಸ್ತ್ರಗಳನ್ನು ಸಾಗಿಸಲು ರಸ್ತೆ ಅಗಲೀಕರಣ ಬೇಕೇಬೇಕು ಎಂಬ ಸರ್ಕಾರದ ಒತ್ತಡದಿಂದ ಸುಪ್ರೀಂ ಕೋರ್ಟು ತನ್ನ ಆದೇಶವನ್ನೇ ಬದಲು ಮಾಡುವ ಪ್ರಮೇಯ ಬಂತು. ಇವೆರಡು ವಿಚಾರಗಳಲ್ಲದೇ ಆಹಾರ ವಸ್ತುಗಳಲ್ಲಿ ಕುಲಾಂತರಿಗಳ ಪ್ರವೇಶಕ್ಕೆ ಅನುಮತಿ ನೀಡುವ ವಿಚಾರವೂ ಜನರ ಮಧ್ಯೆ ವಿಸ್ತೃತವಾಗಿ ಚರ್ಚೆಯಾಗಲೇಬೇಕು. ಮೊದಲು ಉದ್ದಿಮೆಪತಿಗಳ ಅಭಿಪ್ರಾಯ ಕೇಳಿ, ಸಲಹೆ ಪಡೆದು ಈಗ ಜನಾಭಿಪ್ರಾಯವನ್ನೂ ಕೇಳಿ ಸರ್ಕಾರವು ಅಭಿಪ್ರಾಯ ತಿಳಿಸಲು ನಾಡಿದ್ದು 15ರವರೆಗೆ ಮಾತ್ರ ಗಡುವು ನೀಡಿದೆ. ಜನಸಾಮಾನ್ಯರಿಗೆ ಇದರ ಮಾಹಿತಿಯನ್ನೂ ನೀಡಿಲ್ಲ. ಜನರಿಗೆ ಸರಿಯಾದ ಮಾಹಿತಿ ನೀಡುವುದು, ಜನಾಭಿಪ್ರಾಯ ಆಲಿಸುವುದು, ಅದಕ್ಕೆ ಮನ್ನಣೆ ಕೊಡುವುದು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಕೆಲಸ. ಹಾಗೆಯೇ ದೇಶದ ನದಿ, ಪರ್ವತಗಳ ರಕ್ಷಣೆಯ ಬಗ್ಗೆ ಧ್ವನಿ ಎತ್ತುವುದು ದೇಶ ರಕ್ಷಣೆಯಷ್ಟೇ ಮಹತ್ವದ ಕಾರ್ಯ. ಆಹಾರದಲ್ಲಿ ಕುಲಾಂತರಿಗಳ ಪ್ರವೇಶವಾಗದಂತೆ ತಡೆಯಲು ಜನಾಭಿಪ್ರಾಯ ಕೂಡ ದೇಶದ ಜನರ ರಕ್ಷಣೆಯ ಮಹತ್ವದ ಕಾರ್ಯ. ದೇಶವೆಂದರೆ ದೇಶದೊಳಗಿನ ಜನರೂ ತಾನೇ?

ಶಾರದಾ ಗೋಪಾಲ, ಧಾರವಾಡ

ಬೇಕು ಗಡಿ ಆರೋಗ್ಯ ತಪಾಸಣಾ ಕೇಂದ್ರ

ಚಾಮರಾಜನಗರ ಜಿಲ್ಲೆಯ ದಕ್ಷಿಣದಂಚಿನ ತಮಿಳುನಾಡು, ಕೇರಳ ರಾಜ್ಯಗಳು ಕಳೆದ ವರ್ಷ ಕೋವಿಡ್ ಮಹಾಮಾರಿಯ ಮೊದಲ ಅಲೆಯಿಂದ ಬಾಧಿತವಾದಾಗ, ಈ ರಾಜ್ಯಗಳ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಮೂಲಕ ವಾಹನಗಳಲ್ಲಿ ಬರುವ ಜನರನ್ನು ತಪಾಸಣೆಗೆ ಒಳಪಡಿಸಲಾಗುತ್ತಿತ್ತು. ಬಂಡೀಪುರ, ಪುನಜೂರು, ಬೈಲೂರು, ಪಾಲಾರ ಸೇತುವೆ ಮೂಲಕ ಜನರ ಪ್ರವೇಶವನ್ನು ನಿಯಂತ್ರಿಸಿದ್ದರಿಂದ ಚಾಮರಾಜನಗರ ಜಿಲ್ಲೆಯು ಕೋವಿಡ್ ಮಹಾಮಾರಿಮುಕ್ತ ಹಸಿರು ವಲಯದಲ್ಲಿತ್ತು. ಆದರೆ ಎರಡನೇ ಅಲೆಯ ಸಂದರ್ಭದಲ್ಲಿ ಮೈಸೂರು, ಮಂಡ್ಯ ಜಿಲ್ಲೆಯ ಕೊರೊನಾ ವೈರಸ್ ಪೀಡಿತರು ಚಾಮರಾಜನಗರ ಜಿಲ್ಲಾ ಗಡಿಯ ತಪಾಸಣಾ ಕೇಂದ್ರಗಳಲ್ಲಿ ತಪಾಸಣೆಗೆ ಒಳಗಾಗದೆ ಜಿಲ್ಲೆಯನ್ನು ಪ್ರವೇಶಿಸಿದ್ದರಿಂದ ಜಿಲ್ಲೆಯಲ್ಲಿ ವೈರಾಣು ಹಬ್ಬಿತು. ಇದರಿಂದ ಔಷಧಿ, ಆಮ್ಲಜನಕದ ಕೊರತೆಯುಂಟಾಗಿ ಹಲವರು ಸಾವಿಗೀಡಾಗಿದ್ದು ಎಲ್ಲರಿಗೂ ತಿಳಿದಿರುವ ಸಂಗತಿ.

ಈಗ ಕೇರಳದಲ್ಲಿ ಓಮೈಕ್ರಾನ್ ಹಾವಳಿ ಕಂಡುಬಂದಿದೆ. ಮೈಸೂರು ಜಿಲ್ಲೆಯಲ್ಲೂ ಅದರ ಪ್ರಭಾವ ಹೆಚ್ಚಾಗಿದೆ. ಹೀಗಾಗಿ, ಕೇರಳದಿಂದ ಸುಲ್ತಾನಬತೇರಿ, ಬಂಡೀಪುರ ಅಭಯಾರಣ್ಯದ ಮೂಲಕ ಹಾಗೂ ತಮಿಳುನಾಡು, ಮೈಸೂರು ಜಿಲ್ಲೆಯಿಂದ ಚಾಮರಾಜನಗರ ಜಿಲ್ಲೆ ಪ್ರವೇಶಿಸುವವರನ್ನು ಪರೀಕ್ಷಿಸಿ, ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡವರ ಪ್ರವೇಶಕ್ಕೆ ಮಾತ್ರ ಅವಕಾಶ ಮಾಡಿಕೊಡಲು ಗಡಿಗಳಲ್ಲಿ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಬೇಕು. ಈ ಮೂಲಕ ಕೋವಿಡ್ ಮೂರನೇ ಅಲೆಯು ಚಾಮರಾಜನಗರ ಜಿಲ್ಲೆಯ ಮೂಲಕ ರಾಜ್ಯದಲ್ಲಿ ಹೆಚ್ಚಾಗಿ ಪಸರಿಸುವುದನ್ನು ತಡೆಯಲು ಸರ್ಕಾರ ಮುಂದಾಗಬೇಕು.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ಭ್ರಷ್ಟಾಚಾರಕ್ಕೆ ದಾರಿಯಾದೀತು...

ದೇವಾಲಯಗಳ ಆಡಳಿತವು ಮುಜರಾಯಿ ಇಲಾಖೆಯ ಕೈಯಲ್ಲಿ ಇರುವುದೇ ಒಳಿತು. ಏಕೆಂದರೆ ದೇಶದಲ್ಲಿ ಇನ್ನೂ ಎಷ್ಟೋ ದೇವಾಲಯಗಳಿಗೆ ದಲಿತರು ಹಾಗೂ ಕೆಲವು ಹಿಂದುಳಿದ ವರ್ಗಗಳಿಗೆ ಪ್ರವೇಶವಿಲ್ಲ. ಮುಜರಾಯಿ ಇಲಾಖೆಯ ಅಡಿ ಬರುವ ದೇವಾಲಯಗಳಲ್ಲಿ ಇಂತಹ ನಿರ್ಬಂಧ ಇರುವುದಿಲ್ಲ. ಒಂದು ವೇಳೆ ದೇವಾಲಯಗಳ ಆಡಳಿತವನ್ನು ಖಾಸಗಿ ಮಂಡಳಿಗಳಿಗೆ ನೀಡಿದರೆ, ಅವು ಕೆಲವು ಸಮುದಾಯಗಳಿಗೆ ಪ್ರವೇಶ ನಿರಾಕರಿಸುವ ಸಾಧ್ಯತೆ ಇರುತ್ತದೆ. ಹಣಕಾಸಿನ ವ್ಯವಹಾರವೂ ಮಂಡಳಿಯ ಕೈಯಲ್ಲಿ ಇರುವುದರಿಂದ, ಅಲ್ಲಿ ರಾಜಕಾರಣಿಗಳು ಹಾಗೂ ಬಲಾಢ್ಯ ಜಾತಿಗಳ ಹಸ್ತಕ್ಷೇಪ ಹೆಚ್ಚಾಗಿ ಭ್ರಷ್ಟಾಚಾರಕ್ಕೆ ದಾರಿಯಾಗಬಹುದು.

ನಟರಾಜು ಜಿ. ಶಾಹೂ, ಕೊಳ್ಳೇಗಾಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉತ್ತರಾಖಂಡ: ಪರ್ಯಾಯ ಆಡಳಿತದ ಪರಿಪಾಟ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

20 ವರ್ಷಗಳ ಕಡಿಮೆ ಅವಧಿಯಲ್ಲಿ ಉತ್ತರಾಖಂಡವು 10 ಮುಖ್ಯಮಂತ್ರಿಗಳನ್ನು ಕಂಡಿದೆ. ಎನ್.ಡಿ.ತಿವಾರಿ ಅವರನ್ನು ಹೊರತುಪಡಿಸಿದರೆ, ಬೇರಾವ ಮುಖ್ಯಮಂತ್ರಿಯೂ ಅವಧಿ ಪೂರ್ಣಗೊಳಿಸಲು ಆಗಿಲ್ಲ. ಇದು ರಾಜ್ಯದ ರಾಜಕೀಯ ಅಸ್ಥಿರತೆಯನ್ನು ಪ್ರತಿಬಿಂಬಿಸುತ್ತದೆ ಎಂದು ವಿಶ್ಲೇಷಕರು ಹೇಳುತ್ತಾರೆ. ಒಮ್ಮೆ ಕಾಂಗ್ರೆಸ್, ಮತ್ತೊಮ್ಮೆ ಬಿಜೆಪಿ ಸರ್ಕಾರ ರಚನೆಯಾಗುತ್ತಾ ಬಂದಿವೆ. ಒಂದೇ ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಿರುವುದು, ರಾಜ್ಯದಲ್ಲಿ ಬಿಜೆಪಿ ಮತ್ತೆ ಚುಕ್ಕಾಣಿ ಹಿಡಿಯಲು ಅಡ್ಡಿಯಾಗಬಹುದು ಎಂಬ ಅಭಿಪ್ರಾಯವಿದೆ. ರಾಜ್ಯದಲ್ಲಿ ಈ ಹಿಂದೆ ಕಾಂಗ್ರೆಸ್ ಸಹ ಹಲವು ಮುಖ್ಯಮಂತ್ರಿಗಳನ್ನು ಬದಲಿಸಿದ ಇತಿಹಾಸ ಹೊಂದಿದೆ.

2000ನೇ ಇಸ್ವಿಯಲ್ಲಿ ಉತ್ತರ ಪ್ರದೇಶ ವಿಭಜನೆಯಾಗಿ ಹೊಸ ರಾಜ್ಯ ಉತ್ತರಾಖಂಡ ಜನ್ಮ ತಳೆದಾಗ, ಬಿಜೆಪಿ ಸರ್ಕಾರ ರಚಿಸಿತ್ತು. ನಿತ್ಯಾನಂದ ಸ್ವಾಮಿ ಅವರು ರಾಜ್ಯದ ಮೊದಲ ಮುಖ್ಯಮಂತ್ರಿಯಾದರು. ಇವರ ಅಲ್ಪಕಾಲದ ಅಡಳಿತದ ಬಳಿಕ, ಭಗತ್‌ಸಿಂಗ್ ಕೋಶಿಯಾರಿ ಮುಖ್ಯಮಂತ್ರಿಯಾದರು. 2002ರಲ್ಲಿ ರಾಜ್ಯದಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಕಾಂಗ್ರೆಸ್ ಗದ್ದುಗೆ ಏರಿತು. 2002ರಿಂದ 2007ರವರೆಗೆ ಎನ್.ಡಿ. ತಿವಾರಿ ಪೂರ್ಣಾವಧಿ ಅಧಿಕಾರ ನಡೆಸಿದರು. ಕಾಂಗ್ರೆಸ್ ಅನ್ನು ಸೋಲಿಸಿದ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಿತು. ನಿವೃತ್ತ ಮೇಜರ್ ಜನರಲ್ ಬಿ.ಸಿ. ಖಂಡೂರಿ ಅಧಿಕಾರಕ್ಕೆ ಬಂದರು. ಆದರೆ 2012ರಲ್ಲಿ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿಗೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್ 32 ಹಾಗೂ ಬಿಜೆಪಿ 31 ಸ್ಥಾನ ಗೆದ್ದವು. ಬಿಎಸ್‌ಪಿ, ಕ್ರಾಂತಿದಳ, ಮೂವರು ಪಕ್ಷೇತರರ ಬೆಂಬಲದೊಂದಿಗೆ ಕಾಂಗ್ರೆಸ್ ಸರ್ಕಾರ ರಚಿಸಿತು.

ಈ ಅವಧಿಯಲ್ಲಿ ಕಾಂಗ್ರೆಸ್‌ನಲ್ಲೂ ಹಲವು ಮುಖ್ಯಮಂತ್ರಿಗಳು ಬಂದುಹೋದರು. ವಿಜಯ್ ಬಹುಗುಣ ಬಳಿಕ ಹರೀಶ್ ರಾವತ್ ಮುಖ್ಯಮಂತ್ರಿ ಆಗಿದ್ದರು. 2017ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಅಧಿಕಾರ ಕೈಜಾರಿ ಬಿಜೆಪಿ ತೆಕ್ಕೆಗೆ ಸೇರಿತ್ತು. ಹರೀಶ್ ರಾವತ್ ಅವರು ಮುಂಚೂಣಿಯಲ್ಲಿ ಕೆಲಸ ಮಾಡುತ್ತಿದ್ದು, ಈ ಬಾರಿ ಕಾಂಗ್ರೆಸ್ ಚುಕ್ಕಾಣಿ ಹಿಡಿಯುವ ಸಾಧ್ಯತೆಯಿದೆ ಎಂದು ತಜ್ಞರು ಹೇಳುತ್ತಾರೆ. ಅದು ನಿಜವಾದಲ್ಲಿ, ರಾಜ್ಯದಲ್ಲಿ ಪರ್ಯಾಯ ಆಡಳಿತ ಸಂಸ್ಕೃತಿ ಮುಂದುವರಿದಂತಾಗುತ್ತದೆ.

ಕಾಂಗ್ರೆಸ್ ಒಡೆದ ಮನೆ

ಉತ್ತರಾಖಂಡದ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಸಹ ಭಾರಿ ಸಿದ್ಧತೆ ನಡೆಸಿದೆ. ಭಾರಿ ರ‍್ಯಾಲಿಗಳನ್ನು ಕಾಂಗ್ರೆಸ್ ಆಯೋಜಿಸಿತ್ತು. ಜನರಿಗೆ ರಾಜ್ಯ ಸರ್ಕಾರದ ವೈಫಲ್ಯಗಳ ಬಗ್ಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದೆ. ಈ ಚುನಾವಣೆಯನ್ನು ಗೆಲ್ಲಲು ಕಾಂಗ್ರೆಸ್ ತಳಮಟ್ಟದಿಂದಲೇ ಪಕ್ಷವನ್ನು ಬಲಪಡಿಸುವ ಕೆಲಸ ಮಾಡುತ್ತಿದ್ದರೂ, ನಾಯಕತ್ವದಲ್ಲಿ ಎರಡು ಬಣಗಳು ಸೃಷ್ಟಿಯಾಗಿವೆ. ಪಕ್ಷದೊಳಗಿನ ಬಣ ರಾಜಕಾರಣವನ್ನು ತಣ್ಣಗಾಗಿಸಲು ಯಾವುದೇ ಯತ್ನಗಳು ನಡೆಯುತ್ತಿಲ್ಲ. ಇದು ಚುನಾವಣಾ ಫಲಿತಾಂಶದ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳು ಢಾಳಾಗಿ ಕಾಣುತ್ತಿವೆ.

ಹರೀಶ್ ರಾವತ್

ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್ ಅವರು ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಕೆಲಸ ಮಾಡುತ್ತಿದ್ದಾರೆ. ಕೆಲವೇ ಸಂಖ್ಯೆಯಲ್ಲಿರುವ ಕಾರ್ಯಕರ್ತರನ್ನು ಸಂಘಟಿಸಿ, ಚುನಾವಣೆ ಎದುರಿಸಲು ಅಗತ್ಯವಿರುವ ಹುರುಪು ತುಂಬುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಬಿಜೆಪಿ ಸರ್ಕಾರದ ವೈಫಲ್ಯಗಳು, ಕೋಮು ಧ್ರುವೀಕರಣ, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳು ಅನುಷ್ಠಾನವಾಗದಿರುವ ಬಗ್ಗೆ ಜನರಿಗೆ ಅರಿವು ಮೂಡಿಸಲು ಕಾರ್ಯತಂತ್ರವನ್ನು ರೂಪಿಸಲಾಗಿದೆ. ಇದಕ್ಕಾಗಿ ರ‍್ಯಾಲಿ, ಮನೆ-ಮನೆ ಭೇಟಿ ಮತ್ತು ವರ್ಚ್ಯುವಲ್ ಸಭೆಗಳನ್ನೂ ನಡೆಸಲಾಗುತ್ತಿದೆ. ಚುನಾವಣಾ ಆಯೋಗವು ರ‍್ಯಾಲಿಯನ್ನು ನಿಷೇಧಿಸಿರುವ ಕಾರಣ, ವರ್ಚ್ಯುವಲ್ ಸಂವಾದಕ್ಕೆ ಒತ್ತು ನೀಡಲಾಗಿದೆ.

ಆದರೆ ರಾವತ್ ಅವರ ಈ ಯತ್ನಕ್ಕೆ, ಪಕ್ಷದ ಒಂದು ಬಣದ ನಾಯಕರು ಮತ್ತು ಕಾರ್ಯಕರ್ತರಷ್ಟೇ ಸಹಕಾರ ನೀಡುತ್ತಿದ್ದಾರೆ. ಕಾಂಗ್ರೆಸ್‌ನ ಮತ್ತೊಬ್ಬ ಪ್ರಭಾವಿ ನಾಯಕ ಪ್ರೀತಂ ಸಿಂಗ್ ಅವರು, ರಾವತ್ ನಾಯಕತ್ವವನ್ನು ಪ್ರಶ್ನಿಸುತ್ತಲೇ ಬಂದಿದ್ದಾರೆ. ಪ್ರೀತಂ ಜತೆಗೆ ಗುರುತಿಸಿಕೊಂಡಿರುವ ನಾಯಕರು ಮತ್ತು ಕಾರ್ಯಕರ್ತರು ರಾವತ್ ಅವರ ಕಾರ್ಯತಂತ್ರಕ್ಕೆ ಸಹಕಾರ ನೀಡುತ್ತಿಲ್ಲ. ಇದರಿಂದ ರೋಸಿ ಹೋಗಿರುವ ರಾವತ್ ಅವರು ಕಳೆದ ತಿಂಗಳು, 'ಪಕ್ಷದ ನಾಯಕರು ಸಹಕಾರ ನೀಡುತ್ತಿಲ್ಲ. ಪ್ರವಾಹದ ವಿರುದ್ಧ ಈಜಿ, ಈಜಿ ನನಗೂ ಸಾಕಾಗಿದೆ' ಎಂದು ಹೇಳಿದ್ದರು. ಆದರೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ರಾವತ್ ಅವರನ್ನು ಸಮಾಧಾನ ಪಡಿಸಿದ್ದರು. ಆದರೆ ಅಷ್ಟಕ್ಕೇ ಬಣ ರಾಜಕಾರಣ ತಣ್ಣಗಾಗಿಲ್ಲ.

'ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದೇ ಈ ಬಣ ರಾಜಕಾರಣದ ಹಿಂದಿನ ಚಾಲಕ ಶಕ್ತಿ. ರಾವತ್ ನೇತೃತ್ವದಲ್ಲಿ ಚುನಾವಣೆ ಎದುರಿಸಿ ಪಕ್ಷವು ಅಧಿಕಾರಕ್ಕೆ ಬಂದರೆ, ರಾವತ್ ಅವರೇ ಮುಖ್ಯಮಂತ್ರಿಯಾಗಲಿದ್ದಾರೆ. ಮುಂದಿನ ಮುಖ್ಯಮಂತ್ರಿ ತಾನೇ ಆಗಬೇಕು ಎಂದು ಪ್ರೀತಂ ಸಿಂಗ್ ಬಯಸಿದ್ದಾರೆ. ಇದಕ್ಕಾಗಿಯೇ ಅವರು ರಾವತ್ ನಾಯಕತ್ವವನ್ನು ಪ್ರಶ್ನಿಸುತ್ತಿದ್ದಾರೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ವಿವರಿಸಿದ್ದಾರೆ. ಇದನ್ನು ತಿಳಿಗೊಳಿಸುವ ಯತ್ನಗಳು ನಡೆದಿವೆಯಾದರೂ, ಅದು ನಿರೀಕ್ಷಿತ ಫಲ ನೀಡಿಲ್ಲ. 'ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದನ್ನು ಫಲಿತಾಂಶದ ನಂತರ ನಿರ್ಧರಿಸೋಣ' ಎಂದು ಪ್ರೀತಂ ಸಿಂಗ್ ಹೇಳಿದ್ದಾರೆ.

'ಕಾಂಗ್ರೆಸ್‌ನಲ್ಲಿನ ಈ ಒಡಕು, ಬಹಿರಂಗವಾಗಿಯೇ ಕಾಣುತ್ತಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ತೀವ್ರವಾಗಿದೆ. ಈ ಅಲೆಯನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಕಾಂಗ್ರೆಸ್‌ಗೆ ಸಾಕಷ್ಟು ಅವಕಾಶಗಳಿವೆ. ಆದರೆ ಒಳಜಗಳದ ಪರಿಣಾಮ ಇಂತಹ ಮಹತ್ವದ ಅವಕಾಶವನ್ನು ಕಾಂಗ್ರೆಸ್ ಕೈಚೆಲ್ಲುತ್ತಿದೆ' ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ

ಉತ್ತರಾಖಂಡದಲ್ಲಿ ಕಳೆದ ಐದು ವರ್ಷಗಳಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಿ ಅಚ್ಚರಿ ಮೂಡಿಸಿದ ಬಿಜೆಪಿ, ಸ್ಥಿರ ಸರ್ಕಾರದ ಚರ್ಚೆ ಹುಟ್ಟುಹಾಕಿತು. 70 ಸದಸ್ಯ ಬಲದ ಉತ್ತರಾಖಂಡ ವಿಧಾನಸಭೆಯಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿ 56 ಸ್ಥಾನ ಗಳಿಸಿ ಅಧಿಕಾರ ವಹಿಸಿಕೊಂಡಿತ್ತು. ಮುಖ್ಯಮಂತ್ರಿಯಾಗಿದ್ದ ತ್ರಿವೇಂದ್ರ ಸಿಂಗ್ ರಾವತ್ ಸ್ಥಾನಕ್ಕೆ ತೀರಥ್ ಸಿಂಗ್ ರಾವತ್ ಬಂದರು. ಅವರನ್ನೂ ಬದಲಿಸಿದ ಬಿಜೆಪಿ, ಪುಷ್ಕರ್ ಧಾಮಿ ಅವರಿಗೆ ರಾಜ್ಯದ ಚುಕ್ಕಾಣಿ ನೀಡಿತು. ಇಷ್ಟಾಗುವ ವೇಳೆಗೆ ಮತ್ತೆ ಚುನಾವಣೆ ಬಂದುನಿಂತಿದೆ.

2017ರಲ್ಲಿ ತ್ರಿವೇಂದ್ರ ಸಿಂಗ್ ರಾವತ್ ಅವರನ್ನು ಮುಖ್ಯಮಂತ್ರಿಯಾಗಿ ಕೇಂದ್ರೀಯ ಬಿಜೆಪಿ ನಾಯಕತ್ವ ಘೋಷಿಸಿತ್ತು. ಅಷ್ಟೊಂದು ಪ್ರಸಿದ್ಧರಲ್ಲದ ತ್ರಿವೇಂದ್ರ ಸಿಂಗ್ ಅವರು ಅಂದುಕೊಂಡಂತೆ ಕೆಲಸ ಮಾಡಲಿಲ್ಲ ಎಂಬುದಾಗಿ ಬಿಜೆಪಿ ಪರಿಗಣಿಸಿತು. ಶಾಸಕರ ಜೊತೆ ಸಂಪರ್ಕ ಇಲ್ಲ, ಆಡಳಿತ ವೈಖರಿ ತೃಪ್ತಿದಾಯಕವಾಗಿಲ್ಲ, ಎಲ್ಲಕಿಂತ ಮುಖ್ಯವಾಗಿ ಕುಂಭಮೇಳ ನಡೆಸುವುದರ ಪರವಾಗಿ ಅವರು ಇರಲಿಲ್ಲ ಎಂಬ ಅಭಿಪ್ರಾಯವಿತ್ತು.

ತೀರಥ್ ಸಿಂಗ್ ರಾವತ್ ಅವರನ್ನು ತ್ರಿವೇಂದ್ರ ಸಿಂಗ್ ಉತ್ತರಾಧಿಕಾರಿಯಾಗಿ ಬಿಜೆಪಿ ಪ್ರಕಟಿಸಿತು. ಬಿಜೆಪಿ ನಿರೀಕ್ಷೆ ಇಲ್ಲಿಯೂ ತಲೆಕೆಳಗಾಯಿತು. ಕೇವಲ 114 ದಿನ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದ ತೀರಥ್ ತಮ್ಮ ಸ್ಥಾನವನ್ನು ಬಿಡಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡರು. ಇವರ ಅವಧಿಯಲ್ಲಿ ಕುಂಭಮೇಳ ನಡೆಯಿತು. ಇದರಿಂದ ಕೋವಿಡ್ ಪ್ರಕರಣಗಳು ತೀವ್ರವಾಗಿ ಏರಿದವು ಎಂಬ ಆರೋಪವಿದೆ. ತೀರಥ್ ಅವರು ಮುಜುಗರ ಆಗುವಂತಹ ಹೇಳಿಕೆಗಳನ್ನು ನೀಡಿದ್ದರಿಂದ ತಲೆದಂಡವಾಯಿತು. ತೀರಥ್ ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಬೇಕಾದರೆ ಆರು ತಿಂಗಳೊಳಗೆ ಶಾಸಕರಾಗಿ ಆಯ್ಕೆಯಾಗಬೇಕಿತ್ತು. ಇದು ಸಾಧ್ಯವಾಗದ ಕಾರಣ ಅವರು ಪದತ್ಯಾಗ ಮಾಡಿದ್ದಾರೆ ಎಂಬ ಮಾತೂ ಕೇಳಿಬಂದಿತು. ಆದರೆ ಉಪಚುನಾವಣೆ ನಡೆದರೂ, ಕೆಲವು ಕಾರಣಗಳಿಂದ ಅವರು ಸ್ಪರ್ಧಿಸಲಿಲ್ಲ. ಇವರೂ ಕೇಂದ್ರ ನಾಯಕತ್ವಕ್ಕೆ ವಿಶ್ವಾಸಾರ್ಹವಾಗಿ ಕಂಡುಬರಲಿಲ್ಲ. ಹೀಗಾಗಿ ಪುಷ್ಕರ್ ಧಾಮಿ ಆಯ್ಕೆಯಾದರು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಸಚಿವರಾಗಿ ಕೆಲಸ ಮಾಡಿದ ಅನುಭವವೇ ಇಲ್ಲದ ಧಾಮಿ ಅವರನ್ನು ಮುಖ್ಯಮಂತ್ರಿಯಾಗಿ ಕೇಂದ್ರೀಯ ನಾಯಕತ್ವ ನೇಮಿಸಿತು. ಇವರ ನೇಮಕವೂ ರಾಜ್ಯ ಬಿಜೆಪಿಯಲ್ಲಿ ಬೇಗುದಿ ಸೃಷ್ಟಿಸಿತು. ಜಾತಿ ಮತ್ತು ಪ್ರಾದೇಶಿಕ ಕಾರಣಗಳಿಂದ ರಾಜ್ಯದಲ್ಲಿ ಸರ್ಕಾರಗಳು ಅಸ್ಥಿರಗೊಳ್ಳುತ್ತಿವೆ. ಗರ್ವಾಲ್ ಮತ್ತು ಕುಮಾವೂನ್ ಪ್ರದೇಶಗಳ ನಡುವಿನ ಒಡಕು ಹಾಗೂ ಬ್ರಾಹ್ಮಣರು ಮತ್ತು ರಜಪೂತರ ನಡುವಿನ ಪೈಪೋಟಿ, ರಾಜ್ಯದಲ್ಲಿ ಬಿಜೆಪಿಗೆ ಸಮಸ್ಯೆಯಾಗಿದೆ. ತೀರಥ್ ಸಿಂಗ್ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಿದ ಬಿಜೆಪಿ, ಬ್ರಾಹ್ಮಣ ಸಮುದಾಯದ ವಿಶ್ವಾಸ ಗಳಿಸಲು ಆ ಸಮುದಾಯಕ್ಕೆ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯನ್ನು ನೀಡಿ ಪರಿಸ್ಥಿತಿ ನಿಭಾಯಿಸಿತ್ತು.

ಪುಷ್ಕರ್ ಧಾಮಿ

ಮತ ಉಳಿಸಿಕೊಂಡರೂ ಕ್ಷೇತ್ರ ಉಳಿಸಿಕೊಳ್ಳದ ಕಾಂಗ್ರೆಸ್

2017ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮತಗಳಿಕೆ ಪ್ರಮಾಣವೇನೂ ಕಡಿಮೆಯಾಗಿಲ್ಲ. ಆದರೆ ಬಂದ ಮತಗಳು ಗೆಲುವಾಗಿ ಮಾರ್ಪಾಡಾಗಿಲ್ಲ. ಈ ಬಾರಿಯೂ ಇದೇ ರೀತಿ ಆಗುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ.

2012ರ ವಿಧಾನಸಭಾ ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಕಾಂಗ್ರೆಸ್ ಶೇ 33.79ರಷ್ಟು ಮತಗಳನ್ನು ಪಡೆದುಕೊಂಡಿತ್ತು. ಇದು ಗೆಲುವಾಗಿ ಪರಿವರ್ತನೆಯಾದ ಕಾರಣ ಕಾಂಗ್ರೆಸ್ 32 ಸ್ಥಾನಗಳಲ್ಲಿ ಆರಿಸಿ ಬಂದಿತ್ತು. ಆದರೆ 2017ರ ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಕಾಂಗ್ರೆಸ್‌ನ ಪಾಲು ಶೇ 33.49ರಷ್ಟು. ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ದೊರೆತ ಮತಗಳ ಪ್ರಮಾಣದಲ್ಲಿ ಗಣನೀಯ ಕುಸಿತವೇನೂ ಆಗಿಲ್ಲ.

ಈ ಎರಡೂ ಚುನಾವಣೆಗಳಲ್ಲಿ ಮತಪ್ರಮಾಣವನ್ನು ಹೆಚ್ಚಿಸಿಕೊಂಡ ಪಕ್ಷ ಬಿಜೆಪಿ ಮಾತ್ರ. 2012ರಲ್ಲಿ ಬಿಜೆಪಿಯು ಶೇ 33.13ರಷ್ಟು ಮತಗಳನ್ನು ಪಡೆದುಕೊಂಡು 31 ಸ್ಥಾನಗಳನ್ನು ಗೆದ್ದಿತ್ತು. 2017ರ ಚುನಾವಣೆಯಲ್ಲಿ ಬಿಜೆಪಿ ಶೇ 46.51ರಷ್ಟು ಮತಗಳನ್ನು ಪಡೆದುಕೊಂಡಿತು. ಪಕ್ಷವು ಪಡೆದ ಈ ಹೆಚ್ಚುವರಿ ಮತಗಳೆಲ್ಲವೂ ಗೆಲುವಾಗಿ ಮಾರ್ಪಾಡಾದವು. ಬಿಜೆಪಿಯು ಒಟ್ಟು 56 ಸ್ಥಾನಗಳಲ್ಲಿ ಆರಿಸಿ ಬಂತು. ಬಿಜೆಪಿ ಕಾಂಗ್ರೆಸ್‌ನ ಮತಗಳನ್ನು ಕಸಿದುಕೊಳ್ಳದಿದ್ದರೂ, ಕಾಂಗ್ರೆಸ್‌ನ ಸ್ಥಾನಗಳನ್ನು ಕಸಿದುಕೊಂಡಿತು. 2017ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದು ಕೇವಲ 11 ಕ್ಷೇತ್ರಗಳಲ್ಲಿ.

ಈ ಎರಡೂ ಚುನಾವಣೆಗಳಲ್ಲಿ ಹೆಚ್ಚು ಕಳೆದುಕೊಂಡದ್ದು ಬಿಎಸ್‌ಪಿ. 2012ರಲ್ಲಿ ಬಿಎಸ್‌ಪಿ ಶೇ 12.19ರಷ್ಟು ಮತಗಳನ್ನು ಪಡೆದುಕೊಂಡು, 3 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಆದರೆ 2017ರಲ್ಲಿ ಪಕ್ಷವು ಪಡೆದುಕೊಂಡಿದ್ದು ಶೇ 6.98ರಷ್ಟು ಮತಗಳನ್ನು ಮಾತ್ರ. ಆದರೆ ಒಂದು ಕ್ಷೇತ್ರವನ್ನೂ ಗೆಲ್ಲಲಿಲ್ಲ.

ಮತ ಪ್ರಮಾಣ



ಅರವಿಂದ ಕೇಜ್ರಿವಾಲ್

ಬಿಎಸ್‌ಪಿ, ಎಎಪಿ ಸ್ಪರ್ಧೆ

ಈ ಚುನಾವಣೆಯಲ್ಲಿ ಎಎಪಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದರೂ, ಪಕ್ಷಕ್ಕೆ ಇಲ್ಲಿ ನೆಲೆ ಇರಲಿಲ್ಲ. ಆದರೆ ತಳಮಟ್ಟದಿಂದ ಪಕ್ಷ ಸಂಘಟಿಸುವ ಕೆಲಸವನ್ನು ಎಎಪಿ ಮಾಡಿದೆ. ನಿರೀಕ್ಷಿತ ಗೆಲುವು ಸಾಧಿಸುತ್ತೇವೆ ಎಂಬ ವಿಶ್ವಾಸ ಪಕ್ಷದ ನಾಯಕರಲ್ಲಿ ಇಲ್ಲ. ಆದರೆ, ಎಎಪಿಯು ಬಿಜೆಪಿ ಮತ್ತು ಕಾಂಗ್ರೆಸ್‌ನ ಮತಗಳನ್ನು ಕಸಿದುಕೊಳ್ಳುವ ಸಾಧ್ಯತೆ ಅತ್ಯಧಿಕವಾಗಿದೆ. ಇದು ಎರಡು ರಾಷ್ಟ್ರೀಯ ಪಕ್ಷಗಳ ಗೆಲುವು-ಸೋಲನ್ನು ನಿರ್ಧರಿಸಬಹುದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಬಿಎಸ್‌ಪಿ ರಾಜ್ಯದಲ್ಲಿ ನೆಲೆ ಕಳೆದುಕೊಂಡಿದೆ. ಹಿಂದಿನ ಎರಡು ಚುನಾವಣೆಗಳಲ್ಲಿ ಪಕ್ಷದ ಮತ ಪ್ರಮಾಣ ಅರ್ಧದಷ್ಟು ಕುಸಿದಿದೆ. ಜತೆಗೆ ಹಾಲಿ ವಿಧಾನಸಭೆಯಲ್ಲಿ ಒಬ್ಬ ಶಾಸಕನೂ ಇಲ್ಲದ ಕಾರಣ, ರಾಜ್ಯದಲ್ಲಿ ಪಕ್ಷದ ಸಂಘಟನೆ ಸಂಪೂರ್ಣ ನೆಲಕಚ್ಚಿದೆ. ಆದರೂ ಹುರುಪಿನೊಂದಿಗೆ ಕಣಕ್ಕಿಳಿಯಲು ತಯಾರಿ ನಡೆಸಿದೆ. ಇದು ಎಷ್ಟು ಪರಿಣಾಮ ಬೀರುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಆಧಾರ: ಪಿಟಿಐ, ಚುನಾವಣಾ ಆಯೋಗ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 18

ನಿಷ್ಕಲ್ಮಷ ಚಿತ್ತರಾಗುವ ಮಾರ್ಗ

ಗಂಗಾ-ಯಮುನಾ-ಸರಸ್ವತೀನದಿಗಳ ಸಂಗಮವಾದ ಪ್ರಯಾಗದಲ್ಲಿ ಮಹಾಸತ್ರಯಾಗ ಮಾಡುತ್ತಿದ್ದ ಋಷಿಮುನಿಗಳಿಗೆ ಸೂತಮುನಿ ಜನರಿಗೆ ಸದ್ಬುದ್ಧಿ ನೀಡಿ, ಸದ್ಗತಿ ನೀಡುವ ಶಿವಪುರಾಣವನ್ನು ಸಮಗ್ರವಾಗಿ ತಿಳಿಸುತ್ತಾರೆ. ಯಾವ ಮನುಷ್ಯ ಶಿವಪುರಾಣವನ್ನಾಗಲಿ, ಅಥವಾ ಅದರಲ್ಲಿರುವ ಒಂದು ಶ್ಲೋಕ, ಅದೂ ಇಲ್ಲದಿದ್ದರೆ ಅರ್ಧ ಶ್ಲೋಕವನ್ನಾದರೂ, ಭಕ್ತಿಯಿಂದ ಪಠಿಸುತ್ತಾನೋ, ಅವನ ಪಾಪಗಳು ತಕ್ಷಣವೇ ನಾಶವಾಗುವುದು. ಶಿವಪುರಾಣವನ್ನು ಪ್ರತಿದಿನ ನಿಯಮದಂತೆ, ಭಕ್ತಿಯಿಂದ ಯಥಾಶಕ್ತಿಯಾಗಿ ಪಠಿಸುವವರು ಜೀವನ್ಮುಕ್ತರಾಗುವರು. ಇಷ್ಟಾರ್ಥಪ್ರಾಪ್ತಿಗಾಗಿ ಶಿವಪುರಾಣವನ್ನು ಶಿವಭಕ್ತರಿಂದ ಕೇಳಿದರೂ, ಅವರ ಪಾತಕಗಳು ಕಳೆದು,ಸೃಷ್ಟಿಚಕ್ರದಿಂದ ವಿಮುಕ್ತರಾಗುವರು. ಶಿವಪುರಾಣಕ್ಕೆ ದೂರದಿಂದ ನಮಸ್ಕಾರ ಮಾಡಿದರೂ ಸಹ ಸಮಸ್ತ ದೇವತೆಗಳನ್ನು ಪೂಜೆಮಾಡಿದ ಫಲ ಪಡೆಯುವರು. ಇನ್ನು ಶಿವಪುರಾಣವನ್ನು ತಾವೇ ಬರೆದು, ಆ ಪುಸ್ತಕವನ್ನು ಶಿವಭಕ್ತರಿಗೆ ಕೊಡುವವರಿಗೆ ಸಮಸ್ತ ಶಾಸ್ತ್ರಗಳನ್ನೂ ಅಧ್ಯಯನಮಾಡಿ, ವೇದಗಳಲ್ಲಿ ವ್ಯಾಖ್ಯಾನವನ್ನು ರಚಿಸಿದರೆ ಯಾವ ಫಲ ಲಭಿಸುತ್ತೋ, ಅಂತಹ ಪರಮಫಲಗಳೆಲ್ಲ ಸಿಗುತ್ತೆ. ಚತುರ್ದಶೀತಿಥಿಯಲ್ಲಿ ಉಪವಾಸವಿದ್ದು, ಶಿವಭಕ್ತರಿಂದ ಕೂಡಿದ ಸಭೆಯಲ್ಲಿ, ಈ ಶಿವಪುರಾಣವನ್ನು ಶ್ರವಣ ಮಾಡಿಸುವವನು ಪುರುಷ ಶ್ರೇಷ್ಠನೆನಿಸುವನು. ಶಿವಪುರಾಣ ಬರೆದವರಿಗೆ, ಅವರು ಬರೆದ ಪ್ರತಿ ಅಕ್ಷರಕ್ಕೂ ಗಾಯತ್ರೀಪುರಶ್ಚರಣದ ಫಲ ಪಡೆಯುವರು.

ಕುರುಕ್ಷೇತ್ರಾದಿ ಸಮಸ್ತ ಪುಣ್ಯಕ್ಷೇತ್ರಗಳಲ್ಲಿ, ಅನೇಕ ತೀರ್ಥಗಳಲ್ಲಿ ಮತ್ತು ಸೂರ್ಯಗ್ರಹಣಕಾಲದಲ್ಲಿ, ಯಾವ ಮನುಷ್ಯ ತನ್ನ ಶರೀರ ಪ್ರಮಾಣದಷ್ಟು ಧನವನ್ನು ದಾನ ಮಾಡಿದರೆ ಯಾವ ಫಲ ಪಡೆವರೋ, ಅಂತಹ ಫಲವನ್ನು ಚತುರ್ದಶಿಯಂದು ಉಪವಾಸ-ಜಾಗರಣೆಯಿಂದ ಶಿವಪುರಾಣ ಹೇಳಿದರೆ ಅಥವಾ ಕೇಳಿದರೆ ಪಡೆಯಬಹುದು. ಶಿವಪುರಾಣವನ್ನು ದಿನರಾತ್ರಿಯೂ ಯಾರು ಕೀರ್ತನೆ ಮಾಡುವರೋ, ಅವರ ಆಜ್ಞೆಯನ್ನು ಪಾಲಿಸಲು ಇಂದ್ರಾದಿದೇವತೆಗಳು ಸದಾ ಕಾದಿರುತ್ತಾರೆ. ಶಿವಪುರಾಣವನ್ನು ಪ್ರತಿನಿತ್ಯ ಯಾವ ಮನುಷ್ಯ ಪಠನ ಅಥವಾ ಶ್ರವಣ ಮಾಡುತ್ತ ಒಳ್ಳೆಯ ಕೆಲಸಗಳನ್ನು ಮಾಡುವನೋ, ಆ ಮನುಷ್ಯನು ಮಾಡಿದ ಆಯಾ ಉತ್ತಮ ಕರ್ಮಗಳಿಗೆ ಕೋಟಿ ಪಾಲಿನಷ್ಟು ಫಲ ಸಿಗುವುದು.

ಶಿವಪುರಾಣದ ಒಂದು ಭಾಗವಾದ ರುದ್ರಸಂಹಿತೆ ಎಂಬ ಕಾಂಡವನ್ನು ನಿರ್ಮಲಚಿತ್ತದಿಂದ ಯಾರು ಪಠಿಸುವರೋ, ಅವರು ಎಂಥ ಘನಘೋರ ಪಾಪ ಮಾಡಿದರೂ ಪರಿಶುದ್ಧರಾಗುವರು. ರುದ್ರಸಂಹಿತೆಯನ್ನು ಭೈರವದೇವತೆಯ ಸಮೀಪದಲ್ಲಿ ಯಾರು, ಪ್ರತಿದಿವಸ ಮೂರು ವೇಳೆಯಲ್ಲಿಯೂ ನಿಯಮದಿಂದ ಪಠಿಸುವರೋ, ಅವರು ಸಮಸ್ತ ಇಷ್ಟಾರ್ಥಗಳನ್ನೂ ಪಡೆವರು. ರುದ್ರಸಂಹಿತೆ ಪಠಿಸುತ್ತಾ, ವಟವೃಕ್ಷ-ಬಿಲ್ವವೃಕ್ಷಗಳ ಪ್ರದಕ್ಷಿಣೆ ಮಾಡುವವರು, ಬ್ರಹ್ಮಹತ್ಯಾಪಾಪದಿಂದ ಮುಕ್ತರಾಗುತ್ತಾರೆ. ವೇದಗಳು, ಸ್ಮೃತಿಗಳು, ಪುರಾಣಗಳು, ಇತಿಹಾಸಗಳು ಆಗಮಗಳು, ಧರ್ಮ-ಶಾಸ್ತ್ರಗ್ರಂಥಗಳು ಶಿವಪುರಾಣದ ಒಂದು ಸಣ್ಣ ಅಂಶವನ್ನೂ ಸಹ ಸರಿಗಟ್ಟಲಾರವು. ಯಾವ ಮನುಷ್ಯನು ತನ್ನ ಪಿತೃಗಳ ಶ್ರಾದ್ಧಕಾಲದಲ್ಲಿ ಕೈಲಾಸಸಂಹಿತೆಯನ್ನು ಭಕ್ತಿಯಿಂದ ಪಠನಮಾಡುತ್ತಾ, ಜನರಿಗೆ ಭೋಜನ ಮಾಡಿಸುವನೋ, ಅವನ ಪಿತೃಗಳೆಲ್ಲರೂ, ಸಾಕ್ಷಾತ್ ಪರಮೇಶ್ವರನ ಸ್ಥಾನವಾದ ಕೈಲಾಸವನ್ನು ಸೇರುವರು. ಬಿಲ್ವವೃಕ್ಷದ ಬುಡದಲ್ಲಿ ಚತುರ್ದಶಿಯ ದಿವಸ ನಿರಾಹಾರಿಯಾಗಿ, ಕೈಲಾಸ ಸಂಹಿತೆಯನ್ನು ಪಠಿಸುವ ಮನುಷ್ಯ, ಸಾಕ್ಷಾತ್ ಶಿವಸ್ವರೂಪನೇ ಆಗುವನು ಮತ್ತು ದೇವತೆಗಳಿಂದಲೂ ಪೂಜಿಸಲ್ಪಡುವನು.

ಆದುದರಿಂದ ವೇದಕ್ಕೆ ಸಮಾನವಾದ ಮತ್ತು ಬ್ರಹ್ಮಜ್ಞಾನವನ್ನು ಬೋಧಿಸುವ ಈ ಶೈವಪುರಾಣವು ಶಿವನಿಂದಲೇ ನಿರ್ಮಿತವಾಗಿರುವ ಪರಮ ಪವಿತ್ರ ಪುರಾಣ. ಇದನ್ನು ಭಕ್ತಿಯಿಂದ ಪಠಿಸಿದರೆ ವೇದಾಂತ ತತ್ತ್ವಜ್ಞಾನ ಲಭಿಸಿ ನಿಷ್ಕಲ್ಮಷ ಚಿತ್ತರಾಗುವರು. ಯೋಗಿಗಳಿಗೆ ಮಾತ್ರ ತಿಳಿಯಲ್ಪಡುವ ಪರಬ್ರಹ್ಮಸ್ವರೂಪ ತಿಳಿಯುವರು. ಶಿವಪುರಾಣ ಪಾರಾಯಣ ಫಲದಿಂದ ಸಮಸ್ತ ಮಂತ್ರಾರ್ಥಗಳ ಅರ್ಥವೂ ತಿಳಿಯುವುದು. ಕೊನೆಗೆ ಧರ್ಮಾರ್ಥಮೋಕ್ಷಗಳೆಂಬ ಮೂರು ಪುರುಷಾರ್ಥಗಳನ್ನು ಪಡೆದು ಸುಖವಾಗಿರುವರು. ಪುರಾಣಗಳಲ್ಲೆ ಶಿವಪುರಾಣವು ಅತಿ ಶ್ರೇಷ್ಠವಾಗಿದ್ದೂ, ವೇದವೇದಾಂತಗಳಲ್ಲಿ ಪ್ರತಿಪಾದ್ಯವಾದ ಪರವಸ್ತುವನ್ನು ಕಿರ್ತನ ಮಾಡುವುದಕ್ಕಾಗಿ ಇರುವುದು. ಇಂತಹ ಸತ್ಪುರಾಣವನ್ನು ಅತಿ ಭಕ್ತಿಯಿಂದ ಪಠಿಸುವ ಮನುಜನು ಪರಮೇಶ್ವರನಿಗೆ ಪ್ರಿಯವಾದ ಭಕ್ತನಾಗಿ ಸದ್ಗತಿಯನ್ನು ಪಡೆಯುವನು ಎಂದು ಸೂತಮುನಿಯು ಪ್ರಯಾಗದ ಋಷಿಮುನಿಗಳಿಗೆ ಹೇಳುತ್ತಾನೆ. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ವತಿಯಿಂದ ರಾಮಾನುಜಾಚಾರ್ಯರ ಪ್ರತಿಮೆಯನ್ನು ಹೈದರಾಬಾದ್‌ನಲ್ಲಿ ನಿರ್ಮಿಸಲಾಗುತ್ತಿದೆ. ಇದು ಪ್ರಪಂಚದ ಅತಿ ಎತ್ತರದ ಪ್ರತಿಮೆ ಆಗಲಿದೆ' ಎಂಬ ಮಾಹಿತಿ ಇರುವ ವಿಡಿಯೊ ವೈರಲ್ ಆಗುತ್ತದೆ. ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಅವರ ನಿವಾಸದ ಬಳಿಯೇ ಪ್ರತಿಮೆ ನಿರ್ಮಾಣವಾಗುತ್ತಿದೆ ಎನ್ನಲಾಗಿದೆ. ಓವೈಸಿ ಅವರನ್ನು ಉಲ್ಲೇಖಿಸಿ, 'ನೀವು ಯಾರನ್ನು ದ್ವೇಷಿಸುತ್ತೀರೋ ಅವರನ್ನೇ ಪ್ರತಿದಿನ ನೋಡುವಂತಾಯಿತು' ಎಂದು ಅಡಿಬರಹ ಬರೆಯಲಾಗಿದೆ.



ಇದು ಸುಳ್ಳು ಮಾಹಿತಿ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ವರದಿ ಮಾಡಿದೆ. 216 ಅಡಿ ಎತ್ತರದ ಈ ಪ್ರತಿಮೆಯನ್ನು ಜೀಯರ್ ಶಿಕ್ಷಣ ಸಂಸ್ಥೆ ಈ ಪ್ರತಿಮೆ ನಿರ್ಮಿಸಿದೆ. ಇದನ್ನು 'ಸಮಾನತೆಯ ಪ್ರತಿಮೆ' ಎಂದು ಸಂಸ್ಥೆ ಕರೆದಿದೆ. ಉದ್ಘಾಟನಾ ಸಮಾರಂಭಕ್ಕೆ ಪ್ರಧಾನಿ ಮೋದಿ ಅವರನ್ನು ಆಹ್ವಾನಿಸಿದ್ದು ಹೊರತುಪಡಿಸಿದರೆ, ಈ ಪ್ರತಿಮೆ ವಿಚಾರದಲ್ಲಿ ಪ್ರಧಾನಿಯ ಪಾತ್ರವಿಲ್ಲ ಎಂದು ಸಂಸ್ಥೆ ಹೇಳಿದೆ. 'ಜಗತ್ತಿನಾದ್ಯಂತ ಇರುವ ಜೀಯರ್ ಸಂಸ್ಥೆಯ ಅನುಯಾಯಿಗಳೇ ಈ ಪ್ರತಿಮೆ ನಿರ್ಮಾಣಕ್ಕೆ ತಗುಲಿದ ವೆಚ್ಚವನ್ನು ಭರಿಸಿದ್ದಾರೆ. ಯಾವುದೇ ಪಕ್ಷ ಅಥವಾ ರಾಜಕಾರಣಿಯ ಪಾತ್ರ ಇದರಲ್ಲಿ ಇಲ್ಲ' ಎಂದು ಸಂಸ್ಥೆಯ ವ್ಯವಸ್ಥಾಪಕ ಸಮಿತಿಯ ಸದಸ್ಯೆ ಭಾರತೀ ಲಕ್ಷ್ಮಿ ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕೊಳಕಾಗುವ ವಿವೇಕ

ನರವಿವೇಕವದೇನು ಬರಿಯ ಮಳೆ ನೀರಲ್ಲ |
ಕೆರೆಯ ನೀರ್ ಊರ ಮೈಸೋಂಕುಗಳ ಬೆರಕೆ ||
ಧರೆಯ ರಸವಾಸನೆಗಳಾಗಸದ ನಿರ್ಮಲದ |
ವರವ ಕದಡಾಗಿಪುವು – ಮಂಕುತಿಮ್ಮ || 540

ಪದ-ಅರ್ಥ: ನರವಿವೇಕವದೇನು = ನರವಿವೇಕವು+ಅದೇನು, ಬೆರಕೆ = ಮಿಶ್ರಣ, ರಸವಾಸನೆಗಳಾಗಸದ = ರಸ + ವಾಸನೆಗಳು + ಆಗಸದ, ಕದಡಾಗಿಪುವು = ಕೊಳಕಾಗಿಸುವವು.

ವಾಚ್ಯಾರ್ಥ: ಮನುಷ್ಯನ ವಿವೇಕವೆನ್ನುವುದು ಶುದ್ಧ ಮಳೆಯ ನೀರಲ್ಲ. ಅದು ಕೆರೆಯಲ್ಲಿ ಬಿದ್ದು, ಊರ ಜನರ ಮೈಸೋಂಕನ್ನು ಪಡೆದು ಬೆರಕೆಯಾಗುತ್ತದೆ. ಭೂಮಿಯ ರಸ, ವಾಸನೆಗಳೆಲ್ಲ ಸೇರಿ ಆಕಾಶದ ನಿರ್ಮಲ ವರವಾದ ನೀರನ್ನು ಕೊಳಕುಮಾಡುತ್ತವೆ.

ವಿವರಣೆ: ಯಾವ ಮನುಷ್ಯನೂ ಹುಟ್ಟಿದಾಗ ಕೆಟ್ಟವನಾಗಿರುವುದಿಲ್ಲ. ಆದರೆ ಬೆಳೆದಂತೆ ಮನುಷ್ಯನ ಮನಸ್ಸು ಕಲುಷಿತವಾಗುತ್ತ ಹೋಗುತ್ತದೆ. ವಿವೇಕವೆಂದರೆ ಸಾಮಾನ್ಯವಾಗಿ ಭಾಷೆಯಲ್ಲಿ ಬಳಸುವ, ಆಂಗ್ಲಭಾಷೆಯಲ್ಲಿ intelligence ಎನ್ನುವ ಬುದ್ಧಿಯಲ್ಲ. ಇದು ವೈಚಾರಿಕ ಮನಸ್ಸೂ ಅಲ್ಲ. ವಿಚಾರವಂತರನ್ನು ಬುದ್ಧಿವಂತರೆಂದು ಹೇಳುತ್ತೇವೆ. ಇದು ಆ ಬುದ್ಧಿಯೂ ಅಲ್ಲ. ವಿವೇಕವೆನ್ನುವುದು ತಾರ್ಕಿಕತೆಯನ್ನು ಬಳಸಿ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವ ಸಾಮರ್ಥ್ಯ. ಇದು ನೈತಿಕ ಮತ್ತು ಅನೈತಿಕ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ತಿಳಿದು ನಿರ್ಣಯಿಸುವ ವಿವೇಚನಾ ಶಕ್ತಿ.

ಮನುಷ್ಯನ ವಿವೇಕ ಮಳೆ ನೀರಿನಂತೆ ಶುದ್ಧವಾದುದಲ್ಲ. ನಾವು ಒಂದು ವಸ್ತುವನ್ನು ನೋಡುತ್ತೇವೆ ಅಥವಾ ಒಂದು ವಿಚಾರವನ್ನು ಕೇಳುತ್ತೇವೆ. ಆ ವಸ್ತು ಅಥವಾ ವಿಷಯಕ್ಕೆ ಸಂಬಂಧಪಟ್ಟ ಸಂವೇದನೆಗಳು ಇಂದ್ರಿಯಗಳ ಮೂಲಕ ಮನಸ್ಸಿಗೆ ಹೋಗುತ್ತವೆ. ಆಗ ರಾಗ, ದ್ವೇಷ, ಪ್ರೀತಿ, ಸುಖ, ದು:ಖಗಳೆಂಬ ಭಾವೋದ್ವೇಗಗಳು ಕಾರ್ಯನಡೆಸುತ್ತವೆ. ಅವುಗಳ ಪ್ರಭಾವದಿಂದ ಆ ವಸ್ತು ಅಥವಾ ವಿಷಯಕ್ಕೆ ಸಂಬಂಧಪಟ್ಟಂತೆ ಚಿತ್ತವೃತ್ತಿಗಳು ಏಳುತ್ತವೆ. ಆಗ ಬುದ್ಧಿಯ ಪ್ರವೇಶವಾಗುತ್ತವೆ, ಭಾವೋದ್ವೇಗಗಳು ಈಗಾಗಲೇ ಸಾಕಷ್ಟು ಕೆಲಸ ಮಾಡಿರುವುದರಿಂದ ಬುದ್ಧಿ ಅವುಗಳಿಗೆ ಅನುಗುಣವಾಗಿಯೇ ತೀರ್ಮಾನವನ್ನು ಮಾಡುತ್ತದೆ. ಭಾವೋದ್ವೇಗದ ಪ್ರಭಾವಕ್ಕೆ ಒಳಗಾಗದೆ ಬುದ್ಧಿ ಕೆಲಸ ಮಾಡುವಂತಿದ್ದರೆ ಅದು ನಿರ್ಮಲವಾಗಿರುತ್ತದೆ.

ಇದನ್ನೇ ಕಗ್ಗ ಬಹು ಸುಂದರವಾಗಿ ಹೇಳುತ್ತದೆ. ಮನುಷ್ಯನ ವಿವೇಕ ಮಳೆಯ ನೀರಿನಂತೆ ಶುದ್ಧವಲ್ಲ. ಅದೊಂದು ರೀತಿಯ ಕೆರೆಯ ನೀರು. ಅದು ನಿಂತ ನೀರು. ಹೊಸ ನೀರು ಬರುತ್ತಿದ್ದರೆ, ಹಳೆಯ ನೀರು ಕೊಚ್ಚಿ ಹೋಗಿ ಶುದ್ಧವಾಗುತ್ತದೆ. ಮನುಷ್ಯನ ಮನಸ್ಸೂ ಹಾಗೆಯೇ ಹೊಸ ಹೊಸ ಚಿಂತನೆಗಳನ್ನು ಮಾಡುತ್ತಿದ್ದರೆ, ಹಳೆಯ, ಕೀಳಾದ ಚಿಂತನೆಗಳು ಕಳೆದುಹೋಗುತ್ತವೆ. ನೀರು ಹಳೆಯದಾಗಿರುವುದರ ಜೊತೆಗೆ ಊರ ಜನ ಕೆರೆಯ ನೀರಿನಲ್ಲಿ ತಮ್ಮ ದನ-ಕರುಗಳನ್ನು, ತಮ್ಮನ್ನು ತೊಳೆದುಕೊಂಡು ಬಟ್ಟೆ-ಬರೆ, ಪಾತ್ರೆಗಳನ್ನು ತೊಳೆದು, ಎಲ್ಲ ಸೋಂಕುಗಳನ್ನು ಸೇರಿಸಿ ಮತ್ತಷ್ಟು ಕೊಳೆ ಮಾಡುತ್ತಾರೆ. ಇದರಂತೆ ರಾಗದ್ವೇಷಗಳು ಮನಸ್ಸನ್ನು ಮಲಿನ ಮಾಡುವ ಇಂಥ ವಿಷಪದಾರ್ಥಗಳು. ಭೂಮಿಯ ರಸಗಳು, ವಾಸನೆಗಳು ಆಕಾಶದಿಂದ ಭಗವಂತನ ವರದಂತೆ ಬರುವ ನಿರ್ಮಲವಾದ ಮಳೆಯ ನೀರನ್ನು ಕೊಳಕುಮಾಡುತ್ತವೆ. ಇದೇ ರೀತಿ ಭಗವಂತ ನಮಗೆ ಶುದ್ಧ ಬುದ್ಧಿಯನ್ನು ನೀಡುತ್ತಾನೆ. ಆ ಬುದ್ಧಿಯಿಂದ ತನ್ನ ದರ್ಶನವನ್ನು ಪಡೆಯಲಿ ಎಂದು ಆಶಿಸುತ್ತಾನೆ. "ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ" ಎಂದರೆ "ನನ್ನ ಭಕ್ತರಿಗೆ ಈ ಬುದ್ಧಿಯನ್ನು ನೀಡುತ್ತೇನೆ. ಅದರ ಮೂಲಕ ಅವರು ನನ್ನನ್ನು ಪಡೆಯುತ್ತಾರೆ". ಆದರೆ ನಮ್ಮ ಭಾವೋದ್ವೇಗಗಳು ಭಗವಂತನ ವರದಂತೆ ದೊರೆತ ಶುದ್ಧಬುದ್ಧಿಯನ್ನು, ವಿವೇಕವನ್ನು ಕದಡಿ ರಾಡಿ ಮಾಡಿ ಬಿಡುತ್ತವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜನವರಿ 13, 2022

ಶ್ರೀಪ್ಲವನಾಮ ಸಂವತ್ಸರ ದಕ್ಷಿಣಾಯಣ–ಹೇಮಂತ ಋತು ಧನುರ್ಮಾಸದ 28 ನೇ ದಿನ
ತಿಥಿ: (ಪೌಷ ಶುಕ್ಲ) ಏಕಾದಶಿ ಗಂ. 19-33 ನಕ್ಷತ್ರ: ಕೃತ್ತಿಕಾ ಗಂ. 17-07 ಯೋಗ: ಶುಭ ಗಂ. 12-34, ಕರಣ: ವಿಷ್ಟಿ ಗಂ. 19-33. ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 07-01 ಸೂರ್ಯಾಸ್ತ : 06-18 ಮುಸ್ಲಿಂ ದಿನಾಂಕ : 09 ಜುಮಾದುಸ್ಸಾನಿ
ದಿನ ವಿಶೇಷ : ವೈಕುಂಠ ಏಕಾದಶಿ (ದ. ಭಾರತ), ಲೋಹ್ರಿ (ಜಮ್ಮು ಕಾಶ್ಮೀರ, ಪಂಜಾಬ್), ಭೋಗಿ, ಅದೃಷ್ಟ ಸಂಖ್ಯೆ: 1, 9

ಮೇಷ: ವಿದ್ಯಾಭ್ಯಾಸದಲ್ಲಿ ಉದಾಸೀನ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ವ್ಯಾಸಾಂಗದಲ್ಲಿ ಹೆಚ್ಚಿನ ಆಸಕ್ತಿ ಉಂಟಾಗಲಿದೆ. ಕುಲದೇವತಾ ದರ್ಶನ ಹಾಗು ದೇವರ ಸೇವೆಗಳಿಂದ ಮತ್ತಷ್ಟು ಶುಭ ಫಲವನ್ನು ಪಡೆಯಬಹುದು.

ವೃಷಭ: ಸೂಕ್ಷ್ಮ ವಿಚಾರಗಳನ್ನು ಅರ್ಥ ಮಾಡಿಕೊಂಡು ಹಿರಿಯರ ಮಾರ್ಗದರ್ಶನದಂತೆ ನಡೆದರೆ ಉತ್ತಮ. ಎಲೆಕ್ಟ್ರಾನಿಕ್ ಮತ್ತು ಹಾಡ್‌ವೇರ್ ವಸ್ತುಗಳಿಂದ ಅಧಿಕ ಲಾಭ ಪಡೆಯಲಿದ್ದೀರಿ.

ಮಿಥುನ: ಔಷಧಿ ಹಾಗೂ ರಾಸಾಯನಿಕ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಈ ದಿನ ಹರ್ಷದಾಯಕವಾಗಿರುತ್ತದೆ. ಕೃಷಿ ಉತ್ಪನ್ನಗಳ ಬೆಲೆ ಏರುವುದರಿಂದ ಸಾಲವನ್ನು ತೀರಿಸಿಕೊಳ್ಳುವ ಸದಾವಕಾಶ ಒದಗುವುದು.

ಕರ್ಕಾಟಕ: ಅವಿವಾಹಿತರಿಗೆ ಮಾಂಗಲ್ಯ ಭಾಗ್ಯವಿದ್ದು ಮದುವೆಯ ಮಾತು-ಕತೆಗಳನ್ನು ನಡೆಸುವರು. ಸಾಂಸಾರಿಕವಾಗಿ ಹಲವು ಸಮಸ್ಯೆಗಳಿಗೆ ಪರಿಹಾರ ದೊರೆತು, ಮನಸ್ಸಿನ ಶಾಂತಿಯನ್ನು ಪಡೆಯುವಿರಿ

ಸಿಂಹ: ಮನೆ ಕಟ್ಟಲೇಬೇಕೆಂಬ ನಿಮ್ಮ ಆಸೆಯು ಪ್ರಾರಂಭದ ಹಾದಿಯನ್ನು ಹಿಡಿಯುವುದು. ಲೇಖನ ವೃತ್ತಿಯಲ್ಲಿ ಪ್ರಗತಿಯನ್ನು ಕಾಣುವಿರಿ. ಯಂತ್ರೋಪಕರಣಗಳ ವ್ಯಾಪಾರ ಮೂಲಕ ಲಾಭವನ್ನು ಪಡೆಯುವಂತಾಗುತ್ತದೆ.

ಕನ್ಯಾ: ಹಿರಿಯರ ಆರೋಗ್ಯವು ಸುಧಾರಣೆ ಹಂತದಲ್ಲಿರುವುದು. ಹಿಂದಿನ ದಿನಗಳ ಪರಿಶ್ರಮದ ಫಲವನ್ನು ಈ ದಿನ ಪಡೆಯುವ ಸಾಧ್ಯತೆ ಇದೆ. ಹೂಡಿಕೆಯ ವಿಚಾರದಲ್ಲಿ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ.

ತುಲಾ: ತಂದೆ-ತಾಯಿಯ ಶುಭ ಆಶೀರ್ವಾದದೊಂದಿಗೆ ಈ ದಿನವನ್ನು ಪ್ರಾರಂಭಿಸಿ. ಕುಟುಂಬದಲ್ಲಿ ಮಾನಸಿಕ ಸಮಾಧಾನ ದೊರೆತು ಹಂತ ಹಂತವಾಗಿ ಅನುಕೂಲ ವಾತಾವರಣದ ಅನುಭವ ದೊರಕಲಿದೆ.

ವೃಶ್ಚಿಕ: ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ. ನಿಮ್ಮ ಸುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವಿರಿ. ಅನಗತ್ಯ ಅಲೆದಾಟಗಳು ತಪ್ಪಲಿದೆ.

ಧನು: ಪ್ರೇಮಿಗಳಿಗೆ ಜೀವನ ನಿರ್ಣಯಿಸಲು ಉತ್ತಮ ಅವಕಾಶಗಳು ಈ ದಿನ ಬರಲಿದೆ. ಅಬಕಾರಿ ಇಲಾಖೆಯವರಿಗೆ ಹೆಚ್ಚಿನ ಕೆಲಸ. ಕಾನೂನಿಗೆ ವಿರುದ್ಧವಾದ ಕೆಲಸ ನಿಮ್ಮಿಂದ ಸಂಭವಿಸಬಹುದು.

ಮಕರ: ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆ ಪಡೆಯುವ ಬಗ್ಗೆ ಯೋಚಿಸಲು ಸರಿಯಾದ ಸಮಯ. ರಾಜಕೀಯ ಪರಿಣಿತರ ಹುದ್ದೆ ಏರುವ ಆಸೆಯು, ಈ ದಿನ ರಾಜಕೀಯ ಗುರುವಿನ ನೆರವಿನಿಂದ ನೆರವೇರುವುದು.

ಕುಂಭ: ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ವಿಸ್ತೀರ್ಣವೂ ಹೆಚ್ಚುವುದು. ಕ್ರೀಡಾಪಟುಗಳಿಗೆ ಸಂಗೀತಗಾರರಿಗೆ ಸಾಧನೆಯ ಅವಕಾಶ ಸಿಕ್ಕಿದರೂ ಅನಾರೋಗ್ಯ ಎದುರಾಗಬಹುದು.

ಮೀನ: ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಆರ್ಥಿಕತೆಗೆ ಸಂಬಂಧಿಸಿದಂತೆ ಅಪವಾದ ಎದುರಾಗುವ ಸಾಧ್ಯತೆ ಇದೆ. ಕುಟುಂಬದ ಹಿರಿಯರ ಆರೋಗ್ಯ ನಷ್ಟದಿಂದಾಗಿ ಆಸ್ಪತ್ರೆಯ ತಿರುಗಾಟದ ಕ್ಲೇಶ.

ಪದಬಂಧ 4837

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಿಶೇಷವಾದ ದ್ರೋಹ! (3)
4.ಪುಸ್ತಕದ ಮೇಲು ಹೊದಿಕೆ (4)
6.ಹಿಡಿತದಿಂದ ಖರ್ಚು ಮಾಡುವಿಕೆ (4)
8. ಕೆನ್ನೆಯಿಲ್ಲಿ ಉಲ್ಟಾ ಕಾಣುತ್ತಿದೆ (3)
11.ಮದುವೆಗಾಗಿ ಆಯ್ಕೆ ಮಾಡು (3)
13.ಪುರದಲ್ಲೇ ದೊರೆತ ಸನ್ಮಾನ (4)
17.ಇದು ಚಿಲ್ಲರೆ ಹಣ (4)
18.ಕೋರೆಗಳನ್ನುಳ್ಳದ್ದು (3)

ಮೇಲಿಂದ ಕೆಳಕ್ಕೆ
1.ಇದು ನಿಯಮಾನುಸಾರವಾದುದು (3)
2.ತಾಳ ಹಾಕುತ್ತಾಹೂಡಿದ ಸಂಪು (4)
3.ತಿರುಗಿದಾಗ ಕಾಣಿಸಿದ ದುಃಖ (3)
5.ಗೆಳೆಯನೇಕೋ ಉಲ್ಟಾ ನಿಂತಿದ್ದಾನಲ್ಲ? (2)
7.ಪರಾಧೀನವಿಲ್ಲದಿರುವುದು (3)
9.ಪೆದ್ದನಿಲ್ಲಿ ಬಂದಿದ್ದಾನೆ (3)
10.ಕದಕ್ಕೆ ಒರಗಿಸಿರುವ ಕೆನ್ನೆ! (3)
12.ದೇವತೆ ಮತ್ತು ರಾಕ್ಷಸ ಒಟ್ಟಾಗಿದ್ದಾರೆ! (4)
14.ಸಲ್ಲಿಕೆಯ ಚೀಟಿ (3)
15.ನಗರವಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (2)
16.ಅವನಿರುವ ಭೂಮಿ! (3)



4836 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. 1.ವಿಶೃಂಖಲವೃತ್ತಿ4.ತರಬೇತಿ5.ಷಹರು7.ಅಶೋಕ 9.ಯಥಾರ್ಥ12.ವರ್ಧನ13.ಸಮಾರೋಪ15.ಲೋಕವ್ಯವಹಾರ
ಮೇಲಿಂದ ಕೆಳಕ್ಕೆ: 1.ವಿದೂಷಕ 2.ತ್ರಿತ3.ಪ್ರತಿಭೆ6.ರುಗ್ಣಾಲಯ7.ಅನರ್ಥ8.ಕಲರವ 10.ವನಚರ11.ಕೆಸರು14.ಪಲೋ

ಸುಡೊಕು 5223

	6		8	7			9	3
								4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5222 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಉತ್ತರ ಪ್ರದೇಶ: ಸಚಿವ ಸ್ಥಾನಕ್ಕೆ ದಾರಾ ಸಿಂಗ್ ಚೌಹಾಣ್ ರಾಜೀನಾಮೆ • ಸ್ವಾಮಿ ಪ್ರಸಾದ್ ಮೌರ್ಯ ವಿರುದ್ಧ ಬಂಧನ ವಾರೆಂಟ್ ಜಾರಿ

ಬಿಜೆಪಿ ಸಂಪುಟ ಬಿಟ್ಟ ಮತ್ತೊಬ್ಬ ಒಬಿಸಿ ನಾಯಕ

ಮುಖ್ಯಾಂಶಗಳು

- ಎರಡು ದಿನದಲ್ಲಿ ಇಬ್ಬರು ಸಚಿವರಿಂದ ರಾಜೀನಾಮೆ
- ರಾಜೀನಾಮೆ ವಾಪಸಾತಿಗೆ ಮನವೊಲಿಸುವ ಯತ್ನ ವಿಫಲ
- ಎಸ್‌ಪಿ ಮಿತ್ರಪಕ್ಷ ಆರ್‌ಎಲ್‌ಡಿ ಸೇರಿದ ಬಿಜೆಪಿಯ ಮತ್ತೊಬ್ಬ ಶಾಸಕ

ಲಖನೌ (ಪಿಟಿಐ): ಉತ್ತರ ಪ್ರದೇಶದ ಬಿಜೆಪಿ ಸರ್ಕಾರದ ಸಂಪುಟವನ್ನು ತೊರೆಯುವವರ ಸರಣಿ ಬುಧವಾರವೂ ಮುಂದುವರಿದಿದೆ. ಯೋಗಿ ಆದಿತ್ಯನಾಥ ಅವರ ಸಂಪುಟದಲ್ಲಿ ಅರಣ್ಯ ಮತ್ತು ಪರಿಸರ ಸಚಿವರಾಗಿದ್ದ ದಾರಾ ಸಿಂಗ್ ಚೌಹಾಣ್ ಅವರು ಬುಧವಾರ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ದಾರಾ ಸಿಂಗ್ ಅವರು ಉತ್ತರ ಪ್ರದೇಶದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ನಾಯಕರಲ್ಲಿ ಪ್ರಮುಖರು. ಅವರು ಸಂಪುಟ ತೊರೆದಿರುವುದು, ಬಿಜೆಪಿಗೆ ದೊಡ್ಡ ಹಾನಿಯಾಗಲಿದೆ ಎಂದು ಮೂಲಗಳು ಹೇಳಿವೆ. ದಾರಾ ಸಿಂಗ್ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಬಗ್ಗೆ ಮಾಹಿತಿಗಳು ಲಭ್ಯವಾಗಿಲ್ಲ.

ಬಿಜೆಪಿ ಶಾಸಕ ಅವತಾರ್ ಸಿಂಗ್ ಭಡಾನಾ ಅವರು ಸಮಾಜವಾದಿ ಪಕ್ಷದ ಮಿತ್ರಪಕ್ಷವಾದ ಆರ್‌ಎಲ್‌ಡಿ-ಯನ್ನು ಬುಧವಾರ ಸೇರಿದ್ದಾರೆ. ಯೋಗಿ ಸಂಪುಟದಲ್ಲಿದ್ದ ಪ್ರಮುಖ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಅವರು ಮಂಗಳವಾರವಷ್ಟೆ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 'ಇನ್ನೂ ಹಲವು ಸಚಿವರು ಸಂಪುಟ ತೊರೆಯಲಿದ್ದಾರೆ' ಎಂದು ಅವರು ಹೇಳಿದ್ದರು. ಮರುದಿನವೇ ದಾರಾ ಸಿಂಗ್ ರಾಜೀನಾಮೆ ನೀಡಿದ್ದಾರೆ. ಪಕ್ಷವನ್ನು ತೊರೆಯುವುದಾಗಿ ಬಿಜೆಪಿಯ ಹಲವು ಶಾಸಕರು ಹೇಳಿದ್ದಾರೆ.

'ನಾನು ಈ ಸರ್ಕಾರದಲ್ಲಿ ಸರಿಯಾಗಿ ಕೆಲಸ ಮಾಡಿದ್ದೇನೆ. ಆದರೆ ಹಿಂದುಳಿದವರು, ವಂಚಿತರು, ದಲಿತರು, ಶೋಷಿತರು ಮತ್ತು ನಿರುದ್ಯೋಗಿ ಯುವಕರ ಬಗ್ಗೆ ಸರ್ಕಾರಕ್ಕೆ ಕಾಳಜಿಯಿಲ್ಲ. ಈ ಜನರ ಮೇಲೆ ಸರ್ಕಾರವು ದಬ್ಬಾಳಿಕೆ ನಡೆಸುತ್ತಿದೆ. ಇದರಿಂದ ನನಗೆ ತೀರಾ ನೋವಾಗಿದೆ.

ದಾರಾ ಸಿಂಗ್ ತಮ್ಮೊಂದಿಗೆ ಇರುವ ಚಿತ್ರವನ್ನು ಅಖಿಲೇಶ್ ಯಾದವ್ ಟ್ವೀಟ್ ಮಾಡಿದ್ದಾರೆ

ಪಕ್ಷದಲ್ಲಿ ನನ್ನ ದನಿಯನ್ನು ಕೇಳಿಸಿಕೊಳ್ಳುತ್ತಾರೆ ಎಂದು ಕಾದೆ. ಆದರೆ ನನ್ನ ಮಾತನ್ನು ಕೇಳಿಸಿಕೊಳ್ಳಲು ಯಾರಿಗೂ ಇಚ್ಛೆ ಇಲ್ಲ ಎಂಬುದು ದೃಢಪಟ್ಟಾಗ, ರಾಜೀನಾಮೆ ನೀಡಿದೆ' ಎಂದು ಅವರು ದಾರಾ ಸಿಂಗ್ ಹೇಳಿದ್ದಾರೆ.

'ಸಮಾಜವಾದಿ ಪಕ್ಷವನ್ನು ಸೇರುವ ಬಗ್ಗೆ ಇನ್ನೂ ಯೋಚಿಸಿಲ್ಲ. ನನ್ನ ಬೆಂಬಲಿಗರ ಜತೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುತ್ತೇನೆ' ಎಂದು ದಾರಾ ಸಿಂಗ್ ಹೇಳಿದ್ದಾರೆ.

ದಾರಾ ಸಿಂಗ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಕೆಲವೇ ನಿಮಿಷಗಳಲ್ಲಿ ಅಖಿಲೇಶ್ ಯಾದವ್ ಅವರು ಟ್ವೀಟ್ ಮಾಡಿ, ಅವರನ್ನು ಸಮಾಜವಾದಿ ಪಕ್ಷಕ್ಕೆ ಆಹ್ವಾನಿಸಿದ್ದಾರೆ. ಅಲ್ಲದೆ, ದಾರಾ ಸಿಂಗ್ ಅವರು ಅಖಿಲೇಶ್ ಅವರ ಜತೆ ತೆಗೆಸಿಕೊಂಡಿರುವ ಚಿತ್ರವನ್ನೂ ಟ್ವೀಟ್ ಮಾಡಿದ್ದಾರೆ.

ಸಂಪುಟ ಮತ್ತು ಪಕ್ಷ ತೊರೆಯುವವರನ್ನು ಮನವೊಲಿಸಲು ಪಕ್ಷದ ನಾಯಕರು ಮುಂದಾಗಿದ್ದಾರೆ. 'ನಮ್ಮ ಮನೆಯವರು ದಾರಿ ತಪ್ಪಿದಾಗ ಭಾರಿ ಬೇಸರವಾಗುತ್ತದೆ. ಮುಳುಗುತ್ತಿರುವ ಹಡಗನ್ನು ಏರಬೇಡಿ. ಏರಿದರೆ ನಿಮಗೇ ನಷ್ಟ, ಎಂದಷ್ಟೇ ಹೊರ ನಡೆಯುತ್ತಿರುವ ನಾಯಕರಿಗೆ ಹೇಳಲು ಬಯಸುತ್ತೇನೆ. ದಾರಾ ಸಿಂಗ್ ಅವರೇ ನಿಮ್ಮ ನಿರ್ಧಾರವನ್ನು ಮರುಪರಿಶೀಲಿಸಿ' ಎಂದು ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ಟ್ವೀಟ್ ಮಾಡಿದ್ದಾರೆ.

ಸ್ವಾಮಿ ಪ್ರಸಾದ್ ಮೌರ್ಯ ಅವರು ಪಕ್ಷ ತೊರೆಯದಂತೆ ಮನವೊಲಿಸುವ ಯತ್ನವೂ ನಡೆದಿದೆ. ಆದರೆ ಅದು ಫಲ ನೀಡಿಲ್ಲ ಎಂದು ಬಿಜೆಪಿ ಮೂಲಗಳು ಹೇಳಿವೆ. ಸ್ವಾಮಿ ಪ್ರಸಾದ್ ಮೌರ್ಯ ಮತ್ತು ದಾರಾ ಸಿಂಗ್ ಇಬ್ಬರೂ ಸಂಪುಟ ತೊರೆದಿರುವುದು ಬಿಜೆಪಿಗೆ ಹೊಡೆತ ನೀಡಲಿದೆ. ಇಬ್ಬರೂ ಒಬಿಸಿ ನಾಯಕರು ಸಮಾಜವಾದಿ ಪಕ್ಷ ಸೇರುವ ಸಾಧ್ಯತೆಗಳು ಇವೆ. ಹೀಗೆ ಆದರೆ, ಒಬಿಸಿ ಮತಗಳು ದೊಡ್ಡ ಪ್ರಮಾಣದಲ್ಲಿ ಸಮಾಜವಾದಿ ಪಕ್ಷದತ್ತ ವಾಲಲಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಬಿಜೆಪಿಯಲ್ಲಿರುವುದು ಸರ್ವಾಧಿಕಾರ'

ಶಹಜಹಾನ್‌ಪುರ (ಪಿಟಿಐ): 'ಬಿಜೆಪಿಯಲ್ಲಿ ಸರ್ವಾಧಿಕಾರವಿದೆ. ಅಲ್ಲಿ ನಮ್ಮ ದನಿಯನ್ನು ಕೇಳಿಸಿಕೊಳ್ಳುವವರು ಯಾರೂ ಇಲ್ಲ' ಎಂದು ಮಂಗಳವಾರ ಬಿಜೆಪಿ ತೊರೆದಿದ್ದ ಶಾಸಕ ರೋಶನ್ ಲಾಲ್ ಶರ್ಮಾ ಹೇಳಿದ್ದಾರೆ.

ಬುಧವಾರ ಅವರು ಇಲ್ಲಿ ಆಯೋಜಿಸಿದ್ದ ಮಾಧ್ಯಮಗೋಷ್ಠಿಯಲ್ಲಿ ಈ ಬಗ್ಗೆ ವಿವರಣೆ ನೀಡಿದ್ದಾರೆ. 'ಜನರ ಸಮಸ್ಯೆಗಳನ್ನು ಕೇಳಿಸಿಕೊಳ್ಳಲು ಬಿಜೆಪಿಯಲ್ಲಿ ಯಾರೂ ಸಿದ್ಧರಿಲ್ಲ. ನಮ್ಮ ಮಾತನ್ನು ಆಲಿಸುವವರು ಜಿಲ್ಲಾಮಟ್ಟದಿಂದ ರಾಜ್ಯ-ಮಟ್ಟದವರೆಗೆ ಒಬ್ಬರೂ ಇಲ್ಲ' ಎಂದು ಅವರು ಹೇಳಿದ್ದಾರೆ.

'ಬಿಜೆಪಿಯಲ್ಲಿ ಇದ್ದ ಈ ಐದು ವರ್ಷದಲ್ಲಿ ನನಗೆ ಉಸಿರುಕಟ್ಟಿದಂತಾಗಿತ್ತು. ನಮ್ಮ ಜಿಲ್ಲೆಯಿಂದ ಆಯ್ಕೆಯಾಗಿರುವ ಸಚಿವರೊಬ್ಬರು, ನನ್ನ ಎಲ್ಲಾ ಕಾರ್ಯ-ಕ್ರಮಗಳಿಗೆ ಅಡ್ಡಿಪಡಿಸುತ್ತಲೇ ಇದ್ದರು. ಬಡವರು ಮತ್ತು ಕಾರ್ಮಿಕರ ಬಗ್ಗೆ ನಾನು ದನಿ ಎತ್ತಿದಾಗಲೆಲ್ಲಾ, ನನ್ನ ದನಿಯನ್ನು ಹತ್ತಿಕ್ಕಲಾಗುತ್ತಿತ್ತು. ಈಗ ಬಿಜೆಪಿ ತೊರೆದು, ಸಂತೋಷವಾಗಿದ್ದೇನೆ' ಎಂದು ರೋಷನ್ ಹೇಳಿದ್ದಾರೆ.

'ಈ ಬಗ್ಗೆ ಮುಖ್ಯಮಂತ್ರಿಗೆ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ದೂರು ನೀಡಿದ್ದೆ. ಆದರೆ ಯಾರೂ ನನ್ನ ಮಾತನ್ನು ಕೇಳಿಸಿಕೊಳ್ಳಲಿಲ್ಲ. ಇಲ್ಲಿ ಕೆಲವೇ ಅಧಿಕಾರಿಗಳು ಇಡೀ ಆಡಳಿತವನ್ನು ನಡೆಸುತ್ತಾರೆ' ಎಂದು ಅವರು ಆರೋಪಿಸಿದ್ದಾರೆ.

'ನಾನು ಸಮಾಜವಾದಿ ಪಕ್ಷ ಸೇರುತ್ತೇನೆ. ಇಲ್ಲಿಯೇ ಸ್ಪರ್ಧಿಸಿ, ಗೆಲ್ಲುತ್ತೇನೆ. ಈ ಬಾರಿ ಸಮಾಜವಾದಿ ಪಕ್ಷವು ಸರ್ಕಾರ ರಚಿಸಲಿದೆ' ಎಂದು ಅವರು ಹೇಳಿದ್ದಾರೆ.

> **ದಲಿತರು, ಹಿಂದುಳಿದವರು ಮತ್ತು ವಂಚಿತರಿಗೆ ಈಗಿನ ಸರ್ಕಾರದಲ್ಲಿ ನ್ಯಾಯ ದೊರೆಯುವುದಿಲ್ಲ. ಹೀಗಾಗಿಯೇ ನಾನು ಸಂಪುಟವನ್ನು ತ್ಯಜಿಸುತ್ತಿದ್ದೇನೆ**
> **ದಾರಾ ಸಿಂಗ್ ಚೌಹಾಣ್,** ಬಿಜೆಪಿ ಶಾಸಕ

> **ಸಾಮಾಜಿಕ ನ್ಯಾಯದ ಸೇನಾನಿ ದಾರಾ ಸಿಂಗ್ ಅವರಿಗೆ ಸ್ವಾಗತ. ಸಾಮಾಜಿಕ ನ್ಯಾಯಕ್ಕಾಗಿನ ಅವರ ಹೋರಾಟದಲ್ಲಿ ನಾವು ಅವರಿಗೆ ಜತೆಯಾಗಲಿದ್ದೇವೆ**
> **ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ

ಬಿಜೆಪಿಗೆ ಕಾಂಗ್ರೆಸ್, ಎಸ್‌ಪಿ ಶಾಸಕರು

ಉತ್ತರ ಪ್ರದೇಶ ಕಾಂಗ್ರೆಸ್ ಶಾಸಕ ನರೇಶ್ ಶೈನಿ ಮತ್ತು ಸಮಾಜವಾದಿ ಪಕ್ಷದ ಶಾಸಕ ಹರಿ ಓಂ ಯಾದವ್ ಅವರು ಬುಧವಾರ ತಮ್ಮ ಪಕ್ಷಗಳ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಇಬ್ಬರು ನಾಯಕರೂ ಬಿಜೆಪಿ ಸೇರಿದ್ದಾರೆ.

ಈ ಇಬ್ಬರೂ ಒಬಿಸಿ ನಾಯಕರಾಗಿದ್ದಾರೆ. ಇದೇ ವರ್ಗದ ಪ್ರಮುಖ ನಾಯಕರಾದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ದಾರಾ ಸಿಂಗ್ ಚೌಹಾಣ್ ಅವರು ಸಂಪುಟ ತೊರೆದಿರುವುದರಿಂದ ಆಗಿರುವ ನಷ್ಟವನ್ನು ಭರಿಸಿಕೊಳ್ಳಲು, ನರೇಶ್ ಮತ್ತು ಹರಿ ಓಂ ಅವರನ್ನು ಪಕ್ಷಕ್ಕೆ ಸೆಳೆದುಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಬುಧವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರ ಸಮ್ಮುಖದಲ್ಲಿ ಇಬ್ಬರೂ ಬಿಜೆಪಿ ಸೇರಿದ್ದಾರೆ. ಈ ಇಬ್ಬರೂ ಚುನಾವಣೆಯಲ್ಲಿ ಸ್ಪರ್ಧಿಸಬೇಕೇ ಅಥವಾ ಬೇಡವೇ ಎಂಬುದನ್ನು ಪಕ್ಷದ ವರಿಷ್ಠರು ನಿರ್ಧರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹರಿ ಓಂ ಯಾದವ್ ಅವರನ್ನು ಬಿಜೆಪಿಗೆ ಪಕ್ಷದ ನಾಯಕ ದಿನೇಶ್ ಶರ್ಮಾ ಮತ್ತು ಸ್ವತಂತ್ರದೇವ್ ಸಿಂಗ್ ಬರಮಾಡಿಕೊಂಡರು —ಪಿಟಿಐ ಚಿತ್ರ

ಮೌರ್ಯ ನಾಳೆ ಎಸ್‌ಪಿಗೆ

'ನಾನು ಶುಕ್ರವಾರ ಸಮಾಜವಾದಿ ಪಕ್ಷಕ್ಕೆ ಸೇರುತ್ತೇನೆ' ಎಂದು ಸ್ವಾಮಿ ಪ್ರಸಾದ್ ಮೌರ್ಯ ಬುಧವಾರ ಹೇಳಿದ್ದಾರೆ.

ಮಂಗಳವಾರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ, ಅವರು ಬಿಜೆಪಿಯನ್ನೂ ತೊರೆದಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಮೌರ್ಯ ಅವರು ಮಂಗಳವಾರ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಅಖಿಲೇಶ್ ಜತೆಗೆ ಮೌರ್ಯ ಅವರು ತೆಗೆಸಿಕೊಂಡಿದ್ದ ಚಿತ್ರ ಸಹ ವೈರಲ್ ಆಗಿತ್ತು. ಆದರೆ, 'ನಾನಿನ್ನೂ ಬಿಜೆಪಿ ತೊರೆದಿಲ್ಲ. ಆದರೆ ಶೀಘ್ರವೇ ಬಿಜೆಪಿ ತ್ಯಜಿಸುತ್ತೇನೆ. ಸಮಾಜವಾದಿ ಪಕ್ಷ ಸೇರುತ್ತೇನೆ. ಶುಕ್ರವಾರ ಇನ್ನೂ ಹಲವು ವಿಚಾರಗಳು ಬಹಿರಂಗವಾಗಲಿವೆ' ಎಂದು ಸುದ್ದಿ ವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಬಂಧನ ವಾರೆಂಟ್ ಜಾರಿ: ಸ್ವಾಮಿ ಪ್ರಸಾದ್ ಮೌರ್ಯ ಅವರ ವಿರುದ್ಧ 2014ರಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ಬುಧವಾರ ಅವರ ಬಂಧನಕ್ಕೆ ವಾರೆಂಟ್ ಜಾರಿ ಮಾಡಲಾಗಿದೆ. ರಾಜ್ಯ ಸರ್ಕಾರದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಮರುದಿನವೇ ಅವರ ವಿರುದ್ಧ ಬಂಧನ ವಾರೆಂಟ್ ಜಾರಿಯಾಗಿದೆ.

2014ರಲ್ಲಿ ಅವರು ಬಿಎಸ್‌ಪಿಯಲ್ಲಿದ್ದರು. ಆಗ ಇಲ್ಲಿನ ಸುಲ್ತಾನಪುರದಲ್ಲಿ ಮಾಡಿದ್ದ ಭಾಷಣದ ವಿರುದ್ಧ, ದ್ವೇಷ ಭಾಷಣ ಪ್ರಕರಣ ದಾಖಲಾಗಿತ್ತು. 'ಮದುವೆಗಳಲ್ಲಿ ಗೌರಿ ಮತ್ತು ಗಣೇಶನ ಪೂಜೆ ಮಾಡುವಂತಿಲ್ಲ. ಹೀಗೆ ಮಾಡುವ ಮೂಲಕ ಮೇಲ್ಜಾತಿಯ ಜನರು ದಲಿತರ ಹಾದಿ ತಪ್ಪಿಸುತ್ತಿದ್ದಾರೆ. ಈ ಮೂಲಕ ದಲಿತರನ್ನು ಸದಾ ತಮ್ಮ ಗುಲಾಮರನ್ನಾಗಿ ಇಟ್ಟುಕೊಳ್ಳುವ ಹುನ್ನಾರವಿದು' ಎಂದು ಅವರು ಹೇಳಿದ್ದರು.

ಇದರ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆ ಸುಲ್ತಾನಪುರ ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಈ ಹಿಂದೆ ಮೌರ್ಯ ವಿರುದ್ಧ ಜಾರಿಯಾಗಿದ್ದ ಬಂಧನ ವಾರೆಂಟ್‌ಗೆ ನ್ಯಾಯಾಲಯವು ತಡೆ ನೀಡಿತ್ತು. ಜನವರಿ ಮೊದಲ ವಾರದಲ್ಲಿ ನಡೆದ ವಿಚಾರಣೆಗೆ ಮೌರ್ಯ ಅವರು ಹಾಜರಾಗಿರಲಿಲ್ಲ. ಹೀಗಾಗಿ ನ್ಯಾಯಾಲಯವು ಈಗ ಮತ್ತೆ ಬಂಧನ ವಾರೆಂಟ್ ಜಾರಿ ಮಾಡಿದೆ.

ಸ್ವಾಮಿ ಪ್ರಸಾದ್ ಮೌರ್ಯ

ಚುನಾವಣಾ ಕಾರ್ಯಸೂಚಿ ಬಿಡುಗಡೆ ಮಾಡಿದ ಅರವಿಂದ ಕೇಜ್ರಿವಾಲ್

ಎಎಪಿಯ 'ಪಂಜಾಬ್ ಮಾದರಿ' ಘೋಷಣೆ

ಚಂಡೀಗಡ (ಪಿಟಿಐ): ಪಂಜಾಬ್ ಗದ್ದುಗೆ ಮೇಲೆ ಕಣ್ಣಿಟ್ಟಿರುವ ಆಮ್ ಆದ್ಮಿ ಪಕ್ಷ(ಎಎಪಿ) ತನ್ನ 'ಪಂಜಾಬ್ ಮಾದರಿ' ಚುನಾವಣಾ ಕಾರ್ಯಸೂಚಿಯನ್ನು ಬುಧವಾರ ಬಿಡುಗಡೆ ಮಾಡಿತು. ಎಎಪಿ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಪಂಜಾಬ್ ಮಾದರಿ ಕಾರ್ಯಸೂಚಿಯನ್ನು ಬಿಡುಗಡೆ ಮಾಡಿದರು.

'ಸಿಖ್ಖರ ಧಾರ್ಮಿಕ ಗ್ರಂಥ ಅಪವಿತ್ರಗೊಳಿಸಿದ ಪ್ರಕರಣದಲ್ಲಿ ನ್ಯಾಯ ಕೊಡಿಸಲಾಗುವುದು. ಪ್ರತೀ ಮನೆಗೂ 300 ಯುನಿಟ್‌ವರೆಗೆ ಉಚಿತ ವಿದ್ಯುತ್, ಮಾದಕ ವಸ್ತು ಪೂರೈಕೆಗೆ ಕಡಿವಾಣ ಹಾಕಲಾಗುತ್ತದೆ' ಎಂದು ಕಾರ್ಯಸೂಚಿಯಲ್ಲಿ ವಿವರಿಸಲಾಗಿದೆ. ಒಟ್ಟು 10 ಅಂಶಗಳನ್ನು ಈ ಕಾರ್ಯಸೂಚಿಯಲ್ಲಿ ಸೇರಿಸಲಾಗಿದೆ ಎಂದು ಕೇಜ್ರಿವಾಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚುನಾವಣೆ ಘೋಷಣೆ ಆದಾಗಿನಿಂದ ಪಂಜಾಬ್ ಜನರು ಸಂತೋಷದಿಂದ ಇದ್ದಾರೆ. ಬದಲಾವಣೆ ತರಲು ಒಂದು ಅವಕಾಶ ದೊರೆತಿದೆ ಎಂದು ಅವರು ಭಾವಿಸಿದ್ದಾರೆ. 1966ರಲ್ಲಿ ಪಂಜಾಬ್ ಪ್ರತ್ಯೇಕ ರಾಜ್ಯವಾಯಿತು. ಅಲ್ಲಿಂದ ಇಲ್ಲಿಯವರೆಗೆ ಪಂಜಾಬ್‌ನಲ್ಲಿ 25 ವರ್ಷಗಳ ಕಾಲ ಕಾಂಗ್ರೆಸ್ ಮತ್ತು 19 ವರ್ಷಗಳ ಕಾಲ ಬಾದಲ್ ಕುಟುಂಬ ಆಡಳಿತ ನಡೆಸಿವೆ. ಪಾಲುದಾರಿಕೆ ಆಧಾರದಲ್ಲಿ ಈ ಎರಡೂ ಪಕ್ಷಗಳು ಪಂಜಾಬನ್ನು ಆಳಿವೆ. ಕಾಂಗ್ರೆಸ್ ಅಥವಾ ಬಾದಲ್ ಅವರ ಪಕ್ಷ (ಶಿರೋಮಣಿ ಅಕಾಲಿ ದಳ) ಎರಡರಲ್ಲಿ ಯಾರೇ ಅಧಿಕಾರಕ್ಕೆ ಬಂದರೂ ಸರ್ಕಾರವನ್ನು ಅವರು ಸಹಭಾಗಿತ್ವದಲ್ಲೇ ನಡೆಸುವುದು. ಯಾವುದೇ ವಿಷಯದಲ್ಲೂ ಒಬ್ಬರ ವಿರುದ್ಧ ಒಬ್ಬರು ಕ್ರಮ ಕೈಗೊಳ್ಳುವುದಿಲ್ಲ' ಎಂದು ಅವರು ಆರೋಪಿಸಿದ್ದಾರೆ.

ಕಾಂಗ್ರೆಸ್ ಮತ್ತು ಬಾದಲ್ ಕುಟುಂಬ ಪಂಜಾಬನ್ನು ಲೂಟಿ ಮಾಡುತ್ತಿವೆ ಎಂದು ಆರೋಪಿಸಿದ ಅವರು, 'ಈ ಸಹಭಾಗಿತ್ವವನ್ನು ಕೊನೆಗಾಣಿಸಿ ಪಂಜಾಬ್‌ನಲ್ಲಿ ಸಾಮಾನ್ಯ ಜನರ, ಸಾಮಾನ್ಯ ಪಂಜಾಬಿಗಳ ಸರ್ಕಾರವನ್ನು ತರಲು ಜನರು ಈ ಬಾರಿ ನಿರ್ಧರಿಸಿದ್ದಾರೆ. ಅದಕ್ಕಾಗಿ ಎಎಪಿಗೆ ಒಂದು ಅವಕಾಶವನ್ನು ನೀಡಲು ಜನರು ಮನಸ್ಸು ಮಾಡಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಎಎಪಿ ಪಂಜಾಬ್ ಘಟಕದ ಮುಖ್ಯಸ್ಥ ಭಗವಂತ್ ಮಾನ್ ಮತ್ತು ಇತರ ನಾಯಕರು ಕೆಲವು ವಾರಗಳಿಂದ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಜನರನ್ನು ಭೇಟಿ ಆಗಿ ಚರ್ಚೆ ನಡೆಸುತ್ತಿದ್ದಾರೆ. ಹಲವಾರು ವರ್ಗಗಳ ಜನರಿಂದ ದೊರೆತ ಸಲಹೆಗಳ ಆಧಾರದಲ್ಲಿ ಪಕ್ಷವು ಪಂಜಾಬ್ ಮಾದರಿ ಕಾರ್ಯಸೂಚಿಯನ್ನು ರೂಪಿಸಿದೆ. ಎಎಪಿಯು ಸರ್ಕಾರ ರಚಿಸಿದರೆ ನಾವು ಪಂಜಾಬ್‌ಅನ್ನು ಸಂಮೃದ್ಧವಾದ ಮತ್ತು ಅಭಿವೃದ್ಧಿ ಹೊಂದಿದ ಹೊಸ ಪಂಜಾಬ್ ಆಗಿ ರೂಪಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

'ಉದ್ಯೋಗ ಸೃಷ್ಟಿ ಮಾಡುವಂಥ ಮಾರ್ಗಗಳನ್ನು ಹುಟ್ಟುಹಾಕಲಾಗುವುದು. ಉದ್ಯೋಗ ಅರಸಿ ಕೆನಡಾ ಸೇರಿ ಹಲವಾರು ದೇಶಗಳಿಗೆ ತೆರಳಿರುವ ಯುವಕರು ಪಂಜಾಬ್‌ಗೆ ಮರಳಿ ಇಲ್ಲಿಯೇ ಉದ್ಯೋಗದಲ್ಲಿ ತೊಡಗುವಂತೆ ಮಾಡಲಾಗುವುದು. ಇಲ್ಲಿಯ ಸರ್ಕಾರಗಳಿಂದ ಸಿಗುತ್ತಿರುವ ಪ್ರೋತ್ಸಾಹದ ಕಾರಣ ಡ್ರಗ್ ಮಾಫಿಯಾ ಈಗಲೂ ಮೊದಲಿನಂತೆಯೇ ಭದ್ರವಾಗಿದೆ. ಎಎಪಿ ಡ್ರಗ್ ಮಾಫಿಯಾವನ್ನು ನಿಯಂತ್ರಿಸಲಿದೆ' ಎಂದು ಅವರು ಹೇಳಿದ್ದಾರೆ.

'ಪಂಜಾಬ್ ಅನ್ನು ಭ್ರಷ್ಟಾಚಾರ ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆ. ಲಂಚ ನೀಡಿ ತಮ್ಮ ಕೆಲಸ ಮಾಡಿಸಿಕೊಳ್ಳುವಂಥ ಸ್ಥಿತಿ ಇನ್ನು ಮುಂದೆ ಸಾಮಾಜ್ಯ ಜನರಿಗೆ ಬರುವುದಿಲ್ಲ. ಸರ್ಕಾರಿ ಶಾಲೆಗಳು ಮತ್ತು ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಾಗುವುದು. 1,600 ಮೊಹಲ್ಲಾ ಕ್ಲಿನಿಕ್‌ಗಳನ್ನು ತೆರೆಯಲಾಗುವುದು. 18 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮಾಸಿಕ ₹1,000 ಗೌರವಧನ ನೀಡುತ್ತೇವೆ' ಎಂದು ಅವರು ಹೇಳಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಪಂಜಾಬ್‌ನ ಮೊಹಾಲಿ ಜಿಲ್ಲೆಯಲ್ಲಿ ಬುಧವಾರ ಮನೆ ಮನೆಗೆ ತೆರಳಿ ಪ್ರಚಾರ ನಡೆಸಿದರು ಚಿತ್ರ–ಪಿಟಿಐ

'ಶೀಘ್ರವೇ ಸಿಎಂ ಅಭ್ಯರ್ಥಿ ಘೋಷಣೆ'

ಪಂಜಾಬ್ ವಿಧಾನಸಭೆ ಚುನಾವಣೆಗೆ ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಮುಂದಿನ ವಾರ ಘೋಷಿಸಲಾಗುವುದು ಎಂದು ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಬುಧವಾರ ಹೇಳಿದ್ದಾರೆ.

ಪಂಜಾಬ್‌ನಲ್ಲಿನ ಕಾನೂನು ಸುವ್ಯವಸ್ಥೆಯನ್ನು ಗುರಿಯಾಗಿಸಿಕೊಂಡು ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಕೇಜ್ರಿವಾಲ್ ಟೀಕಿಸಿದ್ದಾರೆ. 'ಪ್ರಧಾನಿಯ ಭದ್ರತೆಯೇ ಆಗಿಲಿ ಅಥವಾ ಸಾಮಾನ್ಯರ ಭದ್ರತೆಯೇ ಆಗಲಿ, ಅದನ್ನು ಸರ್ಕಾರ ಖಚಿತವಾಗಿ ನೀಡಬೇಕು. ಎಎಪಿ ಸರ್ಕಾರ ಕಾನೂನು ಸುವ್ಯವಸ್ಥೆಯು ರಾಜ್ಯದಲ್ಲಿ ನೆಲೆಸುವಂತೆ ಮಾಡುತ್ತದೆ' ಎಂದು ಅವರು ಹೇಳಿದ್ದಾರೆ.

ಸಿಖ್ ಸಮುದಾಯದ ನಾಯಕನನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಮಾಡಲಾಗುವುದು ಎಂದು ಅವರು ಕಳೆದ ವರ್ಷ ಹೇಳಿದ್ದರು.

'ಪ್ರಬಲ ನಾಯಕ ಪಂಜಾಬ್ ಮುಖ್ಯಮಂತ್ರಿ ಆಗಬೇಕು'

ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ವಿರುದ್ಧ ಅವರದೇ ಪಕ್ಷದ ನಾಯಕ ಮನೀಶ್ ತಿವಾರಿ ಬುಧವಾರ ಹರಿಹಾಯ್ದಿದ್ದಾರೆ. 'ಸವಾಲುಗಳು ಮತ್ತು ಕಷ್ಟಕರ ಪರಿಸ್ಥಿತಿಗಳಿಗೆ ಪರಿಹಾರ ಕಂಡುಕೊಳ್ಳುವಂಥ ಪ್ರಬಲ ನಾಯಕನ ಅಗತ್ಯ ರಾಜ್ಯಕ್ಕೆ ಇದೆ' ಎಂದಿದ್ದಾರೆ.

ಟ್ವೀಟ್ ಮಾಡುವ ಮೂಲಕ ಅವರು ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ. 'ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಮುಖ್ಯಮಂತ್ರಿಯ ಅಗತ್ಯ ಪಂಜಾಬ್‌ಗೆ ಇದೆ. ಪಂಜಾಬ್ ಗಂಭೀರ ರಾಜಕಾರಣಿಗಳನ್ನು ಬಯಸುತ್ತಿದೆ. ಅವರ ರಾಜಕಾರಣವು ಸಾಮಾಜಿಕ ಇಂಜಿನಿಯರಿಂಗ್, ಮನರಂಜನೆ, ಉಚಿತ ವಸ್ತುಗಳ ಆಮಿಷ ಆಗಿರಬಾರದು. ಸತತವಾಗಿ ಜನರಿಂದ ತಿರಸ್ಕೃತರಾಗಿರುವವರು ಬೇಕಿಲ್ಲ' ಎಂದಿದ್ದಾರೆ.

ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ 'ಮುಖ್ಯಮಂತ್ರಿ ಅಭ್ಯರ್ಥಿ ಹೆಸರಿಸುವಂತೆ ಚನ್ನಿ ಕಾಂಗ್ರೆಸ್‌ಅನ್ನು ಒತ್ತಾಯಿಸಿದ್ದಾರೆ' ಎಂಬ ಸುದ್ದಿಯನ್ನು ಟ್ವೀಟ್ ಜೊತೆಗೆ, ತಿವಾರಿ ಪೋಸ್ಟ್ ಮಾಡಿದ್ದಾರೆ. ಕಾಂಗ್ರೆಸ್ ಸಂಘಟನೆಯಲ್ಲಿ ಸಂಪೂರ್ಣ ಬದಲಾವಣೆ ತರಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದ 23 ನಾಯಕರಲ್ಲಿ ಮನೀಶ್ ಕೂಡಾ ಒಬ್ಬರು.

ಪಂಜಾಬ್‌ನಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯುವ ಪ್ರಯತ್ನದಲ್ಲಿರುವ ಕಾಂಗ್ರೆಸ್ ಈವರೆಗೂ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. 'ಜನರಿಂದ ಆರಿಸಿ ಬರುವ ಶಾಸಕರು ಪಂಜಾಬ್ ಮುಖ್ಯಮಂತ್ರಿ ಯಾರಾಗಬೇಕು ಎಂದು ನಿರ್ಧರಿಸುತ್ತಾರೆ. ಹೈಕಮಾಂಡ್ ನಿರ್ಧರಿಸುವುದಿಲ್ಲ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಮಂಗಳವಾರ ಹೇಳಿದ್ದರು. ಸಿಧು ಕೂಡಾ ಮುಖ್ಯಮಂತ್ರಿ ಆಕಾಂಕ್ಷಿ ಎನ್ನಲಾಗಿದೆ.

ಉತ್ತರಾಖಂಡ ಮತದಾರರಲ್ಲಿ ಸಿಸೋಡಿಯಾ ಮನವಿ

'ಎಎಪಿಗೆ ಒಂದು ಅವಕಾಶ ನೀಡಿ'

ನ್ಯೂ ಟಿಹ್ರಿ, ಉತ್ತರಾಖಂಡ (ಪಿಟಿಐ): 'ಉತ್ತರಾಖಂಡದಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ ಟಿಹ್ರಿ ಅಣೆಕಟ್ಟಿನಿಂದ ನಿರಾಶ್ರಿತರಾದವರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ' ಎಂದು ದೆಹಲಿ ಉಪಮುಖ್ಯಮಂತ್ರಿ, ಎಎಪಿ ಹಿರಿಯ ನಾಯಕ ಮನೀಷ್ ಸಿಸೋಡಿಯಾ ಬುಧವಾರ ಇಲ್ಲಿ ಘೋಷಿಸಿದ್ದಾರೆ.

'ಇಷ್ಟು ವರ್ಷಗಳ ಕಾಲ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆಯೇ ಆಯ್ಕೆ ಮಾಡುತ್ತಿದ್ದೀರಿ. ಈ ಬಾರಿ ಎಎಪಿಗೆ ಒಂದು ಅವಕಾಶ ನೀಡಿ. ಉತ್ತರಾಖಂಡದ ಸಮಸ್ಯೆಗಳಿಗೆ ಅರವಿಂದ್ ಕೇಜ್ರಿವಾಲ್ ಅವರ ಬಳಿ ಮಾತ್ರವೇ ಪರಿಹಾರವಿದೆ' ಎಂದು ಅವರು ಮತದಾರರನ್ನು ಕೋರಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಟಿಹ್ರಿ ಅಣೆಕಟ್ಟು ಪ್ರದೇಶದಿಂದ ಸ್ಥಳಾಂತರ ಆದವರು ಈಗಲೂ ತೊಂದರೆಯಲ್ಲೇ ಇರುವುದು ದುರದೃಷ್ಟಕರ. ಜನರು ನಮ್ಮನ್ನು ಚುನಾಯಿಸಿದರೆ ನಾವು ಅವರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ. ಟಿಹ್ರಿ ಅಣೆಕಟ್ಟಿನ ಆದಾಯದಲ್ಲಿ ₹1,100 ಕೋಟಿಯು ಉತ್ತರ ಪ್ರದೇಶಕ್ಕೆ ಹೋಗುತ್ತಿದೆ. ಅದು ಉತ್ತರಾಖಂಡಕ್ಕೆ ದೊರಕುವಂತೆ ಮಾಡುತ್ತೇವೆ. ಅದೇ ಹಣದಲ್ಲಿ 300 ಯುನಿಟ್ ವಿದ್ಯುತ್ ಅನ್ನು ಉಚಿತವಾಗಿ ಎಲ್ಲಾ ಮನೆಗಳಿಗೆ ನೀಡುತ್ತೇವೆ' ಎಂದರು.

ಇದಕ್ಕೂ ಮೊದಲು ಸಿಸೋಡಿಯಾ ಅವರು ಬೌರಾರಿ ಪ್ರದೇಶದ ಅಭ್ಯರ್ಥಿ ತ್ರಿಲೋಕ್ ಸಿಂಗ್ ನೇಗಿ ಪರ ಮನೆ ಮನೆಗೆ ತೆರಳಿ ಮತ ಯಾಚಿಸಿದರು. ನಮ್ಮನ್ನು ಚುನಾಯಿಸಿದರೆ ದೆಹಲಿ ಮಾದರಿ ಅಭಿವೃದ್ಧಿಯನ್ನು ಉತ್ತರಾಖಂಡದಲ್ಲಿ ತರಲಾಗುವುದು ಎಂದಿದ್ದಾರೆ. ಬಳಿಕ, ಕುತ್ಥಾ ಗ್ರಾಮಕ್ಕೆ ಭೇಟಿ ನೀಡಿದ ಅವರು ಅಲ್ಲಿಯ ಸ್ಥಳೀಯ ಆಹಾರವನ್ನು ಸವಿದರು. ರಾಜ್ಯದ ಸ್ಥಳೀಯ ಆಹಾರವನ್ನು ಪ್ರಚುರಪಡಿಸಲು ಅವರ ಪಕ್ಷ ಕೆಲಸ ಮಾಡುತ್ತದೆ ಎಂದು ಅವರು ಹೇಳಿದ್ದಾರೆ.



> **ಟಿಹ್ರಿ ಅಣೆಕಟ್ಟಿನಿಂದ ಉತ್ಪತ್ತಿ ಆಗುತ್ತಿರುವ ಆದಾಯದ ನ್ಯಾಯಬದ್ಧ ಪಾಲು ಉತ್ತರಾಖಂಡಕ್ಕೆ ದೊರಕದೆ, ಉತ್ತರಪ್ರದೇಶಕ್ಕೆ ಏಕೆ ಹೋಗುತ್ತಿದೆ?**
> **ಮನೀಷ್ ಸಿಸೋಡಿಯಾ,** ಎಎಪಿ ನಾಯಕ

ನುಡಿ–ಕಿಡಿ

ಕಾಂಗ್ರೆಸ್ ಮತ್ತು ಬಾದಲ್ ಕುಟುಂಬದ ನಡುವೆ ಹಲವಾರು ವರ್ಷಗಳಿಂದ ಸಹಭಾಗಿತ್ವ ಇದೆ. ಅವರು ಪಂಜಾಬನ್ನು ಲೂಟಿ ಹೊಡೆದಿದ್ದಾರೆ. ಉತ್ತಮ ದಿನಗಳು ಮತ್ತು ಸಮೃದ್ಧಿಯನ್ನು ಪಂಜಾಬ್ ಇನ್ನು ಮುಂದೆ ನೋಡಲಿದೆ
ಅರವಿಂದ್ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ರಾಜಕೀಯ ಪ್ರವಾಸಿ ಆಗಿರುವ ಅರವಿಂದ್ ಕೇಜ್ರಿವಾಲ್ ನಾಲ್ಕುವರೆ ವರ್ಷಗಳಿಂದ ಪಂಜಾಬ್‌ನಲ್ಲಿ ಪತ್ತೆ ಇರಲಿಲ್ಲ. ಪಂಜಾಬ್ ಬಗ್ಗೆ ಜ್ಞಾನ ಹೊಂದಿಲ್ಲದ, ದೆಹಲಿಯಲ್ಲಿ ಕುಳಿತವರು ಬರೆದಿರುವ 10 ಅಂಶಗಳು 'ಪಂಜಾಬ್ ಮಾದರಿ' ಆಗಲು ಸಾಧ್ಯವಿಲ್ಲ
ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ

ನಾನು ಬಿಜೆಪಿ ಸೇರಿದ ನಂತರವೇ ಅದು ಅಧಿಕಾರಕ್ಕೆ ಬಂದಿದ್ದು. ಹೀಗಾಗಿ ಬಿಜೆಪಿ ನನಗೆ ಅಭಾರಿಯಾಗಿರಬೇಕು. ಜನವರಿ 14ರಂದು ಎಲ್ಲವೂ ಬಹಿರಂಗವಾಗಲಿದೆ. ಅಲ್ಲಿಗೆ ಬಿಜೆಪಿಯ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆಯಲಾಗುತ್ತದೆ
ಸ್ವಾಮಿ ಪ್ರಸಾದ್ ಮೌರ್ಯ, ಉತ್ತರ ಪ್ರದೇಶ ಮಾಜಿ ಸಚಿವ

ಪ್ರಿಯಾಂಕಾ ಗಾಂಧಿ ಅವರು ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಮತಗಳನ್ನು ಕಸಿಯುತ್ತಿದ್ದಾರೆ. ಬಿಜೆಪಿ ವಿರೋಧಿ ಮತಗಳನ್ನು ಕಸಿಯುವುದರಿಂದ ಬಿಜೆಪಿಗೇ ಅನುಕೂಲವಾಗಲಿದೆ. ಇದನ್ನು ಯಾರೂ ಪ್ರಶ್ನಿಸುತ್ತಿಲ್ಲವೇಕೆ?
ಸುಶ್ಮಿತಾ ದೇವ್, ಟಿಎಂಸಿ ನಾಯಕಿ

ಚುನಾವಣಾ ಕಣದಲ್ಲಿ

- ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಅಯೋಧ್ಯೆಯಿಂದ ಕಣಕ್ಕೆ ಇಳಿಸುವ ಬಗ್ಗೆ ಪಕ್ಷದ ಹಿರಿಯ ನಾಯಕರು ಚರ್ಚೆ ನಡೆಸಿದ್ದಾರೆ, ಶೀಘ್ರವೇ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಪಕ್ಷದ ಮೂಲಗಳು ಹೇಳಿವೆ
- ಉತ್ತರ ಪ್ರದೇಶದಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಹುತೇಕ ಅಂತಿಮಗೊಳಿಸಲಾಗಿದೆ. ಒಂದೆರಡು ದಿನಗಳಲ್ಲಿ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ ಎಂದು ಬಿಜೆಪಿ ಮೂಲಗಳು ಹೇಳಿವೆ
- ಉತ್ತರ ಪ್ರದೇಶದಲ್ಲಿ ಮೊದಲು ಮತ್ತು ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಿಗೆ ಒಂದೆರಡು ದಿನಗಳಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುತ್ತೇವೆ ಎಂದು ಸಮಾಜವಾದಿ ಪಕ್ಷವು ಹೇಳಿದೆ
- ಜನವರಿ 15ರ ನಂತರ ಡಿಜಿಟಲ್ ಪ್ರಚಾರಕ್ಕೆ ಚಾಲನೆ ನೀಡುತ್ತೇವೆ ಎಂದು ಬಿಎಸ್‌ಪಿ ಹೇಳಿದೆ
- ಚುನಾವಣಾ ನೀತಿ ಸಂಹಿತೆ ಜಾರಿಯಾದಾಗಿನಿಂದ ಉತ್ತರ ಪ್ರದೇಶದಲ್ಲಿ ₹1.45 ಕೋಟಿ ಮೌಲ್ಯದ 73,000 ಲೀಟರ್ ಮದ್ಯ ಮತ್ತು ₹2.5 ಕೋಟಿ ಮೌಲ್ಯದ 1,825 ಕೆ.ಜಿ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಅಜಯ್ ಕುಮಾರ್ ಶುಕ್ಲಾ ಬುಧವಾರ ತಿಳಿಸಿದ್ದಾರೆ
- ಮಣಿಪುರ ಸರ್ಕಾರವು ಖಾಸಗಿ ಕಾಲೇಜುಗಳನ್ನು ಅನುದಾನಿತ ಕಾಲೇಜುಗಳಾಗಿ ಪರಿವರ್ತಿಸಿ ಚುನಾವಣಾ ನೀತಿಸಂಹಿತೆಯನ್ನು ಉಲ್ಲಂಘಿಸಿದೆ ಎಂದು ಮಣಿಪುರ ಕಾಂಗ್ರೆಸ್ ಘಟಕವು ಚುನಾವಣಾ ಆಯೋಗಕ್ಕೆ ದೂರು ನೀಡಿದೆ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ತಾಜಾ ಸುದ್ದಿಗಾಗಿ ಪ್ರಜಾವಾಣಿ ಆ್ಯಪ್ ಬಳಸಿ https://bit.ly/PrajavaniApp

ಇಂದು

ಮಕ್ಕಳಿಗೆ ಕೋವಿಡ್ ಲಸಿಕೆ ಕುರಿತು ಮಾಹಿತಿ ನೀಡಲಿದ್ದಾರೆ
ಡಾ.ಪ್ರೀತ್ ಶೆಟ್ಟಿ, ಮಕ್ಕಳ ತಜ್ಞರು, ಫೋರ್ಟಿಸ್ ಆಸ್ಪತ್ರೆ
ಡಾಕ್ಟರ್ಸ್ ಲೈವ್ ಸಂಜೆ 4 ಗಂಟೆಗೆ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಸಂಕ್ರಮಣ ಸಡಗರಕ್ಕೆ ಸುಗ್ಗಿ ಗೀತೆ
ರಾಮು ಮೂಲಗಿ ಜನಪದ ಗಾಯಕರು
ಬೆಳಿಗ್ಗೆ 11.30ಕ್ಕೆ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಮಿತ್ರಪಕ್ಷ ದೊಡ್ಡಣ್ಣ, ದೊಡ್ಡಪ್ಪನಂತೆ ವರ್ತಿಸಬಾರದು: ಟಿಎಂಸಿ

ನವದೆಹಲಿ (ಪಿಟಿಐ): 'ಗೋವಾದಲ್ಲಿ ಬಿಜೆಪಿಯನ್ನು ಸೋಲಿಸಲು ವಿರೋಧ ಪಕ್ಷಗಳ ಮಹಾಮೈತ್ರಿಕೂಟ ರಚಿಸುವುದನ್ನು ಟಿಎಂಸಿ ವಿರೋಧಿಸುವುದಿಲ್ಲ. ಆದರೆ ಯಾವ ಪಕ್ಷವೂ ದೊಡ್ಡಣ್ಣನ ರೀತಿಯಲ್ಲಿ ವರ್ತಿಸಬಾರದು' ಎಂದು ಗೋವಾ ಟಿಎಂಸಿ ಉಸ್ತುವಾರಿ ಸುಷ್ಮಿತಾ ದೇವ್ ಹೇಳಿದ್ದಾರೆ.

ಗೋವಾ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಮತ್ತು ಎನ್‌ಸಿಪಿ ಜತೆಗೆ ಟಿಎಂಸಿ ಮೈತ್ರಿ ಮಾಡಿಕೊಳ್ಳುತ್ತದೆ ಎಂಬುದರ ಬಗ್ಗೆ ವರದಿಯಾಗುತ್ತಿರುವ ವದಂತಿಗಳಿಗೆ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

'2017ರ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆದ ಪಕ್ಷವಾಗಿ ಹೊರಹೊಮ್ಮಿದರೂ, ಸರ್ಕಾರವನ್ನು ರಚಿಸುವಲ್ಲಿ ವಿಫಲವಾಯಿತು. ಐದು ವರ್ಷಗಳಾದರೂ ಕಾಂಗ್ರೆಸ್ ಈ ಬಗ್ಗೆ ಜನರಿಗೆ ಉತ್ತರ ನೀಡಿಲ್ಲ. ಜನರಿಗೆ ಬಿಜೆಪಿ ಬೇಡವಾಗಿದೆ. ಆದರೆ, ಕಾಂಗ್ರೆಸ್‌ನ ಬಗ್ಗೆ ಜನರಲ್ಲಿ ವಿಶ್ವಾಸವಿಲ್ಲ' ಎಂದು ಅವರು ಹೇಳಿದ್ದಾರೆ.

'ಇಂತಹ ಸ್ಥಿತಿಯಲ್ಲಿ ಟಿಎಂಸಿ ಇಲ್ಲಿ ಕಣಕ್ಕೆ ಇಳಿಯುತ್ತಿದೆ. ಆದರೆ ನಾವು ಇಲ್ಲಿ ಕಾಂಗ್ರೆಸ್ ಮತಗಳನ್ನು ಕಸಿಯುತ್ತೇವೆ ಎಂದು ಆ ಪಕ್ಷ ಆರೋಪಿಸುತ್ತಿದೆ. ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಿಜೆಪಿ ವಿರೋಧಿ ಪಕ್ಷಗಳನ್ನು ಕಾಂಗ್ರೆಸ್ ಕಸಿದುಕೊಂಡಿತ್ತು. ಇದರಿಂದಲೇ ಬಿಜೆಪಿ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವುದು ಸಾಧ್ಯವಾಯಿತು' ಎಂದು ಅವರು ಟೀಕಿಸಿದ್ದಾರೆ.

'ವಿರೋಧ ಪಕ್ಷಗಳ ಮಹಾಮೈತ್ರಿಕೂಟದಿಂದ ಬಹಳ ಪ್ರಯೋಜನವಿದೆ. ಆದರೆ, ಯಾವ ಪಕ್ಷದ ಜತೆಗೆ ಮೈತ್ರಿ ಮಾಡಿಕೊಳ್ಳುತ್ತೇವೆ ಎಂಬುದು ಮುಖ್ಯ. ಪ್ರಬಲವಾದ ಪಕ್ಷದ ಜತೆಗಷ್ಟೇ ಮೈತ್ರಿ ಮಾಡಿಕೊಳ್ಳಬೇಕು. ಕಾಂಗ್ರೆಸ್ ಆಗಿರಲಿ ಅಥವಾ ಬೇರೆ ಪಕ್ಷವೇ ಆಗಿರಲಿ. ಅದು ರಾಷ್ಟ್ರೀಯ ಪಕ್ಷವೇ ಆಗಿರಲಿ ಅಥವಾ ಪ್ರಾದೇಶಿಕ ಪಕ್ಷವೇ ಆಗಿರಲಿ. ಆ ಪಕ್ಷವು ತನ್ನ ಸಾಮರ್ಥ್ಯವನ್ನು ಅರಿತುಕೊಂಡು ವರ್ತಿಸಬೇಕು. ಇಲ್ಲಿ ಎಲ್ಲರ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಪರಿಗಣಿಸಬೇಕು' ಎಂದು ಅವರು ಹೇಳಿದ್ದಾರೆ.

'ಮೈತ್ರಿಕೂಟದ ಪಕ್ಷಗಳು ಸಮಾನ ಮನಸ್ಕವಾಗಿರಬೇಕು. ಇಲ್ಲಿ ಯಾವ ಪಕ್ಷಗಳೂ ದೊಡ್ಡಪ್ಪನಂತೆ ವರ್ತಿಸಬಾರದು' ಎಂದು ಅವರು ಹೇಳಿದ್ದಾರೆ.

ಸುಶ್ಮಿತಾ ದೇವ್

ದ್ವೇಷ ಭಾಷಣ: ಕೇಂದ್ರ ಸರ್ಕಾರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಹರಿದ್ವಾರ ಮತ್ತು ದೆಹಲಿಯಲ್ಲಿ ನಡೆದ ಎರಡು ಕಾರ್ಯಕ್ರಮಗಳಲ್ಲಿ ದ್ವೇಷಪೂರಿತ ಭಾಷಣ ಮಾಡಿದವರ ವಿರುದ್ಧ ತನಿಖೆ ಮತ್ತು ಕ್ರಮ ಕೈಗೊಳ್ಳಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಇತರರಿಂದ ವಿವರಣೆ ಕೇಳಿ ನೋಟಿಸ್ ಜಾರಿ ಮಾಡಿದೆ.

ದ್ವೇಷ ಭಾಷಣದ ಘಟನೆಗಳ ಕುರಿತಂತೆ ಎಸ್‌ಐಟಿಯಿಂದ 'ಸ್ವತಂತ್ರ, ವಿಶ್ವಾಸಾರ್ಹ ಮತ್ತು ನಿಷ್ಪಕ್ಷಪಾತ ತನಿಖೆ'ಗೆ ನಿರ್ದೇಶನವನ್ನು ಕೋರಿ ಪತ್ರಕರ್ತ ಕುರ್ಬಾನ್ ಅಲಿ ಮತ್ತು ಪಟ್ನಾ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶೆ ಮತ್ತು ಹಿರಿಯ ವಕೀಲೆ ಅಂಜನಾ ಪ್ರಕಾಶ್ ಅವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಎನ್‌ವಿ ರಮಣ ನೇತೃತ್ವದ ಪೀಠವು ಬುಧವಾರ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಿದೆ.

ಭವಿಷ್ಯದಲ್ಲಿ 'ಧರ್ಮ ಸಂಸದ್' ನಡೆಸುವುದಕ್ಕೆ ಅವಕಾಶ ನೀಡದಂತೆ ಸ್ಥಳೀಯಾಡಳಿತ ಸಂಸ್ಥೆಗಳನ್ನು ಒತ್ತಾಯಿಸುವುದಕ್ಕೆ ಸಹ ಅರ್ಜಿದಾರರಿಗೆ ಪೀಠ ಅವಕಾಶ ನೀಡಿತು.

ಪ್ರಕರಣದ ವಿಚಾರಣೆಯನ್ನು ಕೋರ್ಟ್ 10 ದಿನಗಳ ಕಾಲ ಮುಂದೂಡಿದೆ.

2021ರ ಡಿಸೆಂಬರ್ 17 ಮತ್ತು 19ರ ನಡುವೆ ಹರಿದ್ವಾರ ಮತ್ತು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಡಲಾಗಿದೆ ಎನ್ನಲಾದ ದ್ವೇಷ ಭಾಷಣಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿರುವ ಅರ್ಜಿದಾರರು, ಅಂತಹ ಭಾಷಣಗಳ ವಿರುದ್ಧ ಕ್ರಮಕ್ಕೆ ಸುಪ್ರೀಂ ಕೋರ್ಟ್ ನಿರ್ದಿಷ್ಟ ಮಾರ್ಗಸೂಚಿಗಳನ್ನು ಸೂಚಿಸುವಂತೆ ಕೋರಲಾಗಿದೆ.

ಒಂದು ಕಾರ್ಯಕ್ರಮವನ್ನು ಹರಿದ್ವಾರದಲ್ಲಿ ಯತಿ ನರಸಿಂಹಾನಂದ್ ಮತ್ತು ಇನ್ನೊಂದು ಕಾರ್ಯಕ್ರಮವನ್ನು ದೆಹಲಿಯಲ್ಲಿ 'ಹಿಂದೂ ಯುವ ವಾಹಿನಿ' ಆಯೋಜಿಸಿತ್ತು. ಅಲ್ಲಿ ಒಂದು ಸಮುದಾಯದ ಜನರ ನರಮೇಧಕ್ಕೆ ಕರೆ ನೀಡಲಾಗಿತ್ತು ಎಂಬ ಆರೋಪವಿದೆ.

‘ಚೀನಾ ಬೆದರಿಕೆ ಎದುರಿಸಲು ಗರಿಷ್ಠ ಸನ್ನದ್ಧತೆ’

ನರವಣೆ

ನವದೆಹಲಿ (ಪಿಟಿಐ): ‘ಪೂರ್ವ ಲಡಾಖ್ ಗಡಿಯಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯನ್ನು (ಪಿಎಲ್‌ಎ) ಎದುರಿಸಲು ಭಾರತೀಯ ಯೋಧರು ದೃಢನಿಶ್ಚಯದಿಂದ ಹೋರಾಡುವರು. ಯಾವುದೇ ಸಂದರ್ಭ ಎದುರಿಸಲು ಗರಿಷ್ಠ ಮಟ್ಟದ ಸನ್ನದ್ಧತೆ ಹೊಂದಲಾಗಿದೆ’ ಎಂದು ಸೇನೆ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಹೇಳಿದರು.

ಮುಂಬರುವ ‘ಸೇನೆ ದಿನ’ದ ಹಿನ್ನೆಲೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗಡಿಯಲ್ಲಿನ ಸಂಘರ್ಷ ಭಾಗಶಃ ಶಮನವಾಗಿದ್ದರೂ, ಅಪಾಯ ಇನ್ನೂ ಕಡಿಮೆಯಾಗಿಲ್ಲ’ ಎಂದರು.

‘ಬಿಕ್ಕಟ್ಟು ಶಮನ ಮಾಡುವ ನಿಟ್ಟಿನಲ್ಲಿ ಒಂದೆಡೆ ಚೀನಾ ಸೇನೆಯೊಂದಿಗೆ ಮಾತುಕತೆಯನ್ನು ಮುಂದುವರಿಸಲಾಗುತ್ತಿದೆ. ಇನ್ನೊಂದೆಡೆ ಯುದ್ಧ ಸನ್ನದ್ಧತೆಗೆ ಗಮನ ನೀಡಲಾಗಿದೆ’ ಎಂದು ಸ್ಪಷ್ಟಪಡಿಸಿದರು.

‘ಗಡಿಯಲ್ಲಿನ ಯಥಾಸ್ಥಿತಿಯನ್ನು ಏಕಪಕ್ಷೀಯವಾಗಿ ಬದಲಿಸಲು ಮುಂದಾಗಿದ್ದ ಚೀನಾ ಸೇನೆಗೆ ಭಾರತೀಯ ಯೋಧರು ಅತ್ಯಂತ ದಿಟ್ಟ ಪ್ರತ್ಯುತ್ತರ ನೀಡಿದರು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದೇಶದ ಉತ್ತರದ ಗಡಿಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ, ಮೇಲ್ದರ್ಜೆಗೇರಿಸಲು ಕೈಗೊಂಡ ಕ್ರಮಗಳ ಕುರಿತು ಪ್ರಸ್ತಾಪಿಸಿದ ಅವರು, ‘ಈ ವಿಷಯದಲ್ಲಿ ಸಮಗ್ರವಾದ ಯೋಜನೆ ರೂಪಿಸಿ, ಅನುಷ್ಠಾನಗೊಳಿಸಲಾಗುತ್ತಿದೆ’ ಎಂದರು.

ಇಸ್ರೊ ಅಧ್ಯಕ್ಷರಾಗಿ ಸೋಮನಾಥ್

ನವದೆಹಲಿ(ಪಿಟಿಐ): ಖ್ಯಾತ ರಾಕೆಟ್ ವಿಜ್ಞಾನಿ ಎಸ್.ಸೋಮನಾಥ್ ಅವರನ್ನು ಇಸ್ರೊ ಅಧ್ಯಕ್ಷ ಮತ್ತು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ ಕೇಂದ್ರ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಸೋಮನಾಥ್ ಅವರು ಪ್ರಸ್ತುತ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ (ವಿಎಸ್‌ಎಸ್‌ಸಿ) ನಿರ್ದೇಶಕರಾಗಿದ್ದಾರೆ. ಇಸ್ರೊ ಅಧ್ಯಕ್ಷರಾಗಿರುವ ಕೆ.ಶಿವನ್ ಅಧಿಕಾರ ಅವಧಿ ಇದೇ 14ರಂದು ಕೊನೆಗೊಳ್ಳಲಿದ್ದು ಅವರ ಉತ್ತರಾಧಿಕಾರಿಯಾಗಿ ಸೋಮನಾಥ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಸೋಮನಾಥ್ ಇಸ್ರೊದ 10ನೇ ಅಧ್ಯಕ್ಷರು. ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳವರೆಗೆ ಇವರ ಅವಧಿ ಇರುತ್ತದೆ. ಅಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದ ಅವಧಿ ವಿಸ್ತರಿಸಲು ಅವಕಾಶ ಇದೆ. ಸೋಮನಾಥ್ ಅವರು ಬಾಹ್ಯಾಕಾಶ ಆಯೋಗದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಲಿದ್ದಾರೆ.

ಭದ್ರತೆ ಲೋಪ: ತನಿಖಾ ಸಮಿತಿಗೆ ನ್ಯಾ. ಇಂದೂ ಮಲ್ಹೋತ್ರಾ ನೇತೃತ್ವ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 5ರಂದು ಪಂಜಾಬ್‌ಗೆ ಭೇಟಿ ನೀಡಿದ್ದಾಗ ಭದ್ರತೆಯಲ್ಲಿ ಉಂಟಾಗಿದ್ದ ಲೋಪದ ಬಗ್ಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಇಂದೂ ಮಲ್ಹೋತ್ರಾ ನೇತೃತ್ವದ ಐವರು ಸದಸ್ಯರ ತನಿಖಾ ಸಮಿತಿಯನ್ನು ಸುಪ್ರೀಂ ಕೋರ್ಟ್ ಬುಧವಾರ ರಚಿಸಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಮಹಾನಿರೀಕ್ಷಕ, ಚಂಡೀಗಡದ ಡಿಜಿಪಿ, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಮತ್ತು ಪಂಜಾಬ್‌ನ ಎಡಿಜಿಪಿ ಸಮಿತಿಯ ಇತರ ಸದಸ್ಯರಾಗಿರುತ್ತಾರೆ.

‘ಏಕ ಪಕ್ಷೀಯ ತನಿಖೆಯಲ್ಲಿ ಪ್ರಶ್ನೆಗಳು ಉಳಿಯಬಾರದು. ತನಿಖೆಯ ಮೇಲ್ವಿಚಾರಣೆಯಲ್ಲಿ ನ್ಯಾಯಾಂಗದಲ್ಲಿ ನುರಿತ ಮಿದುಳಿನ ಅಗತ್ಯವಿದೆ’ ಎಂದು ಸಮಿತಿಯನ್ನು ಪ್ರಕಟಿಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ತಿಳಿಸಿತು. ಪೀಠದಲ್ಲಿ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಇದ್ದರು.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.-15122021-231886
CG-DL-E-15122021-231886

असाधारण
EXTRAORDINARY

भाग II-खण्ड 3-उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 4831] नई दिल्ली, बुधवार, दिसम्बर 15, 2021/अग्रहायण 24, 1942
No. 4831] NEW DELHI, WEDNESDAY, DECEMBER 15, 2021/AGRAHAYANA 24, 1943

ಸಾರ್ವಜನಿಕ ಪ್ರಕಟಣೆ

(ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ, 1956 ಕಲಂ 3–ಜಿ(3)(4) ರಂತೆ)

ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956 (1956ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ತನ್ನ ಗೆಜೆಟ್ ಅಧಿಸೂಚನೆ ಸಂಖ್ಯೆ ಎಸ್.ಓ. 1899(ಇ) ದಿನಾಂಕ: 17.05.2021 ರಲ್ಲಿ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ, ಈ ಕೆಳಗೆ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ.275 ರಲ್ಲಿ ಕಿ.ಮೀ.99.5 ರಿಂದ ಕಿ.ಮೀ.223.860 (ಮೈಸೂರು – ಮಡಿಕೇರಿ ವಿಭಾಗ) ರವರೆಗೆ ರಸ್ತೆಯನ್ನು ನಿರ್ಮಾಣ ಮಾಡಲು (ಅಗಲಗೊಳಿಸಲು/4 ಪಥಗಳ ರಸ್ತೆ/ಅಭಿವೃದ್ಧಿಗೊಳಿಸುವುದು/ಸುಗುಮವಾಗಿ ನಿರ್ವಹಿಸುವುದು ಇತರೆ) ಸಂರಕ್ಷಣೆ, ಕಾರ್ಯನಿವರ್ಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ 3ಡಿ ಅಧಿಸೂಚನೆ ಹೊರಡಿಸಲಾಗಿದೆ.

ಆದಕಾರಣ ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956 (1956ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ನಿಯಮ 3ಜಿ ಉಪಕಲಂ (1) (2) (3) ಮತ್ತು (4) ಹಾಗೂ 1997ರ ತಿದ್ದುಪಡಿ ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ನಮೂದಿಸಿರುವ ಜಮೀನುದಾರರಿಗೆ ಹಾಗೂ ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ನೋಟೀಸ್ ನೀಡಲಾಗಿದೆ ಮತ್ತು ಈ ಮೂಲಕ ತಿಳಿಯಪಡಿಸುವುದೇನಂದರೆ. ಅನುಸೂಚಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಕಿ.ಮೀ.99.5 ರಿಂದ ಕಿ.ಮೀ.223.860 ರವರೆಗೆ ಕೇಂದ್ರ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿಗಧಿಪಡಿಸಿ ಪಾವತಿಸಲು ಜಮೀನಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅಂದರೆ ಮೂಲ ದಾಖಲೆಗಳಾದ ಕ್ರಯಪತ್ರ, ವಿಭಾಗ ಪತ್ರ, ಇತರೆ ಹಕ್ಕು ಪತ್ರಗಳು ಇತ್ತೀಚಿನ 3 ವರ್ಷದ ಪಹಣಿ ಪತ್ರಗಳು (ಆರ್.ಟಿ.ಸಿ), ಇತ್ತೀಚಿನ ಹಕ್ಕು ಬದಲಾವಣೆ ದಾಖಲೆ (ಮ್ಯೂಟೇಷನ್), ಕಂದಾಯ ಪಾವತಿಸಿದ ರಸೀದಿ, ನೋಂದಾವಣೆ ಇಲಾಖೆಯಲ್ಲಿ ನೀಡುವ 14 ವರ್ಷಗಳ ಋಣಭಾರ ಪತ್ರ (ಇ.ಸಿ), ವಂಶವೃಕ್ಷ, ಭೂಪರಿವರ್ತನಾ ಆದೇಶದ ದೃಢೀಕೃತ ಪ್ರತಿ ಮತ್ತು ಸ್ಕೆಚ್ ಇತರೆ ಅನ್ವಯವಾಗುವ ದಾಖಲೆಗಳು (ಈ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗಿದೆ) ಹಾಗೂ ಅಪೇಕ್ಷಿಸುವ ಪರಿಹಾರ ಧನ, (ಸೂಕ್ತ ಸಮರ್ಥನೆಯೊಂದಿಗೆ) ಈ ಪ್ರಕಟಣೆಯಲ್ಲಿ ನಮೂದಿಸಿರುವ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವಾಗಲೀ, ನಿಮ್ಮ ಅಧಿಕೃತ ಪ್ರತಿನಿಧಿಯ ಮೂಲಕವಾಗಲೀ ಅಥವಾ ಲೀಗಲ್ ಪ್ರಾಕ್ಟೀಷನರ್ ಮೂಲಕವಾಗಲೀ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಛೇರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ–275, ನಂ.984, ಮೊದಲನೇ ಮಹಡಿ, ಗೀತಾ ರಸ್ತೆ, ಚಾಮರಾಜಪುರಂ, ಮೈಸೂರು ಇಲ್ಲಿಗೆ ಸಲ್ಲಿಸತಕ್ಕದ್ದು.

ನಿಗದಿತ ಆವಧಿಯೊಳಗೆ ದಾಖಲೆಗಳನ್ನು ಸಕ್ಷಮ ಪ್ರಾಧಿಕಾರಿ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ–275, (ನಂ.984, ಮೊದಲನೇ ಮಹಡಿ, ಗೀತಾ ರಸ್ತೆ, ಚಾಮರಾಜಪುರಂ) ಮೈಸೂರು ಇವರಿಗೆ ಸಲ್ಲಿಸದೇ ಇದ್ದಲ್ಲಿ ಈ ಕಚೇರಿಯಲ್ಲಿ ಲಭ್ಯವಿರುವ ದಾಖಲೆಗಳ ಹಾಗೂ ಕಂದಾಯ ದಾಖಲೆಗಳ ಮೇರೆಗೆ ಭೂ ಪರಿಹಾರ ನಿಗಧಿಪಡಿಸಲಾಗುವುದು. ಈ ನೋಟಿಸು ಭೂಸ್ವಾಧೀನ ಬಾಧಿತರಿಗೆ ಮಾತ್ರ ಅನ್ವಯವಾಗುವುದು. ಒಂದೇ ಆರ್.ಟಿ.ಸಿಯಲ್ಲಿ ಹಲವಾರು ಭೂ ಮಾಲಿಕರುಗಳ ಹೆಸರುಗಳು ಇದ್ದಾಗ್ಯೂ ಈ ಕಚೇರಿಯಲ್ಲಿ ಲಭ್ಯವಿರುವ ಭೂಸ್ವಾಧೀನ ನಕಾಶೆಗಳನ್ನು ಪರಿಶೀಲಿಸಿ ಭೂಸ್ವಾಧೀನ ಬಾಧಿತರು ಮಾತ್ರವೇ ದಾಖಲೆಗಳನ್ನು ಸಲ್ಲಿಸತಕ್ಕದ್ದು. ಮತ್ತು ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.

ಕೆಳಗೆ ನಮೂದಿಸಿರುವ ಗ್ರಾಮಗಳಲ್ಲಿ ಯಾವುದಾದರೂ ಕೈ ಬಿಟ್ಟು ಹೋದ ಸರ್ವೆ ನಂಬರ್/ಹಿಸ್ಸಾ ನಂಬರ್‌ಗಳು ಕಂಡುಬಂದಲ್ಲಿ ಅಂತಹ ಸರ್ವೆ ನಂಬರ್/ಹಿಸ್ಸಾ ನಂಬರ್‌ಗಳಿಗೆ ಒಪ್ಪಿಗೆ ಕರಾರು ಅವಾರ್ಡ್ ನಿಗಧಿಪಡಿಸುವ ಸಂಬಂಧ ಕೆಳಗೆ ತಿಳಿಸಿರುವ ದಿನಾಂಕದಂದು ಸಭೆ ನಡೆಸಲಾಗುವುದು.

ಅಲ್ಲದೆ ಸದರಿ ಅಧಿಸೂಚನೆಯಂತೆ ಕೇಂದ್ರ ಸರ್ಕಾರದಲ್ಲಿ ವಿಹಿತವಾಗಿರುವ ಜಮೀನುಗಳಲ್ಲಿ ಇನ್ನು ಮುಂದೆ ಜಮೀನು ಅಭಿವೃದ್ಧಿಪಡಿಸುವುದಾಗಲೀ/ ಬೆಳೆಯನ್ನು ಬೆಳೆಯುವುದಾಗಲೀ ಮಾಡತಕ್ಕದ್ದಲ್ಲ. ಒಂದು ವೇಳೆ ಬೆಳೆಯನ್ನು ಬೆಳೆದರೆ/ಭೂಮಿ ಅಭಿವೃದ್ಧಿಪಡಿಸಿದರೆ ಅಂತಹ ಬೆಳೆಗೆ /ಅಭಿವೃದ್ಧಿಗೆ ಪರಿಹಾರ ನೀಡಲಾಗುವುದಿಲ್ಲ ಎಂದು ತಿಳಿಯಪಡಿಸಿದೆ.

ಕ್ರ. ಸಂ	ತಾಲ್ಲೂಕು ಮತ್ತು ಗ್ರಾಮಗಳ ಹೆಸರು	ವಿಚಾರಣೆ ದಿನಾಂಕ	ವಿಚಾರಣೆ ಸಮಯ	ಭೂಮಾಲೀಕರು/ಹಿತಾಸಕ್ತಿಯುಳ್ಳವರು ಹಾಜರಾಗಿ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ತಾಲ್ಲೂಕು: ಶ್ರೀರಂಗಪಟ್ಟಣ				ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳ ಕಛೇರಿ, ರಾಷ್ಟ್ರೀಯ ಹೆದ್ದಾರಿ–275 (ಮೈಸೂರು–ಮಡಿಕೇರಿ ವಿಭಾಗ) (ನಂ.984, ಮೊದಲನೇ ಮಹಡಿ, ಗೀತಾ ರಸ್ತೆ, ಚಾಮರಾಜಪುರಂ) ಮೈಸೂರು ದೂರವಾಣಿ: 0821–2333666
1	ಅವ್ವೇರೆಹಳ್ಳಿ (ಬೆ)	21.01.2022	ಬೆಳಗ್ಗೆ 11:00 ಗಂಟೆ	
2	ಬಿ. ಅಗ್ರಹಾರ			
3	ಬಲಮುರಿ (ಬೆ)			
4	ಬೆಳಗೊಳ			
5	ಹುಲಿಕೆರೆ			
6	ಕರಿಮಂಟಿ (ಬೆ)			
7	ಕೆಂಪಲಿಂಗಾಪುರ (ಬೆ)			
8	ಮಜ್ಜಿಗೆಪುರ			
9	ಪಾಲಹಳ್ಳಿ			

ಸಹಿ/– ಎ. ದೇವರಾಜು. ಕೆ.ಎ.ಎಸ್.,
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
ರಾಷ್ಟ್ರೀಯ ಹೆದ್ದಾರಿ–275, (ಮೈಸೂರು–ಮಡಿಕೇರಿ ವಿಭಾಗ) ಮೈಸೂರು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 15ನೇ ಡಿಸೆಂಬರ್ 2021

ಎಸ್.ಓ. 5212(ಇ).– ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಂ 275 ರಲ್ಲಿ ಕಿ.ಮೀ. 99.5 ರಿಂದ ಕಿ.ಮೀ. 223.860 ರವರೆಗೆ (ಮೈಸೂರು–ಮಡಿಕೇರಿ ವಿಭಾಗ) ಕಟ್ಟಡ ನಿರ್ಮಾಣ, (ಅಗಲೀಕರಣ, ನಾಲ್ಕು–ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿವರ್ಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ರ ಕಲಂ 3ಎ (1)ರ ಪ್ರಕಾರ (ಇನ್ನು ಮುಂದೆ ಮೇಲೆ ಉಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್ ಭಾಗ 2, ಸೆಕ್ಷನ್ 3 ಮತ್ತು ಸಬ್ ಸೆಕ್ಷನ್ (ii) ರಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಎಸ್.ಓ. 1899(ಇ) ದಿನಾಂಕ: 17ನೇ ಮೇ 2021 ಮೂಲಕ ಘೋಷಿಸಲಾಗಿತ್ತು.

ಈ ಕಾಯಿದೆ ಸೆಕ್ಷನ್ 3(ಎ)ರ ಸಬ್ ಸೆಕ್ಷನ್ 3ರಂತೆ ಅಧಿಸೂಚನೆಯನ್ನು ದಿ ಟೈಮ್ಸ್ ಆಫ್ ಇಂಡಿಯಾ ಮತ್ತು ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ದಿನಾಂಕ: 03ನೇ ಜೂನ್ 2021 ರಂದು ಪ್ರಕಟಿಸಲಾಗಿರುತ್ತದೆ.

ಈ ಪ್ರಕಾರ ತಕರಾರುಗಳು ಸ್ವೀಕೃತವಾಗಿದ್ದು ಅ ತಕರಾರುಗಳನ್ನು ಸಕ್ಷಮ ಪ್ರಾಧಿಕಾರಿವರು ಪರಿಗಣಿಸಿ ವಿಚಾರಣೆ ನಂತರ ಅರ್ಜಿಗಳನ್ನು ತಿರಸ್ಕರಿಸಿ ಅದೇಶ ಮಾಡಲಾಗಿರುತ್ತದೆ.

ಆದ್ದರಿಂದ ಈಗ ಕೇಂದ್ರ ಸರ್ಕಾರವು ಸಕ್ಷಮ ಪ್ರಾಧಿಕಾರಿಗಳ ವರದಿಯನ್ನು ಆಧರಿಸಿ ಸಬ್–ಸೆಕ್ಷನ್ 3ಡಿ (1) ರಲ್ಲಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ಹೇಳಲಾದ ಉದ್ದೇಶಕ್ಕೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಇನ್ನು ಮುಂದೆ ಇದೇ ಕಾಯ್ದೆ ಸೆಕ್ಷನ್ 3ಡಿ (2) ರಂತೆ ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಣೆಯಾದ ದಿನಾಂಕದಿಂದ ಅನ್ವಯವಾಗುವಂತೆ ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನುಗಳು ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ವಿಹಿತವಾಗಿದ್ದು, ಕೇಂದ್ರ ಸರ್ಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಘೋಷಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 275 (ಮೈಸೂರು–ಮಡಿಕೇರಿ ವಿಭಾಗ) ರಲ್ಲಿ ಕಿ.ಮೀ. 99.5 ರಿಂದ ಕಿ.ಮೀ. 223.860 ರವರೆಗೆ ರೂಪಿತಗಳ ಸಹಿತ ಅಥವಾ ರೂಪಿತಗಳ ರಹಿತ ಭೂಸ್ವಾಧೀನಗೊಳಿಸಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ

ರಾಜ್ಯ: ಕರ್ನಾಟಕ					ಜಿಲ್ಲೆ: ಮಂಡ್ಯ
ಕ್ರ. ಸಂ	ಸರ್ವೆ / ಪ್ಲಾಟ್ ನಂಬರ್	ಜಮೀನಿನ ತರಹೆ	ಜಮೀನಿನ ಸ್ವರೂಪ	ವಿಸ್ತೀರ್ಣ ಚದರ ಮೀಟರ್‌ಗಳಲ್ಲಿ	ಭೂಮಾಲೀಕರ ಹೆಸರು/ಹಿತಾಸಕ್ತಿ ಉಳ್ಳವರು
1	2	3	4	5	6
ತಾಲ್ಲೂಕು: ಶ್ರೀರಂಗಪಟ್ಟಣ					
ಗ್ರಾಮ: ಅವ್ವೇರೆಹಳ್ಳಿ (ಬೆ)					
1	47/11	ಖಾಸಗಿ	ಖುಷ್ಕಿ	0.0132	ಸಮರೆಡ್ಡಿ ದಿಲೀಪ್‌ರೆಡ್ಡಿ ಬಿನ್ ಬಾಲರೆಡ್ಡಿ 47/11
2	47/12	ಖಾಸಗಿ	ಖುಷ್ಕಿ	0.17	ಎಸ್ ಬಾಲರೆಡ್ಡಿ ಬಿನ್ ಲೇಟ್ ಎಸ್ ಸ್ವಾಮಿರೆಡ್ಡಿ 47/12
3	47/13	ಖಾಸಗಿ	ಖುಷ್ಕಿ	0.1638	ಎಸ್ ಬಾಲರೆಡ್ಡಿ ಬಿನ್ ಲೇಟ್ ಎಸ್ ಸ್ವಾಮಿರೆಡ್ಡಿ 47/13
4	ಸರ್ವೆ ನಂ 109 ಮತ್ತು 113ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0908	ಕರ್ನಾಟಕ ಸರ್ಕಾರ, ಸರ್ವೆ ನಂ 109 ಮತ್ತು 113ರ ಮಧ್ಯೆ ನಾಲಾ
5	ಸರ್ವೆ ನಂ 102 ಮತ್ತು 48,49 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.173	ಕರ್ನಾಟಕ ಸರ್ಕಾರ, ಸರ್ವೆ ನಂ 102 ಮತ್ತು 48,49 ರ ಮಧ್ಯೆ ರಸ್ತೆ
ಗ್ರಾಮ: ಬಿ.ಅಗ್ರಹಾರ					
6	ಸರ್ವೆ ನಂ 141, 140,139, 126, 127 ಮತ್ತು 129ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.4784	ಕರ್ನಾಟಕ ಸರ್ಕಾರ, ಸರ್ವೆ ನಂ 141, 140,139,126,127 ಮತ್ತು 129ರ ಮಧ್ಯೆ ನಾಲಾ
7	ಸರ್ವೆ ನಂ 216,129 ಮತ್ತು 215ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0884	ಕರ್ನಾಟಕ ಸರ್ಕಾರ, ಸರ್ವೆ ನಂ 216,129 ಮತ್ತು 215ರ ಮಧ್ಯೆ ನಾಲಾ
8	ಸರ್ವೆ ನಂ 232,226,234,239 ಮತ್ತು 241 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.8862	ಕರ್ನಾಟಕ ಸರ್ಕಾರ, ಸರ್ವೆ ನಂ 232,226,234,239 ಮತ್ತು 241 ರ ಮಧ್ಯೆ ರಸ್ತೆ
9	ಸರ್ವೆ ನಂ 246, 245 ಮತ್ತು 64 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.138	ಕರ್ನಾಟಕ ಸರ್ಕಾರ, ಸರ್ವೆ ನಂ 246,245 ಮತ್ತು 64 ರ ಮಧ್ಯೆ ರಸ್ತೆ
10	ಸರ್ವೆ ನಂ 61, 62 ಮತ್ತು 49 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.0763	ಕರ್ನಾಟಕ ಸರ್ಕಾರ, ಸರ್ವೆ ನಂ 61, 62 ಮತ್ತು 49 ರ ಮಧ್ಯೆ ರಸ್ತೆ
ಗ್ರಾಮ: ಬಲಮುರಿ (ಬೆ)					
11	ಸರ್ವೆ ನಂ 111 ಮತ್ತುಮಜ್ಜಿಗೆಪುರ ಗ್ರಾಮದ ಬೌಂಡರಿ ಮಧ್ಯೆ ನಾಲಾ	ಸರ್ಕಾರ	ನಾಲಾ	0.0193	ಕರ್ನಾಟಕ ಸರ್ಕಾರ, ಸರ್ವೆ ನಂ 111 ಮತ್ತುಮಜ್ಜಿಗೆಪುರ ಗ್ರಾಮದ ಬೌಂಡರಿ ಮಧ್ಯೆ ನಾಲಾ
ಗ್ರಾಮ: ಬೆಳಗೊಳ					
12	ಸರ್ವೆ ನಂ 187 ಮತ್ತು 186 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.0616	ಕರ್ನಾಟಕ ಸರ್ಕಾರ, ಸರ್ವೆ ನಂ 187 ಮತ್ತು 186 ರ ಮಧ್ಯೆ ಹಳ್ಳ
13	ಸರ್ವೆ ನಂ 475 ಮತ್ತು 493 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.0493	ಕರ್ನಾಟಕ ಸರ್ಕಾರ, ಸರ್ವೆ ನಂ 475 ಮತ್ತು 493 ರ ಮಧ್ಯೆ ಹಳ್ಳ
14	ಸರ್ವೆ ನಂ 508, 507, 526 ಮತ್ತು 529 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.1536	ಕರ್ನಾಟಕ ಸರ್ಕಾರ, ಸರ್ವೆ ನಂ 508,507,526 ಮತ್ತು 529 ರ ಮಧ್ಯೆ ಹಳ್ಳ
15	ಸರ್ವೆ ನಂ 173 ಮತ್ತು 184ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.2386	ಕರ್ನಾಟಕ ಸರ್ಕಾರ, ಸರ್ವೆ ನಂ 173 ಮತ್ತು 184ರ ಮಧ್ಯೆ ನಾಲಾ
16	ಸರ್ವೆ ನಂ 713, 712 ಮತ್ತು 659ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.2383	ಕರ್ನಾಟಕ ಸರ್ಕಾರ, ಸರ್ವೆ ನಂ 713,712 ಮತ್ತು 659ರ ಮಧ್ಯೆ ನಾಲಾ
17	ಸರ್ವೆ ನಂ 101 ಮತ್ತು 112ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.057	ಕರ್ನಾಟಕ ಸರ್ಕಾರ, ಸರ್ವೆ ನಂ 101 ಮತ್ತು 112ರ ಮಧ್ಯೆ ನಾಲಾ
18	ಸರ್ವೆ ನಂ 208 ಮತ್ತು 483ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.3214	ಕರ್ನಾಟಕ ಸರ್ಕಾರ, ಸರ್ವೆ ನಂ 208 ಮತ್ತು 483ರ ಮಧ್ಯೆ ನಾಲಾ
19	ಸರ್ವೆ ನಂ 527, 528, 718 ಮತ್ತು 719ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.2442	ಕರ್ನಾಟಕ ಸರ್ಕಾರ, ಸರ್ವೆ ನಂ 527,528,718 ಮತ್ತು 719ರ ಮಧ್ಯೆ ನಾಲಾ
20	ಸರ್ವೆ ನಂ 55 ಮತ್ತು 56ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0143	ಕರ್ನಾಟಕ ಸರ್ಕಾರ, ಸರ್ವೆ ನಂ 55 ಮತ್ತು 56ರ ಮಧ್ಯೆ ನಾಲಾ
21	ಸರ್ವೆ ನಂ 91 ಮತ್ತು 92ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0804	ಕರ್ನಾಟಕ ಸರ್ಕಾರ, ಸರ್ವೆ ನಂ 91 ಮತ್ತು 92ರ ಮಧ್ಯೆ ನಾಲಾ
22	ಸರ್ವೆ ನಂ 716 ಮತ್ತು 714ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.0545	ಕರ್ನಾಟಕ ಸರ್ಕಾರ, ಸರ್ವೆ ನಂ 716 ಮತ್ತು 714ರ ಮಧ್ಯೆ ರಸ್ತೆ
23	ಸರ್ವೆ ನಂ 111 ಮತ್ತು 176ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.0615	ಕರ್ನಾಟಕ ಸರ್ಕಾರ, ಸರ್ವೆ ನಂ 111 ಮತ್ತು 176ರ ಮಧ್ಯೆ ರಸ್ತೆ
24	ಸರ್ವೆ ನಂ 30, 62, 61, 60, 59 ರ ಬಲಮುರಿ ಮತ್ತು ಸರ್ವೆ ನಂ 1 ಮತ್ತು ಗ್ರಾಮತಾಣದ 176ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.4856	ಕರ್ನಾಟಕ ಸರ್ಕಾರ, ಸರ್ವೆ ನಂ 30,62,61,60,59 ರ ಬಲಮುರಿ ಮತ್ತು ಸರ್ವೆ ನಂ 1 ಮತ್ತು ಗ್ರಾಮತಾಣದ 176ರ ಮಧ್ಯೆ ರಸ್ತೆ
25	ಸರ್ವೆ ನಂ 92 ಮತ್ತು 97ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.0387	ಕರ್ನಾಟಕ ಸರ್ಕಾರ, ಸರ್ವೆ ನಂ 92 ಮತ್ತು 97ರ ಮಧ್ಯೆ ರಸ್ತೆ
ಗ್ರಾಮ: ಹುಲಿಕೆರೆ					
26	ಸರ್ವೆ ನಂ 40 ಮತ್ತು 27,39 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.2002	ಕರ್ನಾಟಕ ಸರ್ಕಾರ, ಸರ್ವೆ ನಂ 40 ಮತ್ತು 27,39 ರ ಮಧ್ಯೆ ಹಳ್ಳ
27	ಸರ್ವೆ ನಂ 41 ಮತ್ತು 34, 36, 37, 38 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.2276	ಕರ್ನಾಟಕ ಸರ್ಕಾರ, ಸರ್ವೆ ನಂ 41 ಮತ್ತು 34,36,37,38 ರ ಮಧ್ಯೆ ಹಳ್ಳ
28	ಸರ್ವೆ ನಂ 50 ಮತ್ತು 32, 33 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.1645	ಕರ್ನಾಟಕ ಸರ್ಕಾರ, ಸರ್ವೆ ನಂ 50 ಮತ್ತು 32,33 ರ ಮಧ್ಯೆ ಹಳ್ಳ
29	ಕೆ ಆರ್ ಸಾಗರದಿಂದ ಬೆಳಗೊಳ ರಸ್ತೆ	ಸರ್ಕಾರ	ರಸ್ತೆ	0.9278	ಕರ್ನಾಟಕ ಸರ್ಕಾರ, ಕೆ ಆರ್ ಸಾಗರದಿಂದ ಬೆಳಗೊಳ ರಸ್ತೆ
30	ಸರ್ವೆ ನಂ 54,50 ಮತ್ತು 51 ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.378	ಕರ್ನಾಟಕ ಸರ್ಕಾರ, ಸರ್ವೆ ನಂ 54,50 ಮತ್ತು 51 ರ ಮಧ್ಯೆ ನಾಲಾ
31	ಸರ್ವೆ ನಂ 137 ಮತ್ತು 57 ರ ಮಧ್ಯೆ ರೈಲ್ವೆ ಹಳಿ	ಸರ್ಕಾರ	ರೈಲ್ವೆ ಹಳಿ	0.244	ಸರ್ಕಾರ, ಸರ್ವೆ ನಂ 137 ಮತ್ತು 57 ರ ಮಧ್ಯೆ ರೈಲ್ವೆ ಹಳಿ
32	ಸರ್ವೆ ನಂ 57 ಮತ್ತು 55 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.1315	ಕರ್ನಾಟಕ ಸರ್ಕಾರ, ಸರ್ವೆ ನಂ 57 ಮತ್ತು 55 ರ ಮಧ್ಯೆ ರಸ್ತೆ
ಗ್ರಾಮ: ಕರಿಮಂಟಿ (ಬೆ)					
33	ಸರ್ವೆ ನಂ 136, 152, 154, 155 ಮತ್ತು 156ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.8389	ಕರ್ನಾಟಕ ಸರ್ಕಾರ, ಸರ್ವೆ ನಂ 136,152,154,155 ಮತ್ತು 156ರ ಮಧ್ಯೆ ನಾಲಾ
34	115ರ ಸರ್ವೆ ನಂ ನಲ್ಲಿ ನಾಲಾ	ಸರ್ಕಾರ	ನಾಲಾ	0.0607	ಕರ್ನಾಟಕ ಸರ್ಕಾರ, 115ರ ಸರ್ವೆ ನಂ ನಲ್ಲಿ ನಾಲಾ
35	215ರ ಸರ್ವೆ ನಂ ನಲ್ಲಿ ನಾಲಾ	ಸರ್ಕಾರ	ನಾಲಾ	0.0354	ಕರ್ನಾಟಕ ಸರ್ಕಾರ, 215ರ ಸರ್ವೆ ನಂ ನಲ್ಲಿ ನಾಲಾ
36	ಸರ್ವೆ ನಂ 173, 172, 170,156 ಮತ್ತು 155 ರ ಮಧ್ಯೆ ರೈಲ್ವೆ ಹಳಿ	ಸರ್ಕಾರ	ರೈಲ್ವೆ ಹಳಿ	0.0195	ಸರ್ಕಾರ, ಸರ್ವೆ ನಂ 173,172,170,156 ಮತ್ತು 155 ರ ಮಧ್ಯೆ ರೈಲ್ವೆ ಹಳಿ
37	ಸರ್ವೆ ನಂ 117,215 ಮತ್ತು 136 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.8242	ಕರ್ನಾಟಕ ಸರ್ಕಾರ, ಸರ್ವೆ ನಂ 117,215 ಮತ್ತು 136 ರ ಮಧ್ಯೆ ರಸ್ತೆ
ಗ್ರಾಮ: ಕೆಂಪಲಿಂಗಾಪುರ (ಬೆ)					
38	1 ರಸ್ತೆ	ಸರ್ಕಾರ	ರಸ್ತೆ	0.12	ಕರ್ನಾಟಕ ಸರ್ಕಾರ, ಸರ್ವೆ ನಂ 1 ರಸ್ತೆ
39	ಸರ್ವೆ ನಂ 130 ಮತ್ತು 131ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0618	ಕರ್ನಾಟಕ ಸರ್ಕಾರ, ಸರ್ವೆ ನಂ 130 ಮತ್ತು 131ರ ಮಧ್ಯೆ ನಾಲಾ
40	ಸರ್ವೆ ನಂ 122 ಮತ್ತು 91ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0802	ಕರ್ನಾಟಕ ಸರ್ಕಾರ, ಸರ್ವೆ ನಂ 122 ಮತ್ತು 91ರ ಮಧ್ಯೆ ನಾಲಾ
41	ಸರ್ವೆ ನಂ 126 ಮತ್ತು 125ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0095	ಕರ್ನಾಟಕ ಸರ್ಕಾರ, ಸರ್ವೆ ನಂ 126 ಮತ್ತು 125ರ ಮಧ್ಯೆ ನಾಲಾ
42	ಸರ್ವೆ ನಂ 51 ಮತ್ತು 124ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0665	ಕರ್ನಾಟಕ ಸರ್ಕಾರ, ಸರ್ವೆ ನಂ 51 ಮತ್ತು 124ರ ಮಧ್ಯೆ ನಾಲಾ
43	ಸರ್ವೆ ನಂ 87ಮತ್ತು 94ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.3858	ಕರ್ನಾಟಕ ಸರ್ಕಾರ, ಸರ್ವೆ ನಂ 87ಮತ್ತು 94ರ ಮಧ್ಯೆ ನಾಲಾ
44	ಸರ್ವೆ ನಂ 1, 2 ರ ಮತ್ತು ಸರ್ವೆ ನಂ 10 ಪಾಲಹಳ್ಳಿ ಮಧ್ಯೆ ನಾಲಾ	ಸರ್ಕಾರ	ನಾಲಾ	0.1843	ಕರ್ನಾಟಕ ಸರ್ಕಾರ, ಸರ್ವೆ ನಂ 1, 2 ರ ಮತ್ತು ಪಾಲಹಳ್ಳಿ ಸರ್ವೆ ನಂ 10 ಮಧ್ಯೆ ನಾಲಾ
45	ಬೆಳಗೊಳದ ಸರ್ವೆ ನಂ 661, 662 ಮತ್ತು ಕೆಂಪಲಿಂಗಪುರದ ಸರ್ವೆ ನಂ 81 ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.2142	ಕರ್ನಾಟಕ ಸರ್ಕಾರ, ಬೆಳಗೊಳದ ಸರ್ವೆ ನಂ 661, 662 ಮತ್ತು ಕೆಂಪಲಿಂಗಪುರದ ಸರ್ವೆ ನಂ 81 ರ ಮಧ್ಯೆ ನಾಲಾ
ಗ್ರಾಮ: ಮಜ್ಜಿಗೆಪುರ					
46	ಸರ್ವೆ ನಂ 99, 125, 51, 50, 96, 46, 132 ಮತ್ತು 47 ರ ಮಧ್ಯೆ ಹಳ್ಳ	ಸರ್ಕಾರ	ಹಳ್ಳ	0.3593	ಕರ್ನಾಟಕ ಸರ್ಕಾರ, ಸರ್ವೆ ನಂ 99,125,51,50,96,46,132 ಮತ್ತು 47 ರ ಮಧ್ಯೆ ಹಳ್ಳ
47	ಸರ್ವೆ ನಂ 65 ಮತ್ತು 116 ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.2821	ಕರ್ನಾಟಕ ಸರ್ಕಾರ, ಸರ್ವೆ ನಂ 65 ಮತ್ತು 116 ರ ಮಧ್ಯೆ ನಾಲಾ
48	ಸರ್ವೆ ನಂ 91 ಮತ್ತು 92 ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.4647	ಕರ್ನಾಟಕ ಸರ್ಕಾರ, ಸರ್ವೆ ನಂ 91 ಮತ್ತು 92 ರ ಮಧ್ಯೆ ನಾಲಾ
49	ಬಲಮುರಿ ಗ್ರಾಮದ ಗಡಿ ಮತ್ತು ಸರ್ವೆ ನಂ 93 ರ ಮಧ್ಯೆ ನಾಲಾ	ಸರ್ಕಾರ	ನಾಲಾ	0.0164	ಕರ್ನಾಟಕ ಸರ್ಕಾರ, ಬಲಮುರಿ ಗ್ರಾಮದ ಗಡಿ ಮತ್ತು ಸರ್ವೆ ನಂ 93 ರ ಮಧ್ಯೆ ನಾಲಾ
50	ಸರ್ವೆ ನಂ 67 ರಲ್ಲಿ ನಾಲಾ	ಸರ್ಕಾರ	ನಾಲಾ	0.005	ಕರ್ನಾಟಕ ಸರ್ಕಾರ, ಸರ್ವೆ ನಂ 67 ರಲ್ಲಿ ನಾಲಾ
51	ಸರ್ವೆ ನಂ 68 ರಲ್ಲಿ ನಾಲಾ	ಸರ್ಕಾರ	ನಾಲಾ	0.1087	ಕರ್ನಾಟಕ ಸರ್ಕಾರ, ಸರ್ವೆ ನಂ 68 ರಲ್ಲಿ ನಾಲಾ
52	ಸರ್ವೆ ನಂ 69 ರಲ್ಲಿ ನಾಲಾ	ಸರ್ಕಾರ	ನಾಲಾ	0.063	ಕರ್ನಾಟಕ ಸರ್ಕಾರ, ಸರ್ವೆ ನಂ 69 ರಲ್ಲಿ ನಾಲಾ
53	ಸರ್ವೆ ನಂ 84 ರಲ್ಲಿ ನಾಲಾ	ಸರ್ಕಾರ	ನಾಲಾ	0.01	ಕರ್ನಾಟಕ ಸರ್ಕಾರ, ಸರ್ವೆ ನಂ 84 ರಲ್ಲಿ ನಾಲಾ
54	ಸರ್ವೆ ನಂ 92 ರಲ್ಲಿ ನಾಲಾ	ಸರ್ಕಾರ	ನಾಲಾ	0.1012	ಕರ್ನಾಟಕ ಸರ್ಕಾರ, ಸರ್ವೆ ನಂ 92 ರಲ್ಲಿ ನಾಲಾ
55	ಸರ್ವೆ ನಂ 57 ರಲ್ಲಿ ಪೈಪ್‌ಲೇನ್	ಸರ್ಕಾರ	ಪೈಪ್‌ಲೇನ್	0.0552	ಕರ್ನಾಟಕ ಸರ್ಕಾರ, ಸರ್ವೆ ನಂ 57 ರಲ್ಲಿ ಪೈಪ್‌ಲೇನ್
56	ಸರ್ವೆ ನಂ 3 ಮತ್ತು 68ರ ಮಧ್ಯೆ ಪೂರ್ಣಯ್ಯ ನಾಲಾ	ಸರ್ಕಾರ	ನಾಲಾ	0.3228	ಕರ್ನಾಟಕ ಸರ್ಕಾರ, ಸರ್ವೆ ನಂ 3 ಮತ್ತು 68ರ ಮಧ್ಯೆ ಪೂರ್ಣಯ್ಯ ನಾಲಾ
57	ಸರ್ವೆ ನಂ 84 ಮತ್ತು 69 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.0483	ಕರ್ನಾಟಕ ಸರ್ಕಾರ, ಸರ್ವೆ ನಂ 84 ಮತ್ತು 69 ರ ಮಧ್ಯೆ ರಸ್ತೆ
ಗ್ರಾಮ: ಪಾಲಹಳ್ಳಿ					
58	ಸರ್ವೆ ನಂ 132 ಮತ್ತು 9 ರ ಮಧ್ಯೆ ರಸ್ತೆ	ಸರ್ಕಾರ	ರಸ್ತೆ	0.0664	ಕರ್ನಾಟಕ ಸರ್ಕಾರ, ಸರ್ವೆ ನಂ 132 ಮತ್ತು 9 ರ ಮಧ್ಯೆ ರಸ್ತೆ
ಒಟ್ಟು				11.4741	

[ಎಫ್.ನಂ.ಎನ್‌ಹೆಚ್‌ಎಐ/ಪಿಐಯು–ರಾಮನಗರ/14011/2018–19/ಎನ್‌ಹೆಚ್–275/3ಡಿ]
ರಾಜೇಶ್ ಗುಪ್ತ, ನಿರ್ದೇಶಕರು

ಇನ್ಫೊಸಿಸ್ ನಿವ್ವಳ ಲಾಭ ಶೇ 11.8ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಎರಡನೇ ಅತಿದೊಡ್ಡ ಐ.ಟಿ. ಕಂಪನಿ ಇನ್ಫೊಸಿಸ್, ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 5,809 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ನಿವ್ವಳ ಲಾಭವು ಶೇಕಡ 11.8ರಷ್ಟು ಹೆಚ್ಚಾಗಿದೆ.

ಹಿಂದಿನ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹ 5,197 ಕೋಟಿ ನಿವ್ವಳ ಲಾಭ ಗಳಿಸಿತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ವರಮಾನವು ₹ 25,927 ಕೋಟಿಯಿಂದ ₹ 31,867 ಕೋಟಿಗೆ (ಶೇ 22.9ರಷ್ಟು) ಹೆಚ್ಚಾಗಿದೆ ಎಂದು ಕಂಪನಿಯು ತಿಳಿಸಿದೆ.

ವಿಪ್ರೊ ಲಾಭ ಅಲ್ಪ ಹೆಚ್ಚಳ: ದೇಶದ ಪ್ರಮುಖ ಐ.ಟಿ. ಕಂಪನಿಗಳ ಪೈಕಿ ಒಂದಾಗಿರುವ ವಿಪ್ರೊ, ಮೂರನೇ ತ್ರೈಮಾಸಿಕದಲ್ಲಿ ₹ 2,969 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹ 2,968 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಕಾರ್ಯಾಚರಣೆ ವರಮಾನವು ₹ 15,670 ಕೋಟಿಯಿಂದ ₹ 20,313 ಕೋಟಿಗೆ (ಶೇ 29.6ರಷ್ಟು) ಹೆಚ್ಚಾಗಿದೆ. ಕಂಪನಿಯು ಪ್ರತಿ ಷೇರಿಗೆ ₹ 1ರ ಮಧ್ಯಂತರ ಲಾಭಾಂಶ ಘೋಷಿಸಿದೆ.

ಕಂಪನಿಯು ಮೂರನೇ ತ್ರೈಮಾಸಿಕದಲ್ಲಿ ಹೊಸದಾಗಿ 10,306 ಉದ್ಯೋಗಿಗಳನ್ನು ನೇಮಿಸಿಕೊಂಡಿದ್ದು, ಇದರಿಂದಾಗಿ ಒಟ್ಟು ಉದ್ಯೋಗಿಗಳ ಸಂಖ್ಯೆಯು 2.31 ಲಕ್ಷಕ್ಕೆ ಏರಿಕೆ ಆಗಿದೆ.

ಟಿಸಿಎಸ್ ಲಾಭ ಶೇ 12ರಷ್ಟು ಏರಿಕೆ

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯ ನಿವ್ವಳ ಲಾಭ ₹ 9,679 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿದ್ದ ಲಾಭಕ್ಕೆ ಹೋಲಿಸಿದರೆ ಶೇ 12.2ರಷ್ಟು ಹೆಚ್ಚಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭ ₹ 8,701 ಕೋಟಿಯಷ್ಟು ಇತ್ತು.

ಕಂಪನಿಯ ವರಮಾನ ₹ 42,015 ಕೋಟಿಯಿಂದ ₹ 48,885 ಕೋಟಿಗೆ (ಶೇ 16.3ರಷ್ಟು) ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ₹ 18 ಸಾವಿರ ಕೋಟಿ ಮೊತ್ತದ ಷೇರು ಮರುಖರೀದಿಗೆ ಕಂಪನಿಯ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ. ಪ್ರತಿ ಷೇರಿಗೆ ₹ 7 ರಂತೆ ಲಾಭಾಂಶ ಘೋಷಿಸಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ 34 ಸಾವಿರ ಪದವೀಧರರಿಗೆ ಉದ್ಯೋಗ ನೀಡಿದ್ದು, ಇದರಿಂದಾಗಿ ಒಟ್ಟು ಉದ್ಯೋಗಿಗಳ ಸಂಖ್ಯೆಯು 5.56 ಲಕ್ಷಕ್ಕೆ ಏರಿಕೆ ಆಗಿದೆ. ಕಂಪನಿ ತೊರೆಯುತ್ತಿರುವವ ಪ್ರಮಾಣವು ಮೂರನೇ ತ್ರೈಮಾಸಿಕದಲ್ಲಿ ಶೇ 15.3ರಷ್ಟು ಇದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು ▲533



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,053
ಇಂದಿನ ಅಂತ್ಯ	18,212
▲	156
ದಿನದ ಗರಿಷ್ಠ	18,227

ವಿನಿಮಯ ದರ

$ ಡಾಲರ್	73.93
£ ಪೌಂಡ್	100.80
€ ಯುರೊ	84.07
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1330)
ಸೋಯಾ (ರಿಫೈನ್ಡ್)	₹1205 (1205)
ಸೂರ್ಯಕಾಂತಿ (ರಿಫೈನ್ಡ್)	₹1240 (1240)
ಪಾಮೋಲಿನ್	₹1167 (1165)

ಚಿನ್ನ ₹ 228, ಬೆಳ್ಳಿ ₹ 271 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ. 10 ಗ್ರಾಂ ಚಿನ್ನದ ಬೆಲೆಯು ₹ 228ರಷ್ಟು ಹೆಚ್ಚಾಗಿ ₹ 46,812ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ದರವು ಕೆ.ಜಿ.ಗೆ ₹ 271ರಷ್ಟು ಏರಿಕೆ ಕಂಡು ₹ 59,932ಕ್ಕೆ ತಲುಪಿದೆ.

ವೊಡಾಫೋನ್ ಸಮೂಹ, ಆದಿತ್ಯ ಬಿರ್ಲಾ ಸಮೂಹ ಮುನ್ನಡೆಸಲಿವೆ: ಟಕ್ಕರ್

‘ವಿಐಎಲ್ ಆಡಳಿತ ನಿರ್ವಹಣೆ: ಕೇಂದ್ರ ಸರ್ಕಾರಕ್ಕಿಲ್ಲ ಆಸಕ್ತಿ’

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಕಂಪನಿಯನ್ನು ಮುನ್ನಡೆಸುವ ಹೊಣೆ ಹೊತ್ತುಕೊಳ್ಳುವ ಬಯಕೆ ತನಗಿಲ್ಲ ಎಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ ಎಂದು ವಿಐಎಲ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ರವೀಂದರ್ ಟಕ್ಕರ್ ಹೇಳಿದರು. ಪ್ರವರ್ತಕರಾದ ವೊಡಾಫೋನ್ ಸಮೂಹ ಮತ್ತು ಆದಿತ್ಯ ಬಿರ್ಲಾ ಸಮೂಹ ಕಂಪನಿಯನ್ನು ಮುನ್ನಡೆಸಲಿವೆ ಎಂದು ಅವರು ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ ಪಾವತಿಸಬೇಕಿರುವ ಬಡ್ಡಿಯ ಮೊತ್ತವಾದ ₹ 16 ಸಾವಿರ ಕೋಟಿಯ ಬದಲು ಅಷ್ಟು ಮೌಲ್ಯದ ಷೇರುಗಳನ್ನು ನೀಡಲು ವಿಐಎಲ್ ಮಂಗಳವಾರ ತೀರ್ಮಾನಿಸಿದೆ. ಅಷ್ಟು ಷೇರುಗಳನ್ನು ನೀಡಿದನಂತರದಲ್ಲಿ ಕೇಂದ್ರ ಸರ್ಕಾರವು ವಿಐಎಲ್‌ನ ಅತಿದೊಡ್ಡ ಷೇರುದಾರ ಆಗಲಿದೆ.

ಬುಧವಾರ ಸುದ್ದಿಗೋಷ್ಠಿ ನಡೆಸಿದ ಟಕ್ಕರ್, ‘ದೂರಸಂಪರ್ಕ ಸೇವಾ ವಲಯದಲ್ಲಿ ಮೂರು ಖಾಸಗಿ ಕಂಪನಿಗಳು ಇರಬೇಕು ಎಂಬುದು ಸರ್ಕಾರದ ಬಯಕೆ. ಈ ಕ್ಷೇತ್ರದಲ್ಲಿ ಏಕಸ್ವಾಮ್ಯ ಸೃಷ್ಟಿಯಾಗುವುದು ಅಥವಾ ಎರಡೇ ಕಂಪನಿಗಳ ಪಾರಮ್ಯ ಇರುವುದನ್ನು ಸರ್ಕಾರ ಬಯಸುತ್ತಿಲ್ಲ’ ಎಂದು ವಿವರಿಸಿದರು. ಕೇಂದ್ರ ಸರ್ಕಾರಕ್ಕೆ ಷೇರುಗಳನ್ನು ವರ್ಗಾಯಿಸುವ ಪ್ರಕ್ರಿಯೆಯು ಮುಂದಿನ ತಿಂಗಳುಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದರು.

ಕಂಪನಿಯು ಪಾವತಿಸಬೇಕಿರುವ ಸಾಲದಲ್ಲಿ ಹೆಚ್ಚಿನ ಪಾಲು ಕೇಂದ್ರ ಸರ್ಕಾರಕ್ಕೆ ಸೇರಿದ್ದು, ಹಾಗಾಗಿ, ಸಾಲದಲ್ಲಿ ಒಂದಿಷ್ಟು ಮೊತ್ತವನ್ನು ಷೇರುಗಳನ್ನಾಗಿ ಪರಿವರ್ತಿಸುವುದು ಸಾಲದ ಹೊರೆ ಇಳಿಸಿಕೊಳ್ಳಲು ಉತ್ತಮ ಮಾರ್ಗವಾಗಿತ್ತು ಎಂದು ಅವರು ಕಂಪನಿಯ ತೀರ್ಮಾನದ ಕುರಿತು ವಿವರಿಸಿದರು.

ದೂರಸಂಪರ್ಕ ವಲಯದಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿದ ಸುಧಾರಣಾ ಕ್ರಮಗಳು ಹೂಡಿಕೆದಾರರಲ್ಲಿ ಇದ್ದ ಆತಂಕವನ್ನು ತಗ್ಗಿಸುವಲ್ಲಿ ನೆರವಾಗಿವೆ ಎಂದರು. ‘ಹಲವು ತಿಂಗಳುಗಳಿಂದ ನಾವು ಹೂಡಿಕೆದಾರರ ಜೊತೆ ಸಮಾಲೋಚನೆಯಲ್ಲಿ ಇದ್ದೇವೆ. ಭಾರತದಲ್ಲಿ ಹೂಡಿಕೆ ಮಾಡುವ ವಿಚಾರದಲ್ಲಿ ಹೂಡಿಕೆದಾರರಲ್ಲಿ, ಅದರಲ್ಲೂ ಮುಖ್ಯವಾಗಿ ಅಂತರರಾಷ್ಟ್ರೀಯ ಹೂಡಿಕೆದಾರರಲ್ಲಿ, ದೊಡ್ಡ ಮಟ್ಟದ ವಿಶ್ವಾಸ ಇದೆ ಎಂಬುದನ್ನು ನಾನು ಖಚಿತವಾಗಿ ಹೇಳಬಲ್ಲೆ. ದೂರಸಂಪರ್ಕ ಕ್ಷೇತ್ರದಲ್ಲಿ ಹೂಡಿಕೆಗೂ ಅವರು ಆಸಕ್ತಿ ತೋರಿದ್ದಾರೆ’ ಎಂದು ತಿಳಿಸಿದರು.

‘ಸರ್ಕಾರ ಹೂಡಿಕೆದಾರ ಮಾತ್ರ’

ನವದೆಹಲಿ (ಪಿಟಿಐ): ‘ಖಾಸಗಿ ದೂರಸಂಪರ್ಕ ಕಂಪನಿಗಳಲ್ಲಿ ಕೇಂದ್ರ ಸರ್ಕಾರವು ಹೂಡಿಕೆದಾರ ಆಗಿ ಮಾತ್ರವೇ ಇರಲಿದೆ. ಕಂಪನಿಗಳನ್ನು ವೃತ್ತಿಪರರೇ ಮುನ್ನಡೆಸಲಿದ್ದಾರೆ. ಬಾಕಿ ಸಾಲವನ್ನು ಆಯಾ ಕಂಪನಿಗಳೇ ಮರುಪಾವತಿ ಮಾಡಲಿವೆ’ ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಸ್ಪಷ್ಟಪಡಿಸಿದ್ದಾರೆ.

ಕೇಂದ್ರ ಸರ್ಕಾರವು ದೂರಸಂಪರ್ಕ ಕಂಪನಿಗಳಿಗೆ ನೆರವಿನ ಹಸ್ತವನ್ನು ಚಾಚಿದೆ. ಈ ವಲಯದ ಕಂಪನಿಗಳ ಮೇಲಿನ ಹೊರೆಯನ್ನು ತಗ್ಗಿಸುವ, ಅಲ್ಲಿನ ಉದ್ಯೋಗವನ್ನು ರಕ್ಷಿಸುವ ಉದ್ದೇಶದಿಂದ ಹೀಗೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ‘ಸೂಕ್ತ ಸಂದರ್ಭದಲ್ಲಿ ನಾವು ಕಂಪನಿಗಳಿಂದ ಹೊರಬರಲಿದ್ದೇವೆ. ಕಂಪನಿಗಳ ದಿನನಿತ್ಯದ ವಹಿವಾಟುಗಳಲ್ಲಿ ಸರ್ಕಾರವು ಮಧ್ಯಪ್ರವೇಶ ಮಾಡುವುದಿಲ್ಲ’ ಎಂದು ವೈಷ್ಣವ್ ತಿಳಿಸಿದ್ದಾರೆ.

100 ಡಾಲರ್‌ಗೆ ಕಚ್ಚಾ ತೈಲ ಬೆಲೆ?

ಲಂಡನ್ (ರಾಯಿಟರ್ಸ್): 2021ರಲ್ಲಿ ಶೇಕಡ 50ರಷ್ಟು ಹೆಚ್ಚಳ ಕಂಡ ಕಚ್ಚಾ ತೈಲದ ಬೆಲೆಯು ಈ ವರ್ಷದಲ್ಲಿಯೂ ಇನ್ನಷ್ಟು ಏರಿಕೆ ಕಾಣಬಹುದು ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉತ್ಪಾದನಾ ಸಾಮರ್ಥ್ಯ ಹೆಚ್ಚಾಗದಿರುವುದು ಮತ್ತು ಈ ವಲಯದಲ್ಲಿ ಹೂಡಿಕೆ ಸೀಮಿತ ಆಗಿರುವ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 100 ಡಾಲರ್‌ಗಿಂತಲೂ ಜಾಸ್ತಿ ಆಗಬಹುದು ಎಂದು ಅವರು ಅಂದಾಜಿಸಿದ್ದಾರೆ.

ಓಮೈಕ್ರಾನ್ ಕಾರಣದಿಂದಾಗಿ ಕೋವಿಡ್ ಪ್ರಕರಣಗಳು ಜಗತ್ತಿನ ಹಲವೆಡೆ ಹೆಚ್ಚಾಗುತ್ತಿದ್ದರೂ, ಹಲವು ದೇಶಗಳಲ್ಲಿ ಕಠಿಣ ನಿರ್ಬಂಧಗಳನ್ನು ಜಾರಿಗೆ ತರುತ್ತಿಲ್ಲ. ಇದು ತೈಲ ಬೆಲೆ ಹೆಚ್ಚಳಕ್ಕೆ ನೆರವಾಗಬಹುದು ಎನ್ನಲಾಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬುಧವಾರ ಪ್ರತಿ ಬ್ಯಾರಲ್‌ಗೆ 84 ಡಾಲರ್‌ಗೆ ತಲುಪಿದೆ. ಇದು ಎರಡು ತಿಂಗಳ ಗರಿಷ್ಠ ಮಟ್ಟ.

ಪೆಟ್ರೋಲಿಯಂ ಉತ್ಪನ್ನಗಳ ರಫ್ತುದಾರ ದೇಶಗಳ ಒಕ್ಕೂಟ ಮತ್ತು ಆ ಒಕ್ಕೂಟದ ಮಿತ್ರರಾಷ್ಟ್ರಗಳು (ಒಪೆಕ್ +) ಕಚ್ಚಾ ತೈಲದ ಉತ್ಪಾದನೆ ಮೇಲೆ ವಿಧಿಸಿದ್ದ ನಿರ್ಬಂಧಗಳನ್ನು ಹಂತಹಂತವಾಗಿ ಸಡಿಲಗೊಳಿಸುತ್ತಿವೆ. ಆದರೆ ಕೆಲವು ಸಣ್ಣ ಉತ್ಪಾದಕರಿಗೆ ಉತ್ಪಾದನೆ ಹೆಚ್ಚಿಸುವ ಸಾಮರ್ಥ್ಯ ಇಲ್ಲ. ‘ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 100 ಡಾಲರ್ ಆಗುವುದು ನಮಗೆ ಬೇಕಿಲ್ಲ. ಆ ಬೆಲೆಯನ್ನು ನಿಭಾಯಿಸಲು ವಿಶ್ವದ ಇನ್ನೂ ಸಜ್ಜಾಗಿಲ್ಲ’ ಎಂದು ಒಮಾನ್ ದೇಶದ ಇಂಧನ ಸಚಿವ ಮೊಹಮ್ಮದ್ ಅಲ್ ರುಮಿ ಹೇಳಿದ್ದಾರೆ.

ಹಣದುಬ್ಬರ ಹೆಚ್ಚಳ, ಕೈಗಾರಿಕೆ ಉತ್ಪಾದನೆ ಇಳಿಕೆ

ಒಂದನೇ ಪುಟದಿಂದ

ಡಿಸೆಂಬರ್‌ನಲ್ಲಿ ಆಹಾರ ಪದಾರ್ಥಗಳ ಹಣದುಬ್ಬರ ಪ್ರಮಾಣವು ಶೇ 4ಕ್ಕಿಂತ ಜಾಸ್ತಿ ಆಗಿದೆ. ನವೆಂಬರ್‌ನಲ್ಲಿ ಇದು ಶೇ 1.9ರಷ್ಟು ಇತ್ತು.

ಕೈಗಾರಿಕಾ ಉತ್ಪಾದನೆ ಇಳಿಕೆ: ನವೆಂಬರ್ ತಿಂಗಳಿನಲ್ಲಿ ದೇಶದಲ್ಲಿನ ಕೈಗಾರಿಕಾ ಉತ್ಪಾದನೆಯು ಒಂಬತ್ತು ತಿಂಗಳ ಕನಿಷ್ಠ ಮಟ್ಟವಾದ ಶೇ 1.4ಕ್ಕೆ ಇಳಿಕೆಯಾಗಿದೆ. ಅಕ್ಟೋಬರ್‌ನಲ್ಲಿ ಇದು ಶೇ 3.2ರಷ್ಟು ಇತ್ತು.

ಕಿಸೆಗೆ ಭಾರವಾದ ಕೆಲವು ವಸ್ತುಗಳು

24.32%	ಎಣ್ಣೆ ಮತ್ತು ಕೊಬ್ಬು
8.17%	ಪಾನೀಯ (ಮದ್ಯ ಹೊರತುಪಡಿಸಿ)
6.58%	ಸಿದ್ಧಪಡಿಸಿದ ಊಟ, ಕುರುಕಲು, ಸಿಹಿತಿನಿಸು
8.36%	ಬಟ್ಟೆ
8.62%	ಪಾದರಕ್ಷೆ
9.6%	ಸಾರಿಗೆ, ಸಂಪರ್ಕ

ಡಿಸೆಂಬರ್ ತಿಂಗಳಲ್ಲಿ ಆದ ಹಣದುಬ್ಬರ ಹೆಚ್ಚಳ

ನಾಲ್ಕನೇ ದಿನವೂ ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರು ಪೇಟೆಗಳಲ್ಲಿ ಸತತ ನಾಲ್ಕನೇ ದಿನವೂ ಸಕಾರಾತ್ಮಕ ವಹಿವಾಟು ಮುಂದುವರಿದಿದೆ. ಕಂಪನಿಗಳ ತ್ರೈಮಾಸಿಕ ಫಲಿತಾಂಶ ಉತ್ತಮವಾಗಿರುವ ನಿರೀಕ್ಷೆಯಿಂದ ಹೂಡಿಕೆದಾರರು ವಹಿವಾಟು ನಡೆಸಿದರು. ಇದರಿಂದಾಗಿ ಸೂಚ್ಯಂಕಗಳು ಏರಿಕೆ ಕಾಣುವಂತಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 533 ಅಂಶ ಜಿಗಿತ ಕಂಡು 61,150 ಅಂಶಗಳಿಗೆ ತಲುಪಿತು. ಮಧ್ಯಂತರ ವಹಿವಾಟಿನಲ್ಲಿ 61,218 ಅಂಶಗಳ ಗರಿಷ್ಠ ಮಟ್ಟವನ್ನು ತಲುಪಿತ್ತು. ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಬಂಡವಾಳ ಮೌಲ್ಯವು ದಾಖಲೆಯ ₹ 277.22 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 156 ಅಂಶ ಏರಿಕೆ ಕಂಡು 18,212 ಅಂಶಗಳಿಗೆ ತಲುಪಿತು.

ರಿಯಲ್ ಎಸ್ಟೇಟ್ ವಲಯದ ವಹಿವಾಟು ಉತ್ತಮವಾಗಿದ್ದು, ಮುನ್ನೋಟ ಸಹ ಆಶಾದಾಯಕ ಆಗಿರುವ ನಿರೀಕ್ಷೆ ವ್ಯಕ್ತವಾಗಿದೆ. ಹೀಗಾಗಿ ಆ ವಲಯದ ಕಂಪನಿಗಳ ಷೇರುಗಳ ಮೌಲ್ಯ ಹೆಚ್ಚಾಯಿತು. ಪ್ರಮುಖ ಐ.ಟಿ. ಕಂಪನಿಗಳ ತ್ರೈಮಾಸಿಕ ಆರ್ಥಿಕ ಸಾಧನೆಯು ಮುಂಬರುವ ದಿನಗಳಲ್ಲಿ ಸೂಚ್ಯಂಕಗಳ ಚಲನೆಯನ್ನು ನಿರ್ಧರಿಸಲಿವೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೆನ್ಸೆಕ್ಸ್‌ನಲ್ಲಿ ಮಹೀಂದ್ರ, ಭಾರ್ತಿ ಏರ್‌ಟೆಲ್, ರಿಲಯನ್ಸ್ ಇಂಡಸ್ಟ್ರೀಸ್, ಇಂಡಸ್‌ಇಂಡ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಟಾಟಾ ಸ್ಟೀಲ್ ಷೇರುಗಳ ಮೌಲ್ಯವು ಶೇ 4.68ರವರೆಗೆ ಏರಿಕೆ ಆಗಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 1 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 73.93ರಂತೆ ವಿನಿಮಯಗೊಂಡಿತು. ಬ್ರೆಂಟ್ ಕಚ್ಚಾ ತೈಲ ದರವು ಶೇ 0.13ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 83.61 ಡಾಲರ್‌ಗಳಿಗೆ ತಲುಪಿತು.

ನಬಾರ್ಡ್: ಆದ್ಯತಾ ಸಾಲ ವರದಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–23ನೇ ಸಾಲಿಗೆ ರಾಜ್ಯದ ಆದ್ಯತಾ ವಲಯದ ಸಾಲದ ಪ್ರಮಾಣವನ್ನು ₹ 3.32 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಕರ್ನಾಟಕ ಪ್ರಾದೇಶಿಕ ಕಚೇರಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಆದ್ಯತಾ ವಲಯಗಳಿಗೆ ಅಗತ್ಯವಿರುವ ಹಣಕಾಸು ನೆರವಿನ ಕುರಿತ ಆದ್ಯತಾ ಪತ್ರವನ್ನು ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ವಂದಿತ ಶರ್ಮ ಬಿಡುಗಡೆ ಮಾಡಿದರು.

ಒಟ್ಟಾರೆ ಮೊತ್ತದಲ್ಲಿ ಕೃಷಿ ವಲಯ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ₹ 1.61 ಲಕ್ಷ ಕೋಟಿ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ₹ 1.28 ಲಕ್ಷ ಕೋಟಿ ಸಾಲ ನಿಗದಿಪಡಿಸಲಾಗಿದೆ.

‘ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಸರ್ಕಾರದ ಇಲಾಖೆಗಳ ಸಮನ್ವಯದ ಪ್ರಯತ್ನಗಳಿಂದ ರೈತ ಉತ್ಪಾದಕ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಉತ್ತಮ ಬದಲಾವಣೆ ಕಾಣುವ ಮತ್ತು ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿಸುವ ವಿಶ್ವಾಸ ಇದೆ’ ಎಂದು ವಂದಿತ ಶರ್ಮಾ ಹೇಳಿದರು.

‘ಬ್ಯಾಂಕುಗಳ ಸಾಲ ನೀಡಿಕೆಗೆ ಬೆಂಬಲ ನೀಡುವಲ್ಲಿ ರಾಜ್ಯವು ಮುಂಚೂಣಿಯಲ್ಲಿದೆ’ ಎಂದು ನಬಾರ್ಡ್‌ನ ಮುಖ್ಯ ಮಹಾ ವ್ಯವಸ್ಥಾಪಕ ನೀರಜ್ ಕುಮಾರ್ ವರ್ಮಾ ಹೇಳಿದರು.

ಇರಾನಿ ಸೇಬು ಅಕ್ರಮ ಆಮದು ನಿಷೇಧಿಸಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಇರಾನಿನಿಂದ ಸೇಬನ್ನು ಅಕ್ರಮವಾಗಿ ಆಮದು ಮಾಡಿಕೊಂಡು ದೇಶೀಯ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಮಾರಾಟ ಮಾಡುತ್ತಿರುವ ಪರಿಣಾಮ ಕಾಶ್ಮೀರದ ಸೇಬು ಬೆಳೆಗಾರರು ಹಾಗೂ ವರ್ತಕರಿಗೆ ಭಾರಿ ಪ್ರಮಾಣದ ನಷ್ಟ ಉಂಟಾಗುತ್ತಿದೆ. ಹಾಗಾಗಿ ಇರಾನಿನ ಸೇಬು ಆಮದು ನಿಷೇಧಿಸುವಂತೆ ಕಾಶ್ಮೀರ ಸೇಬು ಬೆಳೆಗಾರರು ಹಾಗೂ ಮಾರಾಟಗಾರ ಒಕ್ಕೂಟ ಒತ್ತಾಯಿಸಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕಾಶ್ಮೀರ ಸೇಬು ಬೆಳೆಗಾರರು ಮಾರಾಟಗಾರರ ಒಕ್ಕೂಟದ ಅಧ್ಯಕ್ಷ ಬಶೀರ್ ಅಹ್ಮದ್ ಬಶೀರ್, ‘ಅಕ್ರಮವಾಗಿ ಇರಾನಿನಿಂದ ಬರುವ ಸೇಬಿನಿಂದ ಕಾಶ್ಮೀರದ ಸೇಬಿನ ಮಾರುಕಟ್ಟೆಗೆ ತೀವ್ರ ಹೊಡೆತ ಬಿದ್ದಿದೆ. ಹಾಗಾಗಿ ಭಾರತದ ಮಾರುಕಟ್ಟೆಗೆ ಇರಾನಿ ಸೇಬುಗಳನ್ನು ಅಮದು ಮಾಡಿಕೊಳ್ಳಬಾರದು’ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

‘ಕಾಶ್ಮೀರ ಸೇಬಿಗೆ ಮಾರುಕಟ್ಟೆಯಲ್ಲಿ ಒಂದು ಬಾಕ್ಸ್‌ಗೆ ₹ 1,200 ಇದ್ದ ಬೆಲೆ ಈಗ 600ಕ್ಕೆ ಇಳಿದಿದೆ. ನಮಗೆ ಸೇಬು ಬೆಳೆಯಲು 600 ಖರ್ಚಾಗುತ್ತದೆ. ಸಾಗಣೆ ವೆಚ್ಚ ₹ 300 ಸೇರಿ ಒಟ್ಟು ₹ 900 ಖರ್ಚಾಗುತ್ತದೆ. ಅಲ್ಲದೇ ಶೇ 12ರಷ್ಟಿದ್ದ ಜಿಎಸ್‌ಟಿ ಶೇ 18ರಷ್ಟು ಹೆಚ್ಚಳವಾಗಿದೆ. ಹೀಗಿರುವಾಗ ನಾವು ಕಡಿಮೆ ದರಕ್ಕೆ ಹೇಗೆ ಸೇಬು ಮಾರಾಟ ಮಾಡಲು ಸಾಧ್ಯ’ ಎಂದು ಪ್ರಶ್ನಿಸಿದರು.

ಗುಂಡಿನ ದಾಳಿ ಪ್ರಕರಣ: ಮುಖ್ಯ ಆರೋಪಿ ಬಂಧನ

ನವದೆಹಲಿ (ಪಿಟಿಐ): ಇಲ್ಲಿನ ರೋಹಿಣಿ ಕೋರ್ಟ್‌ನಲ್ಲಿ ನಡೆದಿದ್ದ ಗುಂಡಿನ ದಾಳಿ ಪ್ರಕರಣದ ಮುಖ್ಯ ಆರೋಪಿ ರಾಕೇಶ್ ತಾಜ್‌ಪುರಿಯಾ (31) ಎಂಬಾತನನ್ನು ಬಂಧಿಸಲಾಗಿದೆ ಎಂದು ದೆಹಲಿ ಪೊಲೀಸರು ಬುಧವಾರ ತಿಳಿಸಿದ್ದಾರೆ.

ಉತ್ತರ ದೆಹಲಿಯ ನರೇಲಾ ಕೈಗಾರಿಕಾ ಪ್ರದೇಶದಲ್ಲಿ ನಡೆದ ಗುಂಡಿನ ಚಕಮಕಿ ನಂತರ, ಆರೋಪಿಯನ್ನು ಬಂಧಿಸಲಾಯಿತು. ಆರೋಪಿ ಅಲಿಪುರ ನಿವಾಸಿಯಾಗಿದ್ದು, ಟಿಲ್ಲು ಗ್ಯಾಂಗ್‌ನ ಸದಸ್ಯ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ 12-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1340)
ಒಂದು ವಾರದ ಡೆಲಿವರಿ	1325 (1335)
ಸೋಯಾ ಕಚ್ಚಾ	1150 (1150)
ಪಾಮ್ ವಾರದ ಡೆಲಿವರಿ	1160 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,800 (47,550)
ಬೆಳ್ಳಿ ಕೆ.ಜಿ	60,900 (60,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	23569-32019
ಕೋಕ	19189-27111
ಫ್ಯಾಕ್ಟರಿ	13109-18216
ಹಳೆಚಾಲಿ	46099-50009
ಹೊಸಚಾಲಿ	35109-40700
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23899-36699
ಚಾಲಿ	46989-48299
ಕೋಕ	22699-32199
ಹೊಸಚಾಲಿ	32899-45819
ಕೆಂಪುಗೋಟು	29089-34409
ರಾಶಿ	43699-47009
ತಟ್ಟಿಬೆಟ್ಟೆ	37889-44099
ಶಿರಸಿ	
ಬೆಟ್ಟೆ	39899-46109
ಬಿಳಿಗೋಟು	22499-37709
ಚಾಲಿ	31599-49399
ರಾಶಿ	42199-48861
ರಾಮನಗರ ರೇಷ್ಮೆಗೂಡು	
ಬಿಳಿಗೋಟು	26899-32051
ಚಾಲಿ	3760

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15550	15650	234.90 ಸೆಂಟ್ಸ್
ಎಸಿ	---	6900	6850	
ಆರ್‌ಪಿ	---	6900	7000	ಲಂಡನ್
ಆರ್‌ಸಿ	---	4000	3900	2260 ಡಾಲರ್ಸ್

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ https://homages.deccanherald.com ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

4ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎ.ವಿ.ನಿರ್ಮಲ

ನೀವು ನಮ್ಮನ್ನಗಲಿ ಇಂದಿಗೆ 4ನೇ ವರ್ಷವಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ.

ಮೌನಿ, ಕುಮಾರ್, ಸರೂ, ಪ್ರತಿಭಾ, ಮನಿಂದರ್, ರಂಜನಿ, ಬಾಬು, ಅಶ್ವಿನಿ ಅನು, ಸ್ವಪ್ನ ವಿನಯ್, ಪದ್ಮಾಂಜಲಿ ಕಿರಣ್, ಕೃತಿ, ಪ್ರಾಣಾವ್, ವಿಶ್ರುತ್, ನಿಪುಣ್, ಗೌತಮ್, ಪ್ರೀತಮ್.

ಪದ್ಮಾಂಜಲಿ ಸಿಮೆಂಟ್ಸ್,
ಎಸಿಸಿ.ಅಧಿಕೃತ ಮಾರಾಟಗಾರರು
ಸ್ಟೀಲ್ ಮತ್ತು ಹಾರ್ಡ್‌ವೇರ್ ಡೀಲರ್ಸ್
ನಂ. 6 & 7, 24ನೇ ಮುಖ್ಯರಸ್ತೆ,
ಜೆ.ಪಿ.ನಗರ 6 ನೇ ಹಂತ, ಬೆಂಗಳೂರು-78
ಫೋನ್ :- 080 - 26630444
9945007988 / 9845210247

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business Offers

ಸ್ತ್ರೀವಶೀಕರಣ, ಪುರುಷ ವಶೀಕರಣ, ಪ್ರೀತಿ ಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11 ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ 9845544363 .

Business For Sale

ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ : 9008151027

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ: ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರ ದೋಷಗಳ ನಿವಾರಣೆಗೆ ಕೂಡಲೇ ಸಂಪರ್ಕಿಸಿ: 7676750280

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★॥ಶ್ರೀಹುಲಿಗೆಮ್ಮ ಚೌಡೇಶ್ವರಿದೇವಿ॥★ ಆರಾಧನೆಯಿಂದ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲದಬಾಧೆ,ಶತ್ರುನಾಶ ಇನ್ನಯಾವುದೇ ಘೋರ,ನಿಗೂಢ ಗುಪ್ತ,ಕಠಿಣ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತಪರಿಹಾರ. ವಶಿಕರಣ ಸ್ಪೆಷಲಿಸ್ಟ್ ಶ್ರೀದೇವಿಭಟ್ 9606735267

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

BANKING, TELLCALLERS, Work from Home, Field Executive, Accountants, Salary16000/- - 26000/-. SSLC, PUC, Degree. 8951939589.

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 17,800 - 68,000. 8884666597, 8884666594

✓ ಬೇಕಾಗಿದ್ದಾರೆ : ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC,Degree ಡಿಪ್ಲೋಮಾದವರು 18,000- 62,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ 8197650569, 7204396011

✓ ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 9742260055, 9538133533

Hospital & Medical Jobs

ತಕ್ಷಣ ಬೇಕಾಗಿದ್ದಾರೆ ಮಹಿಳೆಯರು ಹಾಗೂ ಪುರುಷರು ಹೋಂನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 11,000-24,000 ಊಟ, ವಸತಿ ಉಚಿತ. ಮೈಸೂರು - 9739292222, ತುಮಕೂರು - 9742892222, ಶಿವಮೊಗ್ಗ- 9742270055

WANTED D PHARMA completed candidates (both male and female) for outlet incharge In RR Nagar Bangalore Contact :- Goutham kumar ,7338133755, 7829689303

WANTED Lab analysists and lab technician (for diagnostics) (both male and female) location RR Nagar Bangalore contact :-7338133755, 7829689303

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

REQUIRED, TEAM Leader & Field executive For Banking Loan Collections. 8951450742, 7019700755, 080 - 41155671.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಬಿಡಬ್ಲ್ಯುಎಫ್: ತಸ್ನೀಮ್‌ಗೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಯುವ ಬ್ಯಾಡ್ಮಿಂಟನ್ ಆಟಗಾರ್ತಿ ತಸ್ನೀಮ್ ಮೀರ್ 19 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬಿಡಬ್ಲ್ಯುಎಫ್ ಜೂನಿಯರ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದರು. ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿಯಾದರು.

ಗುಜರಾತ್‌ನ 16 ವರ್ಷದ ತಸ್ನೀಮ್ ಹೋದ ವರ್ಷ ಮೂರು ಜೂನಿಯರ್ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದರು. ಆ ಸಾಧನೆಯಿಂದಲೇ ಅವರು ಅಗ್ರಸ್ಥಾನ ಪಡೆಯಲು ಸಾಧ್ಯವಾಯಿತು.

ನವದೆಹಲಿಯಲ್ಲಿ ಬುಧವಾರ ಕಾಮನ್‌ವೆಲ್ತ್ ಗೇಮ್ಸ್‌ನ ಕ್ವೀನ್ಸ್ ಬೇಟನ್ ಸ್ವೀಕರಿಸಿದ ಕುಸ್ತಿಪಟು ರವಿ ದಹಿಯಾ –ಪಿಟಿಐ ಚಿತ್ರ

ಕ್ವೀನ್ಸ್ ಬೇಟನ್ ಸ್ವೀಕರಿಸಿದ ರವಿ ದಹಿಯಾ

ನವದೆಹಲಿ (ಪಿಟಿಐ): ಬರ್ಮಿಂಗ್‌ಹ್ಯಾಮ್‌ನಲ್ಲಿ ಇದೇ ವರ್ಷ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಕ್ವೀನ್ಸ್ ಬೇಟನ್ ಅನ್ನು ನವದೆಹಲಿಯಲ್ಲಿ ಬುಧವಾರ ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕವಿಜೇತ ಕುಸ್ತಿಪಟು ರವಿ ದಹಿಯಾ ಸ್ವೀಕರಿಸಿದರು.

‘ಬೇಟನ್ ರಿಲೆಯ ಭಾಗವಾಗಿರಲು ಹೆಮ್ಮೆಯೆನಿಸುತ್ತಿದೆ. ಕಾಮನ್‌ವೆಲ್ತ್ ಕೂಟಕ್ಕಾಗಿ ಸಂಪೂರ್ಣ ಶ್ರದ್ಧೆಯಿಂದ ಅಭ್ಯಾಸ ನಡೆಸುತ್ತಿದ್ದೇನೆ. ಅಲ್ಲಿ ಚಿನ್ನದ ಪದಕ ಗೆಲ್ಲುವ ವಿಶ್ವಾಸವಿದೆ’ ಎಂದು ರವಿ ಹೇಳಿದರು.

ಮೂರನೇ ಟೆಸ್ಟ್: ಕೀಗನ್ ಪೀಟರ್ಸನ್ ಏಕಾಂಗಿ ಹೋರಾಟ; ಶಮಿ, ಯಾದವ್‌ಗೆ ಎರಡು ವಿಕೆಟ್

ಬೂಮ್ರಾ ಬಿರುಗಾಳಿ; ಒಲಿದ ಮುನ್ನಡೆ

ಕೇಪ್‌ಟೌನ್ (ರಾಯಿಟರ್ಸ್/ಪಿಟಿಐ): ಯಾರ್ಕರ್ ಪರಿಣತ ಜಸ್‌ಪ್ರೀತ್ ಬೂಮ್ರಾ ನ್ಯೂಲ್ಯಾಂಡ್ಸ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲು ಕಿತ್ತು ತಮ್ಮ ಬುಟ್ಟಿಗೆ ಹಾಕಿಕೊಂಡರು. ಅದರೊಂದಿಗೆ ಭಾರತ ತಂಡದಲ್ಲಿ ಹೋರಾಟದ ಕಿಚ್ಚು ಹಚ್ಚಿದರು.

ದಕ್ಷಿಣ ಆಫ್ರಿಕಾದ ಎದುರಿನ ಸರಣಿಯ ಮೂರನೇ ಮತ್ತು ಅಂತಿಮ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು 13 ರನ್‌ಗಳ ಅಲ್ಪಮುನ್ನಡೆ ಗಳಿಸಿತು. ಮಂಗಳವಾರ ಆರಂಭವಾದ ಪಂದ್ಯದಲ್ಲಿ ಬ್ಯಾಟರ್‌ಗಳ ವೈಫಲ್ಯದಿಂದಾಗಿ ತಂಡವು 223 ರನ್‌ಗಳಿಗೆ ಆಲೌಟ್ ಆಗಿತ್ತು. ಆದರೆ, ಬೂಮ್ರಾ (42ಕ್ಕೆ5) ಬಿರುಗಾಳಿಯ ಮುಂದೆ ಆತಿಥೇಯ ತಂಡವು 76.3 ಓವರ್‌ಗಳಲ್ಲಿ 210 ರನ್ ಗಳಿಸುವಲ್ಲಿ ಮಾತ್ರ ಯಶಸ್ವಿಯಾಯಿತು.

ಕೀಗನ್ ಪೀಟರ್ಸನ್ (72; 166ಎ) ಅವರ ಏಕಾಂಗಿ ಹೋರಾಟದ ಆಟಕ್ಕೆ ತಕ್ಕ ಫಲ ಸಿಗಲಿಲ್ಲ. ಎರಡನೇ ಇನಿಂಗ್ಸ್ ಆರಂಭಿಸಿರುವ ಪ್ರವಾಸಿ ತಂಡವು ಎರಡನೇ ದಿನದಾಟದ ಮುಕ್ತಾಯಕ್ಕೆ 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 57 ರನ್ ಗಳಿಸಿದೆ. ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 9) ಮತ್ತು ವಿರಾಟ್ ಕೊಹ್ಲಿ (ಬ್ಯಾಟಿಂಗ್ 14) ಕ್ರೀಸ್‌ನಲ್ಲಿದ್ದಾರೆ.

ಮೊದಲ ಇನಿಂಗ್ಸ್‌ನಂತೆಯೇ ಆರಂಭಿಕ ಜೋಡಿ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ಎರಡನೇಯದ್ದರಲ್ಲೂ ವಿಫಲರಾದರು. ಮಾರ್ಕೊ ಜ್ಯಾನ್ಸನ್ ಮತ್ತು ಕಗಿಸೊ ರಬಾಡ ತಲಾ ಒಂದು ವಿಕೆಟ್ ಗಳಿಸಿದರು.

ಬೂಮ್ರಾ ಬಿರುಗಾಳಿ; ಕೀಗನ್ ಹೋರಾಟ: ಸರಣಿಯಲ್ಲಿ ವಿಜಯೀ ತಂಡವನ್ನು ನಿರ್ಣಯಿಸುವ ಮಹತ್ವದ ಪಂದ್ಯದ ಎರಡನೇ ದಿನದಾಟದಲ್ಲಿ ಭಾರತದ ಬೂಮ್ರಾ ಬೌಲಿಂಗ್ ಮತ್ತು ಆತಿಥೇಯ ತಂಡದ ಕೀಗನ್ ಬ್ಯಾಟಿಂಗ್ ಗಮನ ಗಮನ ಸೆಳೆದವು.

45 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ತಂಡಕ್ಕೆ ಕೀಗನ್ ಮತ್ತು ವ್ಯಾನ್ ಡರ್ ಸಸೆನ್ (21 ರನ್) ನಾಲ್ಕನ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿ ಬಲ ತುಂಬಲು ಪ್ರಯತ್ನಿಸಿದರು. 40ನೇ ಓವರ್‌ನಲ್ಲಿ ಸಸೆನ್ ವಿಕೆಟ್ ಗಳಿಸಿದ ಉಮೇಶ್ ಯಾದವ್ ಜೊತೆಯಾಟವನ್ನು ಮುರಿದರು.

ಕ್ರೀಸ್‌ಗೆ ಬಂದ ತೆಂಬಾ ಬವುಮಾ (28 ರನ್) ಕೂಡ ಕೀಗನ್‌ಗೆ ಉತ್ತಮ ಬೆಂಬಲ ಕೊಟ್ಟರು. ಐದನೇ ವಿಕೆಟ್ ಜೊತೆಯಾಟದಲ್ಲಿ 47 ರನ್ ಸೇರಿಸಿದರು. ಶಮಿ ಬೌಲಿಂಗ್‌ನಲ್ಲಿ ಬವುಮಾ ಔಟಾದರೊಂದಿಗೆ ಜೊತೆಯಾಟ ಮುರಿಯಿತು.

ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಮಿಂಚದಂತೆ ಬೂಮ್ರಾ ನೋಡಿಕೊಂಡರು. ಆದರೂ ಕೀಗನ್ ಹೋರಾಟದಿಂದ ತಂಡವು 200 ರನ್‌ಗಳ ಗಡಿ ದಾಟಿತು. ಆದರೆ, ಮುನ್ನಡೆ ಸಾಧಿಸಲು ಸಾಧ್ಯವಾಗಲಿಲ್ಲ. ಬೂಮ್ರಾ ಕಿಗನ್ ವಿಕೆಟ್ ಕೂಡ ಕಬಳಿಸಿದರು.

ಜಸ್‌ಪ್ರೀತ್ ಬೂಮ್ರಾ–ಎಪಿ/ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 223 (77.3 ಓವರ್‌ಗಳಲ್ಲಿ)

ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 210 (76.3 ಓವರ್)

(ಮಂಗಳವಾರ 8 ಓವರ್‌ಗಳಲ್ಲಿ 1 ವಿಕೆಟ್‌ಗೆ 17)

ಮರ್ಕರಂ ಬಿ ಬೂಮ್ರಾ 8 (22ಎ, 4X1), ಕೇಶವ್ ಬಿ ಯಾದವ್ 25 (45ಎ, 4X4), ಪೀಟರ್ಸನ್ ಸಿ ಪೂಜಾರ ಬಿ ಬೂಮ್ರಾ 72 (166ಎ, 4X9), ಡಸೆ ಸಿ ಕೊಹ್ಲಿ ಬಿ ಯಾದವ್ 21 (54ಎ), ಬವುಮಾ ಸಿ ಕೊಹ್ಲಿ ಬಿ ಶಮಿ 28 (52ಎ, 4X4), ವೆರೆಯನ್ ಸಿ ಪಂತ್ ಬಿ ಶಮಿ 0 (2ಎ), ಜ್ಯಾನ್ಸೆನ್ ಬಿ ಬೂಮ್ರಾ 7 (26ಎ), ರಬಾಡ ಸಿ ಬೂಮ್ರಾ ಬಿ ಶಾರ್ದೂಲ್ 15 (25ಎ, 4X1), ಒಲಿವಿಯರ್ ಔಟಾಗದೆ 10 (39ಎ, 4X2), ಗಿಡಿ ಸಿ ಅಶ್ವಿನ್ ಬಿ ಬೂಮ್ರಾ 3 (17ಎ)

ಇತರೆ (ಬೈ 4, ಲೆಗ್‌ಬೈ 4, ನೋಬಾಲ್ 4, ವೈಡ್ 1, ಪೆನಾಲ್ಟಿ 5) 18

ವಿಕೆಟ್ ಪತನ: 2-17 (ಏಡನ್ ಮರ್ಕರಂ, 8.2), 3-45 (ಕೇಶವ್ ಮಹಾರಾಜ್, 20.2), 4-112 (ರಸಿ ವ್ಯಾನ್ ಡರ್ ಡಸೆ, 39.2), 5-159 (ತೆಂಬಾ ಬವುಮಾ, 55.2), 6-159 (ಕೈಲ್ ವೆರೆಯನ್, 55.4), 7-176 (ಮಾರ್ಕೊ ಜ್ಯಾನ್ಸೆನ್, 62.2), 8-179 (ಕೀಗನ್ ಪೀಟರ್ಸನ್, 64.4), 9-200 (ಕಗಿಸೊ ರಬಾಡ, 71.3), 10-210 (ಲುಂಗಿ ಗಿಡಿ, 76.3)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 23.3–8–42–5, ಉಮೇಶ್ ಯಾದವ್ 16–3–64–2, ಮೊಹಮ್ಮದ್ ಶಮಿ 16–4–39–2, ಶಾರ್ದೂಲ್ ಠಾಕೂರ್ 12–2–37–1, ರವಿಚಂದ್ರನ್ ಅಶ್ವಿನ್ 9–3–15–0

ಭಾರತ ಎರಡನೇ ಇನಿಂಗ್ಸ್ 2ಕ್ಕೆ 57 (17 ಓವರ್)

ರಾಹುಲ್ ಸಿ ಮರ್ಕರಂ ಬಿ ಜ್ಯಾನ್ಸೆನ್ 10 (22ಎ, 4X2), ಮಯಂಕ್ ಸಿ ಎಲ್ಗರ್ ಬಿ ರಬಾಡ 7 (15ಎ), ಪೂಜಾರ ಬ್ಯಾಟಿಂಗ್ 9 (31ಎ, 4X2), ಕೊಹ್ಲಿ ಬ್ಯಾಟಿಂಗ್ 14 (39ಎ, 4X2)

ಇತರೆ (ಬೈ 8, ಲೆಗ್‌ಬೈ 4, ನೋಬಾಲ್ 5) 17

ವಿಕೆಟ್ ಪತನ: 1–20 (ಮಯಂಕ್ ಅಗರವಾಲ್, 4.5) 2–24 (ಕೆ.ಎಲ್. ರಾಹುಲ್, 5.5)

ಬೌಲಿಂಗ್: ಕಗಿಸೊ ರಬಾಡ 6–1–25–1, ಡುವನ್ ಒಲಿವಿಯರ್ 2–0–13–0, ಮಾರ್ಕೊ ಜ್ಯಾನ್ಸೆನ್ 5–3–7–1, ಲುಂಗಿ ಗಿಡಿ 3–3–0–0, ಕೇಶವ್ ಮಹಾರಾಜ್ 1–1–0–0

ಕೀಗನ್ ಪೀಟರ್ಸನ್

ರಾಹುಲ್ ನಾಯಕತ್ವದ ಬಳಗದಲ್ಲಿ ಜಯಂತ್, ಸೈನಿ

ಏಕದಿನ ಕ್ರಿಕೆಟ್ ಸರಣಿಗೆ ತಂಡ ಪ್ರಕಟ

ಮುಂಬೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ತಂಡವು ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಕಣಕ್ಕಿಳಿಯಲಿದೆ.

ಬುಧವಾರ ಪರಿಷ್ಕೃತ ತಂಡವನ್ನು ಪ್ರಕಟಿಸಲಾಗಿದ್ದು, ಕೊರೊನಾ ಸೋಂಕು ತಗುಲಿರುವ ವಾಷಿಂಗ್ಟನ್ ಸುಂದರ್ ಅವರನ್ನು ಕೈಬಿಡಲಾಗಿದೆ. ಜಯಂತ್ ಯಾದವ್ ಮತ್ತು ಮಧ್ಯಮವೇಗಿ ನವದೀಪ್ ಸೈನಿ ಅವರಿಗೆ ಅವಕಾಶ ನೀಡಲಾಗಿದೆ.

ಏಕದಿನ ತಂಡದ ನಾಯಕತ್ವದಿಂದ ಕೆಳಗಿಳಿದ ನಂತರ ಇದೇ ಮೊದಲ ಸಲ ವಿರಾಟ್ ಕೊಹ್ಲಿ ಕಣಕ್ಕಿಳಿಯಲಿದ್ದಾರೆ. ಗಾಯಗೊಂಡಿರುವ ರೋಹಿತ್ ಶರ್ಮಾ ಅನುಪಸ್ಥಿತಿಯಲ್ಲಿ ರಾಹುಲ್ ನಾಯಕತ್ವ ವಹಿಸಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಉಪನಾಯಕರಾಗಿದ್ದಾರೆ. ಕರ್ನಾಟಕದ ಪ್ರಸಿದ್ಧ ಕೃಷ್ಣ ತಂಡದಲ್ಲಿದ್ಧಾರೆ. ಐಪಿಎಲ್‌ನಲ್ಲಿ ಮಿಂಚಿರುವ ಬ್ಯಾಟರ್ ಋತುರಾಜ್ ಗಾಯಕವಾಡ್ ಮತ್ತು ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರೂ ತಂಡದಲ್ಲಿದ್ದಾರೆ.

ಕೆ.ಎಲ್. ರಾಹುಲ್

‘ವಾಷಿಂಗ್ಟನ್ ಸುಂದರ್ ಅವರು ಕೇಪ್‌ಟೌನ್‌ಗೆ ತೆರಳಬೇಕಿತ್ತು. ಆದರೆ ಅವರಿಗೆ ಕೋವಿಡ್ ತಗುಲಿರುವುದು ಖಚಿತವಾಗಿದೆ. ಆದ್ದರಿಂದ ಅವರನ್ನು ಕೈಬಿಡಲಾಗಿದೆ. ಅವರ ಬದಲಿಗೆ ಜಯಂತ್ ಯಾದವ್ ಆಯ್ಕೆಯಾಗಿದ್ದಾರೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಚೇತನ್ ಶರ್ಮಾ ಮುಖ್ಯಸ್ಥರಾಗಿರುವ ಐವರು ಸದಸ್ಯರ ಆಯ್ಕೆ ಸಮಿತಿಯು ತಂಡವನ್ನು ಪ್ರಕಟಿಸಿದೆ. ಇದೇ 19 ರಿಂದ ಮೂರು ಏಕದಿನ ಪಂದ್ಯಗಳ ಸರಣಿ ನಡೆಯಲಿದೆ.

ತಂಡ: ಕೆ.ಎಲ್. ರಾಹುಲ್ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಶಿಖರ್ ಧವನ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ವೆಂಕಟೇಶ್ ಅಯ್ಯರ್, ರಿಷಭ್ ಪಂತ್, ಇಶಾನ್ ಕಿಶನ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಜಯಂತ್ ಯಾದವ್, ನವದೀಪ್ ಸೈನಿ.

ಸೋಂಕು ಇದ್ದಾಗ ಪ್ರತ್ಯೇಕವಾಸಕ್ಕೆ ಹೋಗದಿರುವುದು 'ಲೋಪ'

ಮೆಲ್ಬರ್ನ್ (ಎಪಿ): ಕಳೆದ ತಿಂಗಳು ಸುದ್ದಿಪತ್ರಿಕೆಯೊಂದಕ್ಕೆ ಸಂದರ್ಶನ ಮತ್ತು ಫೋಟೊ ಶೂಟ್ ಮಾಡುವ ಸಂದರ್ಭದಲ್ಲಿ ತಮಗೆ ಕೋವಿಡ್ ದೃಢಪಟ್ಟಿರುವುದು ಟೆನಿಸ್ ತಾರೆ ನೋವಾಕ್ ಜೊಕೊವಿಚ್ ಅವರಿಗೆ ಗೊತ್ತಿತ್ತಂತೆ!

ನೊವಾಕ್ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಪೋಸ್ಟ್ ಮಾಡಿರುವ ಹೇಳಿಕೆಯಲ್ಲಿ, ತಮ್ಮ ನೆರವು ಸಿಬ್ಬಂದಿಯಿಂದ ಆದ ಅಚಾತುರ್ಯ ಇದು ಎಂದಿದ್ದಾರೆ.

ಆಸ್ಟ್ರೇಲಿಯಾ ಓಪನ್ ಆಡಲು ಬರುವ ಎರಡು ವಾರಗಳ ಮುನ್ನದ ಅವಧಿಯಲ್ಲಿ ತಾವು ಪ್ರಯಾಣ ಮಾಡಿದ ಮಾಹಿತಿಗಳನ್ನು ಒದಗಿಸುವಲ್ಲಿ ನೆರವು ಸಿಬ್ಬಂದಿಯಿಂದ ಲೋಪವಾಗಿದೆ ಎಂದಿದ್ದಾರೆ. ಹೋದ ತಿಂಗಳು ತಮಗೆ ಕೋವಿಡ್ ಆಗಿದ್ದನ್ನು ಈ ಸಂದರ್ಭದಲ್ಲಿ ಒಪ್ಪಿಕೊಂಡಿದ್ದಾರೆ. ಸೋಂಕಿನಲ್ಲಿ ಪ್ರತ್ಯೇಕವಾಸದಲ್ಲಿ ಉಳಿದಿಕೊಳ್ಳದೇ ಇರುವುದು ತಪ್ಪು ಎಂದಿದ್ದಾರೆ.



ನೊವಾಕ್ ಜೊಕೊವಿಚ್

ಸರ್ಬಿಯಾದ ನೊವಾಕ್ ಕೋವಿಡ್ ತಡೆ ಲಸಿಕೆಯನ್ನು ತೆಗೆದುಕೊಂಡಿಲ್ಲ. ಅವರು ಆಸ್ಟ್ರೇಲಿಯಾಗೆ ಬಂದಿಳಿದಾಗ ಲಸಿಕೆ ಪಡೆದುಕೊಳ್ಳಲು ನಿರಾಕರಿಸಿದರು. ಅಲ್ಲದೇ ಅವರು ಮೆಲ್ಬರ್ನ್‌ಗೆ ಬರಲು ವೀಸಾ ಕೊಡಲು ಕೂಡ ಆಸ್ಟ್ರೇಲಿಯಾ ಸರ್ಕಾರ ಹಿಂದೇಟು ಹಾಕಿತ್ತು. ಇದೀಗ ವಿವಾದಕ್ಕೆ ಕಾರಣವಾಗಿದೆ.

ಟೆಸ್ಟ್ ಕ್ರಿಕೆಟ್‌ನಲ್ಲೂ ಫ್ರೀ ಹಿಟ್: ಸ್ಟೇನ್ ಸಲಹೆ

ನವದೆಹಲಿ (ಪಿಟಿಐ): ಟೆಸ್ಟ್ ಕ್ರಿಕೆಟ್‌ನಲ್ಲಿಯೂ ನೋಬಾಲ್ ಆದಾಗ ಫ್ರೀ ಹಿಟ್ ನೀಡುವ ನಿಯಮ ಬರಬೇಕು ಎಂದು ದಕ್ಷಿಣ ಆಫ್ರಿಕಾ ಮಾಜಿ ವೇಗದ ಬೌಲರ್ ಡೇಲ್ ಸ್ಟೇನ್ ಸಲಹೆ ನೀಡಿದ್ದಾರೆ.

‘ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಫ್ರೀ ಹಿಟ್ ನೀಡಲಾಗುತ್ತದೆ. ಅದೇ ರೀತಿಯಲ್ಲಿ ಟೆಸ್ಟ್‌ನಲ್ಲಿಯೂ ಕೊಡಬೇಕು. ಅದರಿಂದ ಬಾಲಂಗೋಚಿ ಬ್ಯಾಟರ್‌ಗಳಿಗೆ ಒಂದೊಮ್ಮೆ ನೋಬಾಲ್‌ಗಳು ಸಿಕ್ಕರೆ ಈ ಫ್ರೀ ಹಿಟ್‌ಗಳ ಸದುಪಯೋಗ ಮಾಡಿಕೊಳ್ಳಲು ಅವಕಾಶ ಇರುತ್ತದೆ. ಅವರು ಹೆಚ್ಚು ಹೊತ್ತು ಬ್ಯಾಟ್ ಮಾಡಲು ಅನುಕೂಲವಾಗುತ್ತದೆ’ ಎಂದು ಸ್ಟೇನ್ ಅಭಿಪ್ರಾಯಪಟ್ಟಿದ್ದಾರೆ.

ಡೇಲ್ ಸ್ಟೇನ್

ಬುಧವಾರ ಐದು ವಿಕೆಟ್ ಗಳಿಸಿದ ಭಾರತದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಸಾಧನೆಯನ್ನು ಶ್ಲಾಘಿಸಿರುವ ಸ್ಟೇನ್ ಟ್ವೀಟ್ ಮಾಡಿದ್ದಾರೆ.

ಡೆಫ್ ಕ್ರಿಕೆಟ್ ತಂಡದ ಆಯ್ಕೆ ಟ್ರಯಲ್ಸ್

ಬೆಂಗಳೂರು: ಶ್ರವಣದೋಷವುಳ್ಳವರಿಗಾಗಿ ನಡೆಯಲಿರುವ ರಾಷ್ಟ್ರೀಯ ಟಿ20 ಡೆಫ್ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಕರ್ನಾಟಕ ತಂಡದ ಆಯ್ಕೆ ಟ್ರಯಲ್ಸ್ ಫೆಬ್ರುವರಿಯಲ್ಲಿ ನಡೆಯಲಿದೆ.

ಬೆಂಗಳೂರು ಅಥವಾ ತುಮಕೂರಿನಲ್ಲಿ ಟ್ರಯಲ್ಸ್ ನಡೆಯಲಿದೆ. 16 ರಿಂದ 35 ವರ್ಷದೊಳಗಿನವರು ಭಾಗವಹಿಸಬೇಕು.

ವಿವರಗಳಿಗೆ; ksfd2000@gmail.com ಅಥವಾ ಕಾರ್ಯದರ್ಶಿ ವಿ. ಕುಮಾರ್ (ಮೊ: 9845543105) ಅವರನ್ನು ಇದೇ 23ರೊಳಗೆ ಸಂಪರ್ಕಿಸಬೇಕು.

ಪವನ್ ದಾಳಿಗೆ ಡೆಲ್ಲಿ ಕಂಗಾಲು

ಪ್ರೊ ಕಬಡ್ಡಿ: ಯುಪಿ ಯೋಧಾ – ಹರಿಯಾಣ ಸ್ಟೀಲರ್ಸ್ ಪಂದ್ಯ ಸಮಬಲ

ಬೆಂಗಳೂರು: ಇಪ್ಪತ್ತೇಳು ಪಾಯಿಂಟ್‌ಗಳನ್ನು ಕೊಳ್ಳೆ ಹೊಡೆದ ನಾಯಕ ಪವನ್ ಶೆರಾವತ್ ಆಟದಿಂದ ಬೆಂಗಳೂರು ಬುಲ್ಸ್ ತಂಡವು ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬುಲ್ಸ್ ತಂಡವು 61–22ರಿಂದ ದಬಂಗ್ ಡೆಲ್ಲಿ ತಂಡವನ್ನು ಹಣಿಯಿತು.

ಹೋದ ಪಂದ್ಯದಲ್ಲಿ ಸೋತಿದ್ದ ಬುಲ್ಸ್ ತಂಡವು ಈ ಪಂದ್ಯದಲ್ಲಿ ಎದುರಾಳಿ ಡೆಲ್ಲಿ ತಂಡಕ್ಕೆ ಯಾವುದೇ ಹಂತದಲ್ಲಿಯೂ ಅವಕಾಶವನ್ನೇ ನೀಡಲಿಲ್ಲ. ಅದರಲ್ಲೂ ಪವನ್ ಅವರ ದಾಳಿಯೇ ವಿಜೃಂಭಿಸಿತು. ಅವರಿಗೆ ರೇಡರ್ ಭರತ್ (6 ಅಂಕ) ಮತ್ತು ಚಂದ್ರನ್ ಅವರು ಉತ್ತಮ ಜೊತೆ ನೀಡಿದರು.

ಮೊದಲಾರ್ಧದಲ್ಲಿಯೇ ಬೆಂಗಳೂರು ತಂಡವು 27–11ರಿಂದ ಮುನ್ನಡೆ ಸಾಧಿಸಿತು. ನಂತರದ ಅವಧಿಯಲ್ಲಿಯಂತೂ ಪವನ್ ಪಡೆಯ ಆಟಕ್ಕೆ ಡೆಲ್ಲಿ ಕಂಗಾಲಾಯಿತು.

ರೋಚಕ ಟೈ: ಹರಿಯಾಣ ಸ್ಟೀಲರ್ಸ್ ಮತ್ತು ಯುಪಿ ಯೋಧಾ ನಡುವಣ ಪಂದ್ಯವು ರೋಚಕ ಟೈನಲ್ಲಿ ಅಂತ್ಯ ಕಂಡಿತು. ನಾಯಕನಿಗೆ ತಕ್ಕ ಆಟವಾಡಿದ ಹರಿಯಾಣ ತಂಡದ ವಿಕಾಸ್ ಖಂಡೋಲ 17 ಅಂಕ ಮತ್ತು ಯೋಧಾ ತಂಡದ ಸುರೇಂದರ್ ಗಿಲ್ 14 ಅಂಕ ಗಳಿಸುವುದರೊಂದಿಗೆ ಪಂದ್ಯವನ್ನು ಸಮಬಲದತ್ತ ಕೊಂಡೊಯ್ದರು.

ಅರ್ಧವಿರಾಮದ ಹೊತ್ತಿಗೆ ಯೋಧಾ ತಂಡವು 14–13ರಿಂದ ಮುನ್ನಡೆ ಸಾಧಿಸಿತ್ತು. ವಿರಾಮದ ನಂತರ ವಿಕಾಸ್ ಚುರುಕಾದ ದಾಳಿ ನಡೆಸಿ ಹೋರಾಟಕ್ಕೆ ಬಲ ತುಂಬಿದರು. ಅಲ್ಲದೇ ಸೋಲದಂತೆ ನೋಡಿಕೊಂಡರು.

ಬೆಂಗಳೂರು ಬುಲ್ಸ್ ತಂಡದ ಪವನ್ ಶೆರಾವತ್ (ಕೆಂಪು ಪೋಷಾಕು) ರೇಡಿಂಗ್ ವೈಖರಿ

ಮುಖ್ಯಾಂಶಗಳು

- ಮೊದಲಾರ್ಧದಲ್ಲಿಯೇ ಬೆಂಗಳೂರು ತಂಡಕ್ಕೆ 27–11ರಿಂದ ಮುನ್ನಡೆ
- 17 ಅಂಕ ಗಳಿಸಿ ಮಿಂಚಿದ ಹರಿಯಾಣ ತಂಡದ ವಿಕಾಸ್ ಖಂಡೋಲ

ಇಂದಿನ ಪಂದ್ಯ (ರಾತ್ರಿ)

ಬೆಂಗಾಲ್ ವಾರಿಯರ್ಸ್ Vs ತಮಿಳ್ ತಲೈವಾಸ್ 7.30

ಯು ಮುಂಬಾ Vs ಪುಣೇರಿ ಪಲ್ಟನ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	8	6	1	1	34
ಬೆಂಗಳೂರು ಬುಲ್ಸ್	9	6	2	1	33
ದಬಂಗ್ ಡೆಲ್ಲಿ	9	5	2	2	32
ತಮಿಳ್ ತಲೈವಾಸ್	8	3	1	4	27
ಯು ಮುಂಬಾ	8	3	2	3	25
ಯುಪಿ ಯೋಧಾ	9	2	4	3	23
ಜೈಪುರ್ ಪಿಂಕ್ ಪ್ಯಾಂಥರ್ಸ್	8	4	4	-	23
ಹರಿಯಾಣ ಸ್ಟೀಲರ್ಸ್	9	3	4	2	23
ಗುಜರಾತ್ ಜೈಂಟ್ಸ್	8	2	4	2	20
ಬೆಂಗಾಲ್ ವಾರಿಯರ್ಸ್	8	3	5	-	17
ಪುಣೇರಿ ಪಲ್ಟನ್	8	3	5	-	16
ತೆಲುಗು ಟೈಟನ್ಸ್	8	-	6	2	10

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

ಭಾರತದೊಂದಿಗೆ ‘ಶಾಂತಿ’ ಬಯಸುತ್ತಿರುವ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಭಾರತ ಸೇರಿದಂತೆ ನೆರೆಯ ರಾಷ್ಟ್ರಗಳೊಂದಿಗೆ 'ಶಾಂತಿ'ಯನ್ನು ಕಾಪಾಡಿಕೊಳ್ಳಲು ಪಾಕಿಸ್ತಾನ ಮುಂದಾಗಿದ್ದು, ಈ ವಿಷಯದಲ್ಲಿ ಮುಕ್ತ ವಾತಾವರಣ ನಿರ್ಮಾಣ ಮಾಡಲು ಮೊದಲ ಬಾರಿಗೆ ರೂಪಿಸಿರುವ ರಾಷ್ಟ್ರೀಯ ಭದ್ರತಾ ನೀತಿಯಲ್ಲಿ ಒತ್ತು ನೀಡಲಾಗಿದೆ.

ಕಾಶ್ಮೀರ ವಿವಾದವು ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಮಾತುಕತೆಗೆ ದೊಡ್ಡ ಅಡ್ಡಿಯಾಗಿದ್ದರೂ, ನೆರೆಯ ರಾಷ್ಟ್ರಗಳೊಂದಿಗೆ ಶಾಂತಿಯುತ ಮತ್ತು ಆರ್ಥಿಕ ಸಂಬಂಧಗಳನ್ನು ಉತ್ತಮಪಡಿಸಿಕೊಳ್ಳಲು ಹೊಸ ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ.

ರಾಷ್ಟ್ರೀಯ ಭದ್ರತಾ ಸಮಿತಿ ಮತ್ತು ಸಚಿವ ಸಂಪುಟ ಸಭೆ ಕಳೆದ ತಿಂಗಳು ಹೊಸ ನೀತಿಗೆ ಒಪ್ಪಿಗೆ ನೀಡಿದ್ದು, ಪ್ರಧಾನಿ ಇಮ್ರಾನ್ ಖಾನ್ ಅವರು ಶುಕ್ರವಾರ ಔಪಚಾರಿಕವಾಗಿ ಈ ನೀತಿಯನ್ನು ಬಿಡುಗಡೆ ಮಾಡಲಿದ್ದಾರೆ ಎಂದು ವರದಿಯಾಗಿದೆ.

2022–26ರ ಅವಧಿಯ ಈ ನೀತಿಯಲ್ಲಿ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಗುರಿಗಳು ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳು ಇವೆ. 100 ಪುಟಗಳ ಈ ನೀತಿಯಲ್ಲಿ ಭಾರತದೊಂದಿಗೆ ವಾಣಿಜ್ಯ ಮತ್ತು ವ್ಯಾಪಾರಕ್ಕೆ ಸಂಬಂಧಿಸಿ ಒಪ್ಪಂದ ಮಾಡಿಕೊಳ್ಳುವ ವಿಷಯವೂ ಇದೆ.

ನಾವು ಭಾರತದೊಂದಿಗೆ ಹಗೆತನ ಮುಂದುವರಿಸಲು ಬಯಸುವುದಿಲ್ಲ. ಹೊಸ ನೀತಿಯಲ್ಲಿ ನೆರೆಯ ರಾಷ್ಟ್ರಗಳೊಂದಿಗೆ ಶಾಂತಿ ಬಯಸುವುದನ್ನು ಪ್ರಸ್ತಾಪಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಚತುಷ್ಕೋನ ಟಿ20 ಟೂರ್ನಿಗೆ ರಮೀಜ್ ಪ್ರಸ್ತಾವ

ಕರಾಚಿ (ಪಿಟಿಐ): ಅಂತರರಾಷ್ಟ್ರೀಯ ಚತುಷ್ಕೋನ ಟಿ20 ಕ್ರಿಕೆಟ್ ಟೂರ್ನಿಯನ್ನು ಆರಂಭಿಸಬೇಕು ಎಂದು ಪಾಕಿಸ್ತಾನ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ರಮೀಜ್ ರಾಜಾ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ)ಗೆ ಪ್ರಸ್ತಾವವನ್ನು ಸಲ್ಲಿಸಿದ್ದಾರೆ.

'ಪಾಕಿಸ್ತಾನ, ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳು ಸ್ಪರ್ಧಿಸುವ ಟೂರ್ನಿ ಇದಾಗಬೇಕು. ನಾಲ್ಕು ರಾಷ್ಟ್ರಗಳೂ ರೊಟೇಷನ್ ಮಾದರಿಯಲ್ಲಿ ಆತಿಥ್ಯ ವಹಿಸಬೇಕು’ ಎಂದು ರಮೀಜ್ ಹೇಳಿದ್ದಾರೆ.

ತರಬೇತಿಗಾಗಿ ಬಜರಂಗ್‌ಗೆ ಹೆಚ್ಚುವರಿ ಅನುದಾನ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಪದಕವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ₹ 1.76 ಲಕ್ಷ ಹೆಚ್ಚುವರಿ ಅನುದಾನವನ್ನು ಕೇಂದ್ರ ಕ್ರೀಡಾ ಸಚಿವಾಲಯವು ಮಂಜೂರು ಮಾಡಿದೆ.

ವಿದೇಶದಲ್ಲಿ ತರಬೇತಿ ಪಡೆಯಲು ಅವರು ಈ ಮೊತ್ತವನ್ನು ವಿನಿಯೋಗಿಸಲಿದ್ದಾರೆ. ಮಾಸ್ಕೋದಲ್ಲಿ 26 ದಿನಗಳ ವಿಶೇಷ ತರಬೇತಿ ಪಡೆಯಲು ಅವರಿಗೆ ಈ ಮೊದಲು ₹ 7.53 ಲಕ್ಷವನ್ನು ನೀಡಲಾಗಿತ್ತು. ಹೋದ ತಿಂಗಳು 27ರಿಂದ ತರಬೇತಿ ಶಿಬಿರ ಆರಂಭವಾಗಿದೆ.

ಉತ್ತರ ಕೊರಿಯಾ: ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಸೋಲ್(ಎಪಿ): ಉತ್ತರ ಕೊರಿಯಾ ನಡೆಸಿದ ಹೈಪರ್ ಸಾನಿಕ್ ಕ್ಷಿಪಣಿಯ ಪರೀಕ್ಷೆ ಯಶಸ್ವಿಯಾಗಿದೆ ಎಂದು ಆ ದೇಶದ ಅಧ್ಯಕ್ಷ ಕಿಮ್ ಜಾಂಗ್ ಉನ್ ಹೇಳಿದ್ದಾರೆ.

ಉತ್ತರ ಕೊರಿಯಾ ತನ್ನ ಪೂರ್ವ ಸಮುದ್ರಕ್ಕೆ ಶಂಕಿತ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಹಾರಿಸುತ್ತಿರುವುದನ್ನು ಪತ್ತೆ ಹಚ್ಚಿರುವುದಾಗಿ ಅಮೆರಿಕ, ದಕ್ಷಿಣ ಕೊರಿಯಾ ಮತ್ತು ಜಪಾನ್‌ನ ಸೇನೆಯು ಮಂಗಳವಾರ ಅಷ್ಟೇ ಹೇಳಿತ್ತು. ಇದಾದ ಮರು ದಿನವೇ ಉತ್ತರ ಕೊರಿಯಾದ ಸರ್ಕಾರಿ ಮಾಧ್ಯಮ ಕ್ಷಿಪಣಿ ಪರೀಕ್ಷೆ ಕುರಿತು ವರದಿ ಮಾಡಿದೆ.

ಶಬ್ದಾತೀತ ಕ್ಷಿಪಣಿಯ ಪರೀಕ್ಷೆ ಯಶಸ್ವಿಯಾಗಿದ್ದು, ಇದು ದೇಶದ ಪರಮಾಣು ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ಉತ್ತರ ಕೊರಿಯಾ ತಿಳಿಸಿದೆ. ಕ್ಷಿಪಣಿ ಉಡಾವಣೆ ಕುರಿತ ಛಾಯಾಚಿತ್ರಗಳನ್ನು ಸುದ್ದಿಸಂಸ್ಥೆ ಬಿಡುಗಡೆ ಮಾಡಿದೆ. ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರು ಸಣ್ಣ ಕೊಠಡಿಯೊಂದರಲ್ಲಿ ಉನ್ನತ ಅಧಿಕಾರಿಗಳೊಂದಿಗೆ ಕುಳಿತು ಕ್ಷಿಪಣಿ ಪರೀಕ್ಷೆಯನ್ನು ವೀಕ್ಷಿಸಿದರು ಎಂದು ವರದಿಯಾಗಿದೆ.

‘ಡೆಲ್ಟಾಗಿಂತಲೂ ವೇಗವಾಗಿ ಹರಡುತ್ತಿರುವ ಓಮೈಕ್ರಾನ್’

ವಿಶ್ವಸಂಸ್ಥೆ/ಜಿನಿವಾ (ಪಿಟಿಐ): ಕೊರೊನಾ ರೂಪಾಂತರ ತಳಿ ಓಮೈಕ್ರಾನ್ ವಿಶ್ವದಾದ್ಯಂತ ಪ್ರಬಲವಾಗುತ್ತಿದ್ದು, ಡೆಲ್ಟಾಗಿಂತಲೂ ವೇಗವಾಗಿ ಹರಡುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಓಮೈಕ್ರಾನ್ ತಳಿ ರೋಗ ನಿರೋಧಕ ಶಕ್ತಿಯನ್ನು ಕುಂದಿಸಬಲ್ಲದು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಆದರೆ, ಇತರ ರೂಪಾಂತರ ತಳಿಗಳಿಗೆ ಹೋಲಿಸಿದರೆ ಕಡಿಮೆ ತೀವ್ರತೆಯನ್ನು ಹೊಂದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಕೆಲವು ದೇಶಗಳಲ್ಲಿ ಡೆಲ್ಟಾವನ್ನು ಹಿಂದಿಕ್ಕಲು ಓಮೈಕ್ರಾನ್ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಏಕೆಂದರೆ ಅದು ಆ ದೇಶಗಳಲ್ಲಿನ ಡೆಲ್ಟಾ ರೂಪಾಂತರದ ಪ್ರಸರಣದ ಮಟ್ಟವನ್ನು ಅವಲಂಬಿಸಿರುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಸಾಂಕ್ರಾಮಿಕ ರೋಗಶಾಸ್ತ್ರಜ್ಞರಾದ ಮಾರಿಯಾ ವ್ಯಾನ್ ಕೆರ್ಖೋವ್ ಹೇಳಿದ್ದಾರೆ. ‘ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಉತ್ತಮವಾದ ವ್ಯವಸ್ಥೆ ಹೊಂದಿರುವ ಎಲ್ಲ ದೇಶಗಳಲ್ಲಿ ಓಮೈಕ್ರಾನ್ ಪತ್ತೆಯಾಗಿದೆ. ವಿಶ್ವದಾದ್ಯಂತ ಎಲ್ಲ ದೇಶಗಳಲ್ಲಿ ಈ ಸೋಂಕು ಹರಡಿರಬಹುದು. ಇದು ಡೆಲ್ಟಾವನ್ನು ಹಿಂದಿಕ್ಕಿ ತ್ವರಿತವಾಗಿ ವ್ಯಾಪಿಸುತ್ತಿರುವುದನ್ನು ಗಮನಿಸಿದರೆ ಓಮೈಕ್ರಾನ್ ಪ್ರಬಲ ರೂಪಾಂತರ ತಳಿ ಎಂಬುದು ಗೊತ್ತಾಗುತ್ತದೆ ಎಂದು ವರ್ಚುವಲ್ ಸಂವಾದ ಕಾರ್ಯಕ್ರಮದಲ್ಲಿ ಕೆರ್ಖೋವ್ ತಿಳಿಸಿದ್ದಾರೆ.

ಓಮೈಕ್ರಾನ್ ಡೆಲ್ಟಾಗಿಂತ ಕಡಿಮೆ ತೀವ್ರತೆ ಹೊಂದಿದ್ದರೂ, ಇದು ಸೌಮ್ಯವಾದ ತಳಿಯಲ್ಲ ಎಂಬುದು ಆಸ್ಪತ್ರೆಗೆ ದಾಖಲಾಗುತ್ತಿರುವವರ ಪ್ರಮಾಣವನ್ನು ನೋಡಿದರೆ ಗೊತ್ತಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಜನವರಿ 3ರಿಂದ 9ರವರೆಗೆ ವಿಶ್ವದಾದ್ಯಂತ 1.5 ಕೋಟಿಗೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗಿವೆ.

ಸುಲ್ಲಿ ಡೀಲ್ಸ್: ಕ್ರಮಕ್ಕೆ ಆಗ್ರಹ

ವಿಶ್ವಸಂಸ್ಥೆ/ಜಿನಿವಾ (ಪಿಟಿಐ): ಸುಲ್ಲಿ ಡೀಲ್ಸ್‌ನಂತಹ ಗುಂಪಿನವರು ಭಾರತದಲ್ಲಿ ಮಸ್ಲಿಂ ಮಹಿಳೆಯರಿಗೆ ಕಿರುಕುಳ ನೀಡಿರುವುದನ್ನು ವಿಶ್ವಸಂಸ್ಥೆ ಖಂಡಿಸಿದ್ದು, ಇಂತಹ ಕೃತ್ಯಗಳಿಗೆ ಕಾರಣರಾದವರ ವಿರುದ್ಧ ತಕ್ಷಣವೇ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದೆ.

‘ಭಾರತದಲ್ಲಿ ಮುಸ್ಲಿಂ ಮಹಿಳೆಯರು ಸಾಮಾಜಿಕ ಮಾಧ್ಯಮಗಳಲ್ಲಿ ಕಿರುಕುಳ ಅನುಭವಿಸುತ್ತಿದ್ದಾರೆಎಂದು ಅಲ್ಪಸಂಖ್ಯಾತರ ಸಮಸ್ಯೆಗಳ ಕುರಿತ ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿ ಡಾ.ಫರ್ನಾಂಡ್ ಡಿ.ವಾರೆನ್ನಸ್ ಹೇಳಿದ್ದಾರೆ.



ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಸೈನಾ ನೆಹ್ವಾಲ್ ಮುನ್ನಡೆ

ಲಕ್ಷ್ಯ, ಪ್ರಣಯ್ ಗೆಲುವಿನಾರಂಭ

ನವದೆಹಲಿ (ಪಿಟಿಐ): ಭಾರತದ ಲಕ್ಷ್ಯ ಸೇನ್ ಮತ್ತು ಎಚ್.ಎಸ್.ಪ್ರಣಯ್ ಅವರು ಸುಲಭ ಜಯ ಸಂಪಾದಿಸಿ, ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಎರಡನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಸೈನಾ ನೆಹ್ವಾಲ್ ಹಿನ್ನಡೆಯಲ್ಲಿದ್ದರೂ ಅವರ ಎದುರಾಳಿ ಗಾಯದ ಹಿನ್ನೆಲೆಯಲ್ಲಿ ಹಿಂದೆ ಸರಿದ ಕಾರಣ ಎರಡನೇ ಸುತ್ತಿಗೆ ಮುನ್ನಡೆದರು.

ವಿಶ್ವದ ಮಾಜಿ ಅಗ್ರಕ್ರಮಾಂಕದ ಆಟಗಾರ್ತಿ ಸೈನಾ ಅವರು ಗಾಯದ ಕಾರಣ ಕಳೆದ ವರ್ಷ ಹಲವು ಟೂರ್ನಿಗಳಲ್ಲಿ ಆಡಿರಲಿಲ್ಲ. ಈ ಟೂರ್ನಿಯ ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಅವರು 20–22, 0–1ರಿಂದ ಹಿನ್ನಡೆಯಲ್ಲಿದ್ದಾಗ ಬೆನ್ನು-ನೋವಿನಿಂದಾಗಿ ಅವರ ಎದುರಾಳಿ ಜೆಕ್ ಗಣರಾಜ್ಯದ ತೆರೇಜಾ ಸ್ವಾಬಿಕೊವಾ ಪಂದ್ಯದಿಂದ ಹಿಂದೆ ಸರಿದರು.

ಲಕ್ಷ್ಯ ಸೇನ್

ಇಲ್ಲಿ ಐದನೇ ಶ್ರೇಯಾಂಕ ಪಡೆದಿರುವ ಸೈನಾ ಮುಂದಿನ ಪಂದ್ಯದಲ್ಲಿ ಭಾರತದ ಮಾಳವಿಕಾ ಬಾನ್ಸೋದ್ ಅವರನ್ನು ಎದುರಿಸಲಿದ್ದಾರೆ. ಮತ್ತೊಂದು ಹಣಾಹಣಿಯಲ್ಲಿ ಮಾಳವಿಕಾ 21–18, 21–19ರಿಂದ ಭಾರತದವರೇ ಆದ ಸಮಿಯಾ ಇಮದ್ ಫಾರೂಕಿ ಅವರಿಗೆ ಸೋಲುಣಿಸಿದರು.

ಸೈನಾ ನೆಹ್ವಾಲ್ ಆಟದ ವೈಖರಿ– ಪಿಟಿಐ ಚಿತ್ರ

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎಂಟನೇ ಶ್ರೇಯಾಂಕದ ಪ್ರಣಯ್ 21-14, 21-7ರಿಂದ ಸ್ಪೇನ್‌ನ ಪ್ಯಾಬ್ಲೊ ಅಬಿಯನ್ ಅವರನ್ನು ಮಣಿಸಿದರು. ಎರಡನೇ ಸುತ್ತಿನಲ್ಲಿ ಅವರು ಭಾರತದ ಮಿಥುನ್ ಮಂಜುನಾಥ್ ಎದುರು ಆಡಲಿದ್ದಾರೆ. ಜಿದ್ದಾಜಿದ್ದಿ ಹೋರಾಟದಲ್ಲಿ ಮಿಥುನ್ 21-16, 15-21, 21-10ರಿಂದ ಫ್ರಾನ್ಸ್‌ನ ಅರ್ನಾಡ್ ಮರ್ಕಲ್ ಸವಾಲು ಮೀರಿದರು. ಮತ್ತೊಂದು ಪಂದ್ಯದಲ್ಲಿ ಲಕ್ಷ್ಯ ಸೇನ್ 21-15 21-7ರಿಂದ ಈಜಿಪ್ಟ್‌ನ ಅಧಮ್ ಹ್ಯಾಟೆಮ್ ಎಲಗ್‌ಮಲ್ ಅವರನ್ನು ಮಣಿಸಿದರು. ಪುರುಷರ ಡಬಲ್ಸ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ 21-14 21-10ರಿಂದ ಸ್ವದೇಶದ ಆಟಗಾರರಾದ ಚಿರಾಗ್ ಅರೋರಾ ಮತ್ತು ರವಿ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಭಾರತದ ಮಹಿಳಾ ಡಬಲ್ಸ್ ಜೋಡಿ ಅಶ್ವಿನಿ ಪೊನ್ನಪ್ಪ–ಎನ್. ಸಿಕ್ಕಿ ರೆಡ್ಡಿ ಕೂಡ ಮುನ್ನಡೆದರು. ಮೊದಲ ಸುತ್ತಿನಲ್ಲಿ ಅವರು 21-7, 19-21, 21-13ರಿಂದ ಭಾರತದವರೇ ಆದ ಜನನಿ ಅನಂತಕುಮಾರ್ ಮತ್ತು ದಿವ್ಯಾ ಆರ್. ಬಾಲಸುಬ್ರಮಣಿಯ-ನ್ ಎದುರು ಗೆದ್ದರು. ಇನ್ನುಳಿದ ಪಂದ್ಯಗಳಲ್ಲಿ ಆಕರ್ಷಿ ಕಶ್ಯಪ್ 21-14, 21-14ರಿಂದ ಅನುರಾ ಪ್ರಭುದೇಸಾಯಿ ಎದುರು ಗೆದ್ದರೆ, ರಾಹುಲ್ ಯಾದವ್ ಚಿತ್ತಬೊಯಿನಾ ಅವರಿಗೆ ವಾಕ್‌ಓವರ್ ಲಭಿಸಿತು.

‘ಸಿದ್ಧಾರ್ಥ್‌ಗೆ ದೇವರು ಒಳ್ಳೆಯದು ಮಾಡಲಿ’

ನವದೆಹಲಿ (ಪಿಟಿಐ): ಚಿತ್ರನಟ ಸಿದ್ಧಾರ್ಥ್ ಅವರ ಕ್ಷಮಾಪಣೆಯನ್ನು ಸಂತಸದಿಂದ ಸ್ವೀಕರಿಸುತ್ತೇನೆ. ಅವರಿಗೆ ದೇವರು ಒಳ್ಳೆಯದನ್ನು ಮಾಡಲಿ ಎಂದು ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಹೇಳಿದ್ದಾರೆ.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿನ ಭದ್ರತಾ ಲೋಪವನ್ನು ಖಂಡಿಸಿ ನೆಹ್ವಾಲ್ ಟ್ವೀಟ್ ಮಾಡಿದ್ದರು.

ನೆಹ್ವಾಲ್ ಅವರನ್ನು ವ್ಯಂಗ್ಯ ಮಾಡಿ ಟ್ವೀಟ್ ಮಾಡಿದ್ದ ಸಿದ್ಧಾರ್ಥ್ ಅವರ ವಿರುದ್ಧ ವ್ಯಾಪಕ ವಿರೋಧ ವ್ಯಕ್ತ-ವಾಗಿತ್ತು. ಸಿದ್ಧಾರ್ಥ್ ಅವರ ಟ್ವಿಟ್ಟರ್ ಖಾತೆಯನ್ನೇ ನಿಷೇಧಿಸುವಂತೆ ರಾಷ್ಟ್ರೀಯ ಮಹಿಳಾ ಆಯೋಗ ‘ಟ್ವಿಟರ್ ಇಂಡಿಯಾ’ಗೆ ಹೇಳಿತ್ತು.

‘ನಟನಾಗಿ ಸಿದ್ಧಾರ್ಥ್ ಅವರನ್ನು ಇಷ್ಟಪಟ್ಟಿದ್ದೆ. ಆದರೆ ಇಂಥದ್ದನ್ನು (ಪ್ರತಿಕ್ರಿಯೆ ಬಗ್ಗೆ) ನಿರೀಕ್ಷಿಸಿರಲಿಲ್ಲ. ಈ ವಿಚಾರವಾಗಿ ಪ್ರತಿಕ್ರಿಯಿಸಲು ಅವರು ಉತ್ತಮವಾದ ಪದಗಳನ್ನು ಬಳಸಬಹುದಿತ್ತು’ ಎಂದು ಸೈನಾ ಕೂಡ ಬೇಸರ ವ್ಯಕ್ತಪಡಿಸಿದ್ದರು.

ತಮ್ಮ ಟ್ವೀಟ್ ಕುರಿತು ಸಾಮಾಜಿಕ ಮಾಧ್ಯಮಗ-ಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಪ್ರತಿಕ್ರಿಯಿಸಿದ್ದ ಸಿದ್ಧಾರ್ಥ್, ‘ಅಗೌರವ ತೋರುವಂಥ ಯಾವುದೇ ಉದ್ದೇ-ಶವಿರಲಿಲ್ಲ’ ಎಂದು ಹೇಳಿದ್ದರು.

ಒಂದು ಪತ್ರವನ್ನು ಟ್ವೀಟ್ ಮಾಡಿರುವ ಸಿದ್ಧಾರ್ಥ್, ‘ಪ್ರಿಯ ಸೈನಾ, ನನ್ನ ಒರಟು ಹಾಸ್ಯಕ್ಕಾಗಿ ನಿಮ್ಮಲ್ಲಿ ಕ್ಷಮೆಯಾ-ಚಿಸುತ್ತೇನೆ’ ಎಂದು ಬರೆದಿದ್ದಾರೆ. ‘ಅವರೇ ಟೀಕಿಸಿದ್ದರು. ಈಗ ಅವರೇ ಕ್ಷಮೆಯಾಚಿಸಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ. ಅವರೊಂದಿಗೆ ನೇರವಾಗಿ ನಾನು ಮಾತನಾಡಿಲ್ಲ. ಅವರು ಕ್ಷಮೆ ಕೇಳಿರುವುದು ಸಂತಸ ತಂದಿದೆ’ ಎಂದು ಸೈನಾ ಹೇಳಿದ್ದಾರೆ.

ಬಿಆರ್‌ಡಿಸಿಎ: ಸಂಪತ್ ಕುಮಾರ್ ಅಧ್ಯಕ್ಷರಾಗಿ ಆಯ್ಕೆ

ಬೆಂಗಳೂರು: ಆರ್.ಸಂಪತ್ ಕುಮಾರ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರಧಾನ ಕಾರ್ಯದರ್ಶಿಯಾಗಿ ಎ.ಚಿದಾನಂದ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವರ್ತೂರಿನಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯ-ಲ್ಲಿ 11 ಮಂದಿ ಅವಿರೋದವಾಗಿ ಆಯ್ಕೆ-ಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಎಸ್. ದಿವಾಕರ್, ಉಪಾಧ್ಯಕ್ಷರಾಗಿ ಶ್ರೀಪತಿ ಆರ್, ಖಜಾಂಚಿಯಾಗಿ ಕೆ.ವಿ. ಮುಕುಂದ, ಸಹಕಾರ್ಯದರ್ಶಿಗಳಾಗಿ ಸಮೀಉಲ್ಲಾ ಷರೀಫ್, ಮಂಜುನಾಥ ಬಿ.ಎಂ, ಜಗದೀಶ್, ಗವಿಸಿದ್ದಯ್ಯ, ಜೆ.ಮೂರ್ತಿ, ವೈ.ಕೃಷ್ಣಮೂರ್ತಿ ಮತ್ತು ನಾಗರಾಜ್ ಆಯ್ಕೆಯಾಗಿದ್ದಾರೆ ಎಂದು ತಿಳಿಸಲಾಗಿದೆ.

‘ವಿಶ್ವಕಪ್‌ಗೆ ಅರ್ಹತೆ ಗಳಿಸುವ ವಿಶ್ವಾಸ’

ಬೆಂಗಳೂರು: ಈ ವರ್ಷ ನಡೆಯಲಿರುವ ಕತಾರ್ ವಿಶ್ವಕಪ್ ಟೂರ್ನಿಗೆ ನಮ್ಮ ತಂಡವು ಅರ್ಹತೆ ಗಳಿಸುವ ಸಂಪೂರ್ಣ ವಿಶ್ವಾಸವಿದೆ ಎಂದು ಪೋರ್ಚುಗಲ್ ಫುಟ್‌ಬಾಲ್ ತಂಡದ ಆಟಗಾರ ಆ್ಯಂಡ್ರೆ ಸಿಲ್ವಾ ಹೇಳಿದರು.

ಆ್ಯಂಡ್ರೆ ಸಿಲ್ವಾ–

ಬುಧವಾರ ವರ್ಚುವಲ್ ಆಗಿ ನಡೆದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು. ನವೆಂಬರ್ 21ರಿಂದ ಡಿಸೆಂಬರ್ 18ರವರೆಗೆ ವಿಶ್ವಕಪ್ ನಿಗದಿಯಾಗಿದೆ.

ಏಷ್ಯಾಕಪ್ ಹಾಕಿ: ಸವಿತಾಗೆ ಸಾರಥ್ಯ

ನವದೆಹಲಿ (ಪಿಟಿಐ): ಗೋಲ್‌ಕೀಪರ್ ಸವಿತಾ ಪೂನಿಯಾ ಅವರು, ಒಮನ್‌ನ ಮಸ್ಕತ್‌ನಲ್ಲಿ ನಡೆಯಲಿರುವ ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ಮಹಿಳಾ ಹಾಕಿ ತಂಡವನ್ನು ಮುನ್ನಡೆಸಲಿದ್ದಾರೆ. ಟೂರ್ನಿಗಾಗಿ 18 ಮಂದಿಯ ತಂಡವನ್ನು ಬುಧವಾರ ಹಾಕಿ ಇಂಡಿಯಾ ಪ್ರಕಟಿಸಿದೆ.

ಸವಿತಾ ಪೂನಿಯಾ

ತಂಡದ ನಿಯಮಿತ ನಾಯಕಿ ರಾಣಿ ರಾಂಪಾಲ್ ಅವರು ಗಾಯಗೊಂಡಿದ್ದು, ಬೆಂಗಳೂರಿನಲ್ಲಿ ಪುನಶ್ಚೇತನ ಶಿಬಿರದಲ್ಲಿದ್ದಾರೆ. ಇದೇ 21ರಿಂದ 28ರವರೆಗೆ ಸುಲ್ತಾನ್ ಕಾಬೂಸ್ ಕ್ರೀಡಾಂಗಣದಲ್ಲಿ ಏಷ್ಯಾಕಪ್ ಟೂರ್ನಿ ಆಯೋಜನೆಯಾಗಿದೆ.

ತಂಡ: ಗೋಲ್‌ಕೀಪರ್ಸ್: ಸವಿತಾ (ನಾಯಕಿ), ರಜನಿ ಎತಿಮರ್ಪು. ಡಿಫೆಂಡರ್ಸ್: ದೀಪ್ ಗ್ರೇಸ್ ಎಕ್ಕಾ (ಉಪನಾಯಕಿ), ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ. ಮಿಡ್‌ಫೀಲ್ಡರ್ಸ್: ನಿಶಾ, ಸುಶೀಲಾ, ಮೋನಿಕಾ, ನೇಹಾ, ಸಲಿಮಾ ಟೆಟೆ, ಜ್ಯೋತಿ, ನವಜೋತ್ ಕೌರ್. ಫಾರ್ವರ್ಡ್ಸ್: ನವನೀತ್ ಕೌರ್, ಲಾಲ್‌ರೆಮ್ಸಿಯಾಮಿ, ವಂದನಾ, ಮರಿಯಾನಾ ಕುಜೂರ್, ಶರ್ಮಿಳಾ ದೇವಿ. ಕಾಯ್ದಿರಿಸಿದ ಆಟಗಾರ್ತಿಯರು: ದೀಪಿಕಾ ಮತ್ತು ಇಶಿಕಾ ಚೌಧರಿ.

ಹೈಕೋರ್ಟ್ ಮೆಟ್ಟಿಲೇರಿದ ಹಾಕಿ ಇಂಡಿಯಾ

ನವದೆಹಲಿ (ಪಿಟಿಐ): ಸದಸ್ಯರು ಮತ್ತು ಉದ್ಯೋಗಿಗಳ ವೇತನ ಕುರಿತು ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ನೀಡಬೇಕೆಂದು ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಮಾಡಿರುವ ಆದೇಶವನ್ನು ಪ್ರಶ್ನಿಸಿರುವ ಹಾಕಿ ಇಂಡಿಯಾ ಮತ್ತು ರಾಷ್ಟ್ರೀಯ ಕ್ರೀಡಾ ಫೆಡರೇಷನ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿವೆ.

ನ್ಯಾಯಮೂರ್ತಿ ರೇಖಾ ಪಳ್ಳಿ ಅವರು ಮೊಕದ್ದಮೆಯ ವಿಚಾರಣೆ ನಡೆಸುತ್ತಿದ್ದು, ಗುರುವಾರದಂದು ಸೂಕ್ತ ದಾಖಲೆಗಳನ್ನು ಪ್ರಸ್ತುತಪಡಿಸುವಂತೆ ಹಾಕಿ ಇಂಡಿಯಾ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತರಿಗೆ ತಿಳಿಸಿದ್ದಾರೆ.

ಸಿಐಸಿಯು ಹೋದ ಡಿಸೆಂಬರ್ 13ರಂದು ಆದೇಶ ನೀಡಿತ್ತು. ಸಂಸ್ಥೆಯ ಸದಸ್ಯರ ಪದವಿ, ಅಧಿಕೃತ ವಿಳಾಸ, ಉದ್ಯೋಗಿಗಳ ಹೆಸರುಗಳು ಮತ್ತು ಒಟ್ಟು ವೇತನದ ಮಾಹಿತಿಗಳನ್ನು ಒದಗಿಸಬೇಕು ಎಂದು ಹೇಳಿತ್ತು.

‘ಸಿಐಸಿಯು ಅವಶ್ಯಕವಾದ ಮಾಹಿತಿಗಳನ್ನು ಒದಗಿಸದೇ ಆದೇಶವನ್ನು ನೀಡಿದೆ’ ಎಂದು ಹಾಕಿ ಇಂಡಿಯಾ ಪರ ವಕೀಲ ಶಯೆಲ್ ತ್ರೆಹಾನ್ ಹೇಳಿದರು.

ಆರ್‌ಟಿಐ ಕಾರ್ಯಕರ್ತ ಸುಭಾಷ್‌ಚಂದ್ರ ಅಗರವಾಲ್ ಪರವಾಗಿ ವಕೀಲ ರಾಹುಲ್ ಮೆಹ್ರಾ ಮತ್ತು ಅರುಂಧರಿ ಅಯ್ಯರ್ ವಾದಿಸಿದರು.

ಐಎಸ್‌ಎಲ್ ಟೂರ್ನಿ: ಕೇರಳ ಬ್ಲಾಸ್ಟರ್ಸ್‌ಗೆ ಜಯ

ವಾಸ್ಕೊ (ಪಿಟಿಐ): ನಿಶು ಕುಮಾರ್ ಹಾಗೂ ಹರ್ಮನ್‌ಜೋತ್ ಖಾಬ್ರಾ ಗಳಿಸಿದ ಗೋಲುಗಳ ಬಲದಿಂದ ಕೇರಳ ಬ್ಲಾಸ್ಟರ್ಸ್ ತಂಡವು ಜಯ ಗಳಿಸಿತು. ಬುಧವಾರ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ 2–0ಯಿಂದ ಒಡಿಶಾ ಎಫ್‌ಸಿ ತಂಡವನ್ನು ಸೋಲಿಸಿತು.

ನಿಶುಕುಮಾರ್ (28ನೇ ನಿ.) ಹಾಗೂ ಖಾಬ್ರಾ (40ನೇ ನಿ) ಕೇರಳ ಪರ ಕಾಲ್ಚಳಕ ತೋರಿದರು.

ಗುರುವಾರ ನಡೆಯುವ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಮತ್ತು ಹೈದರಾಬಾದ್ ಸೆಣಸಲಿವೆ.

ಕಮಲ್‌ಜೀತ್‌ಗೆ ಕೋವಿಡ್: ಒಡಿಶಾ ಎಫ್‌ಸಿಯ ಗೋಲ್‌ಕೀಪರ್ ಕಮಲ್‌ಜಿತ್ ಸಿಂಗ್ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಬುಧವಾರ ಕೇರಳ ಬ್ಲಾಸ್ಟರ್ಸ್ ವಿರುದ್ಧದ ಪಂದ್ಯಕ್ಕೂ ಮೊದಲು ಅವರಿಗೆ ಸೋಂಕು ಇರುವುದು ಖಚಿತಪಟ್ಟಿತ್ತು. ಹೀಗಾಗಿ ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಬಯೋಬಬಲ್ ವ್ಯವಸ್ಥೆಗೆ ಮತ್ತೊಂದು ಹೊಡೆತ ಬಿದ್ದಿದೆ.

‘ಕಮಲ್‌ಜೀತ್ ಅವರಿಗೆ ಕೋವಿಡ್ ಇರುವುದು ಖಚಿತಪಟ್ಟಿ-ತ್ತು. ತಂಡದ ಇನ್ನುಳಿದ ಆಟಗಾರರ ಪರೀಕ್ಷಾ ವರದಿ ‘ನೆಗೆಟಿವ್’ ಬಂದಿದೆ. ಹೀಗಾಗಿ ಪಂದ್ಯ ನಿಗದಿಯಂತೆ ನಡೆಯಿತು’ ಎಂದು ಮೂಲಗಳು ತಿಳಿಸಿವೆ.

ಹನೂರ್ ಸಿಂಗ್ ಶತಕ ಸಂಭ್ರಮ

ಪ್ರಾವಿಡೆನ್ಸ್, ಗಯಾನಾ (ಪಿಟಿಐ): ಆರಂಭಿಕ ಬ್ಯಾಟರ್ ಹನೂರ್ ಸಿಂಗ್ ಅಜೇಯ ಶತಕದ ಬಲದಿಂದ ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 9 ವಿಕೆಟ್‌ಗಳಿಂದ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು ನಾಯಕ ಕೂಪರ್ ಕೊನೊಲಿ (117 ರನ್) ಶತಕದ ನೆರವಿನಿಂದ 49. 2 ಓವರ್‌ಗಳಲ್ಲಿ 268 ರನ್ ಗಳಿಸಿತು. ಅದಕ್ಕುತ್ತರವಾಗಿ ಹನೂರ್ ಸಿಂಗ್ (ಅಜೇಯ 100) ಮತ್ತು ಶೇಖ್ ರಶೀದ್ (72 ರನ್) ಅವರ ಜೊತೆಯಾಟದಿಂದಾಗಿ ಒಂದು ವಿಕೆಟ್ ನಷ್ಟಕ್ಕೆ 269 ರನ್ ಗಳಿಸಿ ಜಯಿಸಿತು.

ಹನೂರ್ 16 ಬೌಂಡರಿಗಳನ್ನು ಸಿಡಿಸಿದರು. ಆರಂಭಿಕರಾಗಿ ಕಣಕ್ಕಿಳಿದ ನಾಯಕ ಯಶ್ ಧುಲ್ (ಔಟಾಗದೆ 50) ನಿವೃತ್ತರಾಗಿ ಪೆವಿಲಿಯನ್‌ಗೆ ಮರಳಿದರು.

ವಿಶ್ವಕಪ್ ಟೂರ್ನಿಯು ಶುಕ್ರವಾರ ಆರಂಭವಾಗಲಿದೆ. ಶನಿವಾರ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ.

ಗುವಾಹಟಿಯ ಡಿಸ್ಪುರ್‌ನಲ್ಲಿ ಬುಧವಾರ ಡಿಎಸ್‌ಪಿಯಾಗಿ ಅಧಿಕಾರ ಸ್ವೀಕರಿಸಿದ ಲವ್ಲಿನಾ ಬೊರ್ಗೊಹೈನ್ ತಮ್ಮ ತಂದೆ–ತಾಯಿಯೊಂದಿಗೆ –ಪಿಟಿಐ ಚಿತ್ರ

ಲವ್ಲಿನಾ ಈಗ ಡಿಎಸ್‌ಪಿ

ನವದೆಹಲಿ: ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕವಿಜೇತ ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಅವರನ್ನು ಅಸ್ಸಾಂ ಪೊಲೀಸ್ ಇಲಾಖೆಯಲ್ಲಿ ಡೆಪ್ಯೂಟಿ ಸೂಪರಿಟೆಂಡೆಂಟ್ ಆಫ್ ಪೊಲೀಸ್ (ಡಿಎಸ್‌ಪಿ) ಆಗಿ ನೇಮಕ ಮಾಡಲಾಗಿದೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ನೇಮಕ ಪತ್ರವನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಲವ್ಲಿನಾ ಅವರ ತಂದೆ, ತಾಯಿ ಮತ್ತು ಕುಟುಂಬದ ಸದಸ್ಯರು ಹಾಜರಿದ್ದರು.

ಹೋದ ವರ್ಷ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 69 ಕೆ.ಜಿ. ವಿಭಾಗದಲ್ಲಿ 24 ವರ್ಷದ ಲವ್ಲಿನಾ ಕಂಚಿನ ಪದಕ ಗೆದ್ದಿದ್ದರು.ಈ ಹಿಂದೆ ಅಂತರರಾಷ್ಟ್ರೀಯ ಅಥ್ಲೀಟ್ ಹಿಮಾ ದಾಸ್ ಅವರಿಗೂ ಅಸ್ಸಾಂ ಸರ್ಕಾರ ಡಿಎಸ್‌ಪಿ ಹುದ್ದೆ ನೀಡಿತ್ತು.